Regd. No. M 3618

Estd. 1921 ಸ್ಥಾಪನೆ

ಶಾಲಾ
ಪುಸ್ತಕ
ಸಾಹಿತ್ಯಗಳಿಗೆ
ನವಭಾರತ
ಬುಕ್ ಡಿಪೊ,
ಉಡುಪಿ.



ANTARANGA
The only Leading
Kannada Weekly
of wit & Humour
Udipi - S. India

ಸಂಪುಟ ೨೧
Vol 21

ಸಂಪಾದಕರು:—ಶ್ರೀ ಎ ಬಿ ಶೆಟ್ಟರು, ಎಂ ಎಲ್ ಎ

NAVAYUGA WEEKLY

4-6-1942

ಸಂಚಿಕೆ ೩೯
No. 39

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅಕ್ಯುತ್ತಮವಾದ ರಕ್ತವರ್ದಕ ರಸಾಯನ ಸ್ನಸ್ಥಾನಕ್ಕೆ ಬರಿಸಿದ ಉಸ್ಣತೆ, ಧಾತು ಮೊತ್ತಪೊಡಿಸಿ ಹೊಸ ರಕ್ತ ಹೋಗುವಿಕೆ ಸೇರಿದೇವು, ಕೆ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅರಕ್ತ, ಇವುಗಳೆಲ್ಲ ಹೋಗಲಾಡಿಸಿ ತನಿವನ್ನು ಜೀರ್ಣ ರಕ್ತಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವುದು ಬಾಟ್ಲಿ 1ಕ್ಕೆ ರೂ. 2 8 0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕೆ ಅತೀಪವಾದ ರಕ್ತವರ್ದಕ ಪ್ರಸವನಿಯಾಮಕವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಒಳಪಡಿಸಿ ನರಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವಿ ಅಭಿವೃದ್ಧಿಯಾಗಿ, ಬಾಣಂತಿಯು ಪ್ರತ್ಯ ಹೊಂದವಿರುವುದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ಕ್ಕೆ ರೂ 1 8 0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಔಷಧಿ ಸಿಗುವ ಸ್ಥಳ— (1)ಪೊಷ್ಯಲರ್ ಸ್ಟೋರ್ಸ್, ಕೆಂಪ್ಸ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ ಪಾರಿಜಾಗ್ ರೋಡ್, ಪರೇಲ್, ಬೊಂಬಾಯಿ ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ ಐ ಪಿ, ಮಾಟುಂಗಾ (3) ತಿಲ್ಲರ್ ಬ್ರದರ್ಸ್ 91 ಚಕ್ಕವರ್ ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ್ ಬಜಾರ್, ವೆ ಕೂರ್ 5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ (6) ಬಿ ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಪ ವಾಲ ಪೇಟೆ 7 ಟಿ ಶ್ರೀನಿವಾಸ ಪೈ, ಪುತ್ತೂರು (8) ಶಾಂತಾವರ ಪಾರ್ಶ್ವನಾಥ ಕಮ್ಸು, ಬೆಳ್ತಂಗಡಿ, (9) ಮಲ್ಲ ಮೆಡಿಕಲ್ ಸ್ಟೋರ್ಸ್ ಮುಲ್ಕಿ. (10) ನವಭಾರತ ಬುಕ್ ಡಿಪೊ, ಕೆಎಳದ ಪೇಟೆ, ಉಡುಪಿ (11) ಕೃಷ್ಣ ಫಾರ್ಮಸಿ, ಶುಂಡಾಪುರ. (12) ಕಾಸರಗೋಡು ಸರ್ವೀಸ್ ಸ್ಟೋರ್ ಹೌಸ್, ಶ್ರೀ ರಾಮ ಪಾಟ್ (13)ಕೆ.ಶ್ರೀನಿವಾಸಯ್ಯಗ್ಗ, ಅರ್ಥಹಳ್ಳಿ (ಪಿ) ಬಿ ಯಸ್,ನರಸಿಂಗರಾವ್ ಮರ್ಚೆಂಟ್ಸ್,ಚಿಕ್ಕಮಂಗಳೂರು

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಂಡೀ ಡಾಗು ಬತ್ತು ಸ್ತ್ರೀಪುರುಷರ ಶರೀರದಿಂದ ಬಾವು ಶರೀರದ ತೊಗಲು ಒಂದಕ್ಕೆ ಸರಿಯಾದಿದ್ದರೆ, ಶರೀರವು ಸುತ್ತು ಭೀಯನಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಷ್ಣಾಂಶ ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ರೂಲಿ, ಲರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಾಟು ಗರ್ಭಿಯಿಂದ ಗರ್ಭಕೋಶ ನಾರಹೊಂದಿದ್ದರೆ, ಸರಿಯಾಗಿ ಬೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಲರ್ಧತೊಲಿ ತುಪ್ಪ ದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮಂಜಾನೆ ಸಂಜೆ ಎರಡು ಸಲ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲವಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಸೀಖಾರ, ಕುಂಬಳಕಾಯಿ, ಒಕ್ಕೆಸ್ಸ ಬಿಡಬೇಕು

ಬಾಟ್ಲಿಗೆ ಕ್ಕೆ ರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ.–ಗದಗ ಫಾರ್ಮಸಿ, ಹುಬ್ಬಳ್ಳಿ -ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಸಮಾರ್ಸಿ, **ಡಾವಣಗೇರಿ:—ಡಾವಣಗೇರಿ ಸೇಸ್**

ಮೂಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂ

ಮೂಲಕರ ವಿಳಾಸ. ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ.
ಆಯುರ್ವೇದ ಔಷಧಾಲಯ ಗದಗ .

ಮಗುವನ್ನು ಸಂತೋಷವಾಗಿಟ್ಟಿರಿ
ಅದಕ್ಕೆ **ಗ್ರೈಪ್ ಸಿರಪ್** ಕೊಡಿ
ಟ್ರೇಡ್ ಮಾರ್ಕ್
ಮಕ್ಕಳಿಗೆ ಅತ್ಯುತ್ತಮವಾದ ಔಷಧಿ
ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಗುಂತಾದುವುಗಳನ್ನೂ ಹೋಗಲಾಡಿಸುವುದು.
ಬಹು ರುಚಿಯಾಗಿದೆ
ಸೂದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ
ತಯಾರಿಸುವವರು:
ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟಿಸ್ಟಿಗ್ ಲ್ಯಾಬೊರೇಟರಿ,
ಮಲ್ಲೇಶ್ವರಂ, **ಬೆಂಗಳೂರು ಸಿಟಿ**

ASIAN POLICIES

Cover war risk on civilians without any extra premiums

Figures that speaks the strength and stability of the company, as on 31—12—1941

Assets exceed	.	Rs. 1,10,00,000
Life Fund exceeds	.	,, 92,00,000
Business in force	. .	,, 428,00 000
Claims paid over	. .	,, 56,00,000

For further particulars and agency terms, please apply to
Branch Manager,
The Asian Assurance Co., Ltd, Mangalore. S K.

ಏನೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ನೀವು ಯೋಜಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—
ಇ ಎ ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ ಕ
ಶ್ರೀ ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ ಕ
ಶ್ರೀ ಕೆ ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್, ಮದ್ರಾಸು
ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ ದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿ ನಂತಿರುವ ನಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ನಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ನಿಮೆಯಿಳಿಸಿರಿ

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . : ದ. ಭಾರತ.

The Canara Mutual Assurance Company, Limited.

UDIPI : : : : : S. India

ಎಚ್ಚರಿಕೆ.

ಹರಿಯದಲ್ಲಿ ಮುಪ್ಪಿನ ಚಿಂತೆಯೆ ನಿನಗೆ? ಚಿಂತೆಯಿಂದ ಇರುವ ಸ್ವಲ್ಪ ಹಾರುಪವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ನೂತ್ರಿಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ಪಷ್ಟೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ —ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೪—೦**

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ. ೧—೪—೦.

ನಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24-ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

ಉಡುಪಿ ಸ್ಟೋಕಿಸ್ಟರು: **ನವಭಾರತ ಪುಸ್ತಕ ಭಂಡಾರ, ಉಡುಪಿ.**

ವಾರ ಭವಿಷ್ಯ

ತಾ. ೪-೬-೪೨ರಿಂದ ದಿ೧-೬-೪೨ರ ವರೆಗೆ.

ಮೇಷ—ಪ್ರಕೃತಿದತ್ತ ನಿಮ್ಮ ದುರ್ವಿಧಿಯು ಬಲವತ್ತರವಾಗಿರುವುದು. ಯಾವ ಉದ್ಯಮದಲ್ಲೂ ಶ್ರೇಯಸ್ಸು ಸಿಗದು. ಪ್ರಕೃತಿಯ ಅಲಸ್ಯವು ಅಧಿಕವಾಗುವುದರಿಂದ ಮನೋಧೈರ್ಯವು ಲುಪ್ತವಾಗುವದು. ಆ ಕಾರಣದಿಂದ ದೈಹಿಕ ಶ್ರಮ ಸಾಧ್ಯವಾದ ಕಾರ್ಯವನ್ನು ನೀವು ಕನಸಿನಲ್ಲೂ ನೆನಸಲು ಶಕ್ತರಾಗಲಾರಿರಿ. ಆದರೂ ಖರ್ಚಿಗೆ ತಕ್ಕಷ್ಟು ಧನವು ಲಭಿಸುವುದರಿಂದ ಆರ್ಥಿಕ ವಿಚಾರವಾದ ಚಿಂತೆಯು ನಿಮಗಿರದು. ರಾಜಕೀಯ ವಿಭಾಗದಲ್ಲೂ ಭೂ ನಿಮಿತ್ತವಾಗಿಯೂ ನಷ್ಟ ಹೊಂದುವ ಯೋಗವಿದೆ. ವೈದ್ಯ ವೈಜ್ಞಾನಿಕ ಮತ್ತು ಸೇವಕ ಜನತೆಗೆ ಈ ವಾರವು ಕೃಪ್ತಿಕರವಿಲ್ಲವಾದರೂ ಬುದ್ಧಿಜೀವಿಗಳಿಗೆ ಅಷ್ಟೊಂದು ಹಾನಿಕಾರಿಯಾಗದು. ತಾ.7.8. ಈ 2ದಿನಗಳನ್ನು ಬಿಟ್ಟು ಮಿಕ್ಕ ದಿನಗಳು ಸುಖಲಾಭದಾಯಿಗಳಾಗಿವೆ.

ವೃಷಭ—ಮಾತು ಬಲ್ಲವನಿಗೆ ಜಗವಿಲ್ಲ. ಊಟಬಲ್ಲವನಿಗೆ ರೋಗವಿಲ್ಲವೆಂಬೀ ಗಾದೆಯ ಮಾತನ್ನು ನೀವೀವಾರದಲ್ಲಿ ಸದಾ ನೆನಪಿನಲ್ಲಿಟ್ಟು ಪಾಲಿಸತಕ್ಕದ್ದು. ದುಡುಕುತನದಿಂದಾಗಿ ನಿಷ್ಪುರೋಕ್ತಿಗಳು ನಿಮ್ಮ ಬಾಯಿಂದ ಹೊರಡಲಿವೆ. ಇದರಿಂದ ನಿಮ್ಮ ಸ್ಥಾನಮಾನಗಳಿಗೆ ಕಳಂಕವುಂಟಾಗಬಹುದು. ಆರೋಗ್ಯವನ್ನು ಬಲು ಜಾಗರೂಕತೆಯಿಂದ ಕಾಪಾಡಿಕೊಳ್ಳಿರಿ. ಇತರ ಎಲ್ಲಾ ವಿಚಾರಗಳಲ್ಲೂ ನೀವು ನಿಶ್ಚಿಂತರಾಗಿರಬಹುದು. ನೀವು ಮಿತತಪ್ಪಿ ವ್ಯಯಿಸುವಿರಾದರೂ ನಿಮಗೀವಾರದಲ್ಲಿ ಕೈಕಟ್ಟುವಂತಹ ಪ್ರಸಂಗವೊದಗದು. ಸನ್ಮಿತ್ರರ ಮತ್ತು ಬಂಧುವರ್ಗದವರ ಸಂಪೂರ್ಣ ಸಹಕಾರವು ನಿಮಗಿರುವುದರಿಂದ ತಾ. 5-6-7-8 ಈ 4 ದಿನಗಳನ್ನು ಹೆಚ್ಚಿನ ಸುಖಸಂತೋಷದಿಂದ ಕಳೆವಿರಿ

ಮಿಥುನ—ನಿಮ್ಮ ರಾಶಿಯ ಉಭಯ ರಾಶ್ಯರ್ಧಗಳಲ್ಲಿ ಸಾಸಿಗ್ರಹರು ನಿಂತಿರುವುದರಿಂದಲೂ ಜನ್ಮದಲ್ಲಿದ್ದ ಬುಧಗುರುಗಳು ಕೂಡಾ ಪ್ರತಿಕೂಲರಾಗಿರುವುದರಿಂದಲೂ ನಿಮಗೀವಾರವನ್ನು ಕಳೆವುದೆಂದರೆ ವರ್ಷವನ್ನು ಕಳೆದಷ್ಟು ಕಷ್ಟವಾಗಿಹುದು. ಇಲ್ಲಸಲ್ಲದ ಖರ್ಚುಗಳು ಮತ್ತು ಅನಿರೀಕ್ಷಿತವಾದ ಆಪತ್ತುಗಳೂ ಸಮುದ್ರದ ಅಲೆಗಳಂತೆ ಮೇಲಿಂದ ಮೇಲೆ ಬರುವುದರಿಂದ ನಿಮ್ಮ ತೋಳ್ಬಾಗ್ನಿಗೆ ತುಪ್ಪ ನೆರೆದಂತಾಗುವದು. ಸಿನೆಮಾ ಸಂಬಂಧ ನಾಡಿ ಕಾಹಿಲೆಯಿಂದಲೂ ಅರ್ಥಿಕದುರವಸ್ಥೆಯಿಂದಲೂ ನಿತ್ಯ ದುಃಖಿಗಳಾದ ನಿಮಗೆ ವಾರಾಂತ್ಯದ 5 ದಿನಗಳು ಮಧ್ಯೆ ಮಧ್ಯೆ ಸುಖವನ್ನು ಕೊಡಲಿವೆ.

ಕರ್ಕಾಟಕ— "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂಬ ಶಾಸ್ತ್ರೋಕ್ತಿಯಂತೆ ಧರ್ಮಾದಿ ಸಕಲ ಕಾರ್ಯಾಚರಣೆಗೂ ಆರೋಗ್ಯಭಾಗ್ಯವು ಪ್ರಧಾನವಾದುದು. ಇತರ ಎಲ್ಲಾ ಸಾಧನ ಸಂಪತ್ತುಗಳದ್ದೂ ಆರೋಗ್ಯತ್ತ ಮಾತ್ರ ಚಿಂತ್ಯಾಗಿರದಿದ್ದರೆ ಅಂಧನ ಕೈಯ್ಯ ದೀವಿಗೆಯಂತೆ ಈ ಸಂಪತ್ತುಗಳೆಲ್ಲವೂ ಅತನ ಭೋಗಕ್ಕೆ ದೊರಕಲಾರವು. ದೇಹ ದೌರ್ಬಲ್ಯ ನಿಮಿತ್ತ ಕೋಪವಧಿಕವಾಗುವದು. ಅದನ್ನು ಸಹಿಸುವ ಶಕ್ತಿಯು ನಿಮ್ಮಲ್ಲಿಲ್ಲದ ಕಾರಣ ಹಲವರೊಡನೆ ಕಲಹ ನಿಷ್ಕುರಗಳಾಗಲಿವೆ. ಇವ್ವಾದರೂ ತಾ. 1. 9. 10. 11 ಈ ದಿನಗಳಲ್ಲಿ ನಿಮ್ಮ ಇಚ್ಛೆಯು ಫಲಕಾರಿಯಾಗುವುದರಿಂದ ಈ ದಿನಗಳನ್ನು ಸುಖದಿಂದ ಕಳೆವಿರಿ.

ಸಿಂಹ—ಕಳೆದ ವಾರಕ್ಕಿಂತ ಈ ವಾರವು ನಿಮಗೆ ಕೊಂಚ ಪ್ರತಿಕೂಲವಾಗಿ ತೋರಬಹುದು. ಮುಂಬಿನಷ್ಟು ಶಕ್ತಿ ಸ್ಫೂರ್ತಿಗಳು ನಿಮ್ಮಲ್ಲಿ ಕಾಣಲಾರವು. ನಿಮಗೆ ಸಾಕಷ್ಟು ಜನಬೆಂಬಲವೂ ಧನ ಶಕ್ತಿಯೂ ಇರುವುದರಿಂದ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯಲಾರಿರಿ. ಸೈಕ್ಲೆ ಸಂಬಂಧವಾದ ಕಾಹಿಲೆಯು ತಲೆದೋರುವ ಸಂಭವವಿದೆ. ಗೃತೋಪಕರಣಗಳು ಪರಿಪೂರ್ಣವಿರುವುದರಿಂದ ನಿಶ್ಚಿಂತೆಯಿಂದ ದಿನಗಳೆವಿರಿ. ನೌಕರಿ ಮತ್ತು ವ್ಯಾಪಾರೀ ಭಾಗದಲ್ಲಿ ಒಳ್ಳೆಯ ಭವಿತವ್ಯವಿದೆ. ವನಿತಾಧನ ಸುಖಾದಿಗಳು ಅಕಸ್ಮಿಕವಾಗಿ ಲಭಿಸುವವು. ವಾರಾದಿಯ 3ದಿನಗಳನ್ನು ಬಿಟ್ಟರೆ ಉಳಿದ ದಿನಗಳಲ್ಲಿ ಪ್ರವಾಸ,ಆಪ್ತಜನ ವಿರೋಧ,ದೇಹಾಲಸ್ಯಗಳು ತೋರಿಬರಲಿವೆ.

(ನಸೇ ಪುಟ ನೋಡಿರಿ.)

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: 1 Mahratha Galli, Hubli 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea. Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕಸ್ಟಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ.
(3) ಡಾಕ್ಟರ್ ಪಿ. ಜಿ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಕೇಶವರಿ ಪೈ L. I. M. ಡಾಕ್ಟರ್ ವೆಂಕಟ ರಾವ್, ಕೊಡಿಕ್ಕಲ್

ಚುಟುಕು ಟೀಕೆ-ಟಿಪ್ಪಣಿ

ರಾಜಾಜಿಯವರ ನೂತನ ಮಿತ್ರರು.

ಖಾಕ್ಸಾರರು, ಮಜೂರ ಸಂಘಗಳವರು, ಪೋಯಿಸ್ಟರು, ಕಮ್ಯೂನಿಸ್ಟರೇ ಮೊದಲಾದವರೇಗ ರಾಜಾಜಿಯವರ ನೂತನ ಮಿತ್ರರಾಗಿ ಹೋದಲ್ಲೆಲ್ಲಾ ಅವರನ್ನು ಸ್ವಾಗತಿಸುವುದರಲ್ಲಿ ಮುಂದಾಗುತ್ತಿದ್ದಾರೆ. ಇನ್ನೊಂದೆಡೆ ಮುಸ್ಲಿಮ್ ಲೀಗ್ ಮತ್ತು ಯುರೋಪಿಯನರೇ ಮೊದಲಾದವರೂ ರಾಜಾಜಿಯವರನ್ನು ಪ್ರಶಂಸಿಸಹತ್ತಿತ್ತಾರೆ. ಈರೋಡಿನಲ್ಲಿ ಜಸ್ಟೀಸ್ ಪಕ್ಷದ ಮುಖಂಡ ಶ್ರೀ| ರಾಮಸ್ವಾಮಿ ನಾಯಕರೇ ರಾಜಾಜಿಯವರು ಭಾಷಣ ಕೊಡುತ್ತಿದ್ದ ಸಭೆಗೆ ಹೋಗಿ ಅವರಿಂದ ಸಂಭಾವನೆ ಪಡೆದಿರುತ್ತಾರೆ. ಈ ಹೊಸ ಮಿತ್ರರನ್ನೆಲ್ಲಾ ಕಟ್ಟಿಕೊಂಡು ರಾಜಾಜಿಯವರು ಕಾಂಗ್ರೆಸಿನೆದುರಾಗಿ ಬಂಡಾಯವೆಬ್ಬಿಸಲು ಸೊಂಟಕಟ್ಟಿ ಹೊರಟ್ಟಿರುವರೇನು?

'ದಾನವಲಿಯ ಅವಸ್ಥೆಯೆ?

ರಾಜಾಜಿಯವರು, ಮುಸ್ಲಿಮ್ ಲೀಗನ್ನೊಲಿಸಿಕೊಳ್ಳುವ ಬಿಸಿಲ್ಗುದುರೆಯ ಬೆನ್ನು ಹಿಡಿದು ಕಾಂಗ್ರೆಸಿನಿಂದ ದೂರವಾಗುತ್ತಿರುವಂತಿದೆ. ಆದರೆ ಜಿನ್ನಾ ಖಾಹೇಬರ ದರಿಂದ ವಿಕಟಾನಂದ ಪಟ್ಟು, ದನವನ್ನು ತುಂಡು ಮಾಡುವ ರಾಜಾಜಿಯವರ ಹಿಂದಿನ ಉಪಮೆಯನ್ನೇ ಉಲ್ಲೇಖಿಸಿ ಹಂಗಿಸಿರುತ್ತಾರೆ. ರಾಜಾಜಿಯವರು ತನ್ನ ಜಾತಿಗಾಗಿ ಕೆಲಸ ಮಾಡುವವರು. ಅವರು ದ್ರಾವಿಡ ಬ್ರಾಹ್ಮಣೇತರರು ಅವರೊಂದಿಗೆ ಸೇರಬಹುದೆಂದು ರಾಮಸ್ವಾಮಿ ನಾಯಕರಂದಿರುತ್ತಾರೆ. ಅಂದ ಮೇಲೆ ರಾಜಾಜಿಯವರಿಗೆ ಕಟ್ಟಿಕಡೆಗೆ ಯಾರ ಬೆಂಬಲವೂ ಇಲ್ಲದೆ ಬಾವಲಿಯ ಅವಸ್ಥೆಯಾಗುವುದೇನು?

ಟೆನೊಕೆಂಕೋವು ಸಾಧಿಸಿದುದೇನು?

ಮಾರ್ಶಲ್ ಟೆನೊಕೆಂಕೋರವರು ಈ ವರೆಗೆ ಖಾಕೋರವನ್ನು ಗೆದ್ದಿರುವುದಿಲ್ಲ. ಆದರೆ ಕೊಕಸಸಿನ ಮೇಲೆ ಧಾಳಿ ನಡಿಸುವ ಜರ್ಮನ್ ಫ್ಲೇನನ್ನು ತಪ್ಪಿಸಿ ತಾಕಿದುತ್ತಾರೆ. ಆ ಧಾಳಿಗೆ ಸಿದ್ಧತೆ ಮಾಡುತ್ತಿದ್ದ ಜನರಲ್ ವಾನ್ ಬೊಕ್ಕರ ಸೇನೆಯು ಫಳ್ಳನೆ ಗಿಂಡಿ ನೈಲು ರಣರಂಗದಲ್ಲಿ ಪ್ರಚಂಡ ಕದನ ನಡಿಸಬೇಕಾಗಿದೆ. ಕರ್ಜ ಅರ್ಧ ದ್ವೀಪದಲ್ಲಿ ಜರ್ಮನರು ಪಡೆದ ವಿಜಯದಿಂದ ಶಿಖ್ಸ್ ಫಲ ದೊರೆಯದಂತಾಗಿದೆ. ಹಿಟ್ಲರ ವಸಂತ ಧಾಳಿಯ ಕಾರ್ಯಕ್ರಮವೇ ಸೆಕೆಕಾಲಕ್ಕೆ ಹಿಂದೆ ಬೀಳುವಂತಾಗಿದೆ. ಇವು ಮಹತ್ವದ ಪ್ರಯೋಜನಗಳೆಂದೇ ಹೇಳಬೇಕು

1942ರಲ್ಲಿ ಜರ್ಮನಿಯನ್ನು ಮುಗಿಸಬಹುದು.

1913-14ನೇ ಇಸ್ವಿಯ ವರೆಗೆ ಯುದ್ಧ ನಡಿಸುವ ಕಾರ್ಯಕ್ರಮವಿದ್ದಿತು ಇಂಗ್ಲೆಂಡು ಮತ್ತು ಅಮೆರಿಕಗಳದ್ದು. ಆದರೆ ಇತ್ತಲಾಗಿ ಅದು ಸಂಪೂರ್ಣ ಬದಲಾವಣೆ ಹೊಂದಿದೆ. 1942ರಲ್ಲೇ ಜರ್ಮನಿಯನ್ನು ಮುಗಿಸಿಬಿಡಬಹುದೆಂಬ ಅಭಿಪ್ರಾಯವ್ಯಕ್ತವಾಗಿದೆ ಈ ವರ್ಷದಲ್ಲೇ ಅಮೆರಿಕ ಮತ್ತು ಇಂಗ್ಲೆಂಡುಗಳೊಂದುಗೂಡಿ ಸಚ್ಚಿಮದಲ್ಲೊಂದು ರಣರಂಗ ತೆರೆಯುವುದು ನಿಶ್ಚಹುವೆಂಬಂತೆ ತೋರುತ್ತಿದೆ. ಅಮೆರಿಕಾನ ಸೇನೆಯು ಫ್ರಾನ್ಸಿನ ಮೇಲೇರಿ ಹೋಗುವದೆಂದು ಯುನ್ಯಾಟೆಡ್ ಸ್ಟೇಟ್ಸಿನ ಮುಖ್ಯ ಸೇನಾನಾಯಕ ಜನರಲ್ ಮಾರ್ಶಲರವರು ಪ್ರಕಟಿಗೊಳಿಸಿರುತ್ತಾರೆ.ದೊಡ್ಡ ಅಮೆರಿಕಾನ್ ಸೇನೆಯು ಬ್ರಿಟನಿಗೆ ಬಂದಿರುತ್ತದೆ. ಆದಷ್ಟು ಬೇಗ ನ ಬ್ರಿಟನು ಮತ್ತು ಅಮೆರಿಕಗಳು ಪಶ್ಚಿಮ ಯುರೋಪಿನ ಮೇಲೆ ಧಾಳಿ ನಡಿಸಿದರೆ ಮಾತ್ರ ರಷ್ಯಕ್ಕೆ ನಿಜವಾದ ಸಹಾಯಮಾಡಿದಂತಾಗುವುದು.|ಮಾತ್ರವಲ್ಲದೆ ಯುದ್ಧವೂ ಬೇಗನೆ ಕೊನೆಗೊಳ್ಳುವಂತಾಗುವುದು.

ಜರ್ಮನರು ಉತ್ಸಾಹಗುಂದಿದ್ದಾರೆ.

ಜರ್ಮನರಿಗೆ ಯುದ್ಧದಲ್ಲಿ ಬೇಸರವುಂಟಾಗಿದೆ ಅಪಜಯದ ಭೀತಿಯು ಅವರನ್ನು ತಲ್ಲಣಗೊಳಿಸಹತ್ತಿದೆ. ಅವರ ವೊದಲಿನ ಉತ್ಸಾಹ ಕುಂದಿ ಹೋಗಿ ಒಳಗಿಂದೊಳಗೆ ಆತ್ಮಸ್ಥೈರ್ಯವು ಹೊಗೆಯಾಡಹತ್ತಿದೆ. ಆದುದರಿಂದಲೇ ಗೊಬ್ಬೆಲ್ಸ್ ಮತ್ತು ಗೋರಿಂಗರು ಅವರನ್ನು ಹುರುಪುಗೊಳಿಸುವ ಭಾಷಣಗಳನ್ನು ಮಾಡುತ್ತಿದ್ದಾರೆ. ಕಮ್ಯೂನಿಸ್ಟರೆಂಬ ಆರೋಪದಿಂದ ಆತ್ಮಸ್ಥೈರ್ಯ ಕೆಲವರನ್ನು ಕೊಂದು ಹಾಕುವ ಭೀಕರ ದಬ್ಬಾಳಿಕೆಯು ಇಪ್ಪರ್ಲ್ಲೇ ಆರಂಭವಾಗಿದೆ. "ನಿಮ್ಮ ಮುಖಂಡರು ನಿಮಗಾಗಿ ದುಡಿಯುತ್ತಿದ್ದಾರೆ. ಅವರನ್ನು ತಿಳಿದುಕೊಳ್ಳುವಷ್ಟರ ವಿಚಾರವು ಜನತೆಗಿರಬೇಕು. ವಿಜಯಕ್ಕಾಗಿ ಹೆಚ್ಚಿನ ಕಷ್ಟ ಸಹನೆ ಮತ್ತು ತ್ಯಾಗವು ಅತ್ಯಗತ್ಯ" ಎಂದು ನಾಯ್ಸಿ ಮುಂದಾಳುಗಳು ಜನತೆಯನ್ನು ಎಚ್ಚರಿಸಹತ್ತಿದ್ದಾರೆ. ಕಳೆದ ಯುದ್ಧದಂತೆಯೇ ಜರ್ಮನಿಯ ಹೋಮ್ ಫ್ರಂಟ್ ತತ್ತರಿಸಹತ್ತಿರುವುದೇ? ಇಟಲಿಯ ಅವಸ್ಥೆಯು ಜರ್ಮನಿಗಿಂತಲೂ ಕಳತೆಯಾಗಿದೆ.

ಜನಸಂಖ್ಯೆ ಹೆಚ್ಚಿಸುವ ಯತ್ನ.

ಜಾಪಾನಿನಲ್ಲಿ ಜನಸಂಖ್ಯೆಯು ಅತಿ ನಿಬಿಡವಾಗಿದೆ. ಆದುದರಿಂದ ಆದರ ಜನಕೆಯ ನಿವಾಸಕ್ಕೇನೇ ಹೆಚ್ಚಿನ ವಸಾಹತ್ತುಗಳು ಅತ್ಯಗತ್ಯವೆಂದು ಉದ್ಘೋಷಿಸುತ್ತಿದ್ದಾರು ಹಿಂದೆ ಜಪಾನ ಸಾಮ್ರಾಜ್ಯವಾದಿಗಳು. ಅದರೆ ಇಂದಿಗ ತನ್ನ ಜನಸಂಖ್ಯೆಯನ್ನು ಅದಷ್ಟು ಹೆಚ್ಚಿಸುವ ಪ್ರಯತ್ನವಲ್ಲದು ನಿರತವಾಗಿದೆ. ಜನತೆಯ ಆರೋಗ್ಯವನ್ನು ಅದಷ್ಟು ಉತ್ತಮಗೊಳಿಸಿ, ಎಳೆ ಪ್ರಾಯದಲ್ಲೇ ವಿವಾಹ ಮಾಡಿಕೊಂಡು ಸಾಧ್ಯವಾದಷ್ಟು ಹೆಚ್ಚು ಮಕ್ಕಳನ್ನು ಪಡೆಯುವ ಕುರಿತು ಭಾರಿಯ ಪ್ರಚಾರ ನಡೆಸುತ್ತಿದೆ. ಆ ಬಗ್ಗೆ ಹೆತ್ತವರ ದಿನ, ಕುಟುಂಬ ದಿನವೆಂದೆಲ್ಲಾ ಆಚರಿಸುತ್ತಿದೆ. ಯುದ್ಧವಲ್ಲಿ ಸತ್ತ ಅಕ್ಷಾಂತರ ಮಂದಿಯನ್ನು ಭರ್ತಿ ಮಾಡಿ ದೊಡ್ಡ ಸಾಮ್ರಾಜ್ಯ ಕಟ್ಟಬೇಕಲ್ಲವೇ?

Keep the enemy away from India.

Contribute AGAIN to the Governor's war fund.

Buy savings certificates.

GIVE and LEND for VICTORY.

ಶಿಸ್ತು ಜ್ಯಾರಿ.

ರಾಜಾಜಿಯವರಿಗೆ ಅಂಧ್ರದಲ್ಲೇನೂ ಬೆಂಬಲವಿಲ್ಲ. ಅವರೊಟ್ಟಿಗೆ ತಿರುಗಾಡುತ್ತಿರುವ ಎಸೆಂಬ್ಲಿ ಅಧ್ಯಕ್ಷ ಶ್ರೀ. ಸಾಂಬ ಮೂರ್ತಿಗಳ ಮೇಲೆ ಯಾಕೆ ಶಿಸ್ತು ಜ್ಯಾರಿ ನಾಡಕೂಡದೆಂದು ಉದಾಹರಣೆ ಕೇಳಲಾಗಿದೆಯೆಂದು ಶ್ರೀ ಪ್ರಕಾಶಮರು ಪತಿತ ಪಡಿಸಿರುತ್ತಾರೆ. ಸಿ. ಆರ್.ರ ಮೇಲೆ ಶಿಸ್ತು ಜ್ಯಾರಿ ಮಾಡುವ ಧೈರ್ಯ ತಮಿಳುನಾಡು ಕಾಂಗ್ರೆಸ್ ಕಮಿಟಿಗಿದೆಯೇ?

ಬೆಣ್ಣೆ ಮತ್ತು ಸುಣ್ಣದಷ್ಟು ಭೇದ.

ದಿವಂಗತ ಮೋತಿಲಾಲ ಮತ್ತು ಚಿತ್ತರಂಜನ ದಾಸರು ಕೌನ್ಸಿಲ್ ಪ್ರವೇಶ ಚಳವಳ ಹೊಡಿ ಸ್ವರಾಜ್ಯ ಪಕ್ಷ ಸ್ಥಾಪಿಸಿದಾಗ ಗಾಂಧಿಜಿಯವರ ಪಟ್ಟ ಶಿಷ್ಯರಾಗಿ ಅವರನ್ನು ಜಯಶೀಲವಾಗಿ ವಿರೋಧಿಸಿದವರು ರಾಜಾಜಿಯವರು. ಇಂದೀಗ ಗಾಂಧಿಜಿ ರಾಜಾಜಿಯವರೊಳಗೆ ಬೆಣ್ಣೆ ಸುಣ್ಣದಷ್ಟು ಭೇದವುಂಟಾಗಿದೆಯೆಂದು ಮಹಾತ್ಮರಂದಿರುತ್ತಾರೆ. ರಾಜಾಜಿಯವರ ಪ್ರಚಾರವು ಪಾಪಕರವೆಂದು ನಿಷೇಧಿಸಿರುತ್ತಾರೆ. ಆದರೂ ರಾಜಾಜಿಯವರು ತನ್ನದೇ ಆದ ಮಾರ್ಗ ಹಿಡಿದು ಮುಂದೊತ್ತುತ್ತಿದ್ದಾರೆ. ಅವರು ಕಾಂಗ್ರೆಸಿನಿಂದ ಭಿನ್ನವಾಗಿ ಆದಿಕಾರ ಸ್ವೀಕಾರ ಪ್ರತಿಪಾದಕವಾದ ತನ್ನದೇ ಆದೊಂದು ಪಕ್ಷ ಸ್ಥಾಪಿಸಬೇಕಾಗುವುದೋ ಏನೋ?

ಸರಕಾರದ ದಬ್ಬಾಳಿಕೆ.

ಕ್ರಿಪ್ಸ್ ಮಿಶನಿನ ನಿರರ್ಥಕತೆ, ನಿರಾಶ್ರಿತ ಹಿಂದೀಯರ ಕುರಿತು ಸರಕಾರದ ವರ್ತನೆಯೇ ಮೊದಲಾದ ವಿದ್ಯಮಾನಗಳಿಂದ ಗಾಂಧಿಜಿಯವರ ಮನಸ್ಸು ಸಂತಪ್ತವಾಗಿ ಅವರು ಈ ಸಂದರ್ಭದಲ್ಲಿ ಏನಾದರೊಂದು ಉಗ್ರಕಾರ್ಯಕ್ರಮ ಕೈಕೊಳ್ಳುವ ಯೋಚನೆ ಮಾಡುತ್ತಿರುವರೆಂದು ಸುದ್ದಿಯುಂಟಾಗಿದೆ. ಸರಕಾರದ ಇತ್ತಲಾಗಿನ ಶುದ್ಧ ಅವಿವೇಕದ ದಬ್ಬಾಳಿಕೆಯು ಪರಿಸ್ಥಿತಿಯನ್ನು ಮತ್ತಷ್ಟು ವಿಷಮಗೊಳಿಸಿದೆ. ಪಂಡಿತ ನೆಹರುಗಳು ಅದರಿಂದ ಸಿಟ್ಟುಗೊಂಡಿದ್ದಾರೆ. ಗಾಂಧಿಜಿ, ಪಂಡಿತ ನೆಹರು ಮತ್ತು ಮೌಲಾನ ಆಜದರು ಮಾತುಕತೆ ನಡಿಸುತ್ತಿದ್ದಾರೆ. ಈಗ ನೋಡಿದರೆ ಶ್ರೀ ಭೋಸರ ಸಲಹೆಯನ್ನನುಸರಿಸಿ ಯುದ್ಧಾರಂಭವಾಗುವ ಮೊದಲೇ ಉಗ್ರ ಕಾರ್ಯಕ್ರಮ ಕೈಕೊಳ್ಳುವುದು ಯುಕ್ತವಾಗುತ್ತಿತ್ತಲ್ಲವೇ?

ನೋಟೀಸು.

ಮಂಗಳೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. 778/1941.

ಪಿ. ಮಂಡ ಭಟ್ಟ.. ಅರ್ಜದಾರ.

ಮತ್ತು

ನರಸಿಂಹಯ್ಯ. ತಂದೆ ಬದಿ ಕೃಷ್ಣಪ್ಪಯ್ಯ ಭಟ್ಟ ಮಗ.. ಮಂಗಳೂರು ತಾಲ್ಲೂ ಮಿಜಾರು. ಗೃಹಸ್ಥರು— ರೆಸ್ಪೋಂಡೆಂಟ್.

ಮೇಲೆ ಹೆಸರು ಕಾಣ್ಸಿದ ಅರ್ಜದಾರನು ಮೇಲಿನ ಅಮ್ಮಜ್ಞಾರಿಯಲ್ಲಿ ನಿಮ್ಮ ಮಾಲ್ಕು ಸ್ಥಿರಾಸ್ತಿ ಮಾರಾಟ ಬಗ್ಗೆ ಎಲಾ ಇತ್ಕಿತ್ಕಾರು ದಾಖ್ಲು ಮಾಡಿರುವುದರಿಂದ ಅವರ ಶರತ್ತುಗಳನ್ನು ನಡಾಯಿಸುವರೆ ತಾ. 12-6-42ಕ್ಕೆ ಇಚ್ಛಿದೆ. ಆದಿನ ನೀವು ಸ್ವತಃ ಯಾ ನಿಮ್ಮ ವಕೀಲರು ಮುಖಾಲೆ ಹಾಜರಾಪ್ಪ 10½ ಘಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಬೇಕ್ಕಾಗಿ ನಿಮ್ಮ ಗೈರ್ ಹಾಜ್ರಿಯಲ್ಲಿ ಅದನ್ನು ನಡಾಯಿಸಾಗುವಾಗಿ ಮೇಲೆ ಹೆಸರು ಕಾಣ್ಸಿದ ರೆಸ್ಪೋಂಡೆಂಟಿಗೆ ಈ ಮೂಲಕ ತಿಳಿಸಲಾಗಿದೆ.

ಮಂಗಳೂರು. 11-4-42 } P. V. Achar. ಅರ್ಜದಾರನ ಪರ ವಕೀಲ್

ಶ್ರೀ. ಯಸ್. ವೆಂಕಟರಾಜರಿಂದ ರಚಿತವಾದ

ವೀರಭೂಮಿ

ಹಲಕೆಲವು ಚಾರಿತ್ರಿಕ ಸಂಬಂಧವುಳ್ಳ ಚಿಕ್ಕ ಕಾದಂಬರಿ. ಓದುಗರನ್ನು ಬೆಕ್ಕಿಗು ಗೊಳಿಸುವ ವಿಚಿತ್ರ ಸನ್ನಿವೇಷ, ಬಗೆಯನ್ನು ಬಹುದೂರ ಸೆಳೆದೊಯ್ಯುವ ಭಾವದ ಭರ, ಉಜ್ವಲ ವಾಕ್ಯಸರಣಿ.

ತಿಳುಪಟಿಗಳು ಬೆಲೆ0-1-6
0-2-3ಸ್ಟಾಂಪು ಕಳಸಿದರೆ ಒಂದು ಪ್ರತಿಯನ್ನು ಬುಕ್-ಪೋಸ್ಟಾಗಿ ಕಳುಹಿಸಲಾಗುತ್ತದೆ

ಅಂತರಂಗ ಅಫೀಸು, ಉಡುಪಿ.

ಅಥವಾ

ನವಭಾರತ ಬುಕ್ ಡಿಪೋ, ಉಡುಪಿ.

ಸಮಾಚಾರ ಸಂಗ್ರಹ

ಪ್ರಚಂಡ ಯುದ್ಧೋದ್ಯಮ

ಈ ವರ್ಷಾಂತ್ಯದೊಳಗೆ ಅಮೆರಿಕದ ಯುನ್ಯಾಟೆಡ್ ಸ್ಟೇಟ್ಸ್‌ನಲ್ಲಿ 17,100,000 ಜನರು ಯುದ್ಧೋದ್ಯಮಗಳಲ್ಲಿ ಕೆಲಸ ಮಾಡುವಂತಾಗುವುದು. 1 ಮಿಲ್ಯಕ್ಕಿಂತ ಲೂ ಮಿಕ್ಕಿದವರು ಸೇನೆಗೆ ಸೇರಲಿರುವರು. ಯುದ್ಧಾರಂಭದಲ್ಲಿ ಸೇಕಡ 30 ಮಂದಿ ಕೆಲಸಗಾರರು ಯುದ್ಧ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದರು. ಈಗ ಈ ಪ್ರಮಾಣವು ಸೇಕಡ 70ಕ್ಕೇರಿರುತ್ತದೆ.

ಚೈನಕ್ಕೆ ವಿಮಾನ ಮೂಲಕ ಸಹಾಯ.

ಜಾವಾನರು ಬರ್ಮಾ ರಸ್ತೆಯನ್ನೀಗ ಕಡಿದಿರುವುದರಿಂದ ಚೈನಕ್ಕೆ ಯುದ್ಧಸಾಮಗ್ರಿಗಳನ್ನು ಅತ್ಯಂತ ತೀಕ್ಷ್ಣವಾಗಿ, ಸುಲಭವಾಗಿ ಮತ್ತು ಸುರಕ್ಷಿತವಾಗಿ ಕಾರ್ಗೋ ವಿಮಾನ ಮೂಲಕ ಕಳುಹಿಸುವ ವಿವಾದನ್ನು ಅಮೆರಿಕಾನ್ ನೈಮಾನಿಕ ತಜ್ಞರು ಮಾಡಿರುತ್ತಾರೆ ಜಾವಾನಿಗೆ ಈ ಆಕಾಶಮಾರ್ಗವನ್ನೂ ಕಡಿಯಲು ಸಾಧ್ಯವಾಗಲಾರದು.

ಇಂಗ್ಲೆಂಡಿಗೆ ಅಮೆರಿಕಾನ ಸೇನೆ

ಟ್ಯಾಂಕು, ತೋಪು ಮೊದಲಾದ ಆಧುನಿಕ ಯುದ್ಧೋಪಕರಣ ಸಹಿತವಾಗಿ ಹೆಚ್ಚಿನ ಅಮೆರಿಕಾನ ಸೇನೆಯು ಬ್ರಿಟನಿಗೆ ಸುರಕ್ಷಿತವಾಗಿ ಬಂದು ಮುಟ್ಟುತ್ತಿರುವುದು. ದೊಡ್ಡ ಅಮೆರಿಕಾನ ಸೇನೆಯೊಂದು ಇತ್ತಲಾಗಿ, ಉತ್ತರ ಐರ್ಲೆಂಡಿಗೆ ಬಂದಿಳಿದಿರುವುದು. ಜರ್ಮನರಿಗೆ ಈ ಸಂಗತಿಯೇ ತಿಳಿದಿರಲಿಲ್ಲ.

ಬ್ರಿಟಿಷ್ ವಿಮಾನಧಾಳಿಯು ಹಾನಳಿ

ಇತ್ತಲಾಗಿ ಬ್ರಿಟಿಷ್ ವಿಮಾನಗಳು ನೂರುಗಟ್ಟಿಲೆಯಲ್ಲಿ ಜರ್ಮನಿ ಮತ್ತು ನಾಯ್ಸಿ ಆಕ್ರಮಿತ ರಾಷ್ಟ್ರಗಳ ಮೇಲೆರಗಿ ಹೋಗಿ ಪ್ರಚಂಡ ವಿಮಾನಧಾಳಿ ನಡಿಸಿದ ಪರಿಣಾಮವಾಗಿ ಭೀಕರ ಹಾವಳಿಯಾಗಿರುವುದೆಂದು ವಿಶ್ವಾಸನೀಯವಾಗಿ ತಿಳಿದು ಬಂದಿದೆ. ರೊಸ್ಟೊಕ್, ಲುಬೆಕ್, ಕೀವ್ ಮೊದಲಾದ ಪಟ್ಟಣಗಳಿಗೆ ಅತಿ ಹೆಚ್ಚಿನ ಹಾವಳಿಯಾಗಿರುತ್ತದೆ. ರೊಸ್ಟಕ್ ಒಂದೇ ಪಟ್ಟಣದಲ್ಲಿ 30,000 ಜನರು ತಮ್ಮ ಮನೆಮಾರು ಕಳಕೊಂಡಿರುತ್ತಾರೆ. ಈ ವಿಮಾನ ಧಾಳಿಯು ಜರ್ಮನರನ್ನು ದಿಗಿಲುಗೊಳಿಸಿದೆ. ವಿಶೇಷವಾಗಿ ಪಶ್ಚಿಮೋತ್ತರ ಜರ್ಮನಿಯ ಯುದ್ಧ ಕಾರ್ಖಾನೆಗಳು ನಾನಾವಾಗಿ ನಾಶವಾದುದು ಮೇಲಿ ಕೆಲಸಗಾರರು ಕೊಲ್ಲಲ್ಪಟ್ಟಿರುತ್ತಾರೆ. ಕೊಲೋನ್ ಪಟ್ಟಣದ ಮೇಲೆ 1000 ಬ್ರಿಟಿಷ್ ವಿಮಾನಗಳೇರಿಹೋಗಿ ಪ್ರಚಂಡ ಧಾಳಿ ನಡಿಸಿದಾಗ ಉಂಟಾಗಿರುವ ಹಾವಳಿಯು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ.

ಅಮೆರಿಕದಲ್ಲಿ ಹಡಗ ತಯಾರಿ

ಕಳದ ಸೆ॥ ತಾ 2ರಲ್ಲಿ ಅಮೆರಿಕದ ರಾಷ್ಟ್ರೀಯ ನೌಕಾ ದಿನಾಚರಣೆಯ ಸಂದರ್ಭದಲ್ಲಿ ಯುನ್ಯಾಟೆಡ್ ಸ್ಟೇಟ್ಸ್‌ನ 19 ಹಡಗ ಯಾರ್ಡುಗಳಿಂದ 30 ಕಾರ್ಗೋ ಹಡಗುಗಳು ಹೊರ ಕಳುಹಿಸಲ್ಪಟ್ಟಿರುವವು. ವಿಜಯ ನೌಕೆಯೆಂದೇ ಅವುಗಳ ಹೆಸರು. ಈ ಮೊದಲು ಸೆಪ್ಟಂಬರ ತಾ. 27ರಲ್ಲಿ 14 ಹಡಗುಗಳು ಹೊರ ಕಳುಹಿಸಲ್ಪಟ್ಟಿರುವವು. ಕಳದ ಸೆಪ್ಟಂಬರ ತಿಂಗಳಲ್ಲಿ ಅಮೆರಿಕವು ದಿನಕ್ಕೊಂದು ಹಡಗ ತಯಾರಿಸುತ್ತಿತ್ತು. ಇಂದೀಗ ದಿನಕ್ಕೆರಡು ತಯಾರಿಸುತ್ತಿದೆ. ಇನ್ನು ಸ್ವಲ್ಪ ಸಮಯದಲ್ಲೇ ದಿನಕ್ಕೆ ಮೂರು ತಯಾರಿಸಲಿದೆ ಈ ವರ್ಷ ಜನವರಿ ಮತ್ತು ಮೇ ತಿಂಗಳುಗಳೊಳಗೆ ಯುನ್ಯಾಟೆಡ್ ಸ್ಟೇಟ್ಸ್ 120 ಹಡಗಗಳನ್ನು ಕಟ್ಟಿರುವುದು. ಮೊದಲು ಒಂದೊಂದು ಹಡಗ ಕಟ್ಟಲು ಒಂದು ವರ್ಷ ಅಥವಾ 10 ತಿಂಗಳು ಹಿಡಿಯುತ್ತಿತ್ತು. ಈಗ 90 ದಿನಗಳೊಳಗೆ ಕಟ್ಟಿ ಸಜ್ಜಾಗಿಸಲಾಗುತ್ತದೆ ಇನ್ನು ಮುಂದೆ ಒಂದು ಹಡಗ ಕಟ್ಟಲು 75 ದಿವಸ ತಾಗಬಹುದು. ಎಲ್ಲೋ ರಿನ್ ಎಂಬ ಹೊಸ ಫೋರ್ಡ್ ಕಾರ್ಖಾನೆಯಲ್ಲಿ ಬೇಗನೆ, ಆಕ್ಸಿಸ್ ರಾಷ್ಟ್ರಗಳ ಕಾರ್ಖಾನೆಗಳಲ್ಲಿಲ್ಲಾ ತಯಾರಾಗುವುದಕ್ಕಿಂತಲೂ ಹೆಚ್ಚಿನ ಬೋಂಬರ್ ವಿಮಾನಗಳು ತಯಾರಾಗುವುವೆಂದು ತಿಳಿದುಬರುತ್ತದೆ. ಇಷ್ಟೊಂದು ದೊಡ್ಡ ವಿಮಾನ ತಯಾರಿ ಕಾರ್ಖಾನೆಯೇ ಲೋಕದಲ್ಲಿರುವುದಿಲ್ಲ. ಈ ವರ್ಷಾಂತ್ಯದೊಳಗೆ ಅಮೆರಿಕವು ವರ್ಷಪ್ರಾಂದರ 50,000 ವಿಮಾನ ತಯಾರಿಸುವ ಪ್ರಮಾಣವನ್ನೂ ಹಿಂದೆ ಹಾಕುವುದೆಂದು ನಿರೀಕ್ಷಿಸಲಾಗಿದೆ.

ಲಾವಲರ ಮೇಲೆ ಹಿಟ್ಲರರ ಒತ್ತಾಟ.

ನ್ರಾಸ್ಸಿಗೆ ಸೆರಿದ್ದ ಪಡಗಾಸ್ಕರ್ ಮತ್ತು ಮಾರ್ಟಿನಿಕ್ ದ್ವೀಪಗಳನ್ನು ಇಂಗ್ಲೆಂಡು ಮತ್ತು ಅಮೆರಿಕಗಳು ಸರಪಡಿಸಿಕೊಂಡಿರುವಸ್ಟೆ ಅದಕ್ಕೆ ಪ್ರತಿಯಾಗಿ ಉತ್ತರ ಆಫ್ರಿಕದ ಟ್ಯೂಸಿನಿನ್ನು ಲಾವಲರು ಅಕ್ಸಿನ್ ಸೇನಾ ನಿಲಯವನ್ನಾಗಿ ಮಾಡಲು ಬಿಟ್ಟುಕೊಡಬೇಕೆಂದು ಹಿಟ್ಲರರು ಲಾವಲರನ್ನು ಒತ್ತಾಯಪಡಿಸುತ್ತಿರುವರು. ಬ್ರಿಟನ್ ಮತ್ತು ಅಮೆರಿಕಗಳು ಟ್ಯೂಸಿನಿನ ಬಂದರುಗಳನ್ನು ನಶಪಡಿಸಿಕೊಳ್ಳುವುದರಲ್ಲಿರುವನೆಂಬ ನೆವನದಿಂದ ಅದನ್ನು ನಾಯ್ಸಿಗಳಿಗೊಪ್ಪಿಸಬೇಕೆಂದು ಹಿಟ್ಲರರು ಸೂಚಿಸಿರುವರೆಂದೂ, ಅಲ್ಲವಾದರೆ ಜನರಲ್ ರೊಮ್ಮೆಲರು ಬಲಾತ್ಕಾರದಿಂದ ಟ್ಯೂಸಿನಿನ್ನು ಆಕ್ರಮಿಸುವುದು ಮಾತ್ರವಲ್ಲದೆ ಇಟಲಿಯು, ನೈಸ್ ಮತ್ತು ಕೊರ್ಸಿಕಗಳನ್ನು ಆಕ್ರಮಿಸುವುದೆಂದು ಬೆದರಿಕೆ ಹಾಕಿರುವರೆಂದೂ ನಂಬಲಾಗಿದೆ ಲಾವಲರೀಗ ಉಭಯ ಸಂಕಟದಲ್ಲಿ ಬಿದ್ದಿರುತ್ತಾರೆ.

ಅರ್ಧ ಮಿಲ್ಯ ಜನರ ಕೊಲೆ

1939ನೇ ಇಸ್ವಿ ಸೆಪ್ಟಂಬರ ತಿಂಗಳಿಂದ ಜರ್ಮನರು ಗೆದ್ದ ರಾಷ್ಟ್ರಗಳಲ್ಲಿ ಅರ್ಧ ಮಿಲ್ಯಕ್ಕಿಂತಲೂ ಮಿಕ್ಕಿದ ಜನರನ್ನು ಗುಂಡಿಗೆ ಬಲಿ ಕೊಟ್ಟು ಕೊಂದಿರುವರೆಂದು ತಿಳಿದು ಬರುತ್ತದೆ. ರಸ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳಲ್ಲಿ 400,000 ಮಂದಿ ಕೊಲೆ ಮಾಡಲ್ಪಟ್ಟಿರುತ್ತಾರೆ. ಪೋಲಂಡಿನಲ್ಲಿ 87,700, ಯುಗೊಸ್ಲಾವಿಯದಲ್ಲಿ 5000, ಜೆಕೊಸ್ಲೊವೇಕಿಯದಲ್ಲಿ 30,000 ಫ್ರಾನ್ಸ್ ಮತ್ತು ಬೆಲ್‌ಜಿಯಮ್‌ಗಳಲ್ಲಿ 1500 ಹೊಲ್ಲಂಡಿನಲ್ಲಿ 300, ನೋರ್ವೆಯಲ್ಲಿ 150, ಮತ್ತು ಗ್ರೀಸಿನಲ್ಲಿ 150 ಮಂದಿ ಕೊಲೆ ಮಾಡಲ್ಪಟ್ಟಿರುವರೆಂದು ಅಂದಾಜು ಮಾಡಲಾಗಿದೆ. ಇವರೆಲ್ಲಿ ಹೆಚ್ಚಿನವರು ಸ್ತ್ರೀಯರು, ಮಕ್ಕಳು ಮತ್ತು ಮುದುಕರು. ಕಳದ ಜೂನ್ ತಿಂಗಳುಗಳ ವರೆಗೆ ಜರ್ಮನರು 9 ಮಿಲ್ಯ ಸವನುಗಳಷ್ಟರ ಸೊತ್ತುಗಳನ್ನು ಕೊಳ್ಳ ಹೊಡೆದಿರುವರೆಂದು ಎಣಿಕೆ ಹಾಕಲಾಗಿದೆ.

ಬ್ರಿಟನಿನ ಪ್ರಚಂಡ ಯುದ್ಧ ಪ್ರಯತ್ನ

14 ಮತ್ತು 65 ವರ್ಷ ವಯಸ್ಸಿನ ಬ್ರಿಟನಿನ 33,000 000 ಜನರಲ್ಲಿ 22,000,000 ಮಂದಿ ಅಂದರೆ ಮೂವರಲ್ಲಿ ಇಬ್ಬರು ಯುದ್ಧ ಪ್ರಯತ್ನದಲ್ಲಿ ನಿರತರಿರುತ್ತಾರೆ. ಇನ್ನು ದಿವದಲ್ಲಿ ಕೆಲಸಮಯ ಮತ್ತು ಗೌರವಾರ್ಥ ಕೆಲಸ ಮಾಡುವ ಮಿಲ್ಯಾಂತರ ಜನರು ಬೇರೆ ಇದ್ದಾರೆ. ಇಡೀ ಬ್ರಿಟನೇ ಇಂದು ಸಶಸ್ತ್ರವಾಗಿರುವಂತಿದೆ.

ಮಿತ್ರ ಮತ್ತು ಆಕ್ಸಿಸ್ ರಾಷ್ಟ್ರಗಳ ವಿಮಾನ ಉತ್ಪತ್ತಿ.

ಮಿತ್ರ ರಾಷ್ಟ್ರಗಳು ತಿಂಗಳೊಂದರ 8600 ವಿಮಾನಗಳನ್ನು ತಯಾರಿಸುತ್ತಿರುವೆಂದೂ ಆಕ್ಸಿಸ್ ರಾಷ್ಟ್ರಗಳ ಒಟ್ಟು ಉತ್ಪತ್ತಿಯು ತಿಂಗಳೊಂದರ 4100 ವಿಮಾನಗಳೆಂದೂ ಲೆಕ್ಕ ಹಾಕಲಾಗಿದೆ. ಜರ್ಮನಿ ಮತ್ತು ನಾಯ್ಸಿ ಆಕ್ರಮಿತ ರಾಷ್ಟ್ರಗಳು ತಿಂಗಳೊಂದರ 2000, ಇಟಲಿಯು 700 ಮತ್ತು ಜಾಪಾನು 500 ವಿಮಾನಗಳನ್ನು ತಯಾರಿಸುತ್ತವೆ. ಯುನ್ಯಾಟೆಡ್ ಸ್ಟೇಟ್ಸ್‌ನಲ್ಲಿ ತಿಂಗಳೊಂದಕ್ಕೆ 3300, ಬ್ರಿಟನಿನಲ್ಲಿ 2400 ಮತ್ತು ರಸ್ಯದಲ್ಲಿ 2900 ವಿಮಾನಗಳು ತಯಾರಿಸಲ್ಪಡುತ್ತವೆ. ಯುನ್ಯಾಟೆಡ್ ಸ್ಟೇಟ್ಸ್ ಒಂದೇ 1942ರಲ್ಲಿ ವರ್ಷಕ್ಕೆ 60,000 ವಿಮಾನ ತಯಾರಿಸಲಿರುವುದೆಂದು ನಿರೀಕ್ಷಿಸಲಾಗಿದೆ.

ಫ್ರಾನ್ಸಿನಲ್ಲಿ ಜನತೆಯ ವಿರೋಧ.

ಫ್ರಾನ್ಸಿನೆಲ್ಲೆಲ್ಲಾ ಜರ್ಮನಿಯು ಕುರಿತು ಜನತಾವಿರೋಧವು ಪ್ರಬಲವಾಗುತ್ತಿರುವುದು ರೈಲ್ವೆ ರಸ್ತೆಗಳನ್ನು ಕಳಚಿಹಾಕುವ ಒಳಸಂಚುಗಳು ಅಧಿಕವಾಗುತ್ತಿರುವವು ಫ್ರಾನ್ಸಿನಲ್ಲಿ ನಾಯ್ಸಿಗಳ ಬರ್ಬರ ಕೊಲೆ ಮತ್ತು ಹಿಂಸೆಯು ಅಧಿಕವಾದಂತೆ ಜನವಿರೋಧವು ಹೆಚ್ಚುತ್ತಿರುವುದು.

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುಳಿದ ವಿಮಾನ ಧಾಳಿ ಸಂರಕ್ಷಣಾ ಕೆಲಸಗಳಲ್ಲಿ ಕೂಡಾ ಪೂರ್ಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಅದುದರಿಂದ ಈ ಗ.ಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೊಲಿಸಿಯನ್ನು

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಿನ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುತ್ತಿನ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆ ಕನ್ಯೆಗಳು ಮೋಹಿಸುವ ರಹಸ್ಯಗಳು,



ಹಾಸಿಗೆಯ ಮೇಲಿನ ವಿಚಾರಗಳು ಪ್ರೀತಿಸುವ ರೀತಿ ರಿವಾಜುಗಳು, ಪ್ರೇಮಿಗಳಲ್ಲಿ ಇರುವ ಎಲ್ಲ ಭೇದಗಳ ವೈಚಾರಿಗಳು ಪ್ರೀತಿಸುವ ರಹಸ್ಯಗಳು ಮುಚ್ಚಿಡುವ ವಿಧಗಳು. ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮನೋಗಳು, ಇವೆಲ್ಲ ಅನೇಕ ಸ್ತ್ರೀಯರು, ಮತ್ತು ಹುವ, ನಲುವಿನ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೀವನ ಪ್ರೇಮಿಂಗ್ ಕಂಪೆನಿ

260. ಬೈಕಾಲಾರ್ ರೋಡ್, ಮದರಾಸ್

ದಾರಿ ಹೋಕನ ಡೈರಿ.

ಮಂಗಳೂರು ತಾಲೂಕು ಸುರತ್ಕಲ್ ಸರ್ಕಲಿನ ಜಿಲ್ಲಾ ಬೋರ್ಡ ಸ್ಥಾನಕ್ಕೆ ಕುಂದಾಪುರ ತಾಲೂಕಿನ ಶ್ರೀ ನರ್ಸೋತ್ತಮ ಪೈಗಳು ಆರಿಸಿಬಂದಿರುವರು ಕಳೆದ ಜಿಲ್ಲಾ ಬೋರ್ಡು ಸಭೆಯಲ್ಲಿ ತಮಗೆ ಗೊತ್ತಾದುದಿದು. ಆ ಮೊದಲು ಗೊತ್ತೇ ಇಲ್ಲ. ಎಂತಹ ಪ್ರಜಾಸತ್ತೆಯಲ್ಲವೆ! ಎಂದೊಬ್ಬ ಜಿಲ್ಲಾ ಬೋರ್ಡು ಮೆಂಬರರ ಉದ್ಗಾರ. 1942ನೇ ನೊಡೆಲಿನ ಪ್ರಜಾಸತ್ತೆ ಇರಬಹುದಲ್ಲ ಅದೇನೇ ಇರಲಿ, ಹೆಂಡತಿ ಗಂಡ ಇಬ್ಬರೂ ಜಿಲ್ಲಾ ಬೋರ್ಡು ಸದಸ್ಯರಾದುದಕ್ಕಾಗಿ ಪೈದಂಪತಿಗಳಿಬ್ಬರಿಗೂ ದಾರಿಹೋಕನ ಹಾರ್ದ 'ಕಂಗ್ರೆಚುಲೇಶನ್ಸ್' ಗಂಡಸಿಗೂ ಕುಂದಾಪುರದಿಂದಲೇ ಭತ್ತೆ ಸಿಗುವಂತೆ ಪ್ರಸಿಡೆಂಟರು ಶಿಫಾರಸು ಮಾಡುವ ಉದಾರತೆ ತೋರಿಸಿದರೆ ಗಂಡಹೆಂಡತಿಯಿಬ್ಬರೂ ಕುಂದಾಪುರದಿಂದ ಭತ್ತೆ ಹೊಡೆದು ಬಡುವಂತಾಗುವುದು. ಭತ್ತೆಯೇ ಮೆಂಬರಿಕೆಯ ಜೀವಾಳವಾಗಿರುವಾಗ ಪ್ರೆಸಿಡಂಟರೇಕೆ ಶಿಫಾರಸು ಮಾಡಬಾರದು? ಆವರ ಕೈಯಿಂದೇನು ಹೋಗುತ್ತದೆ-

೦೦ ೦೦ ೦೦

ಶ್ರೀ ರಾಜಗೋಪಾಲಾಚಾರ್ಯರ ಭಾಷಣ ಸಂಬಂಧವಾಗಿ ಮಂಗಳೂರಲ್ಲಿ ನಡೆದ ಸಭೆಯಲ್ಲಿ ಜನರು ಬಾಗವಹಿಸಕೂಡದೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ವತಿಯಿಂದ ಶ್ರೀ ಎಮ್ ಡಿ ಅಧಿಕಾರಿಗಳೊಂದು 'ಫರ್ಮಾನ್' ಹೊರಡಿಸಿದ್ದರಂತೆ ಆದರೆ ಸಭೆಗೆ ಹೋಗದೆ ಕೊತವರೆಷ್ಟು ಮಂದಿ? ಕಾಂಗ್ರೆಸ್ ಎಮ್ ಎಲ್ ಎ., ಜಿಲ್ಲಾ ಬೋರ್ಡು ಮತ್ತು ಮುನಿಸಿಪಲ್ ಮೆಂಬರರೇ ಆದರ ವ್ಯಾಪಾರಿಗಳಿಲ್ಲವೇ! ಆವರಿಂದ ಉದಾರತೆ ಕೇಳಿ ಶಿಫಾರಸು ಜ್ಯಾರಿಮಾಡುವ ಎರಡು ಅಧಿಕಾರಿಗಳಿಗಿರುವುದೇ? ಇಲ್ಲವಾದರೆ ಅಧಿಕಾರಿಗಳಿಗೆ ಅಧಿಕಾರ ತೋರಿಸುವ ಅದಿಕ ಪ್ರಸಂಗನೇಕ? ಎ ಐ ಸಿ ಸಿ ಯ ಸರ್ಕ್ಯುಲರೇನಾದರೂ ಬಂದಿತ್ತೇನು?

೦೦ ೦೦ ೦೦

ಪರ್ಯಾಯ ಮಾಧ್ವಸಚಿಗಳಾದ ಶ್ರೀ ಕೃಷ್ಣಾಪುರ ಮಠದ ಶ್ರೀ ಪಾದಂಗಳವರು ತನ್ನ ಜನ್ಮ ದಿನದಲ್ಲಿ ಹರಿಜನ ಬಂಧುಗಳಿಗೆ ಸಾಯಸಾನ್ನ ದಾನಮಾಡಿದರಂತೆ. ಸಂತೋಷ! ಪುಣ್ಯಸಂವಾದನೆಯ ನೀತಾನ್ನದಾನವೆ ದೃಷ್ಟಿಯೆಂದಲ್ಲವೆ?

೦೦ ೦೦ ೦೦

ದ ಕ ಜಿಲ್ಲಾ ಬೋರ್ಡು ಆಡಳಿತವು ಉತ್ತಮವಾಗಿ ಮುಂದಿರುವುದು (Efficient) ಈ ಸಲ ಸರಕಾರವು ಶಿಫಾರಸು ಬಂದಿರುವುದಂತೆ ಇಷ್ಟರವರೆಗೆ ಇಂತಹ ವಿಷಯವನ್ನು ದ ಕ ಜಿಲ್ಲಾ ಬೋರ್ಡು ಸಡೆದುದಿಲ್ಲವಾಕೆ ಅಂದಮೇಲೆ ಬೆಲ್ಲಾ ಬೋರ್ಡು ಕೆಲಸದಲ್ಲೇ ತಲ್ಲೀನರಾಗಿರುತ್ತಿರುವ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಗಳ ಶ್ರಮವು ಸಾರ್ಥಕವಾದಂತಾಯಿತು ಯಾವ ಕೆಲಸದಲ್ಲಾದರೂ ಹೊಸ ರೆಕಾರ್ಡು ಮಾಡುವ ಛಾ ಕೆಮ್ಮು ಜಿಲ್ಲಾ ಬೋರ್ಡು ಆಡಳಿತದಲ್ಲಿಯೂ ತನ್ನ ಹಿಂದಿನ ಸಂಪ್ರದಾಯವನ್ನು ಬಿದದೆ ಸಾಧಿಸಿದುದಕ್ಕಾಗಿ ಶಾಭಾಸೆನ್ನಲೇಬೇಕು

೦೦ ೦೦ ೦೦

ಆದರೆ ನಿರ್ದೇವ ಯಂತ್ರಕ್ಕಿಂತಲೂ ಕಾರ್ಯಾಲು ಬಿದು ಬೇಕು ಸಸೂತ್ರವಾಗಿ ಕೆಲಸವಾಗಲು ಆಗಾಗ ಎಣ್ಣೆ ಬಣ್ಣ ಮತ್ತು ರಿಪೇರಿಬೇಕು ಅಂದ ಮೇಲೆ ಸಜೀವ ಯಂತ್ರಕ್ಕೆ ಮೆ ಸುತ್ತಾ ಅನಿವಾರ್ಯವಲ್ಲವೇ ಅಂದ ಮೇಲೆ ನವ್ಯ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಡಿಸ್ಪೆಂಸ್ಟ್ರಿ ಇನ್ಸ್ಪೆಕ್ಟರ್ಸನ್ನು ಅಸ್ಪಂದು ಹೊತ್ತುಕೊಂಡಿರುವುದು ಸರಿಯೇ ಆವರ ರಾತ್ರಿಯಲ್ಲಿಯೂ ನಿದ್ದೆಯಿಂದೆ ಕಕ್ಕನೆ ಎದ್ದು ಕ್ಯಾಂಪ್ ಕ್ಲಾರ್ಕನ್ನು ಕರೆದು 'ಸೋರ್ ಡೌನ್' ಎಂದರೆ ಕೇಗೆ ಸಿಪರೀತ ರೈಮಡ ಧ ಯೆಯು ಪ್ರೆಸಿಡಂಟರ ಮೇಲೆ ಬಿದ್ದಿರುವಂತಿದ,'ಆಕಿ ಸರ್ವತ್ರ ವರ್ಜಯೇತ್' ಎಂಬುದನ್ನು ಪ್ರೆಸಿಡೆಂಟರು ಸ್ವಲ್ಪ ನೆನಪಿನಲ್ಲಿಟ್ಟುಕೊಂಡರಾದೀತು. "ಎಸ್ ಮನೆಯಲ್ಲಿಯೂ ಪ್ರೆಸಿಡೆಂಟರೇ ತಗಿ ತನ್ನ ಹೆಂಡತಿ ಮಕ್ಕಳಿಗೂ ಸಾಕಷ್ಟು ಸಮಯ ಕೊಡುವರೇ ಎಂಬೋದು ಸಂದೇಹ ದಾರಿ ಹೋಕನಿಗೆ.

೦೦ ೦೦ ೦೦

ಸನ್ಮಾನಿಗೆ ಅವೇಕೋ ಉಡುಸಿ ಬಿಟ್ಟು ಹೋಗುವ ಮನಸ್ಸೇ ಇರುವಂತೆ ತೋರುವುದಿಲ್ಲ ಹುಲ್ಲು ಬಾವಣಿಯ ಗುಡಾರಗಳಿಂದ ಅನು ಮೇಗಿನಾಲಯನ್ನು ಅಲ್ಲಯೇ ಕಳೆಯುವ ನಿರ್ಧಾರ ಮಾಡಿರುವಂತೆ ಎಷ್ಟು ಕಾಲವಾದರೂ ಲೈಸೆನ್ಸ್ ಕೊಡುವವರಿರುವಾಗ ಒಂದಲ್ಲ ಎರಡು ವರ್ಷಗಳ ಕಳೆಯುವುದಕ್ಕು ಒಡ್ಡಿಯೇನು?

೦೦ ೦೦ ೦೦

ಸಟ್ಟು ಜುಗಾರಿಯ ಮಹಾ ಮಾರಿ ರೋಗವು ಈಗ ಬೊಂಬಾಯಿಯಿಂದ ಸುಂಗಕಾರಲ್ಲೆಲ್ಲಾ ತುಂಬಾ ಹಬ್ಬಿ ತಾರೀಗಾಕುಗಳಿಗೂ ಅದರ ಅಂಟು ಹರಡಹತ್ತಿದೆ ಈ ಜುಗಾರಾಡುವವರು ಸಣ್ಣಕ ಬಿದ್ದು ಮಂದಿ ಬಡಬಗ್ಗರು ಮಂಗಳೂರಲ್ಲಿ ಸ್ಥಿತಿವಂತ ಮಂಡಿ ದಾರಿಹೋಕನು ರಸ್ತೆಗಳಲ್ಲಿ ಅಡ್ಡಾಡುವಾಗ ಪ್ರಧಮವಾಗಿ ಅವನ ಕಿವಿಗೆ ಬೀಳುವುದು ಸಟ್ಟಾ ನಂಬರುಗಳು ಸಟ್ಟಾದಿಂದ ಕೆಲವರು ಸಹಸ್ರಗಟ್ಟಲೆ ಹಣಗಳಿಸಿಬಿಟ್ಟ ಕತೆ ಕೇಳಿದರ ದಾರಿಹೋಕನಿಗೂ, ತನ್ನಲ್ಲಿದ್ದ ಪುಡಿಬಿಡಿ ಕಾಸಿನಿಂದ ಒಂದೊಮ್ಮೆ ಸಟ್ಟಾ ಅಡಿ ಅದೃಷ್ಟ ಪರೀಕ್ಷೆಮಾಡುವ ಮನೋದು ಬರುತ್ತದೆ ಆದರೆ ಇದ್ದ ಹುಡಿಕಾಸು ಹೋಗಿಬಿಟ್ಟರೆ,ಊಟಕ್ಕಿಂತಲೂ ಪ್ರಾಮುಖ್ಯವಾದ ಬೀಡಿ ಸೇದಲು ಮತ್ತೆಲ್ಲಿಂದ ಕಾಸೆಂದು ಭೀತಿ!

೦೦ ೦೦ ೦೦

'ಸಟ್ಟಾ ಜುಗಾರಿಯು ಬೇಕಾಯಿದೇ ವಿರವಲ್ಲವೇ' ಆವನ್ನು ಸರಕಾರವು ಯಾಕೆ ಆಡಬಿಡುತ್ತದೆ' ಎಂದೊಬ್ಬರು" ದಾರಿಹೋಕನೊಡನೆ ಪ್ರಶ್ನಿಸಿದರು ದುಡ್ಡಿಟ್ಟು ಜಗಾರಾಡುವುದು ಬೇಕಾಯಿದೆಶಿರವಲ್ಲವೆ? ಆವರಿ ದೊಡ್ಡ ದೊಡ್ಡ ಕ್ಲಬ್ಬುಗಳಲ್ಲಿ ದೊಡ್ಡ ದೊಡ್ಡ ಸರಕಾರೀ ಅಧಿಕಾರಿಗಳೇ ರಾತ್ರಿ ಹಗಲು ದುಡ್ಡಿಟ್ಟು ಜುಗಾರಾಡುವುದಿಲ್ಲವೇ? ತಂತಯೇ ಸಟ್ಟಾ ಜೂಜನ್ನಾಡುವ ಪೋಲೀಸ್ ಅಧಿಕಾರಿಗಳೇ ಹಲವರಿರಬಹುದು ಕಾಯಿದೆಯ ರಕ್ಷಕರೇ ಬೇಕಾಯಿದೆಶಿರನಾದುದನ್ನು ಮಾಡಿದರೆ ಇದು ಕಾಯಿದೆಶಿರವಾಗುವುದಿಲ್ಲವೇ? ಅಂತೆಯೇ ಆಗಿದೆ ಸಟ್ಟಾ ಜುಗಾರಿ! ಬೇಲಿಯೇ ಹೊಲ ಮೇದರೆ ಬೆಳೆಯೇ ಮೇಯುವಲ್ಲಿಂದಾಗುವುದಿಲ್ಲವೆ?

—ದಾರಿಹೋಕ.

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ

ಮೆನೇಜರ್

ಅದರಲ್ಲಿದ್ದಂತೆಯೇ ಆಯಿತು.

"ಕಳೆದ ವರ್ಷ ನಾನು ನಿಮ್ಮ ವರ್ಷ ಭವಿಷ್ಯವನ್ನು ತರಿಸಿರುವುದು ಸರಿಯಷ್ಟೆ! ವೃಶ್ಚಿಕ ರಾಶಿಯವನಾದ ನನಗೆ ಆ ವರ್ಷದಲ್ಲಿ ಬರೆದ ಫಲಾಫಲಗಳೇ ಸ್ವಾಸ್ಥ್ಯವಾಗಿವೆ. ಈ ವರ್ಷವೂ ನನಗೆ ಒಂದು ಪತ್ರಿಯನ್ನು ಕೂಡಲೇ ರವಾನಿಸಿರಿ."

K N Kulkarni, Hubli

"ನೀವು ಸಕಾಲದಲ್ಲಿ ಕಳುಹಿಸಿಕೊಟ್ಟಿರುವ 1942ನೇ ಇಸವಿಯ ವರ್ಷಭವಿಷ್ಯವು ಮುಟ್ಟಿರುತ್ತದೆ ಅದನ್ನು ನನ್ನ ಸ್ನೇಹಿತರಿಗೆ ಓದಲಿಕ್ಕೆ ಕೊಟ್ಟು ಕಾಯಿತು ಆದರೆ ಈಗ ಅದನ್ನು ಯಾರು ಕೊಂಡು ಹೋಗಿದ್ದಾರೆಂದು ತಿಳಿಯುವುದಿಲ್ಲ ಒಂದು ತಿಂಗಳಾದರೂ ಆದರ ಪತ್ತೆಯೇ ಇಲ್ಲ ಆದ್ದರಿಂದ ಆದು ಇನ್ನು ಕೆಲವು ಹೋದಂತೆಯೇ ಸರಿ ಜನವರಿ ಪೆಬ್ರವರಿ ತಿಂಗಳಲ್ಲಿ ನನಗೆ ಆದರಲ್ಲಿ ಬರೆದಿದ್ದಂತೆಯೇ ಆಗಿದೆ. ಮುಂದೇನು-ಗುವುದೆಂದು ತಿಳಿಯಲು ಇನ್ನೊಂದು ಪ್ರತಿ ಕಳುಹಿಸಿರಿ. 0-3-9 ಸ್ಟ್ಯಾಂಪು ಲಗ್ತಿಸಿದ್ದೇನೆ"

ಪಿ. ಕೆ. ಶೆಟ್ಟಿ, ಬೊಂಬಾಯಿ.

1942ನೇ ಇಸವಿಯ ವರ್ಷಭವಿಷ್ಯದ ಪ್ರತಿಗಳು ಅಂತರಂಗದ ವಿಜಯಂಟರ್ಲ್ಲಿ ಸಿಗುತ್ತವೆ ಆಲ್ಲಿ ಸಿಗದಿದ್ದರೆ 0-3-9 ಸ್ಟ್ಯಾಂಪಿನೊಂದಿಗೆ ಬರೆಯಿರಿ

ಅಂತರಂಗ ಆಫೀಸು, ಉಡುಪಿ. | ನವಭಾರತ ಪುಸ್ತಕ ಭಂಡಾರ, ಉಡುಪಿ.



ಅಹಹಾ! ಎಂತಹ ಸುಖನಿದ್ರೆ!

ಆಮಲಕೀ ತೈಲವು ಎಂತಹ ಸುಖನಿದ್ರೆಯನ್ನು ಕೊಡುತ್ತದೆ. ಮೂತರೋಗ, ಮೆದುಳಿನ ಸಂಸ್ಥಾನಗಳನ್ನು, ನೇತ್ರಗಳನ್ನು ರುಜ್ಜುಗೊಳಿಸುತ್ತವ ಕೊಮನೀಯ ಕೇರಕಲಾಪಕ್ಕೂ ಆಮಲಕೀ ತೈಲವೆ ಸಹಕಾರಿಯಾಗಿದೆ

ಸಾವಿರಾರು ವಿದ್ಯಾರ್ಥಿಗಳು ಇದನ್ನು ಉಪಯೋಗಿಸಿ ಉತ್ತಮ ಫಲ ಪಡೆದಿರುತ್ತಾರೆ

ಚಿಕ್ಕಸೀಸೆ ಬಾಟ್ಲಿಗೆ 0—6—0 ದೊಡ್ಡಸೀಸೆ ಬಾಟ್ಲಿಗೆ 0—11—0

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಕುಂಜಾಲು, ದ. ಕ.

ಉಡುಪಿ ಸ್ವಾಕಿಸರು: ನವಭಾರತ ಬುಕ್ ಡಿಪೋ.

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability.)

ESTD: 1906.

ಉಡುಪಿ, ಗುರುವಾರ, ೨-೬-೧೯೪೨

ಚೈನದ ಅಗ್ನಿಪರೀಕ್ಷೆ.

ಜಪಾನಿ ಸೇನಾನಿಗಳು ತಮ್ಮುದೇ ಆದ ಯುದ್ಧದ ಸ್ಟೈಲನ್ನು ಅನುಸರಿಸುತ್ತಿರುವರೇ ಹೊರತು ತಮ್ಮ ಆಕ್ಸಿಸ್ ಬಂಧುಗಳಿಗನುಕೂಲವಾಗಿ ನಡೆಯಲು ಸಿದ್ಧರಿಲ್ಲೆಂಬುದು ಇದೀಗ ಸುಸ್ಪಷ್ಟವಾಯಿದೆ. ಜರ್ಮನಿ ಮತ್ತು ಇಟಲಿಗಳ ಅನುಕೂಲದ ದೃಷ್ಟಿಯು ಅವರಲ್ಲಿರುತ್ತಿದ್ದರೆ, ಜಪಾನು ಇಷ್ಟರಲ್ಲೇ ಹಿಂದುದೇಶದ ಮೇಲೆ ಧಾಳಿ ನಡಿಸಿ ಅರಬಿ ಸಮುದ್ರ ಮಾರ್ಗವಾಗಿ ಮುಂದೊತ್ತುವ ಯತ್ನಮಾಡಬೇಕಿತ್ತು. ಸೋವಿಯೆಟ್ ರಶ್ಯದ ಮೇಲೆ ಬೀಳಲು ಮುಂದಾಗಬೇಕಿತ್ತು. ಆದರೆ ಅದು ಹಾಗೇನೂ ಮಾಡಲು ಸಿದ್ಧವಿರುವಂತಿಲ್ಲ. ಸಂಧಿ ಸಾಧಿಸಿ ಕೇವಲ ತನ್ನ ಜೇಳೆ ಬೇಯಿಸಿಕೊಳ್ಳುವ ಕುರಿತು ಸಂಪೂರ್ಣ ಗಮನಹರಿಸಿರುವುದೇ ಹೊತು ಇತರರಿಗೆ ಪ್ರಯೋಜನವನ್ನುಂಟುಮಾಡುವ ದೃಷ್ಟಿಯೇ ಅನಕ್ಕಿಸುವಂತೆ ತೋರುತ್ತಿರುವುದಿಲ್ಲ. ಇಂದೀಗ ಜಪಾನು ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳುವುದರಲ್ಲಿ ನಿರತವಾಗಿದೆ. ಆಸ್ಟ್ರೇಲಿಯ ಮತ್ತು ಹಿಂದುಸ್ಥಾನಗಳನ್ನು ಆಕ್ರಮಿಸಿ ವಿಪರೀತವಾಗಿ ಮುಂದೊತ್ತಿ ಕದಿಗೆ ಹಿಂದಿನಿಂದ ಆವ ವಿಪತ್ತುದುವ ಜಪಾಯಕ್ಕನು ಗುರಿಯಾಗಲು ಸಿದ್ಧವಿಲ್ಲ. ಈ ದೃಷ್ಟಿಯಿಂದ ಜಪಾನಿ ಸೇನಾನಾಯಕರು ಬಲು ಚತುರರೆಂದೇ ಹೇಳಬೇಕು. ಹಿಟ್ಲರನಂತೆ ಒನ್ಮೆಯೇ ಮುಡುಕಿವವರು ಅವರಲ್ಲ

ಬರ್ಮಾದ ಬೆಡ್ಡನ್ನು ಮುಗಿಸಿದ ಕೂಡಲೆ ಜಪಾನರು ಚೈನದ ಮೇಲೆ ಹಿಂಬದಿಯಿಂದ ರಾಡ್ಯ ಧಾಳಿ ನಡಿಸಿ ಚುಂಕಿಂಗ್ ಸರಕಾರವನ್ನು ಒಗ್ಗ ಬಡಿಯಲು ಮುಂದಾಗಬಹುದೆಂದು ಕೆಲವರ ಅಭಿಪ್ರಾಯವಾಗಿತ್ತು. ಬರ್ಮಾವನ್ನು ಗೆದ್ದ ಮುಖ್ಯಸೈನ್ಯವೊಂದು ಕೂಡಲೇ ಅದೆನ್ನೆ ಬಹುದು. ಚೈನವನ್ನು ಗೆಲ್ಲಲು ಬರ್ಮಾವನ್ನು ಸಶಕ್ತಪಡಿಸಿಕೊಳ್ಳುವುದು ಅತ್ಯಾವಶ್ಯಕ. ಯಾಕೆಂದರೆ ಚೈನಕ್ಕೆ ಬರ್ಮಾದ ಮೂಲಕವೇ ಹೆಚ್ಚಿನ ಸಹಾಯ ಬರುತ್ತಿತ್ತು. ಇನ್ನು ರಾಷ್ಟ್ರೀಯ ಸರಕಾರವು ಬರ್ಮಾದಲ್ಲಿ ಮೂಲಕ ಸಹಾಯ ನಡೆದು ಬಾ ಬರ್ಮಾ ಹೆಚ್ಚಿನ ದೃಢವಾಗಿ ಸ್ಥಿತಿ ಭದ್ರಪಡಿಸುವುದು ಸಿದ್ಧಿಯಾಗಿತ್ತು. ಆದುದರಿಂದ ಜಪಾನರು ಒಮ್ಮೆಯೇ ಬರ್ಮಾದ ಮೇಲೇರಿ ಹೋಗಿ ಅದನ್ನು ವಶಪಡಿಸಿಕೊಂಡು ಚೈನದ ಸಹಾಯದ ಏಕಮಾತ್ರ ಮಾರ್ಗವನ್ನು ಕಡಿದು ಪ್ರಾಕಿರುವರು ಮಾತ್ರವಲ್ಲದೆ ಬರ್ಮಾ, ಥೈಲೆಂಡ್ ಮತ್ತು ಇಂದೋಚೈನಗಳ ಮೂಲಕ ಒಂದೇಸವನೆ ಚೈನವನ್ನು ಹಿಂಬದಿಯಿಂದ ಆವರಿಸಿರುವರು. ಯುನಾನ್ ಮತ್ತು ಚಿಕಿಯಂಗ್ ಪ್ರಾಂತಗಳಲ್ಲಿ ಇಷ್ಟರಲ್ಲೇ ಕೆಲಮಟ್ಟಿನ ವಿಜಯಗಳನ್ನವರು ಪಡದಿರುವರು.

ಜಪಾನಿನ ಚೀನೀ ಪ್ರಕರಣವೆಂದು ಕರೆಯುವ ಚೈನಾ ಯುದ್ಧವನ್ನು ಇಂದೀಗ ೫ ವರ್ಷಗಳಿಂದ ಮುಗಿಸಲಾಗದುದು ಅವರ ಸೈನಿಕೆಗೆ ದೊಡ್ಡ ಕುಂದಾಗಿರುತ್ತದೆ. ಮಾತ್ರವಲ್ಲದೆ ಚೈನವನ್ನು ಇನ್ನೂ ಹಾಗೆಯೇ ಬಿಟ್ಟಿಳ್ಳಿ, ಸಂಯುಕ್ತ ರಾಷ್ಟ್ರಗಳು ಅದನ್ನು ತಮ್ಮ ಆಶಯವಾಗಿ ಮಾಡಿಕೊಂಡು ಜಪಾನನ್ನು ಬಗ್ಗುಬಡಿಯಲೆತ್ನಿಸುವ ಅಪಾಯವಿದೆ. ಚೈನದ ಮೂಲಕ ಜಪಾನಿನ ಮೇಲೆ ಸುಲಭವಾಗಿ ವಿಮಾನ ಧಾಳಿ ಕೆಡಾ ನಡಿಸಬಹುದಾಗಿದೆ. ಆದುದರಿಂದ ಜಪಾನರು ಇನ್ನು ಕೆಲ ಸಮಯ, ಚೈನವನ್ನು ಸಂಪೂರ್ಣವಾಗಿ ಗೆಲ್ಲುವ ಕದಿಗೇನೇ ಮುಖ್ಯ ಗಮನ ಕೊಡುವರೆಂಬುದರಲ್ಲೇನೂ ಸಂದೇಹವೇ ಇಲ್ಲ.

ಆದುದರಿಂದ ಚೈನವು ಇಂದು ಪುನಃ ಅಗ್ನಿ ಪರೀಕ್ಷೆಗೊಳಗಾಗಿದೆ ಜಪಾನು ಚೈನದ ಮೇಲೆ ಬಿದ್ದು ಹೋರಾಟ ನಡಿಸಿದ ಆರಂಭದ ಎರಡು ವರ್ಷಗಳಲ್ಲಿ ಚೀನೀ ರಾಷ್ಟ್ರೀಯ ಸರಕಾರವು ತನ್ನ ಅಸ್ತಿತ್ವವನ್ನೇ ಕಳಕೊಳ್ಳುವ ಮಹಾ ವಿಪತ್ತಿಗೊಳಗಾಗಿತ್ತು. ಆದರೂ ಮಾರ್ಷಲ್ ಚ್ಯಾಂಗ್ ಕಾ ಅಸಾಧಾರಣ ಧೈರ್ಯ ಮತ್ತು ಸೈರ್ಯದಿಂದ ಚೈನದ ಅಸ್ತಿತ್ವವನ್ನು ರಕ್ಷಿಸಿಕೊಂಡರು. ಜಪಾನರು ಮುಂದುವರಿದಂತೆ ಹಿಂಪೆ ಸರಿದು ನಶಿಸಿನವಾಗಿ ಮಿಲ್ಯಾಂತರ ಸೇನೆಯನ್ನು ಸಂಘಟಿಸಿ, ನವ ಚೀನೀ ರಾಷ್ಟ್ರವನ್ನೇ ನಿರ್ಮಿಸಿ, ನವ ಚೈತನ್ಯ ಮತ್ತು ಉತ್ಸಾಹ ತಾಳಿ ಇಂದೀಗ ೫ವರ್ಷಗಳಿಂದ ಜಪಾನರನ್ನು ಜಯಶೀಲವಾಗಿ ಪ್ರತಿಭಟಿಸುತ್ತಾ ಬಂದಿರುವರು. ಮಾರ್ಷಲ್ ಚ್ಯಾಂಗರು ಅದೊಂದು ಅದ್ಭುತವನ್ನೇ ಸಾಧಿಸಿ ಇಡೀ ಲೋಕದ ಮೆಚ್ಚುಗೆಗೆ ಪಾತ್ರರಾಗಿರುವರು. ಜಪಾನಿನ ನೀತಿಯ ಸಾಮ್ರಾಜ್ಯ ಶಾಹಿಯ ಉಪಟಳದಿಂದ ಲೋಕಕ್ಕುಂಟಾಗುವ ಕಂಟಕವನ್ನು ಮನಗಂಡ ಅಮೆರಿಕ ಮತ್ತು ಬ್ರಿಟನುಗಳು ಚೈನದ ಮೂಲಕ ಅದನ್ನು ಅದಕ್ಕು ಹಣ್ಣುಮಾಡುವ ದೃಷ್ಟಿಯಿಂದ ಮಾರ್ಷಲ್ ಚ್ಯಾಂಗರಿಗೆ ಸಾಧ್ಯವಾದ ಸಹಾಯ ನೀಡತೊಡಗಿದವು. ಸೋವಿಯೆಟ್ ರಶ್ಯವು ಮೊದಲಿಂದಲೂ ಚೈನಕ್ಕೆ ಸಹಾಯ ಮಾಡುತ್ತಾ ಬಂದಿರುವುದು. ಆದುದರಿಂದಲೇ ರಾಷ್ಟ್ರೀಯ ಚೈನವನ್ನು ನೆಲಕಡಿಸಲು ಜಪಾನಿಗೆ ಅಸಾಧ್ಯವಾಗಿರುವುದು. ಚೀನೀ ಯುದ್ಧವು ಎಂದು ಕೊನೆಗೊಳ್ಳುವುದೋ ಎಂಬ ಜಿಗುಪ್ಸೆಯು ಜಪಾನರಲ್ಲುಂಟಾಗುವಂತಹ ಪರಿಸ್ಥಿತಿಯುಂಟಾಗಿರುವುದು. ಆದುದರಿಂದಲೇ ಚೈನವನ್ನು ಸಂಪೂರ್ಣವಾಗಿ ಗೆಲ್ಲುವುದು ಜಪಾನ ಸೇನಾನಿಗಳ ಮುಖ್ಯ ಕರ್ತವ್ಯವಾಗಿರುವುದು.

ಸೋವಿಯೆಟ್ ಸರಕಾರವು ಜರ್ಮನ್ ಯುದ್ಧದಲ್ಲಿ ಸಿರತವಾದಂದಿನಿಂದ ಚೈನಕ್ಕೆ ರಶ್ಯದಿಂದ ದೊರೆಯುತ್ತಿದ್ದ ಸಹಾಯವು ನಿಂತುಹೋಗಿರುವುದು. ಇಂದೀಗ ಬರ್ಮಾದ ಮಾರ್ಗವೂ ಸಂಪೂರ್ಣ ಬಂದಾಗಿ ಹೋಗಿರುತ್ತದೆ. ಆದುದರಿಂದ ಅದು ಪುನಃ ಮಹಾ ವಿಪತ್ತಿಗೊಳಗಾಗಿರುವುದು. ಏನ್ಪೇ ದೊಡ್ಡ ಸೇನೆ ಇದ್ದರೂ, ಅಧುನಿಕ ಯುದ್ಧೋಪಕರಣಗಳಿಲ್ಲದಿದ್ದರೆ ಮುಖ್ಯವಾಗಿ ವಿಮಾನಗಳಿಲ್ಲದಿದ್ದರೆ, ಆ ಸಿದ್ಧತೆ ಇರುವ ಪ್ರಬಲನೈರಿಯನ್ನು ಗೆಲ್ಲಲು ಸಾಧ್ಯವಿಲ್ಲ. ಆದುದರಿಂದಲೇ ಈ ಸಂಧಿಕಾಲದಲ್ಲಿ ವೆಲ್ಲಿಂಗ್ಟನ್‌ಕೂರವರೂ, ಮಾರ್ಷಲ್ ಚ್ಯಾಂಗರೂ, ವಿಮಾನ ಮತ್ತು ಟೇಂಕುಗಳ ಶೀಘ್ರಸರಬರಾಯಕ್ಕಾಗಿ ಆಗ್ರಹವಿನಂತಿ ಮಾಡಿಕೊಂಡಿರುವರು. ತನಗೆ ಸಾಕಷ್ಟು ಆಧುನಿಕ ಯುದ್ಧೋಪಕರಣ ಸಹಾಯ ದೊರೆತಲ್ಲಿ ಜಪಾನರನ್ನು ಸಂಪೂರ್ಣವಾಗಿ ಪರಾಜಯಗೊಳಿಸುವ ಜಾಬ್ದಾರಿ ತನ್ನದೆಂದು ಮಾರ್ಷಲ್ ಚ್ಯಾಂಗರು ಗ್ಯಾರಂಟೀ ಕೊಡುವಷ್ಟು ಆತ್ಮವಿಶ್ವಾಸವುಳ್ಳವರಿರುತ್ತಾರೆ

ಇಂದೀಗ ಆಕ್ಸಿಸ್ ರಾಷ್ಟ್ರಗಳ ಮಾರ್ಗವಲ್ಲಿ ಹೊಡ್ಡ ಆತಂಕಗಳಾಗಿ ನಿಂತು ಮಹತ್ತಾದ ಲೋಕಕಂಟಕವನ್ನೇ ತಡೆಗಟ್ಟುವುದಕ್ಕಾಗಿ ಜೀವನ್ಮರಣ ಹೋರಾಟ ಹೂಡಿ ಅತಿ ಹೆಚ್ಚಿನ ತ್ಯಾಗಮಾಡಿರುವ ಎರಡು ರಾಷ್ಟ್ರಗಳೆಂದರೆ ಸೋವಿಯೆಟ್ ರಶ್ಯ ಮತ್ತು ರಾಷ್ಟ್ರೀಯ ಚೈನ. ಈ ಸಂಧಿಕಾಲದಲ್ಲಿ ಅವೆರಡೂ ವತನಹೊಂದುವಂತಾದರೆ ಇಡೀ ಲೋಕವೇ ಮಹಾ ವಿಪತ್ತಿಗೊಳಗಾಗುವುದೆಂಬುದು ನಿಸ್ಸಂಶಯ. ಸೋವಿಯೆಟ್ ರಶ್ಯದಂತೆಯೇ ಚೀನೀ ರಾಷ್ಟ್ರೀಯ ಸರಕಾರಕ್ಕೂ ಶೀಘ್ರವಾಗಿ ಸಹಾಯವೀಯುವುದು ಸಂಯುಕ್ತ ರಾಷ್ಟ್ರಗಳ ಆದ್ಯಕರ್ತವ್ಯವಿರುತ್ತದೆ. ಮಾತ್ರವಲ್ಲದೆ, ಪಶ್ಚಿಮ ಯುರೋಪಿನಲ್ಲಿ ಇನ್ನೊಂದು ರಣರಂಗ ತೆರೆಯುವುದು ಎನ್ನೊಂದು ಅವಶ್ಯಕವೇ ಆದೀತು ಪೂರ್ವದಲ್ಲಿ ಜಪಾನಿನ ಮೇಲೆ ನೌಕಾ ಮತ್ತು ವಿಮಾನ ಧಾಳಿಗಳನ್ನು ನಡಿಸಿ ಅದರ ಬಲವನ್ನು ಸಾಧ್ಯವಾದ ರೀತಿಯಲ್ಲೆಲ್ಲಾ ಕುಗ್ಗಿಸಲೆತ್ನಿಸುವುದು ಅತ್ಯಾವಶ್ಯಕ. ವೈರಿಯು ಮೇಲೆ ಬಂದು ಬೀಳುವನಕ ಕಾಯುವೆ ತಾನೇ ಮುನ್ನುಗ್ಗಿ ಧಾಳಿಕಾರಿಕೆ ಹೋರಾಟ ನಡಿಸಲು ಸಂಯುಕ್ತ ರಾಷ್ಟ್ರಗಳು ಈ ಸಂದರ್ಭದಲ್ಲಿ ದುಡುಕಬೇಕು. ಜರ್ಮನಿ ಇಟಲಿಗಳಂತೆಯೇ ಜಪಾನಿಗೂ ಅದಷ್ಟು ಹೆಚ್ಚಿನ ಜಪಾಯವನ್ನುಂಟುಮಾಡಲೆತ್ನಿಸಬೇಕು. ಸಾಧ್ಯವಿದ್ದಲ್ಲೆಲ್ಲಾ ಅದರ ಮೇಲೇರಿ ಹೋಗಿ ಹೋರಾಟ ನಡಿಸುವ ಸಾಹಸ ಮಾಡಬೇಕು. ಮುಖ್ಯವಾಗಿ ಚೈನಕ್ಕೆ ಸೂರು ಗಟ್ಟಿಯಲ್ಲಿ ವಿಮಾನ ಸಹಾಯವನ್ನು ಕೂಡಲೆ ಕೊಡಬೇಕು ಆಗ ಮಾತ್ರ ಜಪಾನನ್ನು ಜಯಶೀಲವಾಗಿ ಪ್ರತಿಭಟಿಸಲು ಅದಕ್ಕೆ ಸಾಧ್ಯವಾಗಬಹುದು.

ವರ್ಷಕ್ಕೆ 60,000 ವೈಮಾನಿಕರ ತರಬೇತಿ

ಅಮೆರಿಕವು ರುಸವೆಲ್ಟರ ಕೇಳಿಕೆಯಂತೆ ವರ್ಷಕ್ಕೆ 60,000 ವೈಮಾನಿಕರನ್ನು ತರಬೇತಿ ಮಾಡುತ್ತಿರುವುದು. ಇವರೆಲ್ಲಾ ತರುಣರು, ಉತ್ಸಾಹಿಗಳು ಮತ್ತು ಅಭಿಮಾನಶಾಲಿಗಳು. ಒಬ್ಬ ತರುಣನಿಗೆ 32 ವಾರಗಳ ತರಬೇತಿ ಕೊಡಲಾಗುವುದು. ಅವನು 200 ಘಂಟೆ ಹಾರಾಡುವನು. ಸಾವಿರಾರು ಮಂದಿ ಅಮೆರಿಕಾನರು ವೈಮಾನಿಕರಾಗಲು ಉತ್ಸಾಹದಿಂದ ಮುಂದೆ ಬರುತ್ತಿರುವರು. 300,000 ಅರ್ಜಿದಾರರಲ್ಲಿ 60,000 ಮಂದಿ ಮಾತ್ರ ಆರಿಸಲ್ಪಟ್ಟಿರುವರು.

ಯುನ್ಯಾಟೆಡ್ ಸ್ಟೇಟ್ಸಿನ ಅಶ್ವದಳ

ಅಮೆರಿಕದ ಯುನ್ಯಾಟೆಡ್ ಸ್ಟೇಟ್ಸಿನ ಸೇನಾ ಪಾತೆಯವರು ದೇಶದಲ್ಲೆಲ್ಲಾ ಹುಡುಕಾಡಿ 24,000 ಕುದುರೆಗಳನ್ನೊಟ್ಟುಮಾಡಿ ಅಶ್ವದಳವೊಂದನ್ನು ಸಂಘಟಿಸಿರುವರು. ಟೇಂಕ್, ತೋಪು, ವಿಮಾನಗಳ ಈ ಕಾಲದಲ್ಲಿ ಶೈನ್ಯದಲ್ಲಿ ಅಶ್ವದಳಕ್ಕೂ ಸ್ಥಾನವಿಲ್ಲದಿಲ್ಲ. ಸ್ಟೆಲಿನರು ಕಟ್ಟ ಕಡೆಗೆ ವೋಲ್ಗೋವನ್ನು ರಕ್ಷಿಸಿದುದು ಸುಸಂಘಟಿತವಾದೊಂದು ಅಶ್ವಾರೋಹಿ ದಳದ ಬಲದಿಂದ ಏಮ ಮತ್ತು ಚಳಿಯನ್ನು ಲಕ್ಷಿಸದೆ ಸೋವಿಯೆಟ್ ಅಶ್ವಾರೋಹಿ ದಳಗಳು ಜರ್ಮನರ ಮೇಲೆ ಬಿದ್ದು ಚಳಿಗಾಲದ ಧಾಳಿಯಲ್ಲಿ ಪ್ರಮುಖ ಭಾಗವಹಿಸಿರುತ್ತವೆ. ಕೆಸರು, ಕತ್ತಲೆ ಮತ್ತು ಮುಳೆಯಲ್ಲಿ ಹೋರಾಡಲು ತಗತ್ಯ ಶೇಕಾದುದು ಅಶ್ವಾರೋಹಿದಳವೆಂಬುದೀಗ ಶ್ರುತವಾಗಿರುತ್ತದೆ.

ಸೂಚನೆಗಳು—ಸ್ಟೇಷನರಿ ಫರ್ನಿಚರ್ ಪ್ರಿಂಟಿಂಗ್ ಮತ್ತು ಉಷ್ಣ ಸಿರ್ಮಾಣ ಮತ್ತು ಮೈಕೂರು ಪೇಪರ್ ಮಿಲ್ಸ್‌ನ ಜೇನರ್; ಶ್ರೀ ಎಂ ವೆಂಕಟಸಾಧಕೃಷ್ಣನವರು ಕೃತಯಮೇವನೆಯಿಂದ ಮೃತರಾದರು ಇವರು ಮೈಸೂರು ಕೃಷಿಕರು ಕೃಷಿಗಾಗಿಯೆ ಅಭಿವೃದ್ಧಿಗಾಗಿ ಮತ್ತು ವಿಜ್ಞಾನ ಕಲಿಯಲಿಕ್ಕಾಗಿ ಅಮೆರಿಕೆಗೆ ಹೋಗಿದ್ದರು ಮತ್ತು ಇತ್ತೀಚಿನ ಧಾಳಿಯಲ್ಲಿ ಮೃತರಾದವರಲ್ಲಿ ಬಹಳ ವ್ಯಾಸಾಸ್ಯರಾಗಿದ್ದರು. ಇವರ ಮರಣದಿಂದ ಇತಿ ಸಂಸಾರಕ್ಕೆ ಪೂರಿಸಲಾಗಿದೆ.

ನವಯುಗ

ಜಾಹೀರಾತು ದರ

(ಒಂದು ಜಾತಿಗೆ)

1	ಪುಟಕ್ಕೆ ...	ರೂ. 25-0-0
½	,, ...	ರೂ. 15-0-0
¼	,, ...	ರೂ. 8-0-0
⅛	,, ...	ರೂ. 5-0-0
ಕಲಂ	ಇಂಚಿಗೆ...	ರೂ. 1-0-0

ಚಂದಾದರ (ಮುಂಗಡ)

1	ವರ್ಷಕ್ಕೆ	ರೂ. 3-8-0
½	,, ...	ರೂ. 2-0-0
ಬಿಡಿ	ಪ್ರತಿಗೆ ...	ರೂ. 0-1-3

★ ಲಿಬಿಯದಲ್ಲಿ ದೊಡ್ಡ ಟೇಂಕ್ ಯುದ್ಧ. ★

ಲಿಬಿಯದ ಯುದ್ಧ.

ಅಸಹನೀಯ ಉಷ್ಣದಲ್ಲಿ ಲಿಬಿಯದಲ್ಲಿ ದೊಡ್ಡ ಟೇಂಕ್ ಯುದ್ಧವು ಎಡೆಬಿಡದೆ ೪ದಿನಗಳವರೆಗೆ ನಡೆದು ಎರಡು ಕಡೆಯವರೂ ಬಹಳ ನೋತುಹೋಗಿರುವರು. ಜರ್ಮನರು ಕೆಲಮಟ್ಟಿನ ವಿಜಯ ಪಡೆದಿರುವರಾದರೂ ಟೊಬ್ರೂಕ್‌ನ್ನು ಗೆಲ್ಲುವ ಅವರ ಉದ್ದೇಶವು ನೆರವೇರಿರುವುದಿಲ್ಲ. ಜನರಲ್ ರೊಮ್ಮೆಲರು ತನ್ನ ಸೇನೆಗೆ ಆಹಾರ ವಸ್ತು ಯುದ್ಧ ಸಾಮಾಗ್ರಿ ಸರಬರಾಯಿ ಮಾಡಲು ಶಕ್ತರಾಗಿ ಜರ್ಮನ್ ಸೇನೆಯು ಮುಂದೊತ್ತುವಂತಾದರೆ ಬ್ರಿಟಿಷ್ ಸೇನೆಯ ಸ್ಥಾನಕ್ಕೆ ಅಪಾಯವುಂಟಾಗುವುದು. ಇಲ್ಲವಾದರೆ ಜರ್ಮನರು ಹಿಂದೆ ಸರಿಯಬೇಕಾಗುವುದು. ಲಿಬಿಯದ ಯುದ್ಧವು ಉತ್ಕಟ ಪರಿಸ್ಥಿತಿಗೆ ಮುಟ್ಟಿರುವುದು. ದೀರ್ಘಕಾಲ ಅದು ನಡೆಯಲು ಸಾಧ್ಯವೇ ಇಲ್ಲ. ಬ್ರಿಟಿಷ್ ಸೇನಾನಿಗಳು ವಿಜಯದ ವಿಶ್ವಾಸವುಳ್ಳವರಿರುವರು. ಬ್ರಿಟಿಷ್ ವಿಮಾನಗಳು ವೈರಿ ಸೇನೆಯ ಮೇಲೇರಿ ಹೋಗಿ ಬಹಳ ಹಾನಿಮಾಡಿರುತ್ತವೆ. ೬೦೦ಕ್ಕಿಂತಲೂ ಮಿಕ್ಕಿದ ವೈರಿವಾಹನಗಳನ್ನು ನಾಶಮಾಡಿರುತ್ತವೆ. ಈ ಯುದ್ಧದಲ್ಲಿ ಇತ್ತಂಡದವರೂ ಹೆಚ್ಚಿನ ನಷ್ಟ ಹೊಂದಿರುವರು. ಈ ಯುದ್ಧದ ಪರಿಣಾಮದ ಮೇಲೆ ಮಧ್ಯ ಪೂರ್ವದ ಪರಿಸ್ಥಿತಿಯು ಹೊಂದಿಕೊಂಡಿರುವುದು. ನಾಯಿಗಳು ಇತ್ತಲಾಗಿ ಲಿಬಿಯಕ್ಕೆ ಹೆಚ್ಚಿನ ಸೇನೆ ಮತ್ತು ವಿಮಾನಗಳನ್ನು ತಂದು ತಮ್ಮ ಸ್ಥಾನವನ್ನು ಬಲಪಡಿಸಿರುವರು ಜನರಲ್ ರೊಮ್ಮೆಲರು ಬಲು ಸಮರ್ಥ ಸೇನಾನಿ. ಆದುದರಿಂದ ಲಿಬಿಯದ ಬ್ರಿಟಿಷ್ ಸೇನೆಯು ಅತ್ಯಂತ ಕಷ್ಟ ಪರಿಸ್ಥಿತಿಯಲ್ಲಿ ಕ್ರಬಲ ವೈರಿಯನ್ನೆದುರಿಸಬೇಕಾಗಿದೆ. ಹಿಂದೀಗ ಅದು ಹೆಚ್ಚಿನ ಸಿದ್ಧತೆಯುಳ್ಳವಾಗಿದೆ. ಆದರೆ ವಿಮಾನ ಬಲವು ತೃಪ್ತಿಕರವಾಗಿದೆ. ಜನರಲ್ ಆಮಿನ್‌ಲೆಕರು ತಮ್ಮ ಸೇನಾನಾಯಕರಿದ್ದಾರೆ. ಆದುದರಿಂದ ಲಿಬಿಯದಲ್ಲಿ ನಾಯಿಗಳು ದೊಡ್ಡ ವಿಜಯವನ್ನೇನೂ ಪಡೆಯಲು ಸಾಧ್ಯವಿಲ್ಲವೆಂದೇ ಹೇಳಬಹುದು.

ಚೀನೀಯರ ಧಾಳಿ.

ಜಪಾನರು ಚೀನೀಯರನ್ನು ಹಿಂದಿನಿಂದ ಪರಿಸಲೆತ್ತಿಸುವಾಗ ಚೀನೀಯರೇನೂ ತಮ್ಮನೆ ಕೂತಿಲ್ಲ. ಮಧ್ಯ ಆನ್ಹೈಯ ಪ್ರಮುಖ್ಯ ಪಟ್ಟಣವಾದ ಕ್ಸೈ ಎಂಬ ಪಟ್ಟಣದ ಮೇಲೆ ಚೀನೀಯರುದ್ಧಧಾಳಿಯು ಪ್ರಾರಂಭವಾದದನ್ನಾ ವರಿಸಿರುವರು. ಈ ಪಟ್ಟಣ ಉತ್ತರದ ರೈಲ್ವೇ ಮಾರ್ಗಗಳನ್ನು ಚೀನೀಯರು ವಶಪಡಿಸಿಕೊಂಡಿರುವರು. ರಾಂಟುಂಗ್ ಮತ್ತು ಹೊಪೆ ಪ್ರಾಂತಗಳ ಎಲ್ಲೆಯಲ್ಲಿ 11 ದಿನಗಳ ವರೆಗೆ ನಡೆದ ಭೀಷಣ ಕದನದಲ್ಲಿ 6000 ಮಂದಿ ಜಾಪಾನರು ಹತರಾಗಿರುವರು ಮತ್ತು ಗಾಯಗೊಂಡಿರುವರು. ಜಾಪಾನರು ಕಳದ ಎಪ್ರಿಲ್ ತಿಂಗಳ ಅಂತ್ಯದಲ್ಲಿ ದಕ್ಷಿಣ ಹೂಪೆ, ಪೂರ್ವ ಹೊನಾನ್ ಮತ್ತು ಪಶ್ಚಿಮ ರಾಂಟುಂಗಿನಲ್ಲಿ 30,000 ಕಾಲಾಳು, 5000 ಅಶ್ವದಳ, 50 ದೊಡ್ಡ ತೋಪು, 60 ಟೇಂಕು, 8000 ಟ್ರಕ್ ಮತ್ತು ವಿಮಾನಗಳನ್ನು ಸಂಗ್ರಹಿಸಿ ದೊಡ್ಡ ಹೋರಾಟ ನಡಿಸಿದಾಗ ವುಶಿಯೆನ್ ಎಂಬಲ್ಲಿ 11ದಿನ ಭಾರಿ ಕದನ ನಡೆದು 3600 ಮಂದಿ ಜಾಪಾನರು ಕೊಲ್ಲಲ್ಪಟ್ಟಿರುವರು.

ವಿಷವಾಯು ಪ್ರಯೋಗ.

ಚೆಕಿಯಂಗ್ ಪ್ರಾಂತದ ಮುಖ್ಯ ಪಟ್ಟಣವಾದ ಕಿನ್ಹ್ವಾವನ್ನು ಜಾಪಾನರು ವಶಪಡಿಸಿ ಕೊಳ್ಳುವಾಗ ವಿಷಯುಯುಷ್ಯನ್ನು ಉಪಯೋಗಿಸಿರುವರೆಂದು ತಿಳಿದುಬರುತ್ತದೆ. ಲಾಂಚಿ ಎಂಬಲ್ಲಿ ನಡೆದ ತೀವ್ರ ಹೋರಾಟದಲ್ಲಿಯೂ ಜಾಪಾನರು ವಿಷವಾಯು ವನ್ನುಪಯೋಗಿಸಿರುವರೆಂದು ನಂಬಲಾಗಿದೆ.

ಕೊಲೋನು ವಿಧ್ವಂಸವಾಯಿತು.

ಮೇ. ತಾ. 21ರಲ್ಲು ಯುದ್ಧದ ಇತಿಹಾಸದಲ್ಲೇ ಅಭೂತಪೂರ್ವ ಪ್ರಚಂಡ ಧಾಳಿಯನ್ನು ಬ್ರಿಟಿಷ್ ವಿಮಾನಗಳು ಜರ್ಮನಿಯ ಮೇಲೆ ನಡಿಸಿ ಕೊಲೋನ್ ಪಟ್ಟಣದ ಕೇಂದ್ರವು ಸಂಪೂರ್ಣ ಧ್ವಂಸವಾಗಿ ನಾಶವಾಯಿತೆಂದು ತಿಳಿದುಬರುತ್ತದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿಗಿರುವುದೆಂಬುದನ್ನು ಜರ್ಮನರೇ ಒಪ್ಪುತ್ತಾರೆ. ಈ ಪಟ್ಟಣದ ಮಧ್ಯಭಾಗವು ಸಂಪೂರ್ಣ ನಾಶವಾಗಿರುತ್ತದೆ. ಈ ಮೊದಲು ಬ್ರಿಟಿಷ್ ವಿಮಾನಗಳು ನಡಿಸಿದ ಅತಿದೊಡ್ಡ ಧಾಳಿಯಲ್ಲಿ ಹೆಚ್ಚೆಂದರೆ 700 ವಿಮಾನಗಳು ಭಾಗವಹಿಸಿದ್ದುವು. ಜರ್ಮನರ ಅತಿದೊಡ್ಡ ಧಾಳಿಯಲ್ಲಿ 500 ವಿಮಾನಗಳಿದ್ದುವು. ಆದರೆ 1000ಕ್ಕಿಂತಲೂ ಮಿಕ್ಕಿದ ವಿಮಾನಗಳು ಧಾಳಿ ನಡಿಸುವುದು ಇತಿಹಾಸದಲ್ಲೇ ಇದೀಗ ಪ್ರಥಮಸಲವೆನ್ನಬಹುದು. ಕೊಲೋನ್ ಪಟ್ಟಣದ ಮೇಲೆ ನಡಿಸಲ್ಪಟ್ಟ 107ನೇ ಧಾಳಿ ಇದು. "ಜರ್ಮನಿಯ ಮೇಲೆ ಒಂದು ರಾತ್ರಿ 20,000 ವಿಮಾನಗಳನ್ನು ಕಳುಹಿಸಲು ಸಾಧ್ಯವಾದರೆ ಮರುದಿನವೇ ಅದು ಯುದ್ಧ ನಿಲ್ಲಿಸುವಂತಾಗುವುದು. ಪ್ರತಿ ರಾತ್ರಿ 1000 ಬೋಂಬರ್ ವಿಮಾನಗಳನ್ನು ಕಳುಹಿಸಲು ಸಾಧ್ಯವಾದರೆ ಬರುವ ಕರತ್ಯಾಲದೊಳಗೆ ಯುದ್ಧವೇ ಕೊನೆಗೊಳ್ಳುವಂತಾಗುವುದು. ಜರ್ಮನಿಯ ಮೇಲೆ ನಾವು ಎಡೆಬಿಡದೆ ಪ್ರಬಲ ಧಾಳಿ ನಡಿಸಿ ಅದು ಕರುಣೆಗಾಗಿ ಮೊರೆಯಿಡುವಂತೆ ಮಾಡುವೆವು". ಎಂದು ಬ್ರಿಟಿಷ್ ಬೋಂಬರ್ ವಿಮಾನಗಳ ಪ್ರಧಾನ ನಾಯಕ ಸರ್. ವಾರ್ತರ್ ವಿ. ಟಿ. ಹೆರಿಸರಂದಿರುವರು.

ಖಾರ್ಕೋವ್ ಯುದ್ಧದ ಪರಿಸ್ಥಿತಿ.

ಖಾರ್ಕೋವಿನ ಬಳಿಯ ಇಜ್ಯುಮಿನ ಮೇಲೆ ಜರ್ಮನರು ಪ್ರತಿಧಾಳಿ ನಡಿಸಿ ಈಗ ಸುಮಾರು 15 ದಿನಸಗಳಾದರೂ ಅವರು ಹೆಚ್ಚೇನೂ ಮುಂದುವರಿದಿರುವುದಿಲ್ಲ. ಖಾರ್ಕೋವ್ ಯುದ್ಧವು ಕೊನೆಗೊಂಡಿದೆ. 3 ಸೋವಿಯೆಟ್ ಸೇನೆಗಳು ಆವರಿತವಾಗಿ ನಾಶಮಾಡಲ್ಪಟ್ಟವೆಯೆಂದು ಜರ್ಮನರು ಪ್ರಕಟಿಸಿರುವುದು ನಿಜವಲ್ಲೆಂದು ತಿಳಿದು ಬಂದಿದೆ. ಇಜ್ಯುಮ್ ಬರ್ವೆಂಕೋವೆಯಲ್ಲಿ ನಡೆದ ಹೋರಾಟವು ಇತಿಹಾಸದಲ್ಲೇ ಅತಿದೊಡ್ಡ ಸಂಗ್ರಾಮಗಳಲ್ಲೊಂದಾಗಿರುತ್ತದೆ. ನಾಯಿಗಳು ಹೆಚ್ಚಿನ ಸೇನೆ, ಟೇಂಕ್, ತೋಪುಗಳನ್ನೆ ಸಯೋಗಿಸಿ ಪ್ರಚಂಡ ಹೋರಾಟ ನಡಿಸಿದರೂ ಕೆಂಪುಸೇನೆಯು ಅವನ್ನು ಜಯಶೀಲವಾಗಿ ಪ್ರತಿಭಟಿಸಿರುವುದು.

ಯುರೋಪಿನ ಮೇಲೆ ಧಾಳಿಯ ಸಿದ್ಧತೆ

ಅಮೆರಿಕಾನ ಸೇನೆಯು ಫ್ರಾನ್ಸಿನ ಮೇಲೇರಿ ಹೋಗಲಿರುವುದೆಂದು ಯುನ್ಯಾಟೆಡ್ ಸ್ಟೇಟಿನ ಪ್ರಧಾನ ಸೇನಾ ನಾಯಕರಾದ ಜನರಲ್ ಮಾರ್ಶಲರು ವಿದಿತಗೊಳಿಸಿರುವರು. ಬ್ರಿಟನಿನಲ್ಲಿ ದೊಡ್ಡ ಬ್ರಿಟಿಷ್ ಮತ್ತು ಅಮೆರಿಕಾನ ಸೇನೆಯು ಸಂಗ್ರಹವಾಗಿರುತ್ತದೆ. ಮಿತ್ರರಾಷ್ಟ್ರಗಳು ಯುರೋಪಿನ ಮೇಲೆ ಬೇಗನೆ ಧಾಳಿ ನಡಿಸಲಿವೆಯೆಂದು, 'ಪ್ಯೇರಿಶ್ ಪುರಾರ್ ಜೈಟಿಂಗ್' ಎಂಬ ಜರ್ಮನ್ ಪತ್ರಿಕೆಯ ಸಂಪಾದಕರೇ ಒಪ್ಪಿರುತ್ತಾರೆ.

ಹಿಂದುಸ್ಥಾನದ ಬಿಕ್ಕಟ್ಟು.

ಹಿಂದುದೇಶದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಇನ್ನೊಮ್ಮೆ ಪ್ರಯತ್ನ ಮಾಡಬೇಕೆಂಬ ಅಭಿಪ್ರಾಯವು ಚೈನಾ ಮತ್ತು ಯುನ್ಯಾಟೆಡ್ ಸ್ಟೇಟ್ಸುಗಳಲ್ಲಿ ಸ್ವಲ್ಪ ಬಲವಾಗುತ್ತಿರುವುದು. ಶ್ರೀ. ರಾಜಗೋಪಾಲಾಚಾರ್ಯರ ನವೀನ ಧೋರಣೆಯ ಪರಿಣಾಮವೇನಾಗುವುದೆಂದು ಆತುರದಿಂದ ನಿರೀಕ್ಷಿಸಲಾಗಿದೆ. ಕಾಂಗ್ರೆಸು ಮತ್ತು ಮುಸ್ಲಿಮ್ ಲೀಗುಗಳೊಂದಾಗಿ ವ್ಯಾಂತಿಕ ಮತ್ತು ಕೇಂದ್ರ ಆಡಳಿತಗಳನ್ನು ನಡಿಸಲು ಮುಂದೆ ಬಂದರೆ ಹಿಂದೀ ರಾಜಕೀಯ ಬಿಕ್ಕಟ್ಟನ್ನು ಬಿಡಿಸುವುದೇನೂ ಕಷ್ಟವಾಗಲಾರದೆಂಬ ಅಭಿಪ್ರಾಯವು ದಿಲ್ಲಿಯಲ್ಲುಂಟಾಗಿದೆ.

ಹೈಡ್ರಿಕರ ಮೇಲೆ ಗುಂಡಿನೇಟ.

ಹಿಟ್ಲರರ ಪರಮಾಪ್ತರೂ ಜೆಕೊಸ್ಲೊವೇಕಿಯದ ನಾಝಿ ಮೇಲಧಿಕಾರಿಯೂ ಆದ ಹೈಡ್ರಿಕರ ಮೇಲೆ ಪ್ರೇಗ್ ಪಟ್ಟಣದಲ್ಲಿ ಯಾರೋ ಗುಂಡೆಸೆದು ಅವರ ಪರಿಸ್ಥಿತಿಯು ವಿಷಮವಾಗಿದೆ. ಆದರಿಂದ ಹಿಟ್ಲರರು ಸಂತಪ್ತರಾಗಿದ್ದಾರೆ. ಅದಕ್ಕಾಗಿ ಪ್ರೇಗಿನಲ್ಲಿ ಹಲವರು ಕೊಲೆಮಾಡಲ್ಪಟ್ಟಿರುತ್ತಾರೆ.

ಗಾಂಧೀ-ಸಿ. ಆರ್. ಮತಭೇದ

"ರಾಜಾಜಿಯವರು ತಪ್ಪು ಹಾದಿ ಹಿಡಿದಿದ್ದಾರೆಂದು ನನ್ನ ಅಭಿಪ್ರಾಯ ಆವರು ವಂಚಕ ವಾತಾವರಣವೊಂದನ್ನು ಸಿರ್ಮಿಸುತ್ತಿದ್ದಾರೆ. ಅವರಿಗೇನೇ ಪಾಕಿಸ್ಥಾನದಲ್ಲಿ ನಂಬಿಕೆಯಿಲ್ಲ. ಸಮುಜಾಯಿಸುವಿಕೆಗಾಗಿ ಮೂಲತತ್ವವನ್ನು ಬಿಟ್ಟುಕೊಡುವುದು ತಪ್ಪು. ಸಂಕೀರ್ಣ ಅಧಿಕಾರವೊಂದು ಇಲ್ಲಿರುವತನಕ ಇಲ್ಲಿ 'ಪಾಕಿಸ್ಥಾನ್' ಅಥವಾ 'ಹಿಂದುಸ್ಥಾನ್' ಎಂಬುದಿಲ್ಲ. ಅದು 'ಇಂಡಿಯಾ ಸ್ಟಾನ್', ಇದು ತಪ್ಪು ಇನ್ನೊಂದು ಬಂದರೆ 'ಜಪಾನಿ ಸ್ಥಾನ್' ಆಗಿರುತ್ತದೆ. ಆದರೆ ಹಿಂದು ಮುಸ್ಲಿಮ್ ಐಕ್ಯ, ಇಲ್ಲವೇ ಜಪಾನೀ ವಿರೋಧವನ್ನು ಸಾರುವದು ಅಪರಾಧವಲ್ಲ. ಆದ್ದರಿಂದ ರಾಜಗೋಪಾಲಾಚಾರ್ಯರ ಮಾತುಗಳು ಸೌರವ ಪೂರ್ಣಕ, ರಾಂತಕೆಯಿಂದ ಆಲಿಸಲರ್ಹವಾದವುಗಳು ಗಲಭೆಯು ವಾದಕ್ಕೊಂದು ಉತ್ತರವಾಗಲಾರದು. ಕೆಲವೆಡೆ ಜನರು ರಾಜಾಜಿಯವರ ವಿರುದ್ಧ ಎಬ್ಬಿಸಿರುವ ಗೊಂದಲವು ಅಸಹಿಷ್ಣುತೆಯ ಪರಮಾವಧಿಯನ್ನು ತೋರಿಸುತ್ತದೆ"-ಎಂದು ಗಾಂಧಿಯವರು ಅಭಿಪ್ರಾಯಪಟ್ಟಿರುವರು.

ಮಂಗಳೂರು--'ಬಡವರ ಬಂಧು' ಸಂಪಾದಕರಾದ ಶ್ರೀ ಎಂ ಜಾರಪ್ಪನವರು ಮಂಗಳೂರಿನ ಸ್ಥಳೀಯ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗಿದ್ದಾರೆ.

ಬೇಕಾಗಿದ್ದಾರೆ.

ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯ ವ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಹೆಚ್ಚಿನ ವಿವರಗಳಿಗೆ ಸ್ವತಹ ಇ ಟಪ್ಪಾಲುಚೀಟಿಯಿಂದ ಈ ಕೆಳಗಿನ ವಿಳಾಸಕ್ಕೆ ವಿಚಾರಿಸಿ. ಸಂಬಳ ಎಸ್ಸಾಂ ಗ್ಯಾಂಟಿನ 85% ರಷ್ಟು.

S. Venkatesha pai.
Manager,
ded Ele. School, Mabukal
P. o. Brahmavar.

ತಾ. 2-6-1942 ರಿಂದ

ನಿಮ್ಮೆಲ್ಲರ ಮನೆ ಮಾತಾದ, ಮನೆಯವರೆಲ್ಲರ ನೀತಿಯ ನಿಲಯದಂತಿರುವ,

ಹನ್ಸ್‌ರವರ ಅಮರಕೃತಿ

"ಬ್ರಹ್ಮಚಾರಿ"

ವಿನಾಯಕ್, ವಿಸಾಕ್ಷಿ, ಮಲವಳ್ಳಿಯವರ್.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಜಿಲ್ಲಾ ಬೋರ್ಡು ಸಭೆ- ದ ಕನ್ನಡ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ 27ನೇ ಶುಕ್ರವಾರ ಬೆಳಿಗ್ಗೆ ಘಂಟೆ 10ಕ್ಕೆ ಜಿ ಬೋರ್ಡಿನ ಅಧ್ಯಕ್ಷರಾದ ಮಾನ್ಯ ರಾ। ರಾ। ವಿದ್ಯಾಸಾ ಟ್ಟರ ಅಧ್ಯಕ್ಷತೆಯಲ್ಲಿ ಜರಗಿತು

ಸಾಮಾನ್ಯ ಸಭೆಯ ಆರಂಭವಾಗುವ ಮುಂಚೆ ತವಾಗಿ ಬೋರ್ಡಿನ ನಿಕೇತನ ಸಚಿವಯು ನಡೆಯಿತು. ವರ್ಕ್ಸ್ ಎಂಡ್ ಕಮ್ಯುನಿಕೇಶನ್ ಕಮಿಟಿಗೆ ರಾ। ರಾ। ಯು। ಪಿ। ಮಲ್ಯರನ್ನು ಆರಿಸಲಾಯಿತು ೪೭ ಮಾಡಿ ಸಭೆಗಳಿಗೆ ಬಂದಂಥ ಕಾರಣ ತಮ್ಮ ಸದಸ್ಯತ್ವಸ್ಥಾನವನ್ನು ಕಳೆದುಕೊಂಡ ಶ್ರೀ ಎಸ್। ಎನ್। ಹೆಗ್ಗಡೆಯವರನ್ನು ಆವರ ಪ್ರಾರ್ಥನೆಯ ಮೇರೆಗೆ ಪುನಃ ಸಭೆಗೆ ಸೇರಿಸಿಕೊಳ್ಳಲಾಯಿತು. ಕೋಟೆ ಕಾರ್ ಸರ್ಕಲಿಗೆ ಸೂಕ್ತವಾಗಿ ಆರಿಸಲ್ಪಟ್ಟ ಶ್ರೀ। ರಮಾನಾಥ ಮಾಲರಾ। ರವರನ್ನು ಸರ್ಕಲಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟ ಶ್ರೀ। ಎ। ನಾಗಪ್ಪ ಯ್ಯನವರೂ ರಾಜಭಕ್ತಿ ಪ್ರಮಾಣವನ್ನು ಮಾಡಿದರು ಇದಾದ ಮೇಲೆ ಆಸೇಕ ಸರಕಾರಿ ಬಂಗಲೆಗಳು ಓದಲಿಟ್ಟುವಿಕರ್ಡು ಮಾಡಲ್ಪಟ್ಟವು ಎಡಸೀರು ಮೊದಲು ಎಲಿಮೆಂಟರಿ ಶಾಲೆಯನ್ನು ಈ ತಿಂಗಳಿಂದ ಆರನೇ ತರಗತಿಯನ್ನು ತೆರೆಯಲು ಅನುಮತಿ ಕೊಡಬೇಕು ಎಂಬ ನಿರ್ಣಯವಾಯಿತು ಶ್ರೀ। ಕೃಷ್ಣಮ್ಮನವರಲ್ಲಿ ನಿರತನಾಗಿ ತರೆಯಲ್ಪಟ್ಟ ಆಯುರ್ವೇದ ಡಿಸ್ಪೆನ್ಸರಿಗೆ ದಿನಕ್ಕೆ ಸರಾಸರಿಯಾಗಿ ಔಷಧೋಪಚಾರವಾಗಿ ರೂ 360 ಮತ್ತು ಇತರ ಎಲ್ಲಾ ವೆಚ್ಚಕ್ಕೆ ರೂ 10। ಹಾಗೂ ರೂ 370 ವಂಜೂರಾಯಿತು. ಮುತ್ತಿನಲ್ಲಿ ಎಕ್ಸೈಜ್ ಆಫೀಸರ ಬೋರ್ಡಿನಲ್ಲಿ ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಾಗಿರುವ ಶ್ರೀ। ಜತ್ತಪ್ಪ ಗೌಡರು, ಆ ಸಮಿತಿಯ ಅಧ್ಯಕ್ಷರು ತಾವಾ (ಶ್ರೀ। ಗೌಡರು) ಎತ್ತಿದ ಪಾಯಿಂಟ್ ಆಫ್ ಆರ್ಡರನ್ನು ಆಲಕ್ಷಿಸಿ ಆ ಸದಸ್ಯರ ಭರ್ಜರಿಯ ಹೇಳಿದ ಆಕ್ಷೇಪಕರವಾದ ಮಾತುಗಳ ವಿಷಯದಲ್ಲಿ ಬೋರ್ಡು ಅಧ್ಯಕ್ಷರಿಗೆ ಬರೆದುಕೊಂಡಿದ್ದ ಪತ್ರವು ಬೋರ್ಡಿನ ಮುಂದಿ ಓದಲ್ಪಟ್ಟು ಆ ವಿಷಯದ ಬಗ್ಗೆ ಪುತ್ತೂರು ಎಕ್ಸೈಜ್ ಆಫೀಸರರಿಗೆ ಬರೆಯಲು ಆಯಾ ಸಮಿತಿಯ ಅಧ್ಯಕ್ಷರಿಗೆ ಬರೆಯಲು ಆಯಾ ಹೇಳಿಕೆಯನ್ನು ತಿಳಿಯಬೇಕೆಂದು ಕು ಒಲ್ಲಾ ಬೋರ್ಡಿನವರು ವೆಚ್ಚವನ್ನು ಕಟು ಮಾಡಿದ ನಿರ್ಣಯದಲ್ಲಿ ಸಂಕಷ್ಟು ಪ್ರಯತ್ನ ತೂಕಲಿಲ್ಲವೆಂದು ಮೀಟಿಂಗ್ ಕಾರಿಗಳಿಂದ ಬಂದ ಆಕ್ಷೇಪದ ನಿರ್ಣಯದಲ್ಲಿ ಮನ ನ್ಯ ಅಧ್ಯಕ್ಷರು ಮಾತಾಡಿ ಮೀಟಿಂಗ್‌ಕಾರಿಗಳು ಸರಿಯಾದ ಗನ ನಕೊಟ್ಟು ಈ ವಿಚಾರವನ್ನು ನಿಾಡಿ ಲ್ಲವೆಂದೂ, ಆ ಅಧ್ಯಕ್ಷರ ಸಂಬಂಧದ ಪರಿಣ ಮವಿಂದ ಕಡವಗಳು ಉತ್ಪತ್ತಿ ಒಳಗಾಗಿ ಹೆಚ್ಚಿದೆಯೆಂದೂ ಹಾಗೆ ಅಧ್ಯಕ್ಷರ ಸಂಬಂಧವು ಹೋದರೆ ಆ ವಿಚಾರ ಗಳಲ್ಲಿ ಉತ್ಪನ್ನ ಬಾಸ್ಸಿಯೂ ದೂರಕೆಲೋದಂದೂ ಅಲ್ಲಾ ಬೋರ್ಡಿನ ಆದಳತೆಯ ಉತ್ತಮ ವರ್ಗದಲ್ಲಿದಿಸುವಂತೆ ಅಭಿಪ್ರಾಯಗಳೇ ರಿವಾಕರ್ಡು ಬರೆದಿಟ್ಟು ನಂತರ ಈ ವಿಚಾರದಲ್ಲಿ ಮೀಟಿಂಗ್‌ಕಾರಿಗಳಿಗೆ ಇ ಒರೆಯ ಪಡಿಸಿಯಿಂದ ಹೇಳಿದರು ಇತರ ಕೆಲವಾರಿಗಳು ಚರ್ಚೆ ಸಲ್ಲಿಸಿದ ಮೇಲೆ ಸಭೆಯಾಯಿತು

ನಗರಸಭೆ ಮಂಗಳೂರು ನಗರಸಭೆಯ ತಾ 27ನೇ ಬುಧವಾರದಂದು ಬೆ ಳಿಗ್ಗೆ ೧೦ ಗಂಟೆಗೆ ಸಭೆಯ ಅಧ್ಯಕ್ಷತೆಯಲ್ಲಿ ಸೇರಿತು. ಹಾಗೂ ಬಂದಿರುವ ವಿಷಯಗಳಲ್ಲಿ ಕೆಲವು ಹೀಗಿವೆ: ಕಾಲಿಕ್ ಸರ್ಕಲಿನ ಪ್ರತಿನಿಧಿಯಾಗಿ ರಾ। ರಾ। ಎಂ। ಕೃಷ್ಣಯ್ಯ ಶೆಟ್ಟಿಯವರನ್ನು ಆರಿಸಲಾಯಿತು. ಕಾಲಿಕ್ ಸರ್ಕಲಿಗೆ ಸೂಕ್ತವಾಗಿ ಆರಿಸಲ್ಪಟ್ಟ ಶ್ರೀ। ಎ। ನಾಗಪ್ಪ ಯ್ಯನವರೂ ರಾಜಭಕ್ತಿ ಪ್ರಮಾಣವನ್ನು ಮಾಡಿದರು ಇದಾದ ಮೇಲೆ ಆಸೇಕ ಸರಕಾರಿ ಬಂಗಲೆಗಳು ಓದಲಿಟ್ಟುವಿಕರ್ಡು ಮಾಡಲ್ಪಟ್ಟವು ಎಡಸೀರು ಮೊದಲು ಎಲಿಮೆಂಟರಿ ಶಾಲೆಯನ್ನು ಈ ತಿಂಗಳಿಂದ ಆರನೇ ತರಗತಿಯನ್ನು ತೆರೆಯಲು ಅನುಮತಿ ಕೊಡಬೇಕು ಎಂಬ ನಿರ್ಣಯವಾಯಿತು ಶ್ರೀ। ಕೃಷ್ಣಮ್ಮನವರಲ್ಲಿ ನಿರತನಾಗಿ ತರೆಯಲ್ಪಟ್ಟ ಆಯುರ್ವೇದ ಡಿಸ್ಪೆನ್ಸರಿಗೆ ದಿನಕ್ಕೆ ಸರಾಸರಿಯಾಗಿ ಔಷಧೋಪಚಾರವಾಗಿ ರೂ 360 ಮತ್ತು ಇತರ ಎಲ್ಲಾ ವೆಚ್ಚಕ್ಕೆ ರೂ 10। ಹಾಗೂ ರೂ 370 ವಂಜೂರಾಯಿತು. ಮುತ್ತಿನಲ್ಲಿ ಎಕ್ಸೈಜ್ ಆಫೀಸರ ಬೋರ್ಡಿನಲ್ಲಿ ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಾಗಿರುವ ಶ್ರೀ। ಜತ್ತಪ್ಪ ಗೌಡರು, ಆ ಸಮಿತಿಯ ಅಧ್ಯಕ್ಷರು ತಾವಾ (ಶ್ರೀ। ಗೌಡರು) ಎತ್ತಿದ ಪಾಯಿಂಟ್ ಆಫ್ ಆರ್ಡರನ್ನು ಆಲಕ್ಷಿಸಿ ಆ ಸದಸ್ಯರ ಭರ್ಜರಿಯ ಹೇಳಿದ ಆಕ್ಷೇಪಕರವಾದ ಮಾತುಗಳ ವಿಷಯದಲ್ಲಿ ಬೋರ್ಡು ಅಧ್ಯಕ್ಷರಿಗೆ ಬರೆದುಕೊಂಡಿದ್ದ ಪತ್ರವು ಬೋರ್ಡಿನ ಮುಂದಿ ಓದಲ್ಪಟ್ಟು ಆ ವಿಷಯದ ಬಗ್ಗೆ ಪುತ್ತೂರು ಎಕ್ಸೈಜ್ ಆಫೀಸರರಿಗೆ ಬರೆಯಲು ಆಯಾ ಸಮಿತಿಯ ಅಧ್ಯಕ್ಷರಿಗೆ ಬರೆಯಲು ಆಯಾ ಹೇಳಿಕೆಯನ್ನು ತಿಳಿಯಬೇಕೆಂದು ಕು ಒಲ್ಲಾ ಬೋರ್ಡಿನವರು ವೆಚ್ಚವನ್ನು ಕಟು ಮಾಡಿದ ನಿರ್ಣಯದಲ್ಲಿ ಸಂಕಷ್ಟು ಪ್ರಯತ್ನ ತೂಕಲಿಲ್ಲವೆಂದು ಮೀಟಿಂಗ್ ಕಾರಿಗಳಿಂದ ಬಂದ ಆಕ್ಷೇಪದ ನಿರ್ಣಯದಲ್ಲಿ ಮನ ನ್ಯ ಅಧ್ಯಕ್ಷರು ಮಾತಾಡಿ ಮೀಟಿಂಗ್‌ಕಾರಿಗಳು ಸರಿಯಾದ ಗನ ನಕೊಟ್ಟು ಈ ವಿಚಾರವನ್ನು ನಿಾಡಿ ಲ್ಲವೆಂದೂ, ಆ ಅಧ್ಯಕ್ಷರ ಸಂಬಂಧದ ಪರಿಣ ಮವಿಂದ ಕಡವಗಳು ಉತ್ಪತ್ತಿ ಒಳಗಾಗಿ ಹೆಚ್ಚಿದೆಯೆಂದೂ ಹಾಗೆ ಅಧ್ಯಕ್ಷರ ಸಂಬಂಧವು ಹೋದರೆ ಆ ವಿಚಾರ ಗಳಲ್ಲಿ ಉತ್ಪನ್ನ ಬಾಸ್ಸಿಯೂ ದೂರಕೆಲೋದಂದೂ ಅಲ್ಲಾ ಬೋರ್ಡಿನ ಆದಳತೆಯ ಉತ್ತಮ ವರ್ಗದಲ್ಲಿದಿಸುವಂತೆ ಅಭಿಪ್ರಾಯಗಳೇ ರಿವಾಕರ್ಡು ಬರೆದಿಟ್ಟು ನಂತರ ಈ ವಿಚಾರದಲ್ಲಿ ಮೀಟಿಂಗ್‌ಕಾರಿಗಳಿಗೆ ಇ ಒರೆಯ ಪಡಿಸಿಯಿಂದ ಹೇಳಿದರು ಇತರ ಕೆಲವಾರಿಗಳು ಚರ್ಚೆ ಸಲ್ಲಿಸಿದ ಮೇಲೆ ಸಭೆಯಾಯಿತು

ಶ್ರೀ। ಎನ್ ಎಲ್ ಉಪಾಧ್ಯಾಯರು –ಮುಂಬಯಿಯ ಮಜೂರ ಮುಖಂಡರಾದ ಶ್ರೀ। ಎನ್ ಎಲ್. ಉಪಾಧ್ಯಾಯರು ಕಲ್ಲಿಕೋಟೆಯಲ್ಲಿ ನಡೆದ ಕಾಸಿನ್ ವಿಚೇಧ ಉತ್ಸವದಲ್ಲಿ (ತಾ 31ರಲ್ಲಿ) ಭಗವಹಿಸಿ ಹಿಂತಿರುಗಿರುವರು

ಉಡುಪಿ

ಶಾರೀರಿಕ ಶಿಕ್ಷಣ ಶಿಬಿರ ಮುಕ್ತಾಯದ ಪ್ರದರ್ಶನ- ಹಿಂದೂಸ್ತಾನಿ ಸ್ಕೌಟ್ ಎಸೋಸಿಯೇಷನ ನೇತೃತ್ವದಲ್ಲಿ ತೆರೆಯಲ್ಪಟ್ಟಿದ್ದ ಎಲಿಮೆಂಟರಿ ಶಾಲಾ ಮಾಸ್ತರುಗಳ ಶಾರೀರಿಕ ಶಿಕ್ಷಣ ಶಿಬಿರ ಮುಕ್ತಾಯದ ಪ್ರದರ್ಶನವು ತಾ 25 5 42ರಲ್ಲಿ ವೋರ್ಡು ಹೈಸ್ಕೂಲ್ ವರಾಂದಲ್ಲಿ ರಾ। ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ನಾನಾ ಕಸರತ್ತುಗಳು ಪ್ರದರ್ಶನಲ್ಪಟ್ಟು ಶಿಬಿರದಲ್ಲಿ ಶಿಕ್ಷಣ ಪಡೆದ ಇಗ ಉಪಾಧ್ಯಾಯರುಗಳಿಗೆ ಸರ್ಟಿಫಿಕೇಟುಗಳು ಕೊಡೋಣ ಬಂದವು

ಮುಂಬಾಯಿ–ಬಗ್ವಾಡಿ ಹೋಬಳಿಯ ವೊಗವೀರ ಸಂಘದ ಪ್ರಥಮವಾರ್ಷಿಕ ವರ್ಷಾಚರಣೆಯು ತಾ 24 5 42ರಲ್ಲಿ "ದಾದಿರೇಟ್ ಹೌಸ್" ನಲ್ಲಿ ಮಹಾಜನರಲ್ಲಿ ಬೆಂಗ್ರೆ ನಾರಾಯಣ, ಎ ಕಕರ್ಣೇರರ ಅಧ್ಯಕ್ಷತೆಯಲ್ಲಿ ಜರಗಿತು ರಾ। ಜ। ಎಸ್ ಮಂಜ ನಾಥ ಮತ್ತು ಸದಸ್ಯರ ಪ್ರೇತ ಹಲವರು ಸಂಘದ ಮಂಡಾಭಿವೃದ್ಧಿಯ ಕುರಿತು ಭಾಷಣ ಮಾಡಿದರು

ಮಜೂರು ಕರಂದಾಡಿ- ಈ ಶಾಲಾ 10ನೇ ವರ್ಷಾಂತ್ಯ, ಉಡುಪಿ ರೇಂಜ್ ತಾಲೂಕಿನ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀಗಳಿಕೆ ಸಂಜೀವ ಭಟ್ ಆರ್ಗಸ್, M A I I ಇವರ ಅಧ್ಯಕ್ಷತೆಯಲ್ಲಿ ವರ್ಷಾಂತ್ಯ ಸಮಾರಂಭ ಜರಗಿತು ವಿಷಯ ಸೂಚಿಯಂತೆ ಕಾರ್ಯಭಾಗಗಳು ನಡೆದುವು. ಹಾಗೂ 'ಸತ್ಯ ಹರಿಶ್ಚಂದ್ರ' ಎಂಬ ಸಂಗೀತ ನಾಟಕವು, 'ಮಾಸ್ಟರ ಕುಟುಂಬ' ಎಂಬ ತುರು ನಾಟಕವೂ ಈ ಶಾಲಾ ಬಾಲಕಬಾಲತಿಯರಿಂದ ಅಭಿನಯಿಸಲ್ಪಟ್ಟವು ರಂಗ್ಯಗಿತಿಯೊಂದಿಗೆ ಸಮಾರಂಭವು ವಿರಾಮ ಹೊಂದಿತು.

ಮೈಸೂರು ಪತ್ರ.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು ಪ್ರಜಾ ಪ್ರತಿನಿಧಿ ಸಭೆ ಬಜೆಟ್ ಅಧಿವೇಶನವು ಯಾವಾಗಲೂ ಮೈಸೂರಲ್ಲಿ ನಡೆಯುತ್ತಿತ್ತು. ಇನ್ನು ಮುಂದೆ ಬೆಂಗಳೂರಲ್ಲಿ ನಡೆಯುವುದರಿಂದ ಮೊದಲನೆ ಸಾರಿ ಸರ್ ಫುಟ್ಟಣ್ಣ ಶೆಟ್ಟರ ಭವನದಲ್ಲಿ ಪ್ರಾರಂಭವಾಯ್ತು. ದಿವಾನ್ ಅಧ್ಯಕ್ಷರು ಅಧ್ಯಕ್ಷ ಭಾಷಣ ಮಾಡಿ "ಇಂದಿನ ಅಂತರ ರಾಷ್ಟ್ರೀಯ ಪರಿಸ್ಥಿತಿಯಿಂದ ಉಂಟಾಗುತ್ತಿರುವ ತೊಡರುಗಳಲ್ಲಿ ರತ್ನಗಳನ್ನೊಡಿಸಲು ಎಲ್ಲರೂ ಸಹಕರಿಸಿ ಮಿತ್ರಪಕ್ಷಕ್ಕೆ ವಿಜಯ ದೊರೆಯ ಬೇಕೆಂದು ಸಂದೇಶ ಸಿವಿಲ್ ಡಿಫೆನ್ಸ್ ಮತ್ತು ಏ ಆರ್ ಪಿ ಕಾರ್ಯಗಳಿಗಾಗಿ ನಿವಿಷ ಇಲಾಖೆಗಳಿಗೂ ಯಾವ ರೀತಿ ಹಣ ಕಾಸು ಮುಂದಿನ ಸಾಲಿಗೆ ಒದಗಿಸಲಾಗಿದೆಂದೂ 1½ಲಕ್ಷ ರೂ ಉಳಿತಾಯ ವೆಂದೂ ತಿಳಿಸಿ, ಇನ್ನೂ ಅನೇಕ ವಿಷಯಗಳನ್ನು ಹೇಳಿದರು ನಂತರ ಕಾರ್ಯದರ್ಶಿಗಳು ವರದಿ ಒಪ್ಪಿಸಿದರು ಸಚಿವ ಸದಸ್ಯರುಗಳು ಪ್ರಶ್ನೆಗಳನ್ನು ಕೇಳಿದರು. ನಂತರ ಪ್ರಶ್ನೋತ್ತರಗಳು, ಸರ್ಕಾರಿ ಕಾರ್ಯಕಲಾಪಗಳಾದವು ಸಭೆಯು ಹತ್ತು ದಿನ ನಡೆಯಲಿದೆ ಆನೇಕ ಪ್ರಾಮುಖ್ಯ ವಿಷಯ, ನಿರ್ಣಯ ಮತ್ತು ಮಸೂದೆಗಳು ಸಭೆಯ ಮುಂದೆ ಚರ್ಚಿಸಲು ಬಂದಿವೆ

ಓದಬೇಕಾದ ಸುದ್ದಿಗಳು — ಪೌರ ಸಭೆಯಲ್ಲಿ ಹಾಳಕಾಗುವ ಶ್ರೀಮನ್ ವಿ ಹಾರಾಜ ರ ಭಾವಚಿತ್ರದ ಅನಾವರಣ ಮಹೋತ್ಸವವನ್ನು ಮೈ। ಕಾಂಗ್ರೆಸ್ ಅಧ್ಯಕ್ಷ ಶ್ರೀ। ಟಿ.ಸುಬ್ರಹ್ಮಣ್ಯಂ ರವರು ನೆರವೇರಿಸಿದರು ಕಾಂಗ್ರೆ ಅ। ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಶ್ರೀ ರಾಜಾಜಿಯವರ ಇಂದಿನ ಮಾರ್ಗವನ್ನು ಟೀಕಿಸಿ ತಾವು ಒಪ್ಪುವಿಲ್ಲವೆಂದರು ಮೈ। ಕಾಂ। ಪರ್ಲಿಮೆಂಟರಿ ಪಟ್ಟಿ ಸೇರಿ ಅನೇಕ ಸ್ವಾಮ್ಯಾಭಿಮಾನ ವಿಷಯ ಚರ್ಚಿಸಿತು ಮೈ। ಸಂ।ದ ಪಂಡಿತರುಗಳ ಎಂಟನೇ ಸಮ್ಮೇಳನವು ಮೈ। ಮಹಾರಾಜ ಕಾಲೇಜು ಸಂಸ್ಕೃತ ಪ್ರೊ। ಎ. ಆರ್ ನರಸಿಂಹ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು ತ್ಯಾಗರಾಜ ಮಂತ್ರಿ ರಾಜಶ್ರೀ। ಎ ರಾಮನಾಥಶೆಟ್ಟರವರು ಆರಂಭೋತ್ಸವ ಭಾಷಣ ಮಾಡಿದರು ಅಖಿಲಭಾರತ ಕಾಂಗ್ರೆಸ್‌ಪಕ್ಷ ಬರ್ಮಾ ಬಗ್ಗೆ ಅಲಹಾಬಾದಿನಲ್ಲಿ ಮಾಡಿದ ನಿರ್ಣಯವನ್ನು ಯಾರೇ ಆಗಲಿ ಪ್ರಶ್ನಿಸಿ ಅಭಿಪ್ರಾಯ ಮುದ್ರಿಸಿರುವುದಿಲ್ಲ. ಇಂಡಿಯಾ ಸರ್ಕಾರದವರು ಏಷಿಯಾಟಿಕ್ ಸರುತಿಯನ್ನು ಮೈಸೂರು ಸರ್ಕಾರದವರೂ ಏಷಿಯಾಟಿಕ್ ಬ್ಯಾಂಕಿನ ಬೆಂಗಳೂರು ಬ್ರಾಂಚಿನ ಸಭೆಯೊಂ। ಅರೋಗ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು..

ತಿರುಕಾಂಕೋರ್ ದಿವಾನ್ ಸರ್, ಸಿ ಪಿ. ರವರು ಮೈಸೂರು ಕೈಗಾರಿಕೆಯನ್ನು ಪ್ರಶಂಸಿ, ಶ್ರೀಮನ್ ಮಹಾರಾಜರೊಂದಿಗೆ ಸಂಸ್ಥಾನದವರ ಕ್ರಿಪ್ಸ ಸಂಧಾನದಲ್ಲಿ ಯಾವ ರೀತಿ ವಿಶ್ವಾಸಭೇಕಾಯ ಬಂಎಂಬುದನ್ನು ತಿಳಿಸಿ ನಂತರ ಊರಿಗೆ ಹೊರಟರು ಸಂ।ದಲ್ಲಿ ಎ ಆರ್ ಪಿ ಎಕ್ಷರನ್ನು ನಿಯಮಿಸಿದರು ಕೆಲ್ಸವಾಯ್ತು ದೆ ಎಂಬುದಾಗಿ ಪೌರೇಕ್ಷಿಸಲು ದಿವಾನರು- ಬೆಂಗಳೂರು ನಗರದ ಕೆಲವು ಕೆರೆ ಸಭೆ ಸೇರಿಸಿದ್ದರು

ಮದ್ಯಾಸು ಗವರ್ನರರ ಯುದ್ಧ ಫಂಡು.

ದ ಕ ಜಿಲ್ಲೆಯಲ್ಲಿ ಎಪ್ರಿಲ್ ತಿಂಗಳಲ್ಲಿ ಧ ಸಹಾಯ ಮಾಡಿದವರ ಹೆಸರಿನ ಪಟ್ಟಿ

ಭಾಗ ೨

ರೂ. 251 0 0 ಮಿಸೆಸ್ ಕ್ರಿಸ್ಟನ್ ಏಂಟೊ
ರೂ 250 0 0 ವಿದ್ವಾದ ರಾವಿವರ್ಮ ಕೃಷ್ಣರಾ
ರೂ 125 0-0ತುಳ ನಾಡ್ ಕ್ಲಿಬ್ ರೂ- 109
ಮತ್ತು ಪೈಕುಂಟ ಕೇಟ್. ರೂ 107-0
ವಿರಲ್ ಕಾಂತಾರಾ ರೂ. 105-0-0 ಪಿ
ಲ್, ಯಸ್ ಕೊಯಿತಿ, ಯಸ್. ಯಂ. ಸೆ
ಯದ್ ಮಹಮ್ಮದ್, ರೂ 101 0 0 ಸಿ,
ಟ್ಟಲ್‌ಹೆಂಟ್ & ಎಚ್, ಕೊರಗಪ್ಪ, ಅಬು
ಲ್ ಸುಬಾನ್ ಹಾಮದ್, ಬಿ ಸಿ ಸೀರ್ & ಪ್ರ
ರ್ಸ್, ಬಿ. ಎಫ್, ಲೋಬೊ, ಯಂ ದಿತಿಮಪ್ಪ
ದತ್ತಾತ್ರೇಯ ರಾವ್ ವಿಂಚ್ಟೂರ್, ಯಂ. ಮಾವ
ನ್ ನಾಯಕ್ & ಸನ್ಸ್, ಯಸ್ ಯಫ್. ನಿ
ಟೇನಾ, ಬಿ. ರಾಮಪ್ಪ, ಜಯಂತಿಲಾಲ್ ಕೇಟ್
ಪಿ ಸುಬ್ಬಯ್ಯ ನಾಯಕ್, ಯು ಸುಬ್ರಾಯ ನ
ಲ್ಯ, ಕೆ. ಸಾಂತಪ್ಪ, ಗುಪ್ತ ರ ಗುನ ನರಸಿಂ
ಕೃಷ್ಣ ಡಿ ಅಣ್ಣಪ್ಪ ಪೈ ವೈಕುಂಠ ಪೈ & ಬ್ರ
ರ್ಸ್, ರೂ 100 0 0 ಯಂ ಲಕ್ಷ್ಮಯ್ಯ ಶೆ
& ಸನ್ಸ್ ಎಂ ರಾವಿಣ್ಣ ಶೆಟ್ಟಿ, ಹಜಕ್ಕಾನ್
ಜಲಂದರ್ ಬೂಸ್ & ಪಾರ್ಟ್, ರೂ 75-0
ಪಂಡಿತ ಶಿವದಾನ್, ರೂ 51-0 0 ತಿಂಮ್ಮಪ್ಪ
ಟೀಚರ್ ಮಿಸ್ ಎಸ ಪಿ ತಾರ್ಡರ್, ಯಂ ಸೇವಿ
ರಾಜ ಪಡಿವಾಳ, ಬಿ ವಿಶ್ವಾಪ್ಪಶೆಟ್ಟಿ, ರೂ 50 0-0
ಕದ್ರಿ ವಿದ್ಯುದ್ದೀಪಿನ ಶಾಲೆ, ಮಿಮ್ಮದ್, ರಾ। ಶೆ
ಪಿ ರಾಘವೇಂದ್ರರಾವ್, ರೂ 35 0 0 ಶಾಂತಪ್ಪ
ಅರಿಗ, ರೂ 30-0 0 ಸಾಂಡ್ಯಾ ಜೀವನ್‌ಲಾಲ್
ಮಾಯಾ ಕಂಠೀರ್, ರೂ.25 0-0ಬಿ ನೇಮಿರಾ
ಶೆಟ್ಟಿಯರ್, ಕೃಷ್ಣ ಭಟ್ಟ, ಟಿ. ಬಾಳಪ್ಪ ಶೆಟ್ಟಿ, ಆ
ಳ್ಳ ನಾರಾಯಣ ಭಟ್ಟ ಮಾಧವ ಭಟ್ಟ, ಪಿ. ಕೊರ
ಪ್ಪ ರೈ, ಸಿ ರಾಮ ಭಟ್, ವೆಂಕಪ್ಪ ಶೆಟ್ಟಿ, ಸುಬ್ರಾ
ಯ ಭಟ್, ವಿತ್ತಾತ್ತುರ ಮಠದ ವಿದ್ಯಾಪೂರ್ಣ
ಧರ್ಮಾಮಿಯವರು, ಹಾಜಿ ಕೆ ಅಬ್ದುಲ್ ಖಾದ
ರ್ಯಾರಿ, ವೇಷಹನ್‌ಲಾಲ್ ಕೇಟ್‌ಲಾಲ್ & ಕೊ
ಯನ್, ಕೆಜ್ಜಾನ್ ಗೋವಿಂದನ್, ಕೆ. ಮಹಮ್ಮದ
ಮು.ಸಲಿಯರ್, ಡಾಂಗೆ & ಸನ್ಸ್, ಜಾಜಿ ಯಂ
ಮೆಹ್ಮಿನ್, ಎ ಕೊಣಾಜೆಪ್ಪ ಶೆಟ್ಟಿ, ಕೆ. ರಾಮಯ್ಯ
ಹೆಗ್ಡೆ, ಕೊಗ್ಗಪ್ಪ ಗಣಪತಿ ಶೆಟ್ಟ & ಕೊ,
ನಾಜು ಶೆಟ್ಟಿ, ಪಿ. ಕಿರುವಪ್ & ಕುಂಞಪ್ಪ
ವಿ ವಿ ಕುಂಞ ಅಮ್ಮ, ಮಿಸೆಸ್. ಯಸ್. ವ
ತ್ಯಾಯಸ್, ಪಿ. ಮೈದು ಕೆ ಅನಂತರಾಯ
ಪ್ಪಳು, ಸಂಕಪ್ಪ ಶೆಟ್ಟಿ, ಮಾಣಲ ಅಂಚಪ್ಪ
ಯಸ್ S ವಿಶ್ವಪ್ಪ ರೈ, ಮಹಮ್ಮದ್ ಮಿಶ್ಕಳ್ಳ
ಬಿ ಎ. ಯಲ್. ಅಬೂಬಕ್ಕ, ಪಿ. ಕುಂಞ ರಾಮ
ನಾಯಕ್. ರೂ. 20-0-0 ಅಗ್ಗಪ್ಪ ಶೆಟ್ಟಿ, ಯಂ
ಅಬ್ದು ನಾಜೀಬ್, ಚಂದಯ್ಯ ಶೆಟ್ಟಿಯರ್ ರೂ
15 0-0 ಕೃಷ್ಣಯ್ಯ ಹೆಗ್ಗಡೆ, ಕುಂಞಪ್ಪ,
ಎ. ಮಕ್ಕರ್, ಶೇಷು ಗೌಡ

ಶಾಲಾ ಪಠ್ಯಪುಸ್ತಕಗಳು

ಶ್ರೀ। ಕ ಹೊನ್ನಯ್ಯ ಕೆಟ್ಟರಿಂದ ರಚಿತವಾದ

ಮುಗುಳು

ರಿಂದ ೩ನೇ ದರ್ಜೆಗಳಿಗೆ ೦-೨-೬

ಶ್ರೀ। ಕೊರಡ್ಡಯ್ಯ ಶ್ರೀನಿವಾಸರಾಯರಿಂದ ರಚಿತವಾದ

ಪದ್ಯಾವಳಿ

೧೫೦೪ನೇ ದರ್ಜೆಗಳಿಗೆ ೦-೨-೬

ಶ್ರೀ। ಕೊರಡ್ಡಯ್ಯರ

ಆರೋಗ್ಯಪ್ರತಾಪ

ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ೦-೪-೦

ಶ್ರೀ। ಕೆ ಕೆ ಶಟ್ಟರಿಂದ ರಚಿತವಾದ

ಕುಶಲವ

ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ೦-೪-೦

ಮೊದಲನೆ ಪುಸ್ತಕ ೦ ೨ ೬
ಎರಡನೆ ,, ೦-೩-೦
ಮೂರನೆ ,, ೦-೩-೬
ನಾಲ್ಕನೆ ,, ೦-೪-೦
ಐದನೆ ,, ೦-೫-೦
ಮಗ್ಗಿಪುಸ್ತಕ ೦-೦-೬

ಎಲ್ಲಾ ತರದ ಶಾಲಾ ಪುಸ್ತಕಗಳೂ ಸುಲಭ ದರದಲ್ಲಿ ದೊರೆಯುತ್ತವೆ

ನವಭಾರತ ಪುಸ್ತಕ ಭಂಡಾರ,

(ರಿಜಿಸ್ಟರ್ಡ್ ಪಬ್ಲಿಷರ್ಸ್)

ನವಯುಗ ಪ್ರೆಸ್ಸಿನ ಸಮೀಪ,

ಕೋಳದ ಪೇಟೆ, **ಉಡುಪಿ.**

ವಾರದ ವಿಶೇಷ ವಾರ್ತೆ

ಖಾರ್ಕೋವ್ ಯುದ್ಧದ ಪರಿಸ್ಥಿತಿ.

2 ವಾರ ನಡೆದ ಭೀಷಣ ಖಾರ್ಕೋವ್ ಯುದ್ಧದಲ್ಲಿ ಗಾಯಗೊಂಡ ಮತ್ತು ಕೊಂದ ಜರ್ಮನರು 95,000 ನಾಶ ಮಾಡಲ್ಪಟ್ಟ ಟ್ಯಾಂಕುಗಳು 540. ವಶ್ತು ವಿಮಾನಗಳು 200. ಕೊಲ್ಲಲ್ಪಟ್ಟ ಸೋವಿಯೆಟ್ ಸೈನಿಕರು ಸುಮಾರು 5000. ಆ ಸರಿ 70,000 ಮಂದಿ ಕಾಣೆಯಾಗಿರುವ ವಶಾವಾಗಿರುವ ಟ್ಯಾಂಕುಗಳು 300 ತೋಪುಗಳು 832 ಮತ್ತು ವಿಮಾನಗಳು 24. ಖಾರ್ಕೋವಿನ ದಕ್ಷಿಣದಲ್ಲಿ ಇಜ್ಯುಮ್-ಬಲೆಂಕೋವ ಪ್ರದೇಶದಲ್ಲಿ ಕೆಂಪು ಸೈನಿಕರು ಮುಂದೊತ್ತುತ್ತಿರುವ ಜರ್ಮನರನ್ನು ಪ್ರತಿಭಟಿಸಿರುವರು. ಖಾರ್ಕೋವನ್ನು ಗೆಲ್ಲುವುದು ಕೆಂಪು ಸೇನೆಯ ಉದ್ದೇಶವಾಗಿರಲಿಲ್ಲ, ಖಾರ್ಕೋವನ್ನು ತಮ್ಮನ್ನೆ ಯಾಗಿ ಮಾಡಿಕೊಂಡು ಜರ್ಮನರು ಗಾಗಿ 30 ಕಾಲಾಳು ದಳ, 6 ಟ್ಯಾಂಕ್ ಳ ಮತ್ತು ಹೆಚ್ಚಿನ ತೋಪು ಮತ್ತು ವಿಮಾನಗಳನ್ನು ಸಂಗ್ರಹಿಸಿರುವರೆಂದು ಸೋವಿಯೆಟ್ ಸೇನಾನಿಗಳು ತಿಳಿದು ಇದನ್ನು ಡೆಗಟ್ಟಿ ನಾಥಿ ಸೇನೆಗೆ ದೊಡ್ಡ ಹಾನಿ ತುನ್ನುಂಟುಮಾಡುವುದೇ ಟಿಮೊಶೆಂಕೋ ವರ ಧಾಳಿಯ ಉದ್ದೇಶವಾಗಿದ್ದಿತು. ಆ ನ್ನೆವರು ಸಾಧಿಸಿರುವರು. ಖಾರ್ಕೋವ್ ಯುದ್ಧದಲ್ಲಿ ಅತಿ ಹೆಚ್ಚಿನ ಕೆಂಪು ಸೇನೆಯು ನಾಶವಾಗಿರುವುದೆಂದು ಜರ್ಮನರು ಪ್ರಕಟಿಸಿರುತ್ತಾರೆ. ಅದು ಕೇವಲ ಉತ್ಪ್ರೇಕ್ಷೆಯೇ ಹೊರತು ನಿಜವಲ್ಲವೆಂದು ಸೋವಿಯೆಟ್ ಸರ್ಕಾರವು ಪ್ರಕಟಿಸಿರುತ್ತದೆ. ಈಗ ಖಾರ್ಕೋವ್ ರಣರಂಗದಲ್ಲಿ ದೊಡ್ಡ ಯುದ್ಧವೇನೂ ನಡೆಯುತ್ತಿರುವುದಿಲ್ಲ. ಲೆನಿನ್‌ಗ್ರಾಡ್ ಮತ್ತು ಕಲಿನಿನ್ ರಣರಂಗಗಳಲ್ಲಿ ಜರ್ಮನರು ಪ್ರಬಲ ಹೋರಾಟವನ್ನಾರಂಭಿಸಿರುತ್ತಾರೆ. ಕಲಿನಿನ್‌ನಲ್ಲಿ ಕೆಂಪು ಸೇನೆಯು ಜರ್ಮನರನ್ನು ಹಿಂದಕ್ಕಟ್ಟಿ ಕೆಲವು ಹಳ್ಳಿಗಳನ್ನು ವಶಪಡಿಸಿಕೊಂಡಿರುತ್ತದೆ.

ಚೈನವ ಮೇಲೆ ಪಶ್ಚಿಮದಿಂದ ಪ್ರಬಲ ಧಾಳಿ

ಜಪಾನು ಪ್ರಕೃತ ಆಸ್ಟ್ರೇಲಿಯ ಮತ್ತು ಎಂದು ದೇಶದ ಮೇಲೆ ಧಾಳಿ ನಡಿಸ ಹೋಗದೆ ಚೈನವನ್ನು ಸಂಪೂರ್ಣವಾಗಿ ಗೆಲ್ಲುವ ಕಡೆಗೆ ಲಕ್ಷ್ಯ ಹರಿಸಿರುವುದೆಂಬುದು ನೀಗ ಸ್ಪಷ್ಟವಿದೆ. ಪಶ್ಚಿಮದಿಂದ ಚೈನವನ್ನಾದು ಆವರಿಸಿ ಮುಂದೊತ್ತುತ್ತಿದೆ. ಬರ್ಮ ರಸ್ತೆಯ ಮತ್ತು ಫೈಲೆಂಡ್, ಮತ್ತು ಇಂಡೋ ಚೈನಗಳ ಮೂಲಕವೂ ಜಪಾನರು ಚೈನದ ಮೇಲೇರಿಹೋಗಿ ಪ್ರಬಲ ಹೋರಾಟ ಹೂಡಿ ಕೆಲವೆಡೆ ವಿಜಯಗಳನ್ನು ಪಡೆದಿರುವರು ಚೆಕಿಯಂಗ್ ಮತ್ತು ಯುನ್ನಾನ್ ಪ್ರಾಂತಗಳಲ್ಲಿ ದೊಡ್ಡ ಹೋರಾಟಗಳು ನಡೆಯುತ್ತಿವೆ. ಜಪಾನರು ಚೆಕಿಯಂಗ್ ಪ್ರಾಂತದ ಮುಖ್ಯ ಪಟ್ಟಣವಾದ ಕಿನ್‌ಹ್ವಾ ವನ್ನು ಭೀಷಣ ಹೋರಾಟ ನಡಿಸಿ ಬಹಳ ನಷ್ಟ ಹೊಂದಿ ಗೆದ್ದಿರುವರು. ಚೀನೀಯರು ಯಾಂಗ್ಟ್ಸ್ ನದಿತಟದಲ್ಲಿರುವ ಇಚಂಗಿನ ಮೇಲೆ ಧಾಳಿ ನಡಿಸಿ ಕೆಲವು ಸ್ಥಳಗಳನ್ನು ಗೆದ್ದಿರುವರು. ಟ್ಯಾಂಕು ಮತ್ತು ವಿಮಾನಗಳೇ ಮೊದಲಾದ ಆಧುನಿಕ ಯುದ್ಧೋಪಕರಣಗಳ ಸಹಾಯವಿಲ್ಲದೆ ಜಪಾನರನ್ನು ಗೆಲ್ಲಲು ಸಾಧ್ಯವಿಲ್ಲ. ಅವುಗಳನ್ನು ಅಮೇರಿಕವು ಒದಗಿಸಿ ಕೊಟ್ಟಲ್ಲಿ ಜಪಾನನ್ನು ಗೆಲ್ಲುವುದು ನಿಶ್ಚಯವೆಂದು ಮಾರ್ಷಲ್ ಚ್ಯಾಂಗ್ ಕೈಶೆಕ್ಕರು ಹೇಳಿರುವರು. ಚೈನಕ್ಕೆ ಅದಷ್ಟು ಹೆಚ್ಚು ವಿಮಾನ ಟ್ಯಾಂಕು ಮತ್ತು ತೋಪುಗಳ ಸಹಾಯವನ್ನು ವಿಮಾನ ಮೂಲಕ ಶೀಘ್ರವಾಗಿ ಒದಗಿಸಿಕೊಡಬೇಕೆಂದು ಬ್ರಿಟನಿನ ಚೀನೀ ರಾಯಭಾರಿ ಮಿ. ವಲ್ಲಿಂಗ್ಟನ್ ಕೂರವರು ವಿನಂತಿಸಾಡಿಕೊಂಡಿರುವರು.

ಲಿಬಿಯದಲ್ಲಿ ಭೀಷಣ ಸಮರ.

ಮೇ. ತಾ. 26ರಲ್ಲು ಲಿಬಿಯದಲ್ಲಿ ಜನರಲ್ ರೊಮ್ಮೆಲರ ಸೇನೆಯು ಒಮ್ಮೆಯೇ ಮುಂದೊತ್ತಿದಾಗ ಬ್ರಿಟಿಷ್ ಸೇನೆಯು ಅದನ್ನು ಪ್ರತಿಭಟಿಸಿ ಭೀಷಣ ಟೇಂಕ್ ಮತ್ತು ತೋಪು ಯುದ್ಧ ನಡೆದಿರುವುದು. ೨೬ಕ್ಕೆ ವಿಜಯ ಪಡೆದು ಟೊಬ್ರೂಕನ್ನು ಗೆಲ್ಲುವ ಜನರಲ್ ರೊಮ್ಮೆಲರ ಉದ್ದೇಶವು ಈ ವರೆಗೆ ನೆರವೇರಿರುವುದಿಲ್ಲ. ಕೆಲವೆಡೆ ಬ್ರಿಟಿಷ್ ನೆಲತೋಟಿ ಕ್ಷೇತ್ರಗಳನ್ನು ಭೇದಿಸಿ ಜರ್ಮನ್ ಸೇನೆಯು ಮುಂದೊತ್ತಿರುವದಾದರೂ ಬ್ರಿಟಿಷ್ ಸೈನಿಕರು ಅದನ್ನು ತಡೆಗಟ್ಟಿರುವರು. ಬ್ರಿಟಿಷ್ ವಿಮಾನಗಳು ಹೆಚ್ಚಿನ ಹಾಜರಿ ಮಾಡಿರುತ್ತವೆ ಯುದ್ಧವು ಸಂಘಿಗ್ಧ ಸ್ಥಿತಿಯಲ್ಲಿ ಇನ್ನೂ ನಡೆಯುತ್ತಿರುವುದು. ಆದರೆ ಪರಿಸ್ಥಿತಿಯು ಬ್ರಿಟಿಷರಿಗೆ ಅನುಕೂಲವಾಗಿಯೇ ಇರುತ್ತದೆ. ಕಳದ ತಾ. 30ರಲ್ಲಿ ಬ್ರಿಟಿಷರು ಆಕ್ಸಿಸ್ ಸೇನೆಯ ಮೇಲೆ ಪ್ರತಿಧಾಳಿ ನಡಿಸಿರುವರು. ಸಕಾಲದ ಉಷ್ಣವು ಅಸಹನೀಯವಿರುವುದರಿಂದ ಈ ಯುದ್ಧವನ್ನು ದೀರ್ಘಕಾಲ ನಡಿಸಲಾಗದೆ ಅದರ ಪರಿಣಾಮವು ಈ ವಾರಾಂತ್ಯದಲ್ಲಿ ಯೇ ಗೊತ್ತಾಗುವುದೆಂದು ನಿರೀಕ್ಷಿಸಲಾಗಿದೆ.

1000 ಕ್ಕಿಂತಲೂ ಮಿಕ್ಕಿದ ವಿಮಾನಧಾಳಿ

ಕಳದ ರವಿವಾರ 1000 ಕ್ಕಿಂತಲೂ ಮಿಕ್ಕಿದ ವಿಮಾನಗಳು ಜರ್ಮನಿಯ ರ್ಹ್ರ್ ಮತ್ತು ಫ್ರೈಸ್‌ಲೇಂಡುಗಳ ಮೇಲೇರಿ ಹೋಗಿ ಪ್ರಚಂಡ ಧಾಳಿ ನಡಿಸಿರುತ್ತವೆ. ಕೊಲೋನ್ ಪಟ್ಟಣವು ಈ ಧಾಳಿಯ ಮುಖ್ಯ ಲಕ್ಷ್ಯವಾಗಿತ್ತು. 44 ಬ್ರಿಟಿಷ್ ವಿಮಾನಗಳು ಕಾಣೆಯಾಗಿವೆ. ರಾತ್ರಿ ನಡಿಸಲ್ಪಟ್ಟಿರುವ ಈ ಧಾಳಿಯು ಬಹಳ ಜಯಶೀಲವಾಗಿದ್ದು ಮುಂಜಾನೆ ಸುಮಾರು 18,000 ಅಡಿ ಎತ್ತರಕ್ಕೆ ಹೊಗೆಕೋಡಗಳೇರುವುದು ತೋರಿ ಬರುತ್ತಿತ್ತು. ಬ್ರಿಟನ್ ಫೈಟರ್ ವಿಮಾನಗಳು ಜರ್ಮನ್ ವಿಮಾನಗಳೊಡನೆ ಹೋರಾಟ ನಡಿಸಿ ಬೋಂಬರ್ ವಿಮಾನಗಳಿಗೆ ರಕ್ಷಣೆಯನ್ನಿತ್ತಿರುತ್ತವೆ. ಈ ಪ್ರಚಂಡ ಧಾಳಿ ನಡಿಸಿದುದಕ್ಕಾಗಿ ವೈಮಾನಿಕ ಖಾತೆಯ ಅಧಿಕಾರಿಗಳನ್ನು ಚರ್ಚಿಲ್ಲರೂ, ಅಮೆರಿಕಾನ ವಿಮಾನ ಖಾತೆಯ ಮುಖ್ಯಾಧಿಕಾರಿಯೂ ಅಭಿನಂದಿಸಿರುವರು. ಇಂತಹ ಪ್ರಚಂಡ ಧಾಳಿಗಳಿಂದ ಜರ್ಮನಿಯ ಎದೆ ಕಂಪಿತಗೊಳ್ಳುವುದೆಂಬುದರಲ್ಲಿ ಸಂದೇಹವಿಲ್ಲ. ಕಳದ ತಾ. 31 ರಲ್ಲು 50 ಜರ್ಮನ್ ವಿಮಾನಗಳು ಇಂಗ್ಲೆಂಡಿನ ಮೇಲೇರಿ ಹೋಗಿ ಧಾಳಿ ಮಾಡಿರುತ್ತವೆ.

ಹುರ್ ಪಂಗಡಿಗರ ಅತ್ಯಾಚಾರ.

ಸಿಂಧಿನಲ್ಲಿ ಹುರ್ ಪಂಗಡಿಗರ ಅತ್ಯಾಚಾರಗಳು ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟಿರುವುದಿಲ್ಲ. ಅವರು ಹಳ್ಳಿಗಳ ಮೇಲೇರಿ ಹೋಗಿ ಹಾವಳಿ ಮಾಡತೊಡಗಿರುತ್ತಾರೆ. ಪೀರ್ ಪಗ್ಯಾರೋವರವರ ಖಲೀಫರಾದ ಆಲಿ ಮಹಮ್ಮದ್ ಮತ್ತು ಆತನ ಮಗನನ್ನು ದಸ್ತಗಿರಿ ಮಾಡಲಾಗಿದೆ. ಹುರರು ಈ ಪೀರರ ಅನುಯಾಯಿಗಳು. ಸರಕಾರವು ಅವರನ್ನು ಮೊದಲೇ ಕೈದುಮಾಡಿ ನಾಗಪುರದಲ್ಲಿ ಸ್ಥಾನಬದ್ಧ ಕೈದಿಯಾಗಿ ಇಟ್ಟಿರುವುದು. ಹುರ್ ಜನರು ತಕ್ಷೀರುಗಾರ ಪಂಗಡಕ್ಕೆ ಸೇರಿದ ಅನಾಗರೀಕ ಜನರು. ತಮ್ಮ ಗುರುವಿನ ಬಂಧನದಿಂದ ಸಿಟ್ಟೆದ್ದು ಕೊಲೆ, ದರೋಡೆ, ಸುಲಿಗೆ ಮೊದಲಾದುವನ್ನು ನಡಿಸಿರುವರು. ಸರಕಾರದ ವಿರುದ್ಧವಾಗಿ ಅವರೊಂದು ಬಂಡಾಯವನ್ನೇ ಎಬ್ಬಿಸಿದುವರೆನ್ನಬಹುದು. ತಂತಿಗಳನ್ನು ಕಡಿದುಹಾಕುವುದು, ಬಂಗ್ಲೆಗಳನ್ನು ಸುಟ್ಟುಬಿಡುವುದು, ರೈಲ್ವೇ ರಸ್ತೆಗಳನ್ನು ಕಿತ್ತು ಟೈಸುಗಳನ್ನು ಉರುಳಿಸಿ ಸುಲಿಗೆ ಮಾಡುವುದೇ ಮೊದಲಾದ ಅತ್ಯಾಚಾರಗಳನ್ನವರು ಸುಸಂಘಟಿತವಾಗಿ ನಡಿಸಿರುವರು. ತಮ್ಮದೇ ಒಂದು ಸರಕಾರ ಸ್ಥಾಪಿಸಿ ಅದಕ್ಕೆ ವಿರುದ್ಧವಾಗಿರುವವರನ್ನೂ ಸರಕಾರದ ಪಕ್ಷವಾತಿಗಳನ್ನೂ ಈ ಜನರು ಇಚ್ಛಾನುಸಾರ ಕೊಲೆಮಾಡಹತ್ತಿರುವರು. ಇವರ ಉಪಟಳದಿಂದ ಕೆಲವು ಕಡೆ ಸರಕಾರವೇ ಇಲ್ಲದೆ ಅನಾರಯಕತ್ವವುಂಟಾಗಿದೆ. ಕರ ತೆರಿಗೆಗಳನ್ನು ಕೂಡಾ ಹುರರೇ ಬೆದರಿಸಿ ವಸೂಲುಮಾಡಹತ್ತಿರುತ್ತಾರೆ. ಇಂತಹ ಅರಾಜಕತೆಯನ್ನು ಸಹಿಸಿಕೊಂಡಿರಲು ನಾವ್ಯೆವಿಲ್ಲ. ಆದುದರಿಂದ ಸಿಂಧ್ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರೂ ಆಲ್ಲಾಬಕ್ಸ್‌ರೂ ರಾಜೀನಾಮೆ ಕೊಡಬೇಕು. ಪೀರ್ ಪಗ್ಯಾರೋವರನ್ನು ಕಂಡು ಅವರ ಅನುಯಾಯಿಗಳ ಅತ್ಯಾಚಾರಗಳನ್ನು ನಿಲ್ಲಿಸುವಂತೆ ಕೇಳಿಕ್ಕೊಳ್ಳಬೇಕೆಂದು ನಾಂಧಿಜಿಯವರು ಸೂಚಿಸಿರುವರು. ಹುರ್ ಜನರ ಗಲಾಟೆಯ ಸ್ಥಳಗಳಲ್ಲಿ ಸರಕಾರವು ಮಾರ್ಷಲ್ ಲೋ ಜ್ಯಾರಿಗೆ ತಂದಿರುತ್ತವೆ.

FURTHER REDUCTIONS IN LENDING RATES.

ಕೇವಲ ಒಂದೇ ವರ್ಷದ ಸ್ನೇಹಾಚಾರದಿಂದ ಬ್ರಿಟನು ಮತ್ತು ಸೋವಿಯೆಟ್ ರಸ್ಯಗಳೊಳಗಿನ್ನ ಭಿನ್ನಭೇದಗಳೆಲ್ಲಾ ಮಾಯವಾಗಿ ಪರಸ್ಪರ ಪ್ರೀತಿ ಮತ್ತು ವಿಶ್ವಾಸವು ಬೆಳೆಯುವಂತಾಗಿದೆ. ಆದುದರಿಂದಲೇ ಕಳೆದ ಜುಲ್ಯಾ ತಿಂಗಳ ಒಪ್ಪಂದವು ಇಂದು ಸ್ಥಿರವಾದ ಬಾಂಧವ್ಯವನ್ನುಂಟುಮಾಡಿರುತ್ತದೆ. ನಾಝಿಗಳ ವಿರುದ್ಧವಾದ ಯುದ್ಧದಲ್ಲಿ ಪರಸ್ಪರ ಸಹಾಯ ಮತ್ತು ಅವಕೋಂದಿಗೆ ಪ್ರತ್ಯೇಕವಾದ ಒಪ್ಪಂದ ಮಾಡಿಕೊಳ್ಳಲಾಗದೆಂಬ ವಾಗ್ದಾನ ಮಾತ್ರವೇ ಕಳೆದ ವರ್ಷದ ಒಪ್ಪಂದದಲ್ಲಡಕವಾಗಿತ್ತು. ಹಿಟ್ಲರು ಹೇಗಾತ್ತಾಗಿ ರಸ್ಯದ ಮೇಲೇರಿ ಹೋದ ಆ ಸಂಧಿಗ್ಧ ಪರಿಸ್ಥಿತಿಯಲ್ಲಿ ಅಂತಹ ಒಪ್ಪಂದದ ಹೊರತು ಬೇರೆ ಯಾವ ಪಿಚಾರವನ್ನೂ ಮಾಡಲು ಸಾಧ್ಯವಿರಲಿಲ್ಲ.

ಇಂದಿಗೆ ಒಂದು ವರ್ಷದ ಸಂಬಂಧ ಮತ್ತು ಸೋವಿಯೆಟ್ ರಸ್ಯವು ನಾಝಿಗಳನ್ನು ಸೃಶಭೂಮಿಯಲ್ಲಿ ಸೋಡಿದ ಸಾಹಸ ಮತ್ತು ತ್ಯಾಗಸ್ವರೂಪದ ಕುರಿತು ಬ್ರಿಟನು ಮತ್ತು ಅಮೆರಿಕಗಳಲ್ಲಿ ಸಂಪೂರ್ಣ ಪ್ರೀತಿ ಮತ್ತು ಆಭಿಮಾನವನ್ನುಂಟುಮಾಡಿರುವುದು. ಹಿಂದೆ ಅದರ ಕುರಿತಿದ್ದ ಅಪಚಿತ್ಕಾರ ಮತ್ತು ಸಂದೇಹಗಳೆಲ್ಲಾ ಒಮ್ಮೆಯೇ ಮಾಯವಾಗಿ ಅದು ಇಡೀ ಲೋಕದ ಮೆಚ್ಚಿಗೆಗೆ ಪಾತ್ರವಾಗಿರುವುದು. ಸೋವಿಯೆಟ್ ರಸ್ಯವು ಸ್ಟೆಲಿನ್‌ಗ್ರಾಡ್‌ನಲ್ಲಿ ನಾಝಿ ಧಾಳಿಯನ್ನು ಜಯಶೀಲವಾಗಿ ಸುಮಾರು ಒಂದು ವರ್ಷ ಪ್ರತಿಭಟಿಸಿ, ಮಹತ್ತಾದ ಅನಾಹುತದಿಂದ ಇಡೀ ಲೋಕವನ್ನೇ ಪಾರುಮಾಡಿರುವುದೆಂದು ಹೇಳಬಹುದು. ಈ ಅವಕಾಶದಲ್ಲಿ ಬ್ರಿಟನು ಮತ್ತು ಯುನೈಟೆಡ್ ಸ್ಟೇಟ್ಸುಗಳು ಭರದಿಂದ ಯುದ್ಧ ಸಿದ್ಧತೆ ಮಾಡಿ ಇಂದೀಗ ಜರ್ಮನಿಯನ್ನೆದುರಿಸಲು ಕಟಿಬದ್ಧವಾಗಿ ವಿಜಯದ ವಿಶ್ವಾಸವು ಳೃವಾಗಿವೆ. ಯುದ್ಧ ಸಂದರ್ಭದಲ್ಲಿ ಮಾತ್ರವಲ್ಲದೆ ಶಾಂತಿಯಲ್ಲಿಯೂ ಸೋವಿಯೆಟ್ ರಸ್ಯದ ಸಹಕಾರ ಪಡೆದು ಇನ್ನು ಮುಂದೆ ಯುದ್ಧವುಂಟಾಗದಂತೆ ಯುರೋಪಿನಲ್ಲಿ ತಕ್ಕ ವ್ಯವಸ್ಥೆಮಾಡುವುದರಲ್ಲಿಯೂ ಇಂಗ್ಲೆಂಡು ರಸ್ಯದೊಂದಿಗೆ ಸೇರಿ ಸಿದ್ಧವಾಗಿ ಇಂದು ೨೦ವರ್ಷಗಳ ಅವಧಿಯ ಸ್ಥಿರವಾದ ಒಡಂಬಡಿಕೆ ಮಾಡಿಕೊಂಡಿರುವುದು. ಎರಡು ರಾಷ್ಟ್ರಗಳೂ ರಾಜ್ಯಾಭಿಲಾಷೆ ಸ್ವತ್ಕ ಸಂಕುಚಿತ ಸ್ವಾರ್ಥವನ್ನೂ ಕಟ್ಟಿಕೊಳ್ಳದೆ ಅಂಟ್ಲಾಂಟಿಕ್ ಚಾರ್ಟರಿನ ಮೇರೆಗೆ ಯುರೋಪಿನಲ್ಲಿ ಶಾಶ್ವತವ್ಯವಸ್ಥೆ ಮಾಡಲು ಒಪ್ಪಿಕೊಂಡಿರುವವು. ಈ ಒಪ್ಪಂದವು ಕೇವಲ ಯುರೋಪಿಗೆ ಸಂಬಂಧಿಸಿರುವುದರಿಂದ ಮತ್ತು ಚಾಪಾನಾನೊದನೆ ರಸ್ಯವು ಮಾಡಿಕೊಂಡಿರುವ ತಾಟಸ್ಥ್ಯದ ಒಡಂಬಡಿಕೆಯನ್ನು ರಸ್ಯವು ಪೂರ್ಣತಃ ಮುರಿಯಲು ಸಿದ್ಧವಿಲ್ಲದಿದುದರಿಂದ ಅಮೆರಿಕವು ಪ್ರತ್ಯಕ್ಷವಾಗಿ ಈ ಒಡಂಬಡಿಕೆಗೆ ಸೇರಿರುವುದಿಲ್ಲ.

ಈ ಒಪ್ಪಂದಕ್ಕಿಂತಲೂ ಇಂದು ಮಹತ್ವದ ವಿಷಯವೆಂದರೆ, 1942ರಲ್ಲೇ ಯುರೋಪಿನಲ್ಲಿ ಇನ್ನೊಂದು ರಣರಂಗ ತೆರೆಯಲು ಅಮೆರಿಕ ಮತ್ತು ಇಂಗ್ಲೆಂಡುಗಳೊಪ್ಪಿದುದು. ಬಹುತೇಕ ಇಡೀ ಯುರೋಪಿನ ಬೆಂಬಲವಿರುವ ನಾಝಿ ಪಡೆಯ ಸ್ವತಂತ್ರ ಧಾಳಿಯನ್ನು ಸೋವಿಯೆಟ್ ರಸ್ಯವೊಂದೇ ಪ್ರತಿಭಟಿಸುವುದೆಂದರೆ ಅದೊಂದು ಅಸಾಧ್ಯ ಸಾಹಸವೇ ಸರಿ. ಆದುದರಿಂದಲೇ ಸ್ಟೆಲಿನರೂ, ಲಿಟ್ವಿನೊಫ್, ಮೈಸ್ಕಿ ನೊದಲಾದವರೂ, ಪಶ್ಚಿಮದಲ್ಲಿ ಇನ್ನೊಂದು ರಣರಂಗ ತೆರೆಯಬೇಕೆಂದು ಸೂಚಿಸಿದ್ದರು. ಈ ಸಲ ಎಮ್. ಮೊಲೊಟೋವರು ಅಮೆರಿಕ ಮತ್ತು ಬ್ರಿಟನುಗಳನ್ನು ಒತ್ತಾಯಪಡಿಸಿರಬೇಕು. ಆದುದರಿಂದಲೇ ಅವು ಈ ವರ್ಷಾಂತ್ಯದೊಳಗೇನೇ ಪಶ್ಚಿಮ ರಣರಂಗ ತೆರೆಯುವ ನಿರ್ಧಾರ ಮಾಡಿರುವವು. ಖಾರ್ಕೋವ್ ಮತ್ತು ಸೆಬಸ್ತಪೋಲ್‌ಗಳಲ್ಲಿ ಜರ್ಮನರಕ್ತ ಲಿಬಿಯದಲ್ಲಿ ಜನರಲ್ ರೊಮ್ಮೆಲರು ಕೆಲವು ವಿಜಯಗಳನ್ನು ಪಡೆದಿರುವರು. ಇಂತಹ ಉತ್ಕಟ ಪರಿಸ್ಥಿತಿಯಲ್ಲಿ ಇಂಗ್ಲೆಂಡು ಮತ್ತು ಅಮೆರಿಕಗಳು ಪಶ್ಚಿಮದಲ್ಲಿ ಇನ್ನೊಂದು ದೊಡ್ಡ ರಣರಂಗವನ್ನು ತೀಕ್ಷ್ಣದಲ್ಲೇ ತೆರೆದರೆ ನಾಝಿಗಳು ಕಂಗೆಡುವಂತಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಎರಡನೇ ರಣರಂಗ ತೆರೆಯುವುದು ಮಿತ್ರರಾಷ್ಟ್ರಗಳ ತೀಕ್ಷ್ಣವಾದ ಕರ್ತವ್ಯವಿರುತ್ತದೆ.

ಕಪ್ಪು ಸಮುದ್ರ ರಣರಂಗ.

ಜರ್ಮನರಿಂದು ರಸ್ಯದ ದಕ್ಷಿಣರಂಗದಲ್ಲಿ ತಮ್ಮ ಸಂಪೂರ್ಣ ಸೇನಾಶಕ್ತಿಯನ್ನು ಕೇಂದ್ರೀಕರಿಸಿ ಭೀಷಣ ಹೋರಾಟ ನಡಿಸುತ್ತಿರುವರು. ಕೊಕಸಸಿನ ಎಣ್ಣೆ ಪ್ರದೇಶವನ್ನು ಮುಟ್ಟುವುದೇ ಅವರ ಮುಖ್ಯೋದ್ದೇಶವಿರುತ್ತದೆ. ಖಾರ್ಕೋವ್ ರಣರಂಗದಲ್ಲಿ ಪುನಹ ಭಯಂಕರ ಟೇಂಕ್ ಕದನ ಆರಂಭವಾಗಿದೆ. ಕಪ್ಪು ಸಮುದ್ರದ ಪ್ರಾಮುಖ್ಯ ನೌಕಾಸಿಲಯವಾದ ಸೆಬಸ್ತಪೋಲನ್ನು ವಶಪಡಿಸಿಕೊಳ್ಳಲು ನಾಝಿಗಳು ಶತ ಪ್ರಯತ್ನ ಮಾಡುತ್ತಿದ್ದಾರೆ. ಕಳದ ತಿಂಗಳುಗಳಿಂದ ಸೆಬಸ್ತಪೋಲ್ ಬಂದರವು ಜರ್ಮನರ ಧಾಳಿಯನ್ನು ಜಯಶೀಲವಾಗಿ ಪ್ರತಿಭಟಿಸುತ್ತಾ ಬಂದಿರುತ್ತದೆ. ಇನ್ನಾದರೂ ಶೀಘ್ರವಾಗಿ ಜರ್ಮನರಿಗದನ್ನು ಗೆಲ್ಲಲು ಸಾಧ್ಯವಾಗುವಂತೆ ತೋರುವುದಿಲ್ಲ. ಜರ್ಮನರು ಕೆರ್ಚ್ ಅಖಾತ ದಾಟಿ, ಕಪ್ಪು ಸಮುದ್ರದ ಇನ್ನೊಂದು ಪ್ರಾಮುಖ್ಯ ಸೋವಿಯೆಟ್ ನೌಕಾ ನಿಲಯವಾದ ನವರೊಸಿಸ್ಕ್‌ಗಿಂತ ೭೫ ಮೈಲುಗಳ ದೂರದೆಲ್ಲಿ ಳಿದಿರುವರೆಂದು ಟರ್ಕಿಯಿಂದ ಸುದ್ದಿ ಬಂದಿದೆ. ಆದರೆ ಕ್ರೈಮಿಯವನ್ನು ಸಂಪೂರ್ಣವಾಗಿ ಗೆದ್ದು, ಕಪ್ಪು ಸಮುದ್ರದ ಪ್ರಬಲ ಸೋವಿಯೆಟ್ ನಾಪೆಯ ಶಕ್ತಿಯನ್ನು ಕುಂಠಿತಗೊಳಿಸದೆ ಕೊಕಸಸಿನ ಮೇಲೆ ದೊಡ್ಡ ಸೇನೆಯನ್ನೊಯ್ಯಲು ಜರ್ಮನರಿಗೆ ಸಾಧ್ಯವಾಗಲಾರದು. ಆದುದರಿಂದಲೇ ಅವರು ಸೆಬಸ್ತಪೋಲ್ ಮತ್ತು ನವರೊಸಿಸ್ಕ್ ನೌಕಾ ನಿಲಯಗಳನ್ನು ಗೆಲ್ಲುವ ಕುಂಠಿತಗ ಗಮನವಿತ್ತಿರುವರೆನ್ನಬಹುದು. ಸೆಬಸ್ತಪೋಲು ರಸ್ಯದ ಪ್ರಾಮುಖ್ಯವಾದೊಂದು ನೌಕಾ ನಿಲಯ ಮತ್ತು ಡೋಕ್ ಯಾರ್ಡ್ ಆಗಿರುವುದು. ಅಲ್ಲಿ ಹೆಚ್ಚಿನ ಮದ್ದುಗುಂಡು ಸಂಗ್ರಹ ಕೂಡಾ ಇರುತ್ತದೆ. ಅದೇನೂ ಸರ್ವ ಸಾಮಾನ್ಯ ಶ್ರೇಷ್ಠಾರಿ ಬಂದರಾಗಿರದೆ ಸೋವಿಯೆಟ್ ಸರಕಾರವ ಹಡಗಗಳಿಗೆ ಮಾತ್ರ ತೆರೆದಿದ್ದುದರಿಂದ ಅದೊಂದು ಗುಪ್ತ ಕೋಟೆಯಾಗಿರುವುದು. ನವೊರೊಸಿಸ್ಕ್ ಬಂದರವು ಕಪ್ಪು ಸಮುದ್ರ ತೀರದ ಎರಡನೇ ಪ್ರಾಮುಖ್ಯ ನೌಕಾ ನಿಲಯ. ಸೆಬಸ್ತಪೋಲನ್ನು ಜರ್ಮನರು ಗೆದ್ದರೆ ಸೋವಿಯೆಟ್ ನೌಕಾಪಡೆಯು ಈ ನಿಲಯದಲ್ಲೇ ಆಶಯಪಡೆಯಬೇಕು. ಈ ಎರಡು ನೌಕಾನಿಲಯಗಳನ್ನು ಜರ್ಮನರು ಗೆದ್ದು ಇಡೀ ಕ್ರೈಮಿಯವನ್ನು ವಶಪಡಿಸಿಕೊಳ್ಳಲು ಜರ್ಮನರಿಗೆ ಸಾಧ್ಯವಾದರೆ ಆ ಮೇಲೆ ಕೊಕಸಸಿನ ಮತ್ತು ರಸ್ಯದ ಕಪ್ಪು ಸಮುದ್ರ ನೌಕಾಪಡೆಯ ಮೇಲೆ ಜಯಶೀಲವಾಗಿ ವಿಮಾನ ಧಾಳಿ ನಡಿಸಬಹುದು. ಕೊಕಸಸಿನ ಹಿಂದಿನ ದಾರವನ್ನು ಹಿಡಿಯಲು ಹೋರಾಟದೀಗ ಆರಂಭವಾಗಿರುವದು. ಆದರೆ ಜರ್ಮನರಿಗ್ಲೇನು ಜಯಶೀಲವಾಗುವುದೆನ್ನಲು ಸಾಧ್ಯವಿಲ್ಲ. ಜಲ ಮತ್ತು ಆಕಾಶದಲ್ಲಿ ರಸ್ಯನರು ಪ್ರಬಲರಿದ್ದಾರೆ. ಅವರ ಕಪ್ಪು ಸಮುದ್ರ ಹಡಗಪಡೆಯಲ್ಲಿ ಒಂದು ಬೆಟ್ಲ್‌ಶಿಪ್, ೪ ಲಘುಸಿಕ್ಕೋಸ್ಕ್ರೂಸರ್ ಹಡಗ, ೨೦ ಡಿಸ್ಟ್ರೊಯರುಗಳು, ೫೦ ಸಬ್ ಮೆರೀನ್ ಮತ್ತು ೩೦ ಮೋಟರ್ ಟೋರ್ಪೆಡೋ ಹಡಗಗಳಿರುತ್ತವೆ. ಈ ನೌಕಾಪಡೆಯನ್ನು ವಿರೋಧಿಸುವ ರುಮೇನಿಯನ್ ಮತ್ತು ಬಲ್ಗೇರಿಯನ್ ಹಡಗಪಡೆಗಳಲ್ಲಿ ಒಟ್ಟು 10 ಡಿಸ್ಟ್ರೋಯರು ಮತ್ತು ಟೋರ್ಪೆಡೋ ಹಡಗಗಳಿಗಿಂತ ಹೆಚ್ಚಿರುವುದಿಲ್ಲ. ಇವುಗಳಿಗೆ ಸಹಾಯವಾಗಿ ಜರ್ಮನ್ ಸಬ್ ಮೆರೀನುಗಳು ಡೆನ್ಯೂಬ್ ನದಿಯ ಮೂಲಕ ಕಪ್ಪು ಸ್ವೀನ್ಸ್ ಬಂದರಿಗೆ ಕಳುಹಿಸಲ್ಪಟ್ಟಿವೆ. ಆದರೆ ಅದರಿಂದ ಕೂಡಾ ಹೆಚ್ಚಿನ ಪರಿಣಾಮವಾಗುವ ಹಾಗಿಲ್ಲ. ಇಟೆಲಿಯಾನ ನೌಕಾಪಡೆಯು ಡಾರ್ಡನೆಲ್ಲಿಸಿನ ಮೂಲಕ ಕಪ್ಪು ಸಮುದ್ರಕ್ಕೆ ಮುನ್ನುಗ್ಗಿದರೆ ಮಾತ್ರ ರಸ್ಯದ ಕಪ್ಪು ಸಮುದ್ರದ ನೌಕಾಬಲವನ್ನು ಮುರಿಯಲು ಸಾಧ್ಯವಿದೆ. ಆದಕ್ಕೆ ಟರ್ಕಿಯು ದೊಡ್ಡ ತಡೆಯಾಗಿದೆ. ಮಾತ್ರವಲ್ಲದೆ ಆಗ ಮಿತ್ರರಾಷ್ಟ್ರಗಳ ಹಡಗಪಡೆಯು ಕಪ್ಪು ಸಮುದ್ರಕ್ಕೆ ಪ್ರವೇಶಿಸಿ ರಸ್ಯಕ್ಕೆ ನೆರವಾಗಬಹುದು. ಆದುದರಿಂದ ಕಪ್ಪು ಸಮುದ್ರದ ಸೋವಿಯೆಟ್ ನೌಕಾಬಲವನ್ನು ಕುಂಠಿತಗೊಳಿಸುವುದೇನೂ ಸುಲಭವಲ್ಲ. ಆದು ಪ್ರಬಲ ಶಕ್ತಿಯಾಗಿರುವಕ್ಕ ಜರ್ಮನರ ಮುನ್ನಡೆಯು ಬಹಳ ಪ್ರಯಾಸಕರ ಮತ್ತು ಅದಕ್ಕೆ ದೀರ್ಘ ಸಮಯ ತಾಗದಿರಲಾರದು.

ನೋಟೀಸು.

The Pangal Nayak Bank Limited, Udipi.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಆದಾನ ಮೇಲೆ ಪಡೆದ ಸಾಲದ ಅಸ್ಸು ಮತ್ತು ಅದರ ಮೇಲಿನ ಬಡ್ಡಿ ಹಣ ಬ್ಯಾಂಕಿಗೆ ನ್ಯಾದೆಗೆ ವಸೂಲು ಆಗಿದೆ ಇದ್ದುದರಿಂದ ಅವರಿಗೆ ತಿಳುಸಿಸಿದ ಪ್ರಕಾರ ನೋಟೀಸು "ಸದ್ರಿಯವರು ಮೃತಿಪಟ್ಟಿದ್ದಾರೆ" ಎಂಬ ಸಬಬಿನಿಂದ ಹಿಂತಿರುಗಿ ಬಂದಿರುವುದರಿಂದಲೂ ಈ ಮುಂದಲ ಕ್ರಮಗಳನ್ನು ಸೂಚಿಸಲಾಗುವುದೆಂದೂ ಸದ್ರಿ ಸಾಲದ ಬಾಬ್ತು ಬಹಾ ಸಮಸ್ತ ಅಸ್ಸು ಬಡ್ಡಿ ಖರ್ಚುಗಳನ್ನು ಸೂಚನೆಗಳ ಮೇರೆಗೆ ಮತ್ತೆ ತಾರೀಕು 24-6-42ನೇ ಬುಧವಾರ ಅಪರಾಹ್ನ ಘಂಟೆ ೩ ಒಳಗೆ ಬ್ಯಾಂಕಿಗೆ ಭುಗಾಡಿ ವಸೂಲು ಬಾರದೆ ಇದ್ದಲ್ಲಿ ಸದ್ರಿ ಸಾಲಗಳ ಭದ್ರತೆಗೆ ಉಳ್ಳ ಸ್ಥಿರಾಸ್ತಿಯನ್ನು ಬ್ಯಾಂಕಿನವರು ಬಹಿರಂಗ ಹರಾಜಿನಲ್ಲಿ ಒತ್ತೆ ಇಟ್ಟ ನಗದಿಗಳನ್ನು ತಾರೀಕು 25-6-42ನೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲು ಮಾಡಲಾಗುವುದೆಂಬ ವಿಷಯ ಅಂದಿನ ಪೂರ್ವಾಹ್ನದ ಇದ್ದರೆ, ಕೆಂಪರ ಬ್ಯಾಂಕಿನ ಮುಖ್ಯ ವ್ಯವಹಾರದ ದಿವಸಗಳಲ್ಲಿ ಪೂರ್ವ ನೋಟೀಸು ಕೊಡದೇನೇ ಮುಂದುವರಿಸಲಾಗುವುದು.

ಸಾಲದ ನಂಬ್ರ 31/41

ಅರೆರು ಅಧ್ಯಕ್ಷ್ಯ ಅರೆರು ಬಾಲ ಪೂಜಾರಿ ಎ
ಕಾರ್ಯದರ್ಶಿ ವ್ಯವಸ್ಥಾಪಕ, ಕೆಮ್ಮಣ್ಣು ಶಾಖೆ

ಬ್ಯಾಂಕಿನ ಆಫೀಸು: ಉಡುಪಿ 16-6-42 | P. V. Nayak Agent.

ಜರ್ಮನರಿಗೆ ಎರಡನೇ ರಣರಂಗದ ಭೀತಿ

ಎರಡನೇ ರಣರಂಗದ ಭೀತಿ!

ಯುರೋಪಿನಲ್ಲಿ ಇನ್ನೊಂದು ರಣರಂ
ವು ತೆರೆಯಲ್ಪಡುವುದೆಂಬುದರಿಂದ
ರ್ಮನರು ಬೆದರಿಹೋಗಿರುತ್ತಾರೆ. ಸೈನಿ
ರು ಕರಾವಳಿಗೆ ಬಂದಿಳಿಯದಂತೆ ಮತ್ತು
ಡಗಗಳು ಸಮೀಪಿಸದಂತೆ ತಡೆಗಟ್ಟಲು
ಟ್ಟರಿ, ಸಣ್ಣ ಮತ್ತು ದೊಡ್ಡ ತೋಪು
ಳ ಮೂಲಕ ರಕ್ಷಣಾ ವ್ಯವಸ್ಥೆಯು
ರದಿಂದ ನಡೆಯುತ್ತಿದೆ. ಫ್ರೆಂಚ್ ಮತ್ತು
ಲ್ ಜಿಯನ್ ಸಮುದ್ರತೀರದ ಪ್ರದೇಶ
ಲ್ಲಿ ಮೂರು ಸಾಲಿನಲ್ಲಿ ಕೋಟೆ ಕೊತ್ತ
ಗಳ ರಕ್ಷಣಾ ಸಿದ್ಧತೆಯು ನಡೆದಿರು
ತ್ತಿದೆ.

ಜನರಲ್ ರೊಮ್ಮೆಲರ ವಿಜಯ.

ಲಿಬಿಯದಲ್ಲಿ ಜನರಲ್ ರೊಮ್ಮೆಲರು
ಳಿಸಿರುವ ವಿಜಯ ಪಡೆದಿರುವರೆಂದು
ತೀಳಬಹುದು 10 ದಿವಸಗಳ ಭೀಷಣ
ದನದ ನಂತರ ನಾಝಿಯ ಸೇನೆಯು ಬೇರ್
ಕೈಮನ್ನು ಗೆದ್ದು ಯುದ್ಧ ಸಾಮಾಗ್ರಿ
ರಬರಾಯಿಯನ್ನು ನೆಟ್ಟಗೆ ಪಡೆಯಲು
ಸೂಲವಾಗಿರುವುದು. ನೈಟ್ಸ್ ಬ್ರಿಜ್
ಮತ್ತು ಎಲ್ ಅಡೆಮುಗಳು ಇನ್ನೂ
ಬ್ರಿಟಿಷರ ವಶವಿದ್ದು ತೀವ್ರ ಹೋರಾಟ
ನಡೆಯುತ್ತಿದೆ. ಎಲ್ ಅಡೆಮಿನ ಮೂಲ
ಕ ಮುಂದೊತ್ತಿ ಟೊಬ್ರೂಕ್ ಗಜಾಲ
ಪಸ್ತೈಯನ್ನು ಕಡಿಯುವುದೇ ರೊಮ್ಮೆಲರ
ಉದ್ದೇಶವಿರುವುದು. ಭೀಷಣ ಹೋರಾ
ವು ನಡೆಯುತ್ತಿರುವುದಾದರೂ, ಇನ್ನೂ
ಬಲ ಸಮರವು, 324 ಜರ್ಮರನ್ನೆಲು
ಣರಂಗದಲ್ಲಿ ತೀರ್ಪುದಲ್ಲೇ ನಡೆಯಲಿರು
ತ್ತದು. ಧೂಳು ತುಂಬಿದ ಬಿರುಗಾಳಿಯಿಂ
ಾಗಿ ಈ ಹೋರಾಟಕ್ಕೆ ತೊಡಕುಂಟಾ
ದೆ.

250ಕ್ಕಿಂತಲೂ ಮಿಕ್ಕಿದ
ವಿಮಾನ ನಾಶ

ಜರ್ಮನಿಯ ಪ್ರಾಮುಖ್ಯ ಕೈಗಾರಿಕಾ
ಸ್ಥಾಪನೆಗಳ್ಲೊಂದಾದ ಕೊಲೋನಿನ
ಮೇಲೆ 1000 ಬ್ರಿಟಿಷ್ ವಿಮಾನಗಳು
ಡೆ ನಡಿಸಿದ ಪರಿಣಾಮವಾಗಿ 250
ಕ್ಕಿಂತಲೂ ಮಿಕ್ಕಿದ ಕಾರ್ಖಾನೆಗಳು ನಾಶ
ಾಗಿರುವವೆಂದು ತಿಳಿದುಬಂದಿದೆ. ಪಟ್ಟ
ಣದ ನಡುವಿನ 300 ಎಕ್ರೆ ವಿಸ್ತೀರ್ಣ
ದೊಳಗಣ ಕಟ್ಟಡಗಳೆಲ್ಲಾ ಸಂಪೂರ್ಣ
ವಾಗಿ ಬಿದ್ದುಹೋಗಿವೆ

ಸೆಬಸ್ತೊಪೋಲ್ ಮತ್ತು ಖಾರ್ಕೋವ್
ಗಳಲ್ಲಿ ಭೀಷಣ ಹೋರಾಟ

ಜರ್ಮನರು ಸೆಬಸ್ತೊಪೋಲ್ ಮತ್ತು
ಖಾರ್ಕೋವ್‌ಗಳಲ್ಲಹೆಚ್ಚೆಚ್ಚು ಸೈನ್ಯವನ್ನು

ಜನರಲ್ ರೊಮ್ಮೆಲರ ವಿಜಯ

ಸೆಬಸ್ತೊಪೋಲ್ ಮತ್ತು ಖಾರ್ಕೋವ್‌ಗಳಲ್ಲಿ ಭೀಷಣ ಹೋರಾಟ

ಮುಂದೆ ಹಾಕಿ ತೀವ್ರ ಹೋರಾಟ ನಡೆ
ಯುತ್ತಿರುವುದು. ಹೆಚ್ಚೆಚ್ಚು ರುಮೇನಿ
ಯನ್ ಸೇನೆಯನ್ನು ಪಯೋಗಿಸಿ ಸೆಬಸ್ತ
ಪೋಲನ್ನು ಗೆಲ್ಲಲು ಜರ್ಮನರು ಭಗೀರಥ
ಪ್ರಯತ್ನ ಮಾಡುತ್ತಿರುವರು. ರುಮೇನಿ
ಯದ ಸರ್ವಾಧಿಕಾರಿ ಜನರಲ್ ಆಂಟೊ
ನೆಸ್ಕುರವರು ಸೆಬಸ್ತಪೊಲಿಗೆ ಹೋಗಿರು
ವರು. ಸಂಪ್ಯೆಯಲ್ಲಿ ಬಹಳ ಕಡಿಮೆ
ಮಂದಿ ಇದ್ದರೂ ಸೆಬಸ್ತಪೋಲಿನ ರಕ್ಷ
ಕರು ವೀರಾವೇಶದಿಂದ ಕಾದಾಡಿ ಜರ್ಮ
ನರ ಭೀಕರ ಧಾಳಿಯನ್ನು ಪ್ರತಿಭಟಿಸಿರು
ವರು. ಜರ್ಮನರಿಗೆ ಬಹಳ ನಷ್ಟವಾಗಿರು
ವುದು. 3ದಿನಗಳ ಯುದ್ಧದಲ್ಲಿ ಸಬಸ್ತ
ಪೋಲ್ ರಣರಂಗದಲ್ಲಲ್ಲಿ 60,000ಜರ್ಮನ
ರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರು
ತ್ತದೆ. ಖಾರ್ಕೋವಿನಲ್ಲಿ ಹೊಸತಾಗಿ
ಪ್ರಚಂಡ ಟ್ಯಾಂಕ್ ಯುದ್ಧವು ಆರಂಭವಾ
ಗಿರುತ್ತದೆ ಆದರೆ ಜರ್ಮನರಿಗೆ ಸೋವಿ
ಯೆಟ್ ಸೇನಾಪ್ಯೂಹವನ್ನು ಎಲ್ಲಿಯೂ
ಭೇದಿಸಲು ಸಾಧ್ಯವಾಗಿರುವುದಿಲ್ಲ ಜರ್ಮ
ನರು ಕೆರ್ಚ್ ಅರ್ಧ ದ್ವೀಪದಿಟ್ ಕೊಕ
ಸಿನ ಮೇಲೇರಿ ಹೋಗಿರುವರೆಂದು ಸುದ್ದಿ
ಯುಂಟಾಗಿದೆ.

ಜರ್ಮನರೀಗ ಆಶಾವಾದಿಗಳಾಗಿ
ಇರುವುದಿಲ್ಲ

1910ನೇ ಇಸ್ವಿಯಲ್ಲಿ ಜರ್ಮನರು ವಿ
ಜಯದ ಭರವಸೆಯುಳ್ಳವರಿದ್ದರು. ಆಗ
ಜರ್ಮನಿಯ ವಿಜಯ ಮತ್ತು ಭವಿಷ್ಯದ
ಪ್ಲೇನಿನ ಕುರಿತೇ ಜನತೆಯಲ್ಲಿ ಮಾತುಕ
ತೆಯು ಹಬ್ಬಿದ್ದಿತು. ಆದರೆ ಈಗ ಆ ಕುರಿ
ತು ಸಂಘರ್ಷಣೆ ನಡಿಸುವುದೇ ಅಸಾಧ್ಯ
ವಾಗಿರುತ್ತದೆ. ಜರ್ಮನರು ಇತ್ತಲಾಗಿ
ಯುದ್ಧ, ಪೈರಿಯ ಕಕ್ಕೆ, ರಾಂತಿಯ ಕುರಿ
ತಿಲ್ಲಾ ಮಾತೇ ಇಡದೆ ಅವರ ಮುಖವು
ಚಿಂತಾಮಗ್ನವಾಗಿರುತ್ತದೆ. ಪೂರ್ವರಣ
ರಂಗದ ಯುದ್ಧವು ಅತಿ ಭೆಚ್ಚಿನ ಜರ್ಮ
ನ್ ತರುಣರ ಪ್ರಾಣಹಾನಿಗೆ ಕಾರಣವಾ
ಗಿದೆ. ಗಾಯಗೊಂಡ, ತೋಳಿಲ್ಲದ, ಮರ
ಕಾಲುಕಳ್ಕೆಕೊಂಡು ತಿರುಗುವ ಸೈನಿಕರು
ಜರ್ಮನಿಯ ರಸ್ತೆಗಳಲ್ಲಿ ತುಂಬಿ ಹೋಗಿ
ರುತ್ತಾರೆ.

The Canara Industrial & Banking Syndicate Ltd.,
COONDAPOOR.

ನೋಟೀಸು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಕುಂದಾಪುರ.

ಈ ಕೆಳಗೆ ಕಾಣಿಸಿದ ಆಸಾಮಿಗಳಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸುಗಳು, ಸದರಿ ಆಸಾಮಿಗಳ ಪೈಕಿ ಕೆಲವರು ಸಿಕ್ಕದೆ ಮತ್ತು ಕೆಲವರು ಮೃತರಾಗಿದ್ದಾರಾಗಿ ಇಪ್ಪು ನಮಗೆ ಬಂದಿರುವುದರಿಂದ ಸದರಿ ಆಸಾಮಿಗಳು ಈ ಕೆಳಗಿನ ಸ್ಥಿತಿಗಳನ್ನು ಇದೇ ಬರುವ ತಾ. 2-7-1942ನೇ ಗುರುವಾರ ಅಪರಾಹ್ನ ಘಂಟೆ ಎರಡಕ್ಕೆ ಕಛೇರಿಗೆ ಬೇಂಕಿಗೆ ಯುಕ್ತರಾಗಿರುವ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಎಲಂ ಮಾಡಲ್ಪಡುವುದು, ತಿಳಿದಿರಲಿ!

ತೋಪ್ ನಂಬ್ರ	ಸಾಲ ಪಡೆದವರ ಹೆಸರು, ಮನೆ ವಿಳಾಸ	ಆಸಲು ರೂಪ್ಯ
414/39	ಕೆ ನರಸಿಂಹ ಸೇನಿಗಾರ, ಸುಬ್ರಾಯ ಸೇನಿಗಾರನ ಮಗ, ಕುಂದಾಪುರ.	20
111/1	ಎಲ್ಲಪ್ಪ ಸಾಹೇಬ್ರಪ್ಪ ಭಂಡಾರಿ, ತಂಗ್ಯಪ್ಪ ಪೆಟ್ಟಿಯ ಮೊಮ್ಮಗ, ಗೃಹ ವಿಚ್ಛೇದಿತ ಎಚ್ಚಕ್ಕಾರು	45
234/40	ಸಾದಿ ಪೂಜಾರಿ, ಮೇಲ್ ಮಿತ್ತ ಗಣಪ ಪೂಜಾರಿ ಅಕ್ಕಾಳು, ಗೃಹ ಕುಂದಾಪುರ	20
303/40	" " " " " "	10

ಕುಂದಾಪುರ
ತಾ. 12-6-1942.

T. G. M. Pai.
Agent at Coondapur

ತಾ. **18-6-1942**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ

ನಾಡಿಯಾ ಮೂವಿಟೋನಿನವರ

ಜೋನ್ ಕೆನಾಸ್ ಹಿ ಗುಲ್ಖಾನ್ ನಟಿಸಿರುವ

ಟೂಫಾನಿ ಟೊರ್ಜನ್

ಬರುವ ಚಿತ್ರ:-

ಹರೀಶ್ ಮತ್ತು ನಳಿನಿ ಜಯವಂತ್ ನಟಿಸಿರುವ

ನೆಶನಲ್ ಸ್ಟುಡಿಯೋದವರ 'ರಾಧಿಕಾ'

ಆನಂತರ: **ಈಶ್ವರಲಾಲ್, ಮಿಸ್ ಪ್ರಭಾ**

ನಟಿಸಿರುವ ರಣಜಿತ್ ಮೂವೀಸ್

ನವಯುಗ

ಜಾಹೀರಾತು ದರ.

(ಒಂದು ಬಾರಿಗೆ)

1 ಪುಟಕ್ಕೆ ... ರೂ 25-0-0
½ ,, ... ರೂ 15-0-0
¼ ,, ... ರೂ. 8-0-0
⅛ ,, ... ರೂ. 5-0-0
ಕಲಂ ಇಂಚಿಗೆ... ರೂ. 1-0-0

ಚಂದಾದರ (ಮುಂಗಡ.)

1 ವರ್ಷಕ್ಕೆ .... ರೂ. 3-8-0
½ ,, ... ರೂ. 2-0-0
ಪ್ರತಿ ಪ್ರತಿಗೆ ... ರೂ. 0-1-3

ಬಿಸಿ ಸುದ್ದಿ.

ಡಾ। ರಾಘವೇಂದ್ರರಾಯರ ಮರಣ.

ಸೈನ್ಸ ಆಫ್ ಕೌನ್ಸಿಲಿನಲ್ಲಿ ಸಿವಿಲ್ ಡಿಫೆನ್ಸ್ ಸೆಂಬರಾಗಿದ್ದ ಡಾ। ಜಿ. ರಾ
ಘವೇಂದ್ರರಾಯರು ತಾ 15ರಲ್ಲಿ ನ್ಯೂ ಥಿಲ್ಲಿಯಲ್ಲಿ ದಿವಂಗತರಾದರು ರಾಯರು ಉತ್ಯಂತ ನೇಗಿಯೂ, ಹಾಗೂ ಅತಿ ಚತುರ ರಾಜಕಾರಣಿ ಪಟುವಾಗಿದ್ದರು. ಭಾರತದ ರಾಜಕೀಯ ರಂಗದಲ್ಲಿ ದಿವಂಗತ ರಾಯರಂಥವರು ಯುಕ್ತಿವಂತ ಸುತ್ಸದ್ದಿಗಳು ಅಪರೂಪ. ಶ್ರೀ. ರಾಘುವೇಂದ್ರ ರಾಯರು ಮಧ್ಯಪ್ರಾಂತ್ಯದಲ್ಲಿ ಎರಡು ಬಾರಿ ಮಂತ್ರಿಯಾಗಿದ್ದರು 1936ರಲ್ಲಿ ಮಧ್ಯ ಪ್ರಾಂತ್ಯಗಳ ಗವರ್ನರ್ ಹುದ್ದೆಯನ್ನು ಕೂಡಾ ನೋಡಿದ್ದರು. ತನ್ನ ತಾರುಣ್ಯದಲ್ಲಿ ಕಾಂಗ್ರೆಸ್ ಧುರೀಣರಾಗಿದ್ದು ಮಧ್ಯ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ವಿಶೇಷ ಚತುರತೆ ತೋರಿಸಿದ್ದರು. 1939ರಿಂದ 1941ರ ವರೆಗೆ ಲಂಡನ್ನಿನಲ್ಲಿ ಇಂಡಿಯಾ ಸೆಕ್ರೆಟರಿಯವರ ಸಲಹೆಗಾರರಾಗಿದ್ದು ವೈಸರಾಯ್ ಕೌನ್ಸಿಲಿನ ಸದಸ್ಯತನ ವಹಿಸುವದಕ್ಕಾಗಿ ಭಾರತಕ್ಕೆ ಬಂದಿದ್ದರು. ರಾಯರ ನಿಧನದಿಂದ ಭಾರತೀಯ ಮುತ್ಸದ್ದಿಗಳಲ್ಲೊಬ್ಬರು ಕಾಣೆಯಾದಂತಾಯಿತು.

ಶುಭಾಸ್ ಬೋಸರು

ಹಿಟ್ಲರ್ ಮತ್ತು ಮುಸಲಿನಿಯವರ ಭೇಟಿ ಪಡೆದು ಬರ್ಲೀರಿಯಕ್ಕೆ ಹಿಂತಿರುಗಿರುವ ಸಂಗತಿ ಲಂಡನ್ನಿನ ಪಾರ್ತೆಯಿದೆ

ರಕ್ತದ ಯುದ್ಧ

ಸೆಬೆಸ್ತಪೋಲಿನ ಯುದ್ಧವು ಅತಿ ಬಿರುಸಾಗಿ ನಡೆಯುತ್ತಿದೆ ಸಾವಿರಾರು ಜರ್ಮನರು ಸತ್ತು 160 ವಿಮಾನಗಳು ನಾಶವಾಗಿರುವುದನ್ನೂ ನಾವಿಲ್ಲಿ ಸೆಬಸ್ತಪೋಲಿನ ಹೋರಾಟವನ್ನೇ ಹೋರಾಡುತ್ತಿದ್ದಾರೆ. ಖಾರ್ಕೋವಿನ ದ್ವಿತೀಯ ರಣರಂಗದಲ್ಲಿ ಜರ್ಮನರ ಬಿತ್ತಾಟ ಹೆಚ್ಚಿದೆ.

ಧ್ವಜದಿನ

ಮಿತ್ರರಾಷ್ಟ್ರಗಳ ಧ್ವಜ ದಿನಾಚರಣೆಯ ಸಂದರ್ಭದಲ್ಲಿ ಪ್ರೆಸಿಡೆಂಟ್ ರುಸವೆಲ್ಟರು ಭಾಷಣವೀಯುತ್ತ, ಮಾನವನ ಆಹಾರ, ಬೆಳಕು, ಗಾಳಿ, ಉಪ್ಪಿನಂತಿರುವ, ವರ್ಣ ವರ್ಗಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿರುವ ಸ್ವತಂತ್ರ್ಯವನ್ನು ಸಾಧಿಸುವದೇ ತನ್ನ ಗುರಿಯಾಗಿರುವದೆಂದು ಹೇಳಿರುವರು. ಮಿತ್ರ ರಾಷ್ಟ್ರಗಳಲ್ಲೆಲ್ಲಾ ತಾ. 14ರಲ್ಲಿ ಧ್ವಜ ದಿನಾಚರಣೆ ನಡೆದಿದೆ.

ಡಾರ್ವಿನಿನ ಧಾಳಿ

17 ಜಪಾನೀ ವಿಮಾನಗಳು ಡಾರ್ವಿನ್ ಬಿಮಾನ ನಿಲ್ದಾಣದ ಮೇಲೆ ಧಾಳಿ ನಡಿಸಿವು. ಮಿತ್ರ ರಾಷ್ಟ್ರಗಳು ಜಪಾನೀ ಹಡಗಗಳ ಮೇಲೆ ಧಾಳಿಯಿಟ್ಟವು.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಸೌಹಾರ್ದ ಸಮಿತಿ— ಸೋವಿಯೆಟ್ ಮತ್ತು ಚೈನಗಳಿಗೆ ಸಹಾನುಭೂತಿಯನ್ನು ತೋರಿಸಿ ಅವುಗಳ ವಿಷಯದಲ್ಲಿ ಪ್ರಚಾರಮಾಡುವ ಉದ್ದೇಶದಿಂದ ಸಮಿತಿಯನ್ನು ರಚಿಸುವ ಕುರಿತು ಆಲೋಚಿಸುವ ಒಂದು ಸಭೆಯು ತಾ. 14ರಲ್ಲಿ ಧಿಯು ಸಾಹಿತಿಗಳ ಅಜಿಪಲ್ಲಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕಕ್ಕೆಲ್ಲಾಯರು, ಶ್ರೀ ಎನ್. ಎಲ್ ಉಪಾಧ್ಯಾಯರೂ ಸಮಿತಿಯ ಉದ್ದೇಶಗಳನ್ನು ವಿವರಿಸಿದರು. ಅನಂತರ ಸೌಹಾರ್ದ ಸಮಿತಿಗೆ ಬೆನಾವಣೆ ನಡೆಯಿತು: ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷರಾಗಿಯೂ, ಶ್ರೀ ಜಿನರಾಜ ಹೆಗ್ಗಡೆಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕಕ್ಕೆಲ್ಲಾಯ ಮತ್ತು ಕೆ. ಶಿವರಾವ್ ಇವರುಗಳು ಕಾರ್ಯದರ್ಶಿಗಳಾಗಿಯೂ ಇನ್ನು ಕೆಲವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು.

ಆರಂಭ ಭಾಷಣ—ಕನ್ನಡ ವಿದ್ಯಾರ್ಥಿ ಯುವಕ ಸಂಘದ ಆರಂಭ ಭಾಷಣವನ್ನು ಎಜಿಸ್ಟೇಟ್ ಶ್ರೀ ಬಿ.ಗಂಗಾಧರದಾಸ್ ಅವರ ಆಫೀಸಿನಲ್ಲಿ ವಿದ್ವಾನ್ ಯಂ. ಆರ್. ಶಾಸ್ತ್ರಿಗಳು ತಾ. 14ನೇ ಸಾಯಂಕಾಲ ಮಾಡಿದರು.

ಮಿತ್ರ ರಾಷ್ಟ್ರಗಳ ಧ್ವಜದಿನಾಚರಣೆ—ಈ ಸಂಬಂಧವಾಗಿ ತಾ. 14ನೇ ಸಾಯಂಕಾಲ 5ಘಂಟೆಗೆ ಗವರ್ನಮೆಂಟ್ ಕಾಲೇಜಿನ ಸಭೆ ಒಂದು ಸಭೆ ಸೇರಿತು. ಜಿಲ್ಲಾ ಕಲೆಕ್ಟರರಾದ ಮಿ. ಯಂ. ತಮತುಲ್ಲಾ ಸಾಹೇಬ್ ಬಹದ್ದೂರು ಐ. ಸಿ ಎಸ್, ಅವರು ಅಗ್ರಾಸನ ವಹಿಸಿದ್ದರು. ಶ್ರೀಗಳಾದ ಯು.ಕೆ. ನಂಬಿಯರ್, ಯಂ. ಎಸ್. ಪ್ರೇಷ್ಟ್ ಸಿ ಎಲ್ ಜೋಜೋ ಮತ್ತು ಅಬ್ದುಲ್ ರಹೀಂ ಅಮ್ಮದ್ ಇವರುಗಳು ಭಾಷಣಮಾಡಿದರು.

ಹರಿಜನ ಸೇವಕ ಸಂಘ ಮಂಗ್ಳೂರು—ತಾ. 13-6 42ನೇ ಸಾಯಂಕಾಲ 6ಘಂಟೆಗೆ ಕಾಕರಗೋಡಿನಲ್ಲಿ ಒಂದು ಹರಿಜನ ವಿದ್ಯಾರ್ಥಿ ಭವನವನ್ನು ತೆರೆದಿರುತ್ತೆ ಸ್ಥಳೀಯ ಮುನ್ಸೀಫರಾದ: ಶ್ರೀ. ಟಿ. ಎನ್. ಡಿ ರೆಡ್ಡಿಯವರು ಅಧ್ಯಕ್ಷರಾಗಿದ್ದರು. ಎಡಿಪಲ್ ಮುನ್ಸಿಫರಾದ ಶ್ರೀ ಪಿ. ವೆಂಕಟ್ರಾಯ ಅಯ್ಯನವರೂ ಹಾಜರಿದ್ದರು. ಶ್ರೀ. ಬಾಬು ರೆಟ್ಟಿ (ಕಾರ್ಯದರ್ಶಿ)ಯವರು ವರದಿಯನ್ನೊದಿದ ಮೇಲೆ ಶ್ರೀಗಳಾದ ಎ. ಬಿ. ಶೆಟ್ಟಿ M. L. A., ಪಿ.ಯಸ್. ತಿಮ್ಮಪ್ಪಶೆಟ್ಟಿ, Asst. Commercial Tax Officer, ಮತ್ತು ಡಾಕ್ಟರ್ ಪಿ. ಯಸ್ ಭಟ್ಟು ಭಾಷಣಮಾಡಿದ ಮೇಲೆ ಅಧ್ಯಕ್ಷರ ಭಾಷಣದಿಂದಿಗೆ ಸಭೆ ಮುಕ್ತಾಯವಾಯ್ತು. ಭವನವು ಈಗ ಶ್ರೀ ಶುಭೀಲಾಬ್ಯಾ ನಗ ಕಾರ್ಯದರ್ಶಿಯವರು ಧರ್ಮಾರ್ಥ ಕೊಟ್ಟಿರುವ ಕಟ್ಟಡದಲ್ಲಿ ನಡೆಯುತ್ತಿದೆ. ಪ್ರಸ್ತುತ 6ಮಂದಿ ವಿದ್ಯಾರ್ಥಿಗಳಿದ್ದಾರೆ.

ತಾ 22-6-'42ನೇ ಸೋಮವಾರ ಸ್ಯಾಮ್ ಘಂಟೆ 5ಕ್ಕೆ ಪುತ್ತೂರು ಸೆಷನ್ಸಾಟ ಹೋಟಲಿನಲ್ಲಿ ಸ್ಥಳೀಯ ಕಾಲೇಜಿನ ಸಂಘದ ಸಭೆ ಜರಗಲಿದೆ. ಮಹಾ ನೇಯರೆಲ್ಲರೂ ಬಂದು ಸಹಕರಿಸಬೇಕಾಗಿ ವಿನಂತಿ.

ಉಡುಪಿ.

ನಾಟಕ ಪ್ರದರ್ಶನ—ಕಳದ ಶನಿವಾರ ರಾತ್ರಿ ಸ್ಥಳೀಯ ಶ್ರೀಕಾಂತಾಳ್ವಸ್ಥ ಥಿಯೇಟರಿನಲ್ಲಿ ಶ್ರೀ ಡಾಕ್ಟರ್ ಯು. ಎಲ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಹೆಬ್ರಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಬಾಲಕಿಯರು ವೀರ ಅಭಿಮನ್ಯು ನಾಟಕವನ್ನು ಸ್ಥಳೀಯ ಬೋರ್ಡು ಹೈಸ್ಕೂಲಿನ ಸಭಾ ಸದನದ ಸಹಾಯಾರ್ಥವಾಗಿ ಜಯಶೀಲವಾಗಿ ಅಭಿನಯಿಸಿದರು. ಜನರು ಕಿಕ್ಕಿರಿದು ನೆರೆದಿದ್ದರು. ಈ ನಾಟಕ ಪ್ರದರ್ಶನಕ್ಕೆ ಕಾರಣರಾದ ಜಿಲ್ಲಾ ಬೋರ್ಡು ಪ್ರೈಮರಿ ಎಂಟರಾದ ಡಾಕ್ಟರ್ ಕೆ. ವಿಠಲ ಶೆಟ್ಟಿಯವರು ಹಾಜರಿದ್ದರು. ಅಭಿಮನ್ಯು ಪಾತ್ರ ಧಾರಿಣಿಯಾಗಿ ಅಭಿನಯಿಸಿದ ಕುಮಾರಿ ಸುಶೀಲಾ ಹೆಬ್ರಿ ಇವಳ ಅಭಿನಯವು ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ಈ ಬಾಲಕಿಯ ಅಭಿನಯವನ್ನು ಮೆಚ್ಚಿ ಅನೇಕರು ಬಹುಮಾನಗಳನ್ನು ಕೊಟ್ಟರು. ಅಭಿಮನ್ಯುವಿನ ಪಾತ್ರಕ್ಕೆ ಸಂಬಂಧಪಟ್ಟ ಸಂಭಾಷಣೆಯನ್ನು ಒಪ್ಪಿಸಿದ ಬಾಲಕಿಯರಿಗೂ ಬಹುಮಾನಗಳನ್ನು ಕೊಡಲಾಯಿತು. ಕೊನೆಯಲ್ಲಿ ಶ್ರೀ ಡಾಕ್ಟರ್ ಯು. ಎಲ್. ನಾರಾಯಣ ರಾವ್, ಡಾಕ್ಟರ್ ಮಾಧವ ಪೈ ಮತ್ತು ಡಾಕ್ಟರ್ ಸುಂದರರಾಯ ಪೈಗಳಿಗೆ ಸಹಾಯಕ್ಕಾಗಿ ವಂದನೆಯನ್ನರ್ಪಿಸಿ ಇತರ ಸಹಾಯಕರಿಗೆ ಆಭಾರ ಸೂಚಿಸಿದರು. ಎಸಿಸ್ಟೆಂಟ್ ಕಮಿಷನರ್ ಶ್ರೀ ಎ. ರಾಮರಾಯ ಲಕ್ಷ್ಮೀನಾರಾಯಣ ರಾಯರು, ಡಾಕ್ಟರ್ ಯು. ಎಲ್. ನಾರಾಯಣರಾಯರು ಉಡುಪಿ ಪಟ್ಟಣಕ್ಕೆ ಮಾಡಿರುವ ಅಪಾರ ದಾನಗಳನ್ನೆತ್ತಿ ಹೇಳಿ ಅವರ ಅಪಾರತೆಯನ್ನೆನ್ನು ಪ್ರಶಂಸಿಸಿ ಅಧ್ಯಕ್ಷ ಪೀಠ ವಹಿಸುವಂತೆ ಸೂಚಿಸಿದರು. ಡಾಕ್ಟರ್ ಮಾಧವ ಪೈಗಳು ಅನುಮೋದಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೋರ್ಡು ಹೈಸ್ಕೂಲಿನ ಹಿಂದಿನ ಮತ್ತು ಇಂದಿನ ಪರಿಸ್ಥಿತಿಯನ್ನು ವಿವರಿಸಿ ಅದರ ಮುಖ್ಯೋಧ್ಯಾಪಕರನ್ನು ಪ್ರಶಂಸಿಸಿ ಸಭಾಸದನದ ಆವಶ್ಯಕತೆಯನ್ನು ವಿವರಿಸಿ ಹೇಳಿ, ನಾಟಕವನ್ನು ಜಯಶೀಲವಾಗಿ ಪ್ರದರ್ಶಿಸಿದುದಕ್ಕಾಗಿ ಬಾಲಕಿಯರನ್ನು ಅಭಿನಂದಿಸಿದರು. ಜಿಲ್ಲಾ ಬೋರ್ಡು ಪ್ರೈಮರಿ ಎಂಟರು ಅರಿಷ್ಟಾಟಿ ಪ್ರದೇಶವಾದ ಹೆಬ್ರಿಯ ಬಾಲಕಿಯರು ನಾಟಕಶಾಲೆಯ ಕುರಿತು ತೋರಿಸಿರುವ ಪ್ರೌಢಿಮೆಯನ್ನು ಪ್ರಶಂಸಿಸಿ ಅವರನ್ನು ತರಬೇತಿ ಮಾಡಿರುವ ಶಿಕ್ಷಣದಾತ ಶ್ರೀ ಸದಾಶಿವ ರಾಯರ ಕುರಿತು ಮೆಚ್ಚುಗೆ ಸೂಚಿಸಿದರು. ಬ್ರಹ್ಮಾವರದ ಶ್ರೀ ಲಕ್ಷ್ಮೀನಾರಾಯಣ ರಾಯರು ಅಡಿಗರು ಶ್ರೀ ಸದಾಶಿವ ರಾಯರ ಪರವಾಗಿ ಎಲ್ಲರಿಗೂ ವಂದನಾರ್ಪಣೆಯನ್ನಿತ್ತರು. ಡಾಕ್ಟರ್ ಸುಂದರರಾಮ ಪೈಗಳು ತಾಲೂಕು ಕಮಿಟಿಯ ಪರವಾಗಿ ನಾಟಕ ಪ್ರದರ್ಶನಕ್ಕೆ ಬೇರೆ ಬೇರೆ ರೀತಿಯಲ್ಲಿ ಸಹಾಯನೀಡಿದವರಿಗೆಲ್ಲಾ ವಂದನೆಯನ್ನರ್ಪಿಸಿದ ನಂತರ ನಾಟಕದ 'ಕೊನೆಯ ದೃಶ್ಯ'ವು ಅಭಿನಯ ಸಲ್ಪಟ್ಟು ಸಮಾರಂಭವು ಕೊನೆಗೊಂಡಿತು. ಈ ನಡುವೆ ಶ್ರೀ ಸದಾಶಿವರಾಯರಿಗೆ ಕೊಂಡು ಪ್ರಶಸ್ತಿ ಪತ್ರವನ್ನು ಮುನಿಸಿಪಲ್ ಚೇಯರ್‌ಮನ್ ಶ್ರೀ ಎ. ಕೆ ನಂಜಿತ್ತರು. ಅಧ್ಯಕ್ಷರು ನಾಟಕದಲ್ಲಿ ಪಾತ್ರ ವಹಿಸಿದ ಮಕ್ಕಳಿಗೆ ಕಪ್ ಮತ್ತು ಇತರ ಸಾರಿ ತೋಷಕಗಳನ್ನಿತ್ತರು.

ನುಟ್ಟ ಮೊಕದ್ದಮೆ—'ಮಟ್ಟಿಕೇಸ್' ಎಂದು ಪ್ರಸಿದ್ಧವಾಗಿರುವ ಕಡಪಾಡಿ ಬಳಿಯಿಲ್ಲಿ ನೆದಿದ್ದ ತೆಂಗಿನ ಪೂಜಾರಿ ಕೊಲೆಯ ಸಂಬಂಧದ ವಿಚಾರಣೆಯು ಸೆಷನ್ಸ್‌ಲ್ ವೆ ಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆದ ಇದೇ ತಾ. 15ರಲ್ಲಿ ವೆ.ಜಿಸ್ಟ್ರೇಟರ ತೀರ್ಪಾಗಿದೆ ಅಪಾದಿತರಲ್ಲಿ ಎಂಟು ಮಂದಿ ಬಿಡುಗಡೆ ಹೊಂದಿ 15 ಮಂದಿ ಸೆಷನ್ಸಿಗೆ ಕಮಿಟ್ ಮಾಡಲ್ಪಟ್ಟಿರುವರು. ಕೆಲವಿಟ್ ಆಗಿರುವವರಲ್ಲಿ ನಾಲ್ಕು ಮಂದಿ ಪರಾರಿಯಾಗಿದ್ದು ಇನ್ನೂ ಅವರು ಪತ್ತೆಯಾಗಿಲ್ಲ. ಈ ಖಟ್ಲೆಯಲ್ಲಿ 50ಕ್ಕೂ ಮಿಕ್ಕಿ ಸಾಕ್ಷಿಗಳ ವಿಚಾರಣೆಯಾಗಿತ್ತು.

ಕಾಳಿಕಾ— ಕೃಷ್ಣ ಧರ್ಮದಿಂದ ಹಿಂದುಗಳಾಗಿ ಮತಾಂತರವಾದ ತೀರ್ಥಹಳ್ಳಿ ಸಾಹುಕಾರ್ ಶ್ರೀ. ಚಾಮೇಂದ್ರ ಪ್ರಭುಗಳ ಪುತ್ರ ಶ್ರೀ. ವೀರೇಂದ್ರರು ಶ್ರೀ. ಬೇಲೂರು ಶ್ರೀನಿವಾಸ ಕೆಮ್ಮಿಂಜೆ ರ ಪುತ್ರಿ ಶ್ರೀಮತಿ ಗಿರಿಜಾದೇವಿಯನ್ನು ಕಳದ ತಾ. 7-6-42ರಲ್ಲಿ ವೇದೋಕ್ತ ವಿಧಿಯಂತೆ ಕಾರ್ಕಳದಲ್ಲಿ ವಿವಾಹಮಾಡಿದರು. ಈ ವಿವಾಹ ಸಂತೋಷಾರ್ಥವಾಗಿ ಶ್ರೀ ಚಾಮೇಂದ್ರ ಪ್ರಭುಗಳು ಕಾರ್ಕಳ ಅಯ್ಯನವಾಪ ಭವನಕ್ಕೆ ರೂ. 100ನ್ನೂ ಕಾರ್ಕಳ ದೇಶೀಯ ಆರ್ಯ ಕ್ಷತ್ರಿಯ ಸಭೆಗೆ ರೂ. 10ನ್ನೂ ದಾನಮಾಡಿದ್ದರು.

ಶ್ರೀ ನಿಂಜೂರಮಜ ಎಚ್. ಇ. ಶಾಲೆಯ ಶ್ರೀ ನಾಣಕ ಪೈಯ ಸ್ಮಾರಕ ಕಟ್ಟಡದ ಉದ್ಘಾಟನೆಯನ್ನು ಜಿ. ಮೋ. ಅಧ್ಯಕ್ಷೆ ಡಾ| ಕೆ. ವಿಟ್ಠಲಪೈಯವರು ನೆರವೇರಿಸಿದರು.

ಪುತ್ತೂರು— ಶ್ರೀ. ಬಿ. ವಿ. ರಮಣ, ಬಿ. ಎ. ಎಲ್ ಬಿ. ಇವರು ಪುತ್ತೂರು ರೇಂಜಿನ ಸಿಂಗಲ್ ಡಿ. ಇನ್ಸ್‌ಪೆಕ್ಟರಾಗಿ ಬಾಡುಗೆ ವಹಿಸಿಕೊಂಡಿರುವರು.

ಮೂಡಬಿದ್ರೆ—ಇಲ್ಲಿಯ ಅಸಿಸ್ಟಾಂಟ್ ಕಮಿಷನರ್‌ರವರಿಗೆ ಪರಿಷತ್ತಿನಿಂದ ಸನ್ಮಾನ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿದುಬರುತ್ತದೆ.

FURTHER REDUCTIONS IN LENDING RATES.

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business A further reduction in accordance with seasonal conditions will be made early if the present conditions continue.

CANARA BANK LIMITED.

Estd. 1906.

ಸುವರ್ಣ ಪದಕ ಬಹು ಮಾನ!

1941ನೇ ಅಖಿಲ ಕರ್ನಾಟಕ 12ನೇ ಆಯುರ್ವೇದ ಸಮ್ಮೇಲನ (ಮೈಸೂರು ಸಂಸ್ಥಾನ) **ದ ಪ್ರದರ್ಶನದಲ್ಲಿ ಸುವರ್ಣ ಪದಕ ಮತ್ತು ಪ್ರಶಸ್ತಿ ಪತ್ರಿಕೆಗಳನ್ನು ಬಹುಮಾನ ಪಡೆದ**

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್) **ಕುಂಜಾಲು,**

ಇವರ ಖಾತ್ರಿ ಔಷಧಗಳನ್ನೇ ಸದಾ ಉಪಯೋಗಿಸಿರಿ

ಬಾಲಾಮೃತ (ಮಕ್ಕಳ ರಕ್ಷಿವರ್ಧಕ)	0	12	0
ಆಮಲಕೀ ತೈಲ (ಸುಖನಿದ್ರೆಗೆ) ಸ್ಪೂನ್ದು.	0	6	0
,, ,, ,, ದೊಡ್ಡದು.	0	11	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ಪ್ರಸೂತಾಮೃತ (ಪ್ರಸವೆಯರಿಗೆ) Regd.	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಸುಪೂತ ಕಲ್ಯಾಣ (ಪ್ರಸವೆಯರಿಗೆ)	0	4	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) 2ಕ್ಕೆ	0	7	0
,, ,, ,, ,, 6ಕ್ಕೆ	0	2	0

1939ರಲ್ಲಿ ಶಿರ್ಸಿಯಲ್ಲಿ ಜರಗಿದ ಅಖಿಲ ಕರ್ನಾಟಕ 11ನೇ ಆಯುರ್ವೇದ ಸಮ್ಮೇಲನದಲ್ಲಿಯೂ ಪ್ರಶಸ್ತಿ ಪತ್ರಿಕೆ ದೊರಕಿದೆ.

ನಮ್ಮಲ್ಲಿ ಎಲ್ಲಾ ತರದ ಔಷಧಗಳೂ ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

ಏಜಂಟರಿಲ್ಲದ್ದಲ್ಲಿ ಏಜಂಟರು ಬೇಕು.

Swadeshi Oushadhi Bhandar,

(RLD.) **Kunjal Post.**

ಉಡುಪಿ ಸ್ವಾಕೆಪ್ಟರು:—ನವಭಾರತ ಬುಕ್ ಡಿಪೊ.

ಹುಬ್ಬಳ್ಳಿ ಸ್ವಾಕೆಪ್ಟರು:—ಪೆರಮೌಂಟ್ ಟ್ರೇಡಿಂಗ್ ಕೊಹರ್‌ರೇಶನ್

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಚಾಪೆಗಳಿಗೆಸಮುದ್ರಿಸಿದೆ. ಇದರಲ್ಲಿ ಎಲ್ಲ ಪ್ರೇಮದ ಪಕ್ಕೆ ಇಕ್ಕೆಗಳು ವೇಷಿಸುವ ರಹಸ್ಯಗಳು,



ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ತಿಳಿಯಬೇಕಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವೈಚಿತ್ರಾಗಳು. ಸ್ತ್ರೀಯರಿಗೆ ರಹಸ್ಯಗಳು, ಮುತ್ತಿಡುವ ವಿಧಗಳು, ಕೈಯ್ಯಗಳ ಪ್ರಯೋಗ ಮತ್ತು ಸಂಭೋಗಕಾಲದ ಮಮ್ಮಲಗಳು, ಇನ್ನೂ ಅನೇಕ ಸ್ತ್ರೀ ತಿಯ, ನ. ಪ್ರಿಯ, ಸಲಿಗೆಯ ವಿಷಯ ರಹಸ್ಯಗಳ ಸಂಗ್ರಹ ಪುಸ್ತಕವು ಅಡಗಿವೆ 300 ಪುಟಗಳುಳ್ಳ ದೊಡ್ಡ ಪುಸ್ತಕ

ಪುಸ್ತಕ ಒಂದಕ್ಕೆ ಕೃಯ ರೂ 1-4-0

ಜೀವನ ಟ್ರೇಡಿಂಗ್ ಕಂಪೆನಿ

260. ಬೈನಾಬಾರ್ ರೋಡ್, ಮದರಾಸ್

ಶತ್ರುಗಳ ಪ್ರಚಾರವನ್ನು ನಂಬಿ ತನ್ನ ಜೀವಮಾನದಲ್ಲಿ ಉಳಿಸಿಟ್ಟದ್ದನ್ನೆಲ್ಲಾ ಅವನು ಕಳೆದುಕೊಂಡನು



1 ಜನರು ಗಾಬರಿಗೊಂಡಿರುವಾಗ ಬಣಜಿಗನಿಗೆ ಸುಗ್ಗಿಯ ಕಾಲ. ಅವನಿಗೆ ಒಳ್ಳೆ ವ್ಯಾಪಾರವಾಗುವುದು. ಪ್ರಸಾದ್‌ಗೆ ತನ್ನ ಬೆಲೆಯುಳ್ಳ ಸೊತ್ತುಗಳನ್ನು ಮಾರಲು ಸುಲಭವಾಗಿ ಕಾಣುತ್ತದೆ—ಅವುಗಳ ಅರ್ಧ ಬೆಲೆಗೆ.

2 ಕೈಸ್ಸೆ ಸ್ವಜನ್ಸಿನವ್ವ ಪ್ರಸಾದ್ ಮತ್ತು ಆತನ ಹೆಂಡತಿಯು ಗಾಡಿಯಲ್ಲಿ ಜಾಗಕ್ಕಾಗಿ ಹುಡುಕಾಡುತ್ತಾರೆ ಇವರಂತೆಯೇ ಸಾವಿರಾರು ಜನರು ಇತರರೂ ದಿಗಿಲು ಬಿದ್ದಿರುತ್ತಾರೆ ಕೈಚಲ್ಲಿನವ್ವ ಸಾಮಾನುಗಳು ಉಳಿದು ಹೋಗುತ್ತವೆ ಮತ್ತು ಸುಕ್ಕುಳಿಗ ಧಾರಾಳವಾಗುತ್ತದೆ

3 ಮೊದಲ ದೇವಪ್ಪ ಕೆಲಸಮ್ಮವನೆಯೊಳಗೆ ಸುತ್ತು ದುಡಿ ಮಾಗಿಯೂ ಪ್ರಸಾದ್ ಸ್ಪರ್ಧಿಸಲು ಪ್ರತ್ಯೇಕ ಸತ್ಕಾರವನ್ನು ಏರ್ಪಡಿಸಿದರೆ ಅವರಲ್ಲಿ ಒಂದರ ಒಂದು ಒಂದಾಗಿ ಕೆಲಸ ಹೋಗುತ್ತಿದೆ ಮತ್ತು ಪಟ್ಟಣಕ್ಕೆ ಆಮದು ಆಗುತ್ತಿರುವುದಿಲ್ಲ ಪ್ರಸಾದ್ ಅವರ ಕಂಪನಿಯ ಷೇರುಗಳ ಬೆಲೆಯೂ ಬಹಳಷ್ಟು ಕುಸಿಯುತ್ತಿದೆ ಮತ್ತು ಅವನ ಹೆಂಡತಿಯು ಬಹಳ ವ್ಯಸನಪಡುತ್ತಿರುತ್ತಾಳೆ

4 ಕೊನೆಗೆ ಶತ್ರುಗಳ ತಂತ್ರವೆಲ್ಲಾ ತಿನ್ನಲು ಹದವಾಗುವುದಕ್ಕಾಗಿ ಮಳ್ಳುಗಳನ್ನು ಪ್ರಚಾರಿಸುತ್ತಿದೆಯೆಂದು ತಿಳಿದುಕೊಂಡು ಪ್ರಸಾದ್ ತನ್ನ ಕಾಲಕ್ಕೆ ಪುನಃ ಸಂಪಾದಿಸುವುದಕ್ಕಾಗಿ ಪಟ್ಟಣಕ್ಕೆ ಬಂದಾಗ ಎಲ್ಲಾದನ್ನೂ ಅಸ್ತಿ ಮೇಲೆ ದಿಗಿಲು ಬೀಳುವುದಿಲ್ಲವೆಂದು ಅವನ ನಿರೀಕ್ಷೆಯಾಗಿತ್ತು!

5 ತನ್ನ ಸಾಮಾನುಗಳಲ್ಲಿ, ಕೆಲವನ್ನು ಕೊಂಡುಕೊಳ್ಳುವವನೆಲ್ಲಿ ಹೋದಾಗ, ಬಣಜಿಗನು ಸಾಮಾನುಗಳನ್ನು ಜಾಸ್ತಿ ಕೊಂಡುಕೊಂಡು ಬೆಲೆಗೆ ಕೊರುವುದಿಲ್ಲ ಸೂರ್ತಿ ಚಿಲೆಯನ್ನು ಕೇಳುತ್ತಾನೆ ಪ್ರಸಾದ್ ಚಿಲ್ಲು ಚಿಲೆಯನ್ನು ಕೊಟ್ಟು ಸಾಮಾನುಗಳನ್ನು ಕೊಂಡುಕೊಳ್ಳುವುದಿಲ್ಲ, ಪ್ರಸಾದ್, ತನ್ನ ಅಂದು ಬುದುಕ.ತನದಿಂದ ತಾನು ತನ್ನ ಜೀವನವನ್ನಲ್ಲ ಉಳಿಸಿಟ್ಟದ್ದನ್ನೆಲ್ಲಾ ಕಳೆದುಕೊಂಡನೆಂಬ ತಿಳಿವಳಿಕೆಯನ್ನು ಪಡೆಯುತ್ತಾನೆ

ಬಿ.ಬಿ.ಸಿ. ಮತ್ತು ಎ.ಐ.ಆರ್.

ಸಮಾಚಾರಗಳಿಗೂ ಮತ್ತು ಪ್ರೋಗ್ರಾಮ್‌ಗಳಿಗೂ ರೇಡಿಯೋವನ್ನು ತಿರುಗಿಸಿ

ಶತ್ರುಗಳು ಪ್ರಚಾರವನ್ನು ನಂಬಿ ಬೇಡ

ಜಪಾನಿಯರನ್ನು ಎದುರಿಸುವುದಕ್ಕಾಗಿ ಭಾರತೀಯ ದೇಶದ ಯುದ್ಧ ಮುಖಿಗಳಾಗಿರಿ

ಶತ್ರುಗಳ ಪ್ರಚಾರವು ಸಾಮಾನ್ಯವಾಗಿ, ಉದ್ದೇಶಪೂರ್ವಕವಾಗಿ, ಯೋಚನಾಶಕ್ತಿಯಿಲ್ಲದ ಜನರನ್ನು ಹದುಳಿಸಿ ಸುಳಿಯಲ್ಲಿ ಸಿಕ್ಕಿಸುತ್ತದೆ ಅವರ ಒಡ್ಡಿರಬೇಕೆಂದರೆ ನಿಮ್ಮನ್ನು ಹದುಳಿಸಿ, ನಿಮ್ಮ ಕೆಲಸದಿಂದ ನಿಮ್ಮನ್ನು ಓಡಿಸಿ ಇಂತಿಯಾ ದೇಶವನ್ನು ಒಲಿಪೀಸ ಮಾಡುವುದು ಅವರ ಬಿ ಬಿ ಸಿ ಮತ್ತು ಎ ಐ ಆರ್ ಪ್ರಚಾರಗಳು —ನಿಜವಾದ ಪ್ರಚಾರಗಳು—ನಿಜವಾದ ಸಂಗತಿಗಳನ್ನು [illegible] ನಿಮಗೆ ಸಹಾಯ [illegible] ಸಾಧ್ಯವಾದಷ್ಟು ಬೇಗ ಶತ್ರುಗಳನ್ನು ಸೋಲಿಸಲಿಕ್ಕಾಗಿ ಏರ್ಪಡಿಸಲ್ಪಟ್ಟಿರುವ ಸಂಸ್ಥೆಗಳಲ್ಲಿ ನಿಮ್ಮ ಶ್ರೇಷ್ಠವಾದ ಸೇವೆಯನ್ನು ಸಾಮಾನ್ಯವಾಗಿಯೂ, ವಿಶೇಷವಾಗಿಯೂ ಸಲ್ಲಿಸಿರಿ.

ಸಮಾಚಾರ ಸಂಗ್ರಹ

(ಆಸೇ ಪುಟದಿಂದ ಮುಂದರಿದುದು)

ವಿಚಿ ಫ್ರಾನ್ಸಿನ ಸಾಲ.

ವಿಚಿ ಫ್ರಾನ್ಸು ಜರ್ಮನಿಗೆ 64,580,000,000ಫ್ರೇಂಕು ಅಂದರೆ ಸುಮಾರು 1,291,600,000 ದೇಶಲರು ತೆರಬೇಕಾದುದ್ದು ಭಾಕಿ ಉಳಿದಿರುವುದು. ಜರ್ಮನ್ ಸೇನೆಯು ಫ್ರಾನ್ಸನ್ನು ಆಕ್ರಮಿಸಿ ರುತ್ತಿರುವುದಕ್ಕಾಗಿ ದಿನಕ್ಕೆ 300,000,000ಫ್ರೇಂಕ್ ತೆರಬೇಕಾಗಿದ್ದು ಈ ವರೆಗೆ 42,507,000,000 ಫ್ರೇಂಕುಗಳನ್ನು ತೆರುವುದು.

ನೆಹರುಗಳ ಸಂಪೂರ್ಣ ಒಪ್ಪಿಗೆ.

ಬ್ರಿಟಿಷರು ಕೂಡಲೆ ಹಿಂದುಸ್ಥಾನವನ್ನು ಕ್ರಮವಾಗಿ ಬಿಟ್ಟುಹೋಗಬೇಕೆಂಬ ಮಹಾತ್ಮ ಗಾಂಧಿಯವರ ಅಭಿಪ್ರಾಯಕ್ಕೆ ತನ್ನ ಸಂಪೂರ್ಣ ಒಪ್ಪಿಗೆ ಇರುತ್ತದೆ ಬ್ರಿಟಿಷ್ ಪಾರ್ಲಿಮೆಂಟಿನ ಗೋಂಟು ಮತ್ತು ಸಂಯುಕ್ತ ಪ್ರಾಂತಿನ ಪಬ್ಲಿಕೆಯಿಂದ ಪಂಡಿತರು ಸಂಪೂರ್ಣ ನಿರಾಶೆಗೊಂಡಿರುವರೆಂದು ತಿಳಿದುಬರುತ್ತದೆ ಫೆಸಿಸ್ಟ್ ಮತ್ತು ಆಕ್ಸಿಸ್ ಪಾಲುಗಾರರು ಹಿಂದುದೇಶದ ವೈರಿಗಳೆಂಬುದೇನೋ ನಿಜ, ಆದರೆ ಹಿಂದುದೇಶವು ಬಂಧವಿಮೋಚನೆ ಯೊಂದುವವರೆಗೆ ಬ್ರಿಟಿಷಿನ ವಿರೋಧವಾದ ಪೋರಾಟವು ನಡೆಯಲೇ ಬೇಕು. ಈ ನಡುವೆ ಜಪಾನರು ಹಿಂದುದೇಶವನ್ನು ಆಕ್ರಮಿಸಿದರೆ ಅವರನ್ನು ಪ್ರತಿಭಟಿಸಬೇಕು. ಅಮೆರಿಕಾದವರು ಹಿಂದಿಯರ ಮಿತ್ರರು. ಆದರೆ ಅಮೆರಿಕಾದ ಸೇನೆಯು ಹಿಂದೂದೇಶಕ್ಕೆ ಬಂದುಬಿಡುವುದು ಹಿಂದಿಯರಿಗೆ ಹಿತವಾಗಿಲಾರದೆಂದು ನೆಹರುಗಳು ಹೇಳಿ, ಗಾಂಧಿಜಿಯವರು ಹೊಡುವುದರಲ್ಲಿರುವ ಸಾಮುದಾಯಿಕ ಚಳವಳಿಯ ಪರಿಣಾಮವು ಕುರಿತು ಬಹಳ ಅರಿವಾದಿಯಾಗಿದ್ದು, ಪ್ರತಿಂಗಳುಗಳಲ್ಲೇ ಅವರ ಪರಿಣಾಮ ನೋಡಬಹುದೆಂದಿರುವರು. ಕೇವಲ ಲೋಕದ ಕಣ್ಣಿಗೆ ಮಣ್ಣುಹಾಕುವುದಕ್ಕಾಗಿ ಬ್ರಿಟಿಷ್ ಸರಕಾರವು ಕ್ರಿಪ್ಸರ ಮೂಲಕ ಸಂಧಾನ ನಡಿಸಿ ಅದು ಜಯಶೀಲವಾಗದ್ದರಿಂದಲೇ ಉದ್ವೇಗಪೂರ್ವಕವಾಗಿ ಅದನ್ನು ಮುರಿದು ಹಾಕಿರುವುದು. ಹಿಂದಿಯರಿಗೆ ನಿಜವಾದ ಅಧಿಕಾರ ಕೊಡುವ ಮನಸ್ಸೇ ಸರಕಾರ ಕ್ರಿಪ್ಸರವ್ವನ್ನು ಮೊದಲಾನೆ ಅಜಾನರ ಅಭಿಪ್ರಾಯ ಪಟ್ಟಿರುವರು. ತನಗೂ ಸಾಮುದಾಯಿಕ ಚಳವಳನ ಪರಿಣಾಮ ಅನುಕೂಲಕರವಾಗಿಯೇ ಇರಲಿಲ್ಲ.

ದಾರಿ ಹೋಕನ ಡೈರಿ

ಹೆಬ್ರಿ ಬೋರ್ಡು ಹೈಸ್ಕೂಲಿನ ಎಲಿಮೆಂಟರಿ ತರಗತಿ ಬಾಲಿಕೆಯರು ಅಭಿನಯಿಸಿದ ವೀರ ಅಭಿಮನ್ಯು ನಾಟಕವನ್ನು, ವಿಶೇಷವಾಗಿ ಅಭಿಮನ್ಯು ಭೂಮಿಕೆಯನ್ನು ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೆ ಹೊಗಳಿವಷ್ಟು ಸಾಲದು ಆರೆಘಟ್ಟ ಪ್ರದೇಶದ ತನ್ನೊಂದು ತರಾ ಬಾಲಿಕೆಯರು ಅಭಿನಯಿಸಿದ ನಾಟಕವೆಂಬ ಅಭಿಮಾನವು ಸ್ವಭಾವತಃ ಗುಣ ಪಕ್ಷಪಾತಿ ಪ್ರೆಸಿಡೆಂಟರನ್ನು ಅತಿಶಯೋಕ್ತಿಗೆ ಮುಂದೂಡಿದೆಯೆಂದು ನಾನು ಹುಸಿ ನಗುತ್ತಿದೆ. ಒಳಗಿಂದೊಳಗೆ ಪ್ರೆಸಿಡೆಂಟರು ನನ್ನೆದುರಲ್ಲಿ ಹೊಗಳಿಕೆಯ ಜಡಿಮಳೆ ಸುರಿಸುವಾಗ,

೦೦ ೦೦ ೦೦

ಕಳೆದ ಶನಿವಾರ ಉಡುಪಿಯಲ್ಲಿ ನನಗೇ ಈ ನಾಟಕ ನೋಡುವ ಸಂದರ್ಭ ಸಿಕ್ಕಿತು. ಪ್ರೆಸಿಡೆಂಟರ ಸ್ತುತಿಯನೆಗೆ ನಿಜವಾಗಿಯೂ ಬಾಲಿಕೆಯರೂ ತಮ್ಮನ್ನು ತರಬೇತುಮಾಡಿದ ಕರ್ನಾಟಕದ 'ಜ್ಞೈಂಡ್ ಸಿಂಗರ್' (ಕುರುಡು ಗಾಯಕ) ಶ್ರೀ ಸದಾಶಿವರಾಯರೂ ಪಾತ್ರರಿರುವರು. ಅಭಿಮನ್ಯು, ಅರ್ಜುನ, ಕೃಷ್ಣ ಮೊದಲಾದ ಪಾತ್ರಗಳು ಉತ್ತಮವಿದ್ದುವೆಂಬುದರಲ್ಲಿ ಸಂದೇಹವೇ ಇಲ್ಲ

೦೦ ೦೦ ೦೦

ಆದರೆ ಏನುಬೇಕಾಯಿಲ್ಲದ ಸ್ತುತಿಯೆ ಸಪ್ಪೆಯೇಸರಿ. ವಿಮರ್ಶಾತ್ಮಕ ಹೂಗಳಿಕೆಯೇ ನಿಜ ಹೊಗಳಿಕೆ. ಮೊದಲಾಗಿ ವೀರ ಅಭಿಮನ್ಯು ನಾಟಕದಲ್ಲಿ ಅಭಿಮನ್ಯು ಪಾತ್ರದ ಬೆಳವಣಿಗೆಗೆ ಸರಿಹೊಂದದ ಗಮನ ಕೊಡಲ್ಪಟ್ಟಿರುವುದಿಲ್ಲ ನಾಟಕದ ಕೊನೆಯಲ್ಲಿ ಆ ವೀರಾಗ್ರಣಿಯನ್ನು ಹೇಡಿಯಾಗಿ ನಾಯುವಂತೆ ಮಾಡಿ ಸರ್ವತಂತ್ರ ತುದಿಯಿಂದ ಒನ್ಮೆಯೇ ಮೊಂದಕ್ಕೆ ಹೊತ್ತು ಹಾಕಲಾಗಿದೆ. ಎಷ್ಟೊಂದು ಮುಖವಾದ ಕರ್ಣನ ಪಾತ್ರಕ್ಕೆ ಸ್ಥಾನವೇ ಇಲ್ಲ. ಕುಂತಿ, ಉತ್ತರೆ, ಧರ್ಮರಾಯ ಮೊದಲಾದ ಕೆಲವು ಪಾತ್ರಗಳನ್ನು ಬಿಟ್ಟರೆ ಚಿಕ್ಕ ಹುಡುಗಿಯರಿಗತ್ತು ಅಸಹಾಸ್ಯಕ್ಕೀಡಾಗುವಂತಿದೆ ಈ ದೂಷಣೆಗಳೆಲ್ಲವಿರುತ್ತಿದ್ದರೂ ನಾಟಕವು ಸುತ್ತೂ ಉತ್ತಮವಾಗುತ್ತಿತ್ತು

೦೦ ೦೦ ೦೦

ನಾಟಕದಲ್ಲಿ ಸಂಗ್ರಹವಾದ ಹಣವು ಉಡುಪಿ ಬೋರ್ಡು ಹೈಸ್ಕೂಲಿನಲ್ಲಿ ಹೋಲು ಕಟ್ಟಲು. ಸಣ್ಣದೂ ಸಾಲದೆಂದು ತಿಳಿದ ಒರತ್ತಿದ ಉಡುಪಿ ಪಟ್ಟಣಕ್ಕೆ ಯೋಗ್ಯ ಹಾಗೂ ಕಾರ್ಯಾಚರಿತ ಹೋಲಿಲ್ಲದೆ ಬಹಳ ತೊಂದರೆಯಾಗಿದೆ ದಿವಂಗತ ಶ್ರೀ ಟೀಸಾರಿ ಸ್ವಭಾಗಾ ಕಾರ್ಕಳ-ಕ್ಕೆಂಗಾರು ಎಕಲೆಮಿಕ್ ಹೋಲನ್ನು ಕಟ್ಟಿಸಲು ಮುಂದಾಗಿದ್ದಾರೆ ಅದೇ ರೀತಿ ಉದಾರ ಜಾಗಿಯಾದ ಡಾಕ್ಟರ್ ಯು ಎಲ್ ನಾರಾಯಣರಾಯರು ಉಡುಪಿಯ ಈ ಕೊರತೆಯನ್ನು ನಿವಾರಿಸಲು ಮನಸ್ಸು ಮಾಡುವರೇ?

೦೦ ೦೦ ೦೦

ಕಳೆದ ವಾರ ನಾನು ಮಂಗಳೂರಿಗ ಹೋದವನು ಮಿತ್ರರೊಬ್ಬರೊಂದಿಗೆ ಒಂದೆಡೆ ಸಿಟಿಬಸ್ಸಿಗಾಗಿ ಕಾದು ನಿಂತಿದ್ದೆ. ಬಸ್ಸು ಬರಲು ಸ್ವಲ್ಪ ಸಮಯವಿತ್ತು ನಾನೂ ಮಿತ್ರರೂ ಹತ್ತಿರದ ಚಿಕ್ಕದಾದೊಂದು ಅಂಗಡಿಗೆ ಹೋದೆವು. ಅಂಗಡಿಯಲ್ಲಿ ನುಡಿಕ ಕೆಥೋಲಿಕನೊಬ್ಬನು ಕೂತಿದ್ದನು. ಜನನೊಡನೆ ಮಾತಾಡುತ್ತ ಆತನ ಕರುಣ ಕತೆಯನ್ನು ನಾವು ತಿಳಿದುಕೊಂಡೆವು. ಕರಗಿ ಮೋಯಿತು ದೆವು. ನಮ್ಮ ಹೃದಯ ಗೊಡ್ಡು ಧರ್ಮವೆಷ್ಟು ಹೃದಯಂಹತನಾದುದೆಂದ ನಾವು ಹೆಳ

೫(ಸೇ ಪುಟ ನೋಡಿರಿ.)

ಯುದ್ಧೋಪಕರಣಗಳು ಅವುಗಳ ಬೆಲೆ

ತುಪಾಕಿ ಗುಂಡಿನಿಂದ ಬಾಂಬು ವಿಮಾನಗಳವರೆವಿಗೆ, ಕೆಲವು ಯುದ್ಧೋಪಕರಣಗಳನ್ನು, ಅವುಗಳ ಬೆಲೆಯೊಡನೆ ಇಲ್ಲಿ ನಿರೂಪಿಸಲಾಗಿದೆ.

ನೀವು ಡಿಸೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ನಿಯೋಜಿಸುವ ಪಣವು, ಆಕ್ರಮಣ ಶೀಲನಾದ ವೈರಿಯ ಧಾಳಿಯಿಂದ ನಿಮ್ಮನ್ನು ಮತ್ತು ನಿಮ್ಮದೇಶವನ್ನು ರಕ್ಷಿಸಲು ಅವಶ್ಯಕತನಾದ ಈ ಉಪಕರಣಗಳನ್ನು ಕೊಳ್ಳಲು ನೆರವಾಗುತ್ತದೆ.

ಕರ್ತವ್ಯ ಮತ್ತು ಲಾಭಕ್ಕಾಗಿ ಕೊಳ್ಳಿರಿ

ಮಷಾಕಿಗುಂಡು ೧ ರೂಗೆ

ಮಶಿನ್‌ಗನ್ ರೂ ೧,೫೦೦


ಬಾಂಬಿನಜೀಪು ಒಂದಕ್ಕೆ ೨ ರೂಗೆ


ಲಘು ವಿಮಾನವಿನಾಶಕ ಫಿರಂಗಿ ರೂ ೪೦,೦೦೦

ಪಿಸ್ತೂಲು ರೂ ೫೦

ಹೋರಾಟ ವಿಮಾನ ರೂ. ೧,೪೦,೦೦೦

ರೈಫಲ್ ರೂ ೧೦೦

ಮಧ್ಯಮನಾಶಕ ಟ್ಯಾಂಕ್ ರೂ ೨,೫೬,೦೦೦

ಟಾಮಿಗನ್ ರೂ ೨೫೦

ಬಾಂಬು ವಿಮಾನ ರೂ ೨ ಲ ೦೦೦

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಪ್ರತಿ ರೂ. ೧೦/- ಗೆ ರೂ. ೧೫/- ಲಾಭ ಮತ್ತು ಪುಸ್ತಕ ವಿವರಗಳಿಗೆ ಪೋಸ್ಟಾಫೀಸುಗಳಿಂದ

ಇಂಡಿಯಾದ ಯುದ್ಧಶಕ್ತಿಯನ್ನು ಬೆಳೆಸಿರಿ

DIAMONDS! DIAMONDS!

K. R. K. SHET.

Opposite Govt. College, Hampank. tta MANGALORE.

SHOW-ROOM & WORKS SHOP

SUPERFINE UP TO DATE CUTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್ಸ್ಟ್ರ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡು ಕೊಳ್ಳುವವರಿಗೆ ಬಜಾರ್ ಧಾರಣೆಗಿಂತ ೨ ಪರ್ಸಂಟ್‌ಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒನ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗದೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು

FIXED DEPOSITS

are now accepted at all our offices, at attractive rates of interest. For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಜೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಸ್ವತಂತ್ರರಾಗಿ ನಡ್ಯುತ್ತಾರೆ. ಒಬ್ಬಳ ಸ್ತ್ರೀಯರ ಬಿಳಿಕೆರಗು, ಸ್ರವದರೋಗ, ಪೊಳಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಬೆಳಿಗ್ಗೆ ಮಧ್ಯಾಹ್ನಕ್ಕೆ ರಾತ್ರೆ ಊಟದ ಮೊದಲು ತೆಗೆದುಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಟ್ಟಿನಲ್ಲಿ ಸೇವಿಸಬೇಕು

ಹಣ್ಣಿ.— ಪರಸೀಸಲ್ಲೆ ಬಿಡಬೇಕು ೭ ದಿವಸ ನಂರ್ಣಾ ಔಷಧದ ಕಿಮ್ಮತ್ತು ರೂಪಾಯಿ ೫—೦—೦ ಪೋಸ್ಟ ಖರ್ಚು ೦ ೬ ಜೆ

ಮಾಲಕರು —**ಹಾಲಹಸ್ಯಾ ಫಕೀರಪ್ಪಾ ಧಾತಾಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ವಿಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಮುದ್ರಕ ಪ್ರಕಾಶಕ—ಹುಬ್ಬಳ್ಳಿ, ಗದಗ, ಬಳ್ಳಾರಿ ಧಾರವಾಡ ವಿಜಾಪುರ — ಮಾನಕ ಪ್ರಿಂಟಿಂಗ್ ಪ್ರೆಸ್ ಧಾರವಾಡದ ವಿಜಾಪುರ ಚಿಕ್ಕೋಡಿಯಲ್ಲಿ — ಸಂಪಾದಕರು ಸ್ವಾಮಿ ದಾಗೇರಿ — ಡಾವಣಗೆರೆ ಪ್ರೆಸ್ಸ್. ಬಳ್ಳಾರಿ — ಎಚ್ ವಿರುಪಾಕ್ಷಪ್ಪ ವರ್ಕಂಟ್, ಬಳ್ಳಾರಿ ಗೋಕಾಕ —ಸಂಗಪ್ಪ ಶಿವಲಿಂಗಪ್ಪ ಅಂಬಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಮುಖ್ಯ ಕಾರ್ಯಾಲಯ — **ಕೋರ್ಟ್ ರಸ್ತೆ, ಉಡುಪಿ** ನಕ್ಷಿಣ ಕನ್ನಡ

ಶೇತ್ತ ಮೂಲಧನ .. . ರೂ 1,82,100 0- 0
ಕ್ಷೇಮ ನಿಧಿಗಳು ... .. ರೂ 1 71,898-2-11

ಶಾಖೆಗಳು — ಉಡುಪಿ, ಮಂಗಳೂರು, ಕುಪಾಡಿ, ಕಾಂಞಂಗಾಡ್
ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.

ವಾರಾಟಿಕೆ ಯುಕ್ತವಾದ ದಿವಸಗಳ, ಚಿನ್ನಾಣಗಳು, ಸರಾಫಾಕರವಾದ ಒಳ್ಳೆ ಭದ್ರತೆಗಳ ವಿರುದ್ಧ ಡಿಮಾಂಡ್ ನೋಟುಗಳ. ಬೀಲು ಹುಂಡಿಗಳ ವಿರುದ್ಧ ಸಾಲಗಳು ವಿಶೇಷ ಸೌಲಭ್ಯಗಳು ತೃಪ್ತಿಕರವಾದ ಷರತ್ತುಗಳಲ್ಲಿ ವರ್ತಕರಿಗೂ ಇತರರಿಗೂ ಬ್ಯಾಂಕಿನ ಪ್ರತಿ ಶಾಖೆಯಲ್ಲಿಯೂ ಮಾಡಿಕೊಡಲ್ಪಡುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ

ಹೆಚ್ಚಿನ ಮಾಹಿತಿಗೆ ನೋಟಿಸು ಅಥವಾ ಪತ್ರವ್ಯವಹಾರ ಸಮೀಪದ ಶಾಖೆಯ ಲ್ಲಿ ವಿಚಾರಿಸಿ.

UDIPI, 16th April

ಈ ವಾರದ ಭವಿಷ್ಯ.

(ಕಳೆದ ಪುಟದಿಂದ ಮುಂದುವರಿದುದು.)

ಕ್ಕೆ ಬರಲಿದೆ ಮನೋರೋಗವು ಬಹು ಮಟ್ಟಿಗೆ ಶಾಂತವಾಗಬಹುದು ತಾ 18. 19 20 23.21 25 ಈ ದಿನಗಳಲ್ಲಿ ಸುಖ ಇಷ್ಟಸಿದ್ಧಿ, ಭೂಗಾದಿಗಳಿಂದ ಲಾಭಪ್ರಾಪ್ತಿ ಸಂದಿಂದ ಲಭಿಸುವದು

ವೃಶ್ಚಿಕ—ನಿಮಗೆ ದೈವವು ಸಂಪೂರ್ಣ ಪ್ರತಿಕೂಲವಾಗಿರುವದರಿಂದ ಯೋಜಕ ಲಿದಲ್ಲಿ ಯಾರಿಂದ ಯಾವ ತರವಾದ ವಿಪತ್ತುಗಳು ಒರಲವಂದು ಊಹಿಸಲೂ ಕೂಡಾ ಶಕ್ಯವಿಲ್ಲ ನಿಮ್ಮ ಆಸ್ತಿಪ್ರಕರಣಕ್ಕೆ ಸಂಬಂಧಿಸಿದಲ್ಲಿ ನಿಮ್ಮ ವಿರೋಧಿಗಳೇ ಸಂಪೂರ್ಣ ನಿಮಗೆ ಪ್ರತಿಕೂಲವಾಗಿ ವರ್ತಿಸುವರು ನಿಕ್ಕಟ್ಟುಬಂಧುಗಳು ಕೂಡಾ ನಿಮ್ಮ ಮಾತಿನಂತೆ ನಡೆಯಲಾರರು ದೇಹಾರೋಗ್ಯ, ಆರ್ಥಿಕ ಪರಿಸ್ಥಿತಿ, ವ್ಯರ್ಥ ಖರ್ಚುಗಳು, ಕಲಹ ಇತ್ಯಾದಿ ಅನರ್ಥ ಶತಗಳಿಂದ ಚಿಂತ ಕುಲರಾದ ನಿಮಗೆ ತಾ 18 23 21 25 ರಾಶಿಬಲ, ಬಂಧನ ಮುಂತಾದವುಗಳಿಂದ ವಿಶೇಷ ಪ್ರಾಸಿಕಾರಿಗಳಾಗಿವೆ

ಧನು—ಒಳ್ಳೇ ಪ್ರಾಮಾಣಿಗಳಿಂದ ವಿಜಕ್ಷಣರೂ ಆದ ನಿಮಗೆ ಜನತೆಯ ಪೂರ್ಣ ಬೆಂಬಲವಿರುವದು ನಿಮ್ಮ ಸಂರಕ್ಷಕ ಸರಿಸ್ಥಿತಿಯು ಉತ್ತಮಗೊಳ್ಳುವದು ಶತ್ರುವರ್ಗದವರಿಂದ ಸಂಭವಿಸಿದ ಧನನಷ್ಟ ಯಾ ಮಾನಹಾನಿ ಇತ್ಯಾದಿಗಳಿಂದ ನಿಶ್ಚಿಂತರಾಗಿರಿ ವಿಶ್ವಸ್ತ ವ್ಯಕ್ತಿಗಳಿಂದ ಸಂಪತ್ತಿನ ಸಂಬಂಧದಲ್ಲಿ ಸಹಾಯ ಪ್ರಾಪ್ತವಾಗುವದು, ತಕ್ಕ ಪ್ರತಿಕ್ರಿಯೆಯನ್ನು ಮಾಡಲು ನೀವು ಶಕ್ತರಾಗಿರಿ ವಿರೋಧಿಕರಿಗೂ ನೌಕರ ಜನರಿಗೂ ಸೇವಕ ವರ್ಗದವರಿಗೂ ದಿನಗಳು ಅನುಕೂಲವಿರಿವ ವಸ್ತು ಸಾರಾಂಶೈಪ್ರ ದಿನಗಳು ಶುಭಕರ ವಾದ ದಿನಗಳಾಗಿವೆ

ಮಕರ—ಇಷ್ಟೆ ಗ್ರಹರಿಂತಲೂ ಅನಿಷ್ಟಕಾರೀ ಗ್ರಹರ ಬಲವು ದ್ವಿಗುಣವಿರುವುದರಿಂದ ನಿಮಗೆ ಸಂಕಟಗಳು ಹೆಚ್ಚಿವೆ ಚೆನ್ನಾಗಿರದು ಗೃಹಕೃತ್ಯದಲ್ಲಿ ಮನಸ್ತಾಪ ಅನ್ಯವಸ್ತುಗಳು ತಲೆದೋರುವವು ಉತ್ಪತ್ತಿಗಿಂತ ಖರ್ಚು ದ್ವಿಗುಣವಿರುವುದರಿಂದ ಹೊಸದ ತೊಂದರೆಗೆ ಸಿಲುಕುವಿರಿ ತಂದೆಯಿಂದ ನಿತ್ಯ ಕಲಹವಾದೀತು. ಆದರೂ ಬಂಧುಗಳ ನೆರವು ಉತ್ತಮವಿರುವುದರಿಂದ ವಿರೋಧಿಗಳ ಪೀಡೆಗೊಳಗಾಗಲಾರಿರಿ ತಾ 18 23.21.25 ಉತ್ತಮವಿದೆ.

ಕುಂಭ—ಎಂತಹ ಜನವೃಂದಕ್ಕಿಂತ ನಿಮ್ಮ ಸ್ಥಿತಿಯೇ ಉತ್ತಮವೆನಿಸಿರುವುದು, ಧರ್ಮಸಂಸ್ಥೆಗೆ ಬೇಕಾದ ರಕ್ಷಿಯು ನಿಮಗೆ ನಿಮ್ಮಲ್ಲಿರುವುದರಿಂದ ಶತ್ರುಜರಾಗಿರುವ ನಿಮ್ಮ ಆಪ್ತಯನ್ನೇ ಬಯಸುವರು, ಗೃಹೋಪಕರಣಗಳು ಪರಿಪೂರ್ಣವಾಗಿರುವುದರಿಂದ ಸಂಸಾರಿಕ ತೊಂದರೆಯಿಂದ ಮುಕ್ತರಿರುವಿರಿ ಕೆಲವೊಮ್ಮೆ ಅತ್ಯಾಸೆಯಿಂದ ವಿರಸದಿಂದ ಮನಶ್ಚಾಂಚಲ್ಯ ವುಂಟಾದೀತು ಪಾರುಪತ್ಯ ೩ ದಿನಗಳು ಅನುಕೂಲವಿದ್ದರೂ ಮುಂದಿನ ದಿನಗಳಲ್ಲಿ ರಾಜಭಯ ಅಪಘಾತಾದಿಗಳು ಕಂಡುಬರುವವು

ಮೀನ—ಸ್ನೇಹಿಗರ ಪರಸ್ಪರ ವಿಶ್ವಾಸವೇ ಕಾರಣವಲ್ಲವೆ ಸಂಬಂಧವು ಕಾರಣ ವಾಗಿರಲಿ ಇದರ ಅನುಭವವು ನಿಮಗೀಗ ಆಗಲಿ ಒಂದೆಗೆಂಬ ಅಭಿಮಾನ ವ್ಯರ್ಥವೆ ಪ್ರಾಪ್ತವಾದ ಜಾತಕತನ ವಿವಿತೀರ್ಣವಾದೀತು ಕೈಯಲ್ಲಿದ್ದ ಧನವು ಕಾರಣ ನಿಮಗೆ ಜೇಷ್ಠಾಗ ಬರಲಿ ಎಂಬ ಸಿಮಿತ್ತ ಚಿಂತೆಗೊಳಗಾಗುವಿರಿ ಆದರೆ ಗೃಹಸಂಬಂಧ ಅಥವಾ ಗೃಹಿಗೆ ಸಂಬಂಧಿಸಿದ ಶುಭಕಾರ್ಯವು ಒಲಗಡ್ತಿರೋಧಿಸಿದ್ದನ್ನು ಪರಿಹರಿಸುವ ಶಕ್ತಿ ನಿಮಗಿರುವುದು ತಾ ೧೮ 20 21 22 ಅನುಕೂಲವಿದೆ

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.



ನನ್ನ ಸಂಸ್ಥೆಯಲ್ಲಿ ತಯಾರಿಸಲ್ಪಟ್ಟಿರುವ ಕನ್ನಡ ಸಿಲಿಕ್ಕ ಎಲ್ಲಾ ಕಳ್ಳರಿಗೂ ಪ್ರಯೋಜನಕಾರಿಯಾಗಿರುವುದಲ್ಲದೆ ಇಂಗ್ಲೀಷಿನ ಶಕ್ತಿನ್ಯಾಸಾಧಾರಣ ಶಬ್ದಗಳನ್ನೂ, ಬರವಣಿಗೆಯಲ್ಲಿ ಕಲಿತ ಕಾಗುಣಿತ 884 ಪಾಠಗಳು ಇರುವ ಪತ್ರಿಕೆ ಕಳ್ಳ ಪ್ರತಿಗಳು ಸಿದ್ಧವಿವೆ, ಬೆಲೆಯ ಮಿಂಬಿ ಕೈಪತ್ರಿಕೆಯಿಂದ್ಕಾಗಿ 2 2 0

(ಪ್ರತಿಯು ಮದ್ರಾಸು) THE MODERN BOOK Co.
No 1 Avadhanam Papier 2nd Line (N V) Chooloi MADRA

ಪ್ರೇಮವಿದ್ಯಾಪೀಠ, ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ವ್ರತನಿರ್ಣಯದಂತೆ ಇಲ್ಲಿಯ ಮಾಡಿಕಲ್ ಕೊರ್ಸಿನ ಶಿಕ್ಷಣವು ಎರಡನೆ ಜೂನ್ಯ 15ನೇ ತಾರೀಖಿಗೆ ಪ್ರಾರಂಭವಾಗುವದು ನಿಮಿಲ ಭಾರತ ಆರು ಸೀಜ ಪರೀಕ್ಷಾ ಮಂಡಲದ 'ಬಿಪಕ್' ಪರೀಕ್ಷೆಗೆ ಬೇಕಾದ ಶಿಕ್ಷಣವು ಕೊಡಲ್ಪಡುವದು

ಮೆಟ್ರಿಕ್, ಎನ್ ಜಿ (ಸುತ್ತು ಈ ಪರೀಕ್ಷೆಗೆ ಇತರರೀಕ್ಷೆಗಳಿಗಾಗಿ ಶಿಕ್ಷಣ ಪಡೆಸಿದವರು ಇಲ್ಲಿ ಸೇರಬಹುದು ಪ್ರವೇಶಕ್ಕಾಗಿ ಸಿವರು ಈ ಜೂನ್ ತಿಂಗಳ ಕೊನೆಯೊಳಗೆ ನಮಗೆ ಬರೆದು ಸೂಚಿಸಿ ತಿಳಿಸಿಕೊಳ್ಳಬೇಕು

ಇಲ್ಲಿಯ ಪರೀಕ್ಷೆಗಳಲ್ಲಿ ನಾನಾ ದೇಶೀಯ ವೈದ್ಯರು ಈಗಲೇ ಡಿಸ್ಟಿಕ್ಟ್ ಬೋರ್ಡು, ಮುನ್ಸಿಪಾಲಿಟಿ, ಗವರ್ನಮೆಂಟ್ ರೂರಲ್ ಮಾಡಿಕಲ್ ಸರ್ವಿಸ್ ಇತ್ಯಾದಿಗಳಲ್ಲಿಯ ಜಾಗೆಗಳಲ್ಲಿ ನಿಯುಕ್ತಿಪಟ್ಟಿದ್ದಾರೆ ಎಷ್ಟೋವೆ, ಎಂದಾ ನಾರಾಯ ವೈದ್ಯರು ಅಂದ್ರ, ಕರ್ನಾಟಕದಲ್ಲಿ ಸಂತೃಪ್ತರಾಗಿದ್ದು ಜನಸೇವೆ ಮಾಡುತ್ತಾ ಧನ, ಮಾನ, ಯಶಸ್ಸುಗಳನ್ನು ಪಡೆಯುತ್ತಿದ್ದಾರೆ.

ವಿಶೇಷ ಮಾಹಿತಿಗಾಗಿ ಒಂದೂವರೆ ಆಣೆಗಳ ಸ್ಟಾಂಪು ಇಟ್ಟು ಬರೆಯಿರಿ.

ಪಂಡಿತ ತಾರಾನಾಥ
ಪ್ರಿನ್ಸಿಪಾಲ್

REGD.

ಅಮೃತಾಂಜನ

ತಲೆವೇದನೆ, ನರೋನೇದನೆ, ಉಳುಕು, ಕುತ್ತಿಗೆ, ಭುಜ, ಪಲ್ಲುನೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಜೇಳು ವಿಷ ಮುಂತಾದ ಜೀನೆ, ಪಕ್ಷಘಾತ, ಪೊಡಿಮೆ ನೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆ ಹುಣ್ಣು, ವ್ರಣ ನೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಹುಳುಕಡ್ಡಿ ಮದ್ದು

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತೆ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಪಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಒಳ್ಳೆಯ ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗು ವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ರದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್. ಪೂಂಜ,
ಪ್ರಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯು ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ವಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : ಮಂಗಳೂರು.

ಸೀರೆಗಳು

ಸ್ವದೇಶೀ ಕೃಷಿಗಳಿಂದ ನಮ್ಮ ಜನರಿಂದಲೇ ತಯಾರಾಗುವ ಉಗಿನ ಅಚ್ಚರಿಜಗೆ ಬಿಸ್ಸುವ ಎಲ್ಲ ತರದ ಸೀರೆಗಳು ಒಗೆ ಒಗೆಯ ಬಣ್ಣವಲ್ಲ ಆಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ

ಪಿ. ಎ ಹೈ. ಬ್ರದರ್ಸ್,
ಅಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ.

ಉಡುಪಿ.

ಮೇಲ್ದರಗತಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶೇಷ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,
ಮಣಿಪಾಲ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊದಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಟವಾಗಿ ಕನ್ನಡಿಗರ ಮನೆಯನ್ನ ಲಂಕರಿಸಿವೆ; ಮನವನ್ನು ಸೆಳೆದಿವೆ.

ಹನ್ನೆರಲ ಅತ್ಯುತ್ತಮ ಪುಸ್ತಕಗಳು

೧	ಯೋಗಾಯೋಗ	ಬೆಲೆ ೧ ೮ ೦	೭	ಭಯಂಕರ ಸೇಡು	ಬೆಲೆ ೧ ೮ ೦
೨	ಭೀಷಣ ಸಾಹಸ	ಬೆಲೆ ೦ ೧೪ ೦	೮	ಮೋಹಿನಿ	ಬೆಲೆ ೧ ೮ ೦
೩	ಕರಿನೀರು	ಬೆಲೆ ೨ ೦ ೦	೯	ಅಮಾತ್ಯಕಂದಿನಿ	ಬೆಲೆ ೧ ೮ ೦
೪	ಭಗವಾನ್‌ದಾಸ	ಬೆಲೆ ೧ ೦ ೦	೧೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
೫	ಅವಿವಾಹಿತರ ಸಮಸ್ಯೆ	೧ ೦ ೦	೧೧	ವೀರರಾಜ ವಿಜಯ	೦ ೧೨ ೦
೬	ಸಪ್ತ ಗತಿ	೦ ೪ ೦	೧೨	ಪಾಣಿಗ್ರಹಣ	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಪಾವೇರಿ

ಉಡುಪಿ ಏಜಂಟರು- ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಪಾಯಕ್ಕೊತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ ತೂಕ ಹೆಚ್ಚುವುದು. ಇದು ಮಧುವಾರಗಿದೆ

ಆಶೆ ಬಟ್ಟಿರುವ ನಿಮ್ಮ ಮಕ್ಕಳ ತರುಣಿ ನಿಮ್ಮ ಕೈ ಸೇರುವುದು

ಸೀಸೆ ೧ಕ್ಕೆ ೧೨ ಆಣೆ;

ಟಿ. ಪಿ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ವಾಕೆಸ್ಟರು:— ನವಭಾರತ ಬುಕ್ ಡಿಪೋ, ಉಡುಪಿ.

ಸ್ಥಾಪನೆ [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಪೈನ್ ಬೋರ್ಡ್ ಜವಾನರ ಬೇಜು, ಮೊನೋಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt, Mysore.

Certified by the Agent of the Govt of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಷ್ಟೈರು ಮಾಡಲ್ಪಟ್ಟ ಔಷಧ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾಹ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೆಲ್ಲರಿಗೂ ಸುಲಭವಾಗಿರುವುದು.

೧ ಡ್ಜನ್ನಿತ ಬಾಟ್ಲಿಗಳು ಹೆಚ್ಚು ಕಡಿಮೆ ಆವಿವಸರಗಳಿಗೆ ಬರುವವು. ಅಂದರೆ ಕೇವಲ ಆರೋಗ್ಯವಂತರಿಗೂ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲ್, ಮಂಗಳೂರು.

EDITED BY K. K SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪನೆ

ನವಯುಗ

ಜಾಹೀರಾತು ದರ.

(ಒಂದು ಬಾರಿಗೆ)

1 ಪುಟಕ್ಕೆ ... ರೂ 25-0-0
½ ,, .. ರೂ. 15-0-0
¼ ,, ... ರೂ. 8-0-0
⅛ ,, ... ರೂ. 5-0-0
ಕಲಂ ಇಂಚಿಗೆ... ರೂ. 1-0-0

ಕಂಟ್ರಾಕ್ಟ್ ದರಗಳಿಗೆ ಬರೆಯಿರಿ.

ಮೆನೇಜರ್,

ನವಯುಗ ಉಡುಪಿ.



ಸಂಪುಟ ೨೧
Vol 21

FOUNDER
Sri A B Shetty, M. L. A.

ಸಂಚಿಕೆ ೪೨
No. 42

ಉಡುಪಿ **25—6—1942** ಮಂಗಳೂರು

TOURISTS ONLY IDEAL RESORT

CAFE' ROYAL

(REGISTERED)

SHIVALLI BRAHMINS

High class boarding & lodging house

HOSPITAL ROAD, UDIPI

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ
ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊದೆದೋಡಿಸಬಲ್ಲ. ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬಂಗೋಲಿನಂತಿರುವ ವಿಸಿಯು ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾತಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ,ಮನೆಯಲ್ಲಿ ನಗೆಯ ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟಿಡ್,

ಉಡುಪಿ : . ದ. ಭಾರತ.

THE CANARA MUTUAL ASSURANCE COMPANY, LIMITED.

UDIPI : : : : S INDIA

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರುಸ್ಯಾಂಡಲ್ ಸೋಪ್

ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

DOMINATE THE AIR and WIN!

Give to the

GOVERNOR'S WAR FUND

and provide

MORE PLANES!

ಗನೋರಿಯಾ ಪರಿಣಾಮದಿಂದ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ರೋಗದಿಂದ ಕೀವು ಬರುತ್ತಿದ್ದರೆ, ಧೋರೆರಕ್ಕೆ ಹರಿದೀಡಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ರೋಗದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಬೆಗ್ಗಂದ್ರ, ಗಂಡುಮೂಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಾಯಿಂದ ಗರ್ಭಕೋಶ ನಾರವೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನಗಳಿಗೆ ಈ ನಮ್ಮ ಔಷಧವು ಇದು ವದು ಮೊದಲ ದಿವಸ ಬೆಳ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ಕುಪ್ಪ ದಲ್ಲಿ ತಕ್ಕೊಳ್ಳಬೇಕು ನೊದಲ ದಿವಸ ಮಾತ್ರ ವವಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು ಮುಂನೆದ ದಿವಸ ಬೆಳ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯನ್ನು ತುಪ್ಪದಲ್ಲಿ, ಇಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹೆಸರುಬೇಳೆ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿಗೆ ಒಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ

ವಿಶೇಷಟರು:—ಗದಗ ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ— ಬಾಗಲಕೋಟೆ ಫಾರ್ಮಸಿ, ಧಾರವಾಡ—ಧಾರವಾಡ ಫಾರ್ಮಸಿ, ಡಾವಣಗೇರಿ:—ಡಾವಣಗೇರಿ ಪೈಂಟ್

ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ

ಮಾಲಕರು ವಿಳಾಸ **ದೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,**
ಆಯುರ್ವೇದ ಔಷಧಾಲಯ ಸರ್ಕಲ್

ಸಮಾಚಾರ ಸಂಗ್ರಹ

80,000 ವೈಮಾನಿಕರು.

ಅಮೆರಿಕವು ವರ್ಷಕ್ಕೆ 80,000 ವೈಮಾನಿಕರನ್ನು ತರಬೇತಿಮಾಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೈಕೊಂಡಿದೆ. ಸಂಭವನೀಯವಾಗಿ ಅತ್ಯಂತ ಉತ್ತಮ ಮತ್ತು ಕಠೋರ ಯುವಕರು ಕಠಿಣ ಪರೀಕ್ಷೆಯ ನಂತರ ವೈಮಾನಿಕ ತರಬೇತಿಗೆ ಆರಿಸಲ್ಪಡುತ್ತಾರೆ

ಚೀನದ ಸಹಾಯಕ ನಿಧಿ

ಚೈನದ ಸಹಾಯಕ್ಕಾಗಿ ಇಂಗ್ಲೆಂಡಿನಲ್ಲಿ 7,31, 428,57 ಪೌಂಡುಗಳ ಸ್ಟರ್ಲಿಂಗ್ ಹಣವು ಸಂಗ್ರಹಿಸಲ್ಪಟ್ಟು ಅದನ್ನು ಮೆಡಮ್ ಚ್ಯಾಂಗ್ ಕೈಶೆಕ್‌ರಿಗೆ ಇತ್ತೆಂಬಾಗಿ ಕಳುಹಿಸಲಾಗಿದೆ.

ದಿನಕ್ಕೆ 1000 ಪ್ರಾಣಹಾನಿ

ರಸ್ಯದ ರಣರಂಗದಲ್ಲಿ ಪ್ರತಿದಿನ ಸುಮಾರು 4000 ಜರ್ಮನ್ ಸೈನಿಕರು ಕೊಲ್ಲಲ್ಪಡುತ್ತಿರುವರೆಂದು ಅಂದಾಜು ಮಾಡಲಾಗಿದೆ. ಉತ್ಸಾಹಿ ಜರ್ಮನ್ ಯುವಕರು ಇಷ್ಟರಲ್ಲೇ ಪ್ರಾಣ ಕಳಕೊಂಡು ಇಂದೀಗ ಕೇಳು ತರಗತಿಯ ಸೈನಿಕರು ಹೋರಾಟ ನಡಿಸಬೇಕಾಗಿದೆ. ರಸ್ಯದ ಸೇನೆಯು ನವೀನವಾಗಿ ತರಬೇತಿ ಪಡೆದಿದ್ದು ಉತ್ತಮವಾದುದಾಗಿದೆ

10,000 ನರ್ಸುಗಳ ತರಬೇತಿ.

ಚೀನೀ ನರ್ಸುಗಳ ತರಬೇತಿ ಸಂಸ್ಥೆಯು 10,000 ನರ್ಸುಗಳನ್ನು ತರಬೇತಿ ನೀಡುವ ಕಾರ್ಯಕ್ರಮವನ್ನು ಕೈಕೊಂಡಿರುತ್ತದೆ. ಹ್ಯಾಸ್ಪಿಟಲು ಮತ್ತು ಕೊಲೆಜುಗಳ ಪೆಡುಗಿಯರು ಕೂಡಾ ಸ್ವಸಂತೋಷದಿಂದ ನರ್ಸುಗಳಾಗಿ ಸೇರಿ ತರಬೇತಿ ಹೊಂದುತ್ತಿದ್ದಾರೆ

ಅಮೆರಿಕದ ಯುದ್ಧ ವೆಚ್ಚ

ಕಳೆದ ತಿಂಗಳಲ್ಲಿ ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು 3,500,000,000 ಡೋಲರುಗಳನ್ನು ಯುದ್ಧ ಪ್ರಯತ್ನಕ್ಕಾಗಿ ವ್ಯಯಿಸಿರುವುದು. ಕಳೆದ 10 ತಿಂಗಳುಗಳಲ್ಲಿ ಆದು 23,130,000,000 ಡೋಲರು ಖರ್ಚು ಮಾಡಿರುವುದು ಅಮೆರಿಕವು ಈಗ ಯುದ್ಧವೆಚ್ಚಕ್ಕಾಗಿ ದಿನಕ್ಕೆ 100,000,000 ಡೋಲರು ವ್ಯಯಮಾಡುತ್ತಿರುವುದು.

ಜರ್ಮನಿಯ ಸುಲಿಗೆ

ಯುರೋಪಿನ ನಾಝಿ ಆಕ್ರಮಿತ ದೇಶಗಳಿಂದ ಜರ್ಮನಿಯು ಪ್ರತಿ ವರ್ಷ 1,123,000,000 ಪವನುಗಳನ್ನು ಬಹುತೇಕ ನಾಮಾನುಗಳ ರೂಪದಲ್ಲಿ ಲಪಟಾಯಿಸುತ್ತಿರುವುದು. ಇದರಿಂದ ಈ ದೇಶಗಳಲ್ಲಿ ಬರಗಾಲದ ಪರಿಸ್ಥಿತಿಯುಂಟಾಗಿ ಜನತೆಯ ಜೀವನ ಪ್ರಮಾಣವು ಬಹಳ ಕಳತೆಗೆ ಮುಟ್ಟಿರುತ್ತದೆ.

ನಾಝಿ ಭೀಕರತೆ

ತುವು ಆಕ್ರಮಿಸಿರುವ ರಾಷ್ಟ್ರಗಳಲ್ಲಿ ನಾಝಿಗಳು ತಮ್ಮ ವಿರೋಧಿ ಜನರನ್ನು ಸೆರೆಮನೆಯಿಗಳಂತೆ ಬೇಟೆಯಾಡಿ ಕೊಂದು ಹಾಕುತ್ತಿರುವರು. ಮಾತ್ರವಲ್ಲದೆ ಕಳೆದ ಏಪ್ರಿಲ್ ತಾ. 26ರ ಹಿಟ್ಲರರ ಭಾಷಣದ ನಂತರ ಜರ್ಮನಿಯಲ್ಲಿಯೇ ನಾಝಿ ಆಳ್ವಿಕೆಯ ಭೀಕರತೆಯು ಹೆಚ್ಚಿರುವುದು.ಹಿಟ್ಲರರ ಬೆವರಿಕೆಯಿಂದ ಉದ್ಭವಿಸಿರಾದ ನ್ಯಾಯಾಧೀಶರು ಸಣ್ಣ ಪುಟ್ಟ ತಕ್ಷೀರುಗಳಿಗೂ ಮರಣದಂಡನೆ ವಿಧಿಸಹತ್ತಿರುವರು. ದಿನವೊಂದಕ್ಕೆ 10 ಜನರು ಮರಣದಂಡನೆಗೊಡಾಗುವರು. ಆದರೂ ನಾಝಿಗಳ ವಿರುದ್ಧ ತಕ್ಷೀರುಗಳು ಅಧಿಕವಾಗುತ್ತಿರುವವು. ನಾಝಿ ಪಾರ್ಟಿ ಮತ್ತು ಜರ್ಮನ್ ಸೇನೆಗಳೊಳಗೆ ತೀವ್ರ ವೈಷಮ್ಯವುಂಟಾಗಿರುವುದು. ಹೆಲವು ಮಂದಿ ಪ್ರಮುಖ ಜರ್ಮನ್ ಸೇನಾನಿಗಳು ಹಿಟ್ಲರರಿಗೆ ವಿರುದ್ಧವಿರುವರೆಂದು ತಿಳಿದುಬರುತ್ತದೆ.

ನೋಟಿಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

R E P. No 801/41, O S No. 336/37

ಪಂಚರಿಯಾನೆ ಸರಕ್ಕತಿ – – – ಅರ್ಜಿದಾರಳು.

ಮತ್ತು

ಕಲ್ಯಾಣಿಯಾನ ಉಮಾಸುಂದರಿ – ಲೈಫ್ ಇಂಟ್ರೆಸ್ಟೆಂದ್‌ಬ್ ಕಲ್ಯಾಣಿಯಾನ ಉಮಾಸುಂದರಿ, ಗವರ್ನರ್ ಫೀಲ್ಡ ಸಕೆರಿಯರ ಹೆಂಡ್ತಿ, ಮೈಸೂರ್ ಮಾರ್ಕೆಟ್‌ಬಾರ್ಡ್, ಮಂಗಳೂರು ರದರ್.

ಮೇಲೆ ಹೇಳಿರುವಾದ ವ್ಯಾಜ್ಯದಲ್ಲಿ ವಿಕ್ಕಿಹೊಂದಿರುವಳಿದ ಅರ್ಜಿದಾರಳು ಸ್ಥಿರಸ್ತಿಗಳ ವಿಗ್ಗೆ ಒಕ್ಕಣಿಕೆ ಒಳಗೆ ಆಪ್ತ ಮಾಡಿದ್ದಾಳೆ ಅಮದರಿಂದ ವಿಶ್ವಾಯದ ಇಸ್ತಿರಾನ ಪತ್ರಗಳನ್ನು ನಿರ್ಣಯಿಸಲಿಕ್ಕೆ 1942ನೇ ಇಸಿ ಜುಲೈ ತಿಂಗಳು 11 ನೇ ತಾರೀಕು ನಿಶ್ಚಯಿಸಲಾಗಿದೆಯಿಂದ ನಮಗೆ ಇದರಿಂದ ಬಿಸಿನೋಟಾಗುತ್ತದೆ ಸಾಗೆ ಸಲು ನಾ ಬ್ರಾಗವ ಇದ್ದು ಇವ್ಯ ಆಕ್ಷೇಪಣೆಯನ್ನು ಪಟಳಾಳ್ಳಬ್ದಲ್ಲಿ ನಮ್ಮಲಿಖಾ ಶಬ್ದಿ ಮೇಲಿನ ದಿನಗಳನ್ನು ಒಪ್ಪಿಯಿಸಲಾಗುವುದು

ಮಂಗಳೂರು 16-6 1942 } S Venkat Rao. ಅರ್ಜಿದಾರಳ ಕಡೆ ವಕೀಲ್.

Degrees Books Medicines

Free H. L. M. S. M. B. H. M. D. etc Free Homeo Ayur Unani-Naturo degree by post also—Practitioners also get soon Homeo Materiamedica Rs. 5 Homeo Practice book Rs 4 Insanity Cure Pill Rs 10 Enclose 2 annas stamp:—

Principal Indian Homeopath Institute & Society (Govt. Regd.)

P O. Mahuva, (Kathiawar Dt, India.)

Sidha-Kalpa Kavach (Regd.)

No 3 Rs 2, No 2 Rs. 5 No. 1 Rs. 7. Special Rs 10, Extra Special Rs. 17. for ove marriage health, wealth Ask any six questions with M O Re 1/4 and get correct answers by return post Life reas Rs phil. No V. P P S.nd M. O. Fred

P. O ts **Prof. Dr N H. Chhatbar.**

2npam Mahuva (Kathiawar India.)

ಬಲಪಡಿಸಿರಿ ಈ ಸರಪಳಿಯನ್ನು.

ತನ್ನ ವಸಾಹತುಗಳೊಂದಿಗೂಡಿದ ಬ್ರಿಟನ್, ಅಮೆರಿಕ, ಇಂಡಿಯ, ರಸ್ಯ, ಚೀನ ಈ ಬೃಹದ್ಬಾಹ್ಯಗಳು ಒಂದುಗೂಡಿ, ಈ ಜಗತ್ತಿನ ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳ ಬಾಳನ್ನೂ, ಸ್ವಾತಂತ್ರ್ಯವನ್ನೂ ನಾಶ ಮಾಡಲು ಪ್ರಯತ್ನಿಸುತ್ತಿರುವ ರಾಷ್ಟ್ರನೀಚಶಕ್ತಿಗಳ ಆಕ್ರಮಣವನ್ನು ನಿರೋಧಿಸುತ್ತಿವೆ.

ಈ ರಾಷ್ಟ್ರಗಳವರ ಉದಾರವಾದ ಸಾಧನ ಸಂಪತ್ತಿ, ಅವರ ಉತ್ತಮ ಶ್ರಮಶಕ್ತಿಗುಣ ಶಕ್ತಿ, ಅವರ ವಿಜಯಸಾಧನ ನಿಶ್ಚೆ, ಇವೆಲ್ಲ ಶ್ರಿಂತಲಂ ನಿಜ್ಯಾಗಿ, ಅವರ ಯುದ್ಧ ನ್ಯೀಯದ ನ್ಯಾಯಬೀಲತೆ ಇವು ಕೊನೆಯಲ್ಲಿ ಈ ಸಂಯುಕ್ತ ರಾಷ್ಟ್ರಗಳವರಿಗೆ ವಿಜಯವನ್ನು ದೊರಕಿಸುವುದೆಂಬುದು ಖಂಡಿತ.

ಸ್ವಾತಂತ್ರ್ಯ ರಕ್ಷಣೆಗಾಗಿ ಕೈಗೊಳ್ಳಲ್ಪಟ್ಟ ಉಪಜ ಈಗಗೀಗಲೇ ಸಾಲವನ್ನು ನಡೆಸಲು, ಕೋಟ್ಯಾಂತರ ರೂಪಾಯಿಗಳು ಬೇಕು. ಅದಕ್ಕಾಗಿ ನೀವು ಧನಸಹಾಯಮಾಡಿರಿ. ವಿಜಯಸಾಧನೆಯನ್ನು ತ್ವರಿತ ಗೊಳಿಸಲೂ ನಿಮ್ಮ ಸುರಕ್ಷತೆ, ಆಪಾಯ ನಿವಾರಣೆಗೆ ಸಾಧನವಾಗಿಯೂ, ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಉಳಿಸಿ, ಅದನ್ನು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ನಿಯೋಜಿಸಿರಿ

ಪ್ರತಿ ರೂ. ೧೦/- ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ರೂ. ೫/೯/– ಲಾಭಕೊಡುತ್ತೆ

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು.

ನಿಮ್ಮ ಪೋಸ್ಟಾಫೀಸಿನಲ್ಲಿ ದೊರೆಯುತ್ತದೆ

ಇಂಡಿಯಾದ ಯುದ್ಧಶಕ್ತಿಯನ್ನು ಬೆಳೆಸಿರಿ

ವಾರದ ವಿಶೇಷ ವಾರ್ತೆ

ಕ್ಕರ ಹೊಸ ಮುಸ್ಲಿಮ್ ಲೀಗು.

'ಪ್ರೊಗ್ರೆಸ್ಸಿವ್ ಆಲ್ ಇಂಡಿಯಾ ಮು ಮ್ ಲೀಗ್' ಎಂಬ ಪ್ರಗತಿಪರ ಮು ಮ್ ಲೀಗೊಂದನ್ನು ಬಂಗಾಳದ ುಖ್ಯ ಮಂತ್ರಿಗಳಾದ ಶ್ರೀ. ಹಕ್ಕರು ಪ್ರಾರಂಭಿಸಿರುವರು. ಇಂದಿನ ಮುಸ್ಲಿಮ್ ೀಗು ಇಸ್ಲಾಮ್ ಧರ್ಮಬಾಹಿರವಾಗಿದೆ. ದರಲ್ಲಿ ಜಿನ್ನಾರೊಬ್ಬರೇ ಸರ್ವಾಧಿಕಾರಿ ುತಾಗಿದ್ದಾರೆ. ಅದು ಅವರೊಬ್ಬರ ಸಂಸ್ಥೆ ುಂತಾಗಿದೆ. ಈಗ ಮುಸ್ಲಿಮ್ ಲೀಗಿಗೆ ೀದರಿರುವ ಜಮಿಯತ್-ಉಲ್- ಉಲೇ ು, ಮೊಮಿನ್ಸ್, ಅಹ್ರಾರ್ಸ್, ಖುದಾ ು ಬಿದ್ಮತ್ ಗಾರ್ಸ್, ಖಾಕ್ಸಾರೇ ೂದಲಾದವರನ್ನು ಒಟ್ಟು ಸೇರಿಸಿ, ವ್ಯಾ ಕ ಹಾಗೂ ಪ್ರಗತಿಪರ ಧೋರಣೆ ಸಹಿಸಿ, ುದಾರ ಇಸ್ಲಾಮ್ ತತ್ವಗಳನ್ನೆತ್ತಿ ಿಡಿದು, ಬೇರೆ ಬೇರೆ ಜಾತಿಗಳೊಳಗೆ ಕ್ಯ ಸ್ಥಾಪಿಸಿ ದೇಶದ ಸ್ವಾತಂತ್ರ್ಯ ಸ್ಥಾ ಸುವುದೇ ಹಕ್ಕರ ಹೊಸ ಮುಸ್ಲಿಮ್ ೀಗಿನ ಉದ್ದೇಶ. ಈ ಲೀಗಿಗೆ ಡಕ್ಕುದ ನಾಬ ಬಹದೂರರು ಅಧ್ಯಕ್ಷರು. ಒಂ ಳದೆ ಎಸೆಂಬ್ಲಿ ಮೆಂಬರ ಸೈಯದ್ ದ್ರುಡ್ಡೂಜರವರು ಕಾರ್ಯದರ್ಶಿಗಳು.

ಟೊಬ್ರೊಕಿನ ಯುದ್ಧ.

3 ವಾರಗಳ ಭೀಷಣ ಹೋರಾಟದ ಂತರ ಜನರಲ್ ರೊಮ್ಮೆಲರು ಜಯಶೀ ರಾಗಿ ಎಂಟನೇ ಬ್ರಿಟಿಷ್ ಸೇನೆಯ, ರಾಜಿತೆಯಾಗಿ ಹಿಂದೆ ಸರಿದು ಟೊಬ್ರೊ ನ ರಕ್ಷಣೆಯಲ್ಲಿನಿರತವಾಗಿರುವುದು. ಹ ್ತನ ಬ್ರಿಟಿಷ್ ಸೇನೆಯು ಐಗುಪ್ತದ ಎ ್ಗಡಿಂದೆ ರಿದಿರುವುದು. ಟೊಬ್ರೊಕಿನ ಕ್ಷಕರು ಆವಗಿಪಲ್ಪಟ್ಟಿರುವರು. ಪೂ ರ್ವದ ಸಮುದ್ರತೀರದ ರಸ್ತೆಯು ಕಡಿದು ಾಕಲ್ಪಟ್ಟಿರುವುದು. ಲಿಬಿಯ ಮತ್ತು ಗುಪ್ತದ ಎಲ್ಲೆಯಲ್ಲಿ ಸಂಪರ್ಕಟ್ಟೆನಲ್ಲಿ ವ ಹಲ್ಲಾಯ ಕಣನೆಯು ಬ್ರಿಟಿಷರ ವಶವೇ ಇದೆ. ರೊಮ್ಮೆಲರು ಟೊಬ್ರೊ ನ್ನು ಆವರಿಸಿ ಮುಂದೊತ್ತಿರುತ್ತಾರೆ. ಳದ ನವಂಬರ ತಿಂಗಳಲ್ಲಿ ಬ್ರಿಟಿಷರು ತಳೆ ನಡಿಸುವ ಮೊದಲಿನ ಸರಿಸ್ಥಿತಿಯೇ ಗೆ ಉಂಟಾಗಿದೆ. ಜನರಲ್ ರೊಮ್ಮೆಲರು ಂದೇ ಸವನೆ ಮುಂದೊತ್ತಿ ಅವರ ಸೇನೆ ು ಟೊಬ್ರೊಕಿನೊಳಗೆ ಪ್ರವೇಶಿಸಿರುವು ದಲ್ಲವೆ ಐಗುಪ್ತದ ಎಲ್ಲೆಯ ಕಡೆಗೂ ಮು ನ್ನುಗ್ಗಿ ಬರ್ಡಿಯವನ್ನು ಗೆದ್ದಿರುವರು.

ಪಾಕ್ಕೋಟಾನಿನಲ್ಲಿ ತೀವ್ರ ಕದನ

ಪಾಕ್ಕೋಟ್ ಪ್ರದೇಶದಲ್ಲಿ ಪುನಹ ತೀವ್ರ ಹೋರಾಟ ಆರಂಭವಾಗಿ ನದಿ ಯೊಂದನ್ನು ದಾಟಲು ಜರ್ಮನರು ಮಾ ಡಿದ ಯತ್ನ ನಿರರ್ಥಕವಾಗಿದೆ. 4 ದಿನಗಳ ಕಠಿಣ ಹೋರಾಟದಲ್ಲಿ ಸುಮಾರು 4000 ಜರ್ಮನರು ಕೊಲ್ಲಲ್ಪಟ್ಟಿರುತ್ತಾರೆ. ಹೆಚ್ಚು ಯುದ್ಧ ಸಾಮಾಗ್ರಿಗಳು ರಸ್ಯಾನರ ವಶ ವಾಗಿವೆ. ಅನೇಕರು ಸೆರೆಸಿಕ್ಕಿರುತ್ತಾರೆ.

ಸೆಬಸ್ತೊಪೋಲಿನ ಮುತ್ತಿಗೆ.

ಎಂತಹ ಹಾನಿಯನ್ನೂ ಲಕ್ಷಿಸದೆ ಜರ್ಮನರು ಒಂದೇ ಸವನೆ ಸೆಬಸ್ತೊಪೋ ಲಿನ ಮೇಲೆ ಘೋರ ಧಾಳಿ ನಡಿಸಿ ಉದರ ಉತ್ತರದ ರಕ್ಷಣೆಯನ್ನು ಭೇದಿಸಿರುವ ರೆಂದು ಬರ್ಲಿನ್ನಿನಿಂದ ಪ್ರಕಟಿಸಲಾಗಿದೆ. ಆದರೆ ಆ ಕುರಿತು ನೋಸ್ಕೊದಿಂದ ಸುದ್ದಿ ಯೇನೂ ಬಂದಿಲ್ಲ. ಜರ್ಮನರು ಅತಿ ದೊಡ್ಡ ದೊಡ್ಡ ತೋಪುಗಳನ್ನು ಉಪಯೋಗಿಸಿ ದುರ್ಭೇದ್ಯವೆನಿಸಿರುವ ಸೆಬಸ್ತೊಪೋಲ್ ಕೋಟೆಯನ್ನು ಭೇದಿಸುವ ಸಾಹಸ ಮಾಡಿರುವರು ರಸ್ಯಾನರು ವೀರಾವೇಶದಿಂದ ಇವರನ್ನು ಪ್ರತಿಭಟಿಸುತ್ತಿರುವರು. ಇವ್ಯರ ವರೆಗೆ ಸೆಬಸ್ತೊಪೋಲಿನ ಭೀಷಣ ಯುದ್ಧದಲ್ಲಿ 5 ಡಿವಿಜನು ಜರ್ಮನ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ತಿಳಿದು ಬಂದಿದೆ ಜರ್ಮನ್ ಸೇನಾನಿಯೂಡ ಜನರಲ್ ವಾನ್ ಮೆನ್‌ಸ್ಟೈನರು, ಮೊದಲು ವಿಮಾನಗಳ ಮೂಲಕ ಅನಂತರ ಟ್ಯಾಂಕುಗಳನ್ನು ಪಯೋಗಿಸಿ ಸೆಬಸ್ತೊಪೊಲಿನ ಕೋಟೆಯನ್ನು ಭೇದಿಸಲಾಗದೆ ಕಡೆಗೆ ಬರ್ತಾತೋಪುಗಳಿಗಿಂತಲೂ ದೊಡ್ಡ ತೋಪುಗಳನ್ನು ಪಯೋಗಿಸಿ ಭೀಕರ ಹೋರಾಟ ನಡೆದಿರುವುದು. ಉತ್ತರದ ಕಲಿನಿನ್ ರಣರಂಗದಲ್ಲಿ 2 ದಿನಗಳ ಹೋರಾಟವಲ್ಲಿ 1500 ಮಂದಿ ಜರ್ಮನರು ಕೊಲ್ಲಲ್ಪಟ್ಟಿದ್ದಾರೆ. ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಗೊರಿಲ್ಲ ಸಂಗಡಿಗರನ್ನಣಗಿಸಲು ಕಳುಹಿಪಲ್ಪಟ್ಟಿದ್ದ 2000 ಮಂದಿ ಜರ್ಮನ್ ಸೈನಿಕರು ಸಂಪೂರ್ಣ ನಾಶಮಾಡಲ್ಪಟ್ಟಿರುವರು. ಸೆಬಸ್ತೊಪೊಲಿನಲ್ಲಿ ಈ ವರೆಗಣ ಯುದ್ಧದಲ್ಲಿ ಒಟ್ಟು 40,000 ಜರ್ಮನರು ಕೊಲ್ಲಲ್ಪಟ್ಟರೂ ವೈರಿಯು ಹೊಸ ಸೈನ್ಯ ತಾಕಿ ಮುಂದೊತ್ತಿ ಪರಿಸ್ಥಿತಿಯು ಉತ್ಕಟವಾಗಿರುವುದು. ಭೀಷಣ ಹೋರಾಟ ನಡೆಯುತ್ತಿರುವುದು. ಜರ್ಮನರನ್ನು ತಡೆಗಟ್ಟಿಲು ರಸ್ಯಾನರು ಭಗೀರಥ ಯತ್ನಮಾಡುತ್ತಿರುವರು. ಉತ್ತರದ ಮರ್ಮಾಂಕ್ಸ್ ಪ್ರದೇಶದಲ್ಲಿ ತೀವ್ರ ವಿಮಾನ ಹೋರಾಟ ನಡೆದಿರುವುದು.

ಸೋಟೀಸು.

ಮಂದಾಪುರ ಜಿ· ಮು· ಕೋರ್ಟಿನಲ್ಲಿ.
O S. 59/1942 (59)

ಾದಿ ... ... ವೈ. ಕೃಷ್ಣಪ್ಪ ಶೆಟ್ಟಿ.
ಪ್ರತಿವಾದಿ ... ... ವಿಜಸ.
ಪ್ರತಿವಾದಿ ಮಹಜರಿಗೆ —

ದಿ ವೈ ಕೃಷ್ಣಪ್ಪ ಶೆಟ್ರ ಮಾವ ರಾವ್‌ಬಹ ದ್ದರ ಅಂಜಪ್ಪ ಶೆಟ್ಟಿಗೆ ನೀತಿ ತಾ. 17-10-28ರಲ್ಲಿ ರಿಜಿಸ್ಟ್ರಿ ನಿಬಿ ಬರ್ಸಿಕೊಟ್ಟ ಈಡು ್ರವಣಿಕ ಬಾಬ್ತು ನಿಮ್ಮಿಂದ ಬರಬಾ ಪ್ಪಿ ಜಾಗಗಳಲ್ಲಿ ರೂಪ್ಯಾ 300-4-0 ನಿಮಗೆ ಳಿಸಿ ಬಿಟ್ಟು ಬಾಕಿ ರೂಪ್ಯಾ 400 0-0ನ್ನು ಮಾಡಿಕೊಳ್ಳುವರೆ ಹಾಜಿಯು ನಿಮ್ಮ ಮೇಲೆ ತಂದ ದೇವ್ಲಂಡ ದಾವೆಯು ತಾರೀಕು 27-1942ಕ್ಕೆ ಹೊಸ್ಮಂದ ಕೋರ್ಟಿನಲ್ಲಿ ತ್ತಿಗೆ ಇ ುವುದರಿಂದ ಆಲಿಸಿಕು ನಿಮ್ಮ ಅಕ್ಷೇಪ ಯುದ ತ್ರಿ ದಿನ್ಕೆ ಹಾಜ್ರಾಗಿ ಜಾಬ್ತಾದಾರಿಕೆಳ್ಳಕೆ ಕ್ಕು. ತಪ್ಪಿದಲ್ಲಿ ಎಳ್ಳಷ್ಟಾ ಡಿಕ್ರಿ ವರಗೋ ಗುತ್ತದೆಂಬು ಯೇ ವಿಚಾರಿಲಿ ತಿಳಿಸಿಟಾಗು ತೆ.

ಕೋರ್ಟು ತ್ಯಂ ಕೃತರು.

18-6-1942 ಮಂದಾಪುರ. | Y. T. Shetty, ವಾದಿಯ ಕಡೆ ಎಡ್ವೊಕೇಟ್

ಚಿಂತಿಸುತ್ತಿರುವುದೇಕೆ?

ವಿಮಾನಧಾಳಿ ಆಥವಾ, ಜಗತ್ತಿನ ಮೇಲೆ ಬೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ನಿಮ್ಮಾನಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ನುರಣವುಂಟಾಗುವ ಅಪಾಯವನ್ನು ಸಂಪೂರ್ಣ ಒಳಗೊಂಡ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ

ದಿ ಬೊಂಬೇ ಲೈಫ್

ಇನ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ಪೋಲಿಸಿಯನ್ನು ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳ ವರಾಗುವುದುನಿಮ್ಮ ಕರ್ತವ್ಯ.

ಒಳ್ಳೆ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ನಿಜಸ್ಪೃಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿ ಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ
ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ,
ತಿರುವಾಂಕೂರು ಮತ್ತು ಬೊಂಬಾಯಿ.

The Bombay Life Insurance Company Limited.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮಿಂದನೆ ವಿಚಾರಿಸಿರಿ—

ಇ. ಎ. ಹ್ಯಾನ್ಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಶಾಂತಿ ಹೈನ್ ಆಯಿಲ್

ಹಳೆ ನೋವು, ಗಾಯ ಮತ್ತು ಚಾವುಗಳಿಗೆ ಇದಕ್ಕಿಂತ ಉತ್ತಮ ಎಣ್ಣೆ ಬೇರೊಂದಿಲ್ಲ ಪರೀಕ್ಷಿಸಿರಿ!

ಇತರ ಔಷಧಗಳೂ ನಮ್ಮಲ್ಲಿ ಮಾರಾಟಕ್ಕಿವೆ.

WANTED STOCKISTS
Shanthi Products (Regd.)
Kurady (S. Kanara)

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ, **ಉಡುಪಿ.**

ಮೇಲ್ದರಗತಿಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶೇಷ ಅನುಕೂಲತೆಗಳಿವೆ.

ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,
ಮ್ಯಾನೇಜರ್.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31 -12—1941.

Assets exceed	....	Rs.	1,10,00,000
Life Fund exceeds	....	,,	92,00,000
Business in force	....	,,	4,28,60,000
Claims paid over	....	,,	56,00,000

For further particulars and agency terms, please apply to

Branch Manager,
The Asian Assurance Co., Ltd., Mangalore S. K

ANNOUNCEMENT

7 000 Shares

5% Cumulative First Preference

LIST CLOSED.

The Corporation tenders its most gratefull thanks to all its shareholders & customers for their kind patronage in making this issue.

"A SUCCESS"

The Canara Banking Corporation Limited.

(Incorporated in British India.)

ESTD: 1906.

ತಾ. 27—6—1942ರಿಂದ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ

ನಿಮ್ಮಭಿಲಾಷೆಯ ಅದ್ವಿತೀಯ ಚಿತ್ರ-

ಉ ಮೂ ದ್ (ರಣಜಿತ್)

ಈಶ್ವರ್‌ಲಾಲ್, ಪ್ರಭಾ- ನೂರ್‌ಜಹಾನ್, ಕೇಸರಿ-

ನುಂದಿನ ಚಿತ್ರ- ಹಿಂದ್-ಕಾ-ಲಾಲ್, ನಾಡಿಯಾ

ಆಂಧ್ರಾ ಇನ್ಶೂರೆನ್ಸ್ ಕಂ. ಲಿ.

ಮುಖ್ಯ ಕಚೇರಿ- ಮುಚ್ಚಲಿ ಪಟ್ಟಣ.

ಸ್ಥಾಪನೆ. ೧೯೨೫

ಆಂಧ್ರದ ಅಪ್ರತಿಮ ಪ್ರಗತಿ ಮತ್ತು ರಾಷ್ಟ್ರವ್ಯಾಪಿ ವ್ಯವಸ್ಥೆ ಅಂಕಿಗಳೇ ಹೇಳುವವು.

	೧೯೪೦ರಲ್ಲಿ	೧೯೪೧ರಲ್ಲಿ
ಹೊಸ ಕಾರ್ಯ	೩೫೧೪೫೫೫	೩೬೩೦೪೬೫
ವಿಮಾ ಫಂಡು	೨೧೧೩೫೬೬.	೨೫೯೮೦೪೪೦
ಹಪ್ತೆ ಉತ್ಪನ್ನ	೪೫೩೫೦೦೪	೪೧೧೦೦೪೪

ಶಾಖೆಗಳು:— ಮದ್ರಾಸು, ನಾಗಪುರ, ಕಲಕತ್ತಾ, ಇರ್ನಾಕುಲಮ್, ಬರ್ಹಾಮ ಪುರ ಮತ್ತು ಖರಿಸಾ, ಅನಂತಪುರ, ಮತ್ತು ಲಾಹೋರ್.

ಸಬ್ ಆಫೀಸುಗಳು— ಬೆಜ್‌ವಾಡಾ, ವಿಜಗಪಟ್ಟಣ್, ಮುಂಬಯಿ

ಆಂಧ್ರದ ಕಾರ್ಯಕ್ಕೆ ಸೇರಿರಿ. ಕೂಡಲೇ ಬರೆಯಿರಿ.

ಕೆ. ಟಿ. ನಾಯ್ಡು.

ಡಿವಿಜನಲ್ ಆಫೀಸರ್ ಧಳಕ ವಾಡಿ, ಬೆಳಗಾಂವ

1941ನೇ ಅಖಿಲ ಕರ್ನಾಟಕ ಔಷಧ 12ನೇ ಆಯುರ್ವೇದ ಸಮ್ಮೇಲನ (ಮೈಸೂರು ಸಂಸ್ಥಾನ)ದ ಪ್ರದರ್ಶನದಲ್ಲಿ ಸುವರ್ಣ ಪದಕ ಮತ್ತು ಪ್ರಶಸ್ತಿ ಪತ್ರಿಕೆಗಳನ್ನು ಬಹುಮಾನ ಪಡೆದ

ಸ್ವದೇಶಿ ಔಷಧ ಭಂಡಾರ (ರಜಿಸ್ಟರ್ಡ್) ಕುಂಜಾಲು

ಇವರ ಖಾತ್ರಿ ಔಷಧಗಳು.

ಬಾಲಾಮೃತ (ಮಕ್ಕಳ ಶಕ್ತಿವರ್ಧಕ) 0 12 0 ಆಮಲಕೀ ತೈಲ (ಸುಖ ನಿದ್ರೆಗೆ) ಸಣ್ಣದು 0 6 0 ದೊಡ್ಡದು. 0 11 0 ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ) 0 6 0 ಪ್ರಸೂತಾಮೃತ (ಪ್ರಸವಿಸಿದವರಿಗೆ) Regd. 0 4 0 ಶಂಕರ ವಟಿ (ಸರ್ವ ಜ್ವರಗಳಿಗೆ) 0 8 0 ಪ್ರಸೂತ ಕಲ್ಯಾಣ (ಪ್ರಸವಿಸಿದವರಿಗೆ) 0 4 0 ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) 25ಕ್ಕೆ 0 7 0 6ಕ್ಕೆ 0 2 0

Swadeshi Oushadhi Bhandar,

(REGD) **Kunjal Post.**

ಉಡುಪಿ ಸ್ಟಾಕಿಸ್ಟರು:—ನವಭಾರತ ಬುಕ್ ಡಿಪೊ.

ಹುಬ್ಬಳ್ಳಿ ಸ್ಟಾಕಿಸ್ಟರು:— ಪೆರವೌಂಟ್ ಟ್ರೇಡಿಂಗ್ ಕೊಪರೇಶನ್.

ಉಡುಪಿ, ಗುರುವಾರ, ೨೫—೬—೧೯೪೨

ರುಸವೆಲ್ಟರ ನಾಲ್ಕು ಸ್ವಾತಂತ್ರ್ಯಗಳು.

ಆಕ್ಸಿಸ್ ರಾಷ್ಟ್ರಗಳ ವಿರುದ್ಧವಾಗಿ ಇಂದೀಗ ಲೋಕದ 28 ರಾಷ್ಟ್ರಗಳೊಂದು ಗೂಡಿ ಹೋರಾಡುತ್ತಿವೆ. ಈ ಸಂಯುಕ್ತ ರಾಷ್ಟ್ರಗಳ ಧ್ವಜ ದಿನಾಚರಣೆಯು ಕಳೆದ ತಾ. 14ನೇ ಆದಿತ್ಯವಾರ ಯುನ್ಯಾಟೆಡ್ ಸ್ಟೇಟ್ಸು, ಬ್ರಿಟನು, ಚೈನಾ, ಇಂಡಿಯ ಮೊದಲಾದ ರಾಷ್ಟ್ರಗಳೆಲ್ಲೆಲ್ಲಾ ಆಚರಿಸಲ್ಪಟ್ಟಿತು ಈ ಸಂದರ್ಭದಲ್ಲಿ ಪ್ರೆಸಿಡೆಂಟ್ ರುಸವೆಲ್ಟರಿತ್ತ ಸಂದೇಶವು ಉದಾತ್ತವೂ ಮಹತ್ವವೂ ಆಗಿರುವುದು. ಅಖಿಲ ಮಾನವ ಕೋಟಿಯ ನಾಲ್ಕು ಸ್ವಾತಂತ್ರ್ಯಗಳ ಕುರಿತವರ ಭಾವನೆಗಳು ಕಾವ್ಯಮಯವಾಗಿವೆ. ಆಕ್ಸಿಸ್ ವೈರಿಗಳನ್ನು ಗೆದ್ದ ಮೇಲೆ ಇಡೀ ಲೋಕದಲ್ಲಿ ನವಮನ್ವಂತರ ವುಂಟಾಗುವುದು. ಅದರಲ್ಲಿ ಈ ಅಸುರಿ ಜಗತ್ತಿನ ನವನಿರ್ಮಾಣವಾಗುವುದು. ಯುದ್ಧದ ಗಂಡಾಂತರ, ಹಸಿವು ಭೀತಿಗಳ ತೊಂದರೆ, ಜನಾಂಗ, ವರ್ಣ ಅಥವಾ ಮತಗಳ ಭೇದವಿಲ್ಲದೆ ಇಡೀ ಮಾನವ ಜನಾಂಗವು ಸ್ವಾತಂತ್ರ್ಯ, ಶಾಂತಿ, ಸುಖ ಮತ್ತು ಸುಭಿಕ್ಷೆಯಿಂದ ಬಾಳುವಂತೆ ಮಾಡುವುದೇ ಸಂಯುಕ್ತ ರಾಷ್ಟ್ರಗಳ ಉದ್ದೇಶ. ಭಾಷಣ ಮತ್ತು ಧರ್ಮ ಸ್ವಾತಂತ್ರ್ಯ ಪಡೆದು ಬದುಕಿಕೆ ಮತ್ತು ಬೆದರಿಕೆಯಿಂದ ವಿಮುಕ್ತವಾಗಿರುವ ನಾಲ್ಕು ಸ್ವಾತಂತ್ರ್ಯಗಳು ಮಾನವನಿಗೆ, ಪಾಯು, ಬೆಳಕು, ಆಹಾರ ಮತ್ತು ಲವಣಗಳಷ್ಟೇ ಅವಶ್ಯವಾಗಿವೆ. ಈ ಸ್ವಾತಂತ್ರ್ಯಗಳೆಲ್ಲಾ ಅಪಹರಿಸಲ್ಪಟ್ಟಲ್ಲಿ ಅತನು ಸಾಯುವನು. ಅವುಗಳಲ್ಲಿ ಒಂದು ಭಾಗದಿಂದವನು ಅಪಹೃತನಾದರೆ ಅತನೊಂದು ಭಾಗವು ಒಣಗಿ ಹೋಗುವುದು. ಅವನ್ನಾತನಿಗೆ ಧಾಳಾಳವಾಗಿ ಕೊಟ್ಟರೆ ಅವನು ನವ ಮನ್ವಂತರದ ಹೊಸ್ತಿಲಿಗೆ ಸ್ವಚೇತಿಸುವನು. ಈ ನಾಲ್ಕು ಸ್ವಾತಂತ್ರ್ಯಗಳು ಮಾನವನ ಅನುನಂತಿಕ ಹಕ್ಕು. ಮಾನವ ಸಾಮಾನ್ಯವಾದ ಈ ನಾಲ್ಕು ಸ್ವಾತಂತ್ರ್ಯಗಳಲ್ಲಿ ದೃಢನಂಬಿಕೆ ಮತ್ತು ಮಾನವನು ದೇವರ ಛಾಯೆಯಾಗಿ ಸ್ವತಂತ್ರನಾಗಿ ನಿರ್ಮಿಸಲ್ಪಟ್ಟವನೆಂಬ ವಿಶ್ವಾಸವೇ ಸಂಯುಕ್ತ ರಾಷ್ಟ್ರಗಳಿಗೂ ಅವುಗಳ ವೈರಿಗಳಿಗೂ ಇರುವ ಭೇದ. ಹಿಟ್ಲರರ ನವ ನಿರ್ಮಾಣವಾಗಿರುವ ಯಾಂತ್ರಿಕ ನರಕ ಮತ್ತು ಈ ನಾಲ್ಕು ಸ್ವಾತಂತ್ರ್ಯಗಳಲ್ಲಿ ಜನರು ಯಾವುದನ್ನಾರಿಸುವರೆಂಬ ಕುರಿತು ಸಂದೇಹವೇ ಇಲ್ಲ. ಸಂಯುಕ್ತ ರಾಷ್ಟ್ರಗಳ ನವನಿರ್ಮಾಣದ ತಳಹದಿಯೇ ಈ ನಾಲ್ಕು ಸ್ವಾತಂತ್ರ್ಯಗಳೆಂದು ಪ್ರೆಸಿಡೆಂಟ್ ರುಸವೆಲ್ಟರ ಉದ್ಘೋಷ.

ಹಿಂದುದೇಶಕ್ಕೆಲ್ಲಿದೆ ಸ್ವಾತಂತ್ರ್ಯ?

ಆಕ್ಸಿಸ್ ರಾಷ್ಟ್ರಗಳನ್ನು ಮೊದಲು ಗೆದ್ದುಕೊಳ್ಳಬೇಕು ಪ್ರೆಸಿಡೆಂಟ್ ರುಸವೆಲ್ಟರು ತನ್ನ ನಾಲ್ಕು ಸ್ವಾತಂತ್ರ್ಯಗಳ ಆಧಾರದಿಂದ ಲೋಕದ ನವನಿರ್ಮಾಣ ಮಾಡುವುದಕ್ಕೆ. ಆದರೆ ತನ್ನ ಉದಾತ್ತ ಆದರ್ಶಗಳನ್ನು ಉದ್ಘೋಷಿಸುವುದು ಮಾತ್ರವಲ್ಲದೆ ಈಗಲೇ ಆಚರಣೆಯಲ್ಲಿ ತರುವ ಸಂದರ್ಭವು ಉಪಸ್ಥಿತವಾಗಿರುವಾಗ ರುಸವೆಲ್ಟರೇನು ಮಾಡಿಯುವರು? ಹಿಂದುದೇಶದ ವಾಡಾದರೂ ಏನು? ಆದಕ್ಕೆಲ್ಲಿದೆ ಮಾನವ ಜನ್ಮಸಿದ್ಧ ಸ್ವಾತಂತ್ರ್ಯ? ಅದೀಗ ಅತೃಪ್ತಿ ಮತ್ತು ಅಶಾಂತಿಯಿಂದ ತುಂಬಿರುವುದಿಲ್ಲವೇ? ಪ್ರೆಸಿಡೆಂಟ್ ರುಸವೆಲ್ಟರು ಒತ್ತಾಯ ಮಾಡಿದರೆ ಬ್ರಿಟನಿಗೆ ಹಿಂದುದೇಶಕ್ಕೆ ಸ್ವಾತಂತ್ರ್ಯವೀಯದೆ ಗತ್ಯಂತರವಿದೆಯೇ? ಆದರೆ ರುಸವೆಲ್ಟರದಕ್ಕೆ ಸಿದ್ಧರಿರುವರೆ? ಅಟ್ಲಾಂಟಿಕ್ ಚಾರ್ಟರು ಹಿಂದುದೇಶಕ್ಕೂ ಅನ್ವಯಿಸುವುದೆಂದು ಸ್ಪಷ್ಟವಾಗಿ ಹೇಳುವುದಕ್ಕಾದರೂ ಅವರು ಸಿದ್ಧರಿರುವರೇ?

ಗಾಂಧಿಜಿಯವರ ನ್ಯಾಯವಾದ ಕೇಳಿ.

ಬ್ರಿಟಿಷರು ಹಿಂದುದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವಿತ್ತು ಅದನ್ನು ಬಿಟ್ಟುಹೋಗಬೇಕು. ಆಗ ಒಂದೊಮ್ಮೆ ಅನಾಯಕತ್ವವುಂಟಾಗುವುದಾದರೂ, ಗುಲಾಮಗಿರಿಗಿಂತ ಅದು ಲೇಸು. ಆದರೆ ಅಂತಹ ದೇನೂ ಆಗಲಾರದು. ದೇಶದ ಸ್ವಾತಂತ್ರ್ಯ ಮತ್ತು ಐಕ್ಯದ ಆತಿ ದೊಡ್ಡ ತೊಡಕಾದ ವಿದೇಶಿ ರಾಜ್ಯಭಾರವು ಹೋದರೆ ಹಿಂದುದೇಶದ ಎಲ್ಲಾ ಪಕ್ಷಗಳವರೂ ಒಂದಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವರು. ಸ್ವತಂತ್ರ ಹಿಂದುಸ್ಥಾನವು ಬ್ರಿಟನು ಅಮೆರಿಕ, ಮತ್ತು ಚೈನಗಳ ಮಿತ್ರ ರಾಷ್ಟ್ರವಾಗಿ ಆಕ್ಸಿಸ್ ರಾಷ್ಟ್ರಗಳೊಂದಿಗೆ ಹೋರಾಡುವುದು. ಆಗ ಅದು ಬ್ರಿಟನಿನ ಮತ್ತು ಅಮೆರಿಕದ ಸಹಾಯವನ್ನು ಅಪೇಕ್ಷಿಸಿ ಪಡೆಯಬಹುದು. ಬ್ರಿಟಿಷ್ ಸಾಮ್ರಾಜ್ಯ ರಾಹಿಗಾಗಿಯಲ್ಲ; ಮಾನವ ಸ್ವಾತಂತ್ರ್ಯಕ್ಕಾಗಿ ಹಿಂದೂದೇಶವು ದೊಡ್ಡಶಕ್ತಿಯಾಗಿ ಹೋರಾಡುವುದೆಂಬ ಮಹಾತ್ಮಗಾಂಧಿಯವರ ಹೇಳಿಕೆಯು ಎಷ್ಟೊಂದು ನ್ಯಾಯವಾದುದು! ಆದಕ್ಕೆ ಪ್ರೆಸಿಡೆಂಟ್ ರುಸವೆಲ್ಟರು ಬೆಂಬಲವೀಯುವರೇ? ಅಥವಾ ಅದನ್ನು ದಬ್ಬಾಯಿಸಲು ಬ್ರಿಟಿಷ್ ಸರಕಾರವು ಹಿಂದೂದೇಶದಲ್ಲಿ ಆರಂಭಿಸಬಹುದಾದ ದಬ್ಬಾಳಿಕೆಯನ್ನು ಕಡೆಗಣಿಸಿ ತಣ್ಣಗಿದ್ದು ಬಿಡುವರೇ?

ಶೀಘ್ರವಾಗಿ ಎರಡನೇ ರಣರಂಗ ತೆರೆಯಲ್ಪಡುವುದು!

ಇದೇ ತಾ. 2ರಲ್ಲು ಸೋವಿಯೆಟ್ ಸರಕಾರಕ್ಕೂ ಬ್ರಿಟನಿಗೂ ಆದ ಒಪ್ಪಂದದ ಪ್ರಥಮ ವಾರ್ಷಿಕೋತ್ಸವವು ಲಂಡನ್ನಿನಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಸರ್-ಸ್ಟಾಫರ್ಡ್ ಕ್ರಿಪ್ಸರಿತ್ತ ಭಾಷಣದಲ್ಲಿ, ಅಮೇರಿಕ ಮತ್ತು ಇಂಗ್ಲೆಂಡುಗಳು ಒಟ್ಟುಸೇರಿ ಶೀಘ್ರವಾಗಿ ಎರಡನೇ ರಣರಂಗ ತೆರೆಯುವುದು ನಿಶ್ಚಯವೆಂದು ಸ್ಪಷ್ಟವಾಗಿ ಹೇಳಿರುವರು. ಮಿ. ಚರ್ಚಿಲ್ಲರು ವಾಷಿಂಗ್ಟನಿಗೆ ಹೋಗಿ ಪ್ರೆಸಿಡೆಂಟ್ ರುಸವೆಲ್ಟರೊಡನೆ ಮಂತ್ರಾಲೋಚನೆ ನಡಿಸುತ್ತಿರುವುದು ಇದೇ ವಿಷಯವೆಂಬುದರಲ್ಲಿ ಸಂದೇಹವಿಲ್ಲ. ಇಂದೀಗ ಯುದ್ಧವು ಸಂದಿಗ್ಧ ಪರಿಸ್ಥಿತಿಗೆ ಮುಟ್ಟಿರುವುದು. ಈ ಸಂಧಿಕಾಲದಲ್ಲಿ ಬ್ರಿಟನು ಮತ್ತು ಅಮೆರಿಕಗಳ ಯುರೋಪಿನ ಪಶ್ಚಿಮದಿಂದ ಮಹತ್ತಾದ ನೆಲಧಾಳಿಯನ್ನು ಜಯಶೀಲವಾಗಿ ನಡಿಸಿದರೆ ಮಾತ್ರ ಇಂದಿನ ಪ್ರತಿಕೂಲ ಪರಿಸ್ಥಿತಿಯು ಅನುಕೂಲವಾಗಬಹುದು. ಇದಕ್ಕು ಚರ್ಚಿಲ್ಲರು ಮುನಗಂಡೇ ರುಸವೆಲ್ಟರೊಡನೆ ಮಾತಾಡಲು ವಾಷಿಂಗ್ಟನಿಗೆ ಹೋದುದಿರಬೇಕು.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಕಾಂಗ್ರೆಸ್ ಸದಸ್ಯರಾಗಲು ಕಡೆ ವಿಧಿ—ಈ ತಿಂಗಳ ಅಖಿಲಭಾರತ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿ ಸೇರಲಿಚ್ಛಿಸುವ ತಮ್ಮ ಹೆಸರುಗಳನ್ನು ದಾಖಲು ಮಾಡಿಸಲು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಕೋರಿಕೆ ಕೊಟ್ಟಿದ್ದಾರೆ.

ಸ್ಥಳ ಬದಲಾವಣೆ—ಫೇಳ್ಸ್ ಪೈ ಬಂಧಿಸಿದ್ದ ಕಾಂಗ್ರೆಸ್ ಕಚೇರಿಯು ಈಗ ಕೊಡಿಯಾಲ್ ಬೈಲಿನಲ್ಲಿರುವ ವಿದ್ಯಾರ್ಥಿ ಭವನದಲ್ಲಿರುವ ವಿಷಯವು ತಿಳಿದಿರಬಹುದು.

ಪರಾರಿ—ರಜಾ ಪದೆಯಲ್ಲಿದ್ದ ಕೇಶವ ಕಿಡ್ಲರು ಕಾಲರಿಗೆಂದು ತಹಶೀಲ್ದಾರರಿಗೆ ಜಾಬು ಯಾ ಪಲ್ಲಿ ಬ್ಯಾರಿಯವರು ಸರಗೋಡಿನ ಮ್ಯಾಜಿಸ್ಟ್ರೇಟರಾಗಿಯೂ, ಶ್ರೀ ನಾರಾಯಣ ಶೆಣೈಯವರು ಹೊಸದುರ್ಗದ ಡೆಪ್ಯುಟಿ ತಹಶೀಲ್ದಾರರಾಗಿಯೂ, ಉಡುಪಿ ಸ್ಪೆಶಲ್ ಮ್ಯಾಜಿಸ್ಟ್ರೇಟರಾದ ಶ್ರೀ ಎಚ್. ಸುಂದರಯ್ಯರು ಬೆಳ್ತಂಗಡಿಯ ಡೆಪ್ಯುಟಿ ತಹಶೀಲ್ದಾರರಾಗಿಯೂ ನೇಮಕಗೊಂಡಿರುವರಾಗಿ ತಿಳಿದು ಬಂದಿದೆ.

ಎ. ಆರ್. ಪಿ.—ನಗರದಲ್ಲಿ ಎ. ಆರ್. ಪಿ ಕಾರ್ಡುಗಳು ಸಿದ್ಧವಾಗಿವೆ. ಈಗ ಕರಬೇಕಿಯನ್ನು ವಸೂಲು ಮಾಡುತ್ತಿದ್ದಾರೆ. ಶ್ರೀ ಬಿ. ಸೋಮಯ್ಯರವರು ಅನರಿ ಜೇಫ್ ಕಾರ್ಡನರಾಗಿ ನೇಮಕಗೊಂಡಿದ್ದಾರೆ.

ಉಡುಪಿ.

ಸರ್ವಲ್ ಕೊಂಗ್ರೆಸ್ ಕಮಿಟಿ—ಜಿಲ್ಲಾ ಕಾಂಗ್ರೆಸ್ ವ್ಯವಸ್ಥಾಪಕ ಕಾರ್ಯಕರ್ತ ಶ್ರೀ. ಪಿ. ಶ್ರೀರಾಮಪುರವರ ಅಧ್ಯಕ್ಷತೆಯಲ್ಲಿ ಉಡುಪಿಯಲ್ಲಿ ಸರ್ವಲ್ ಕಾಂಗ್ರೆಸ್ ಕಮಿಟಿ ನೇಮಿಸಲ್ಪಟ್ಟಿದೆ. ಶ್ರೀ. ಪ್ರಸನ್ನಧರಾವ್ (ಅಧ್ಯಕ್ಷ) ಶ್ರೀ. ಯು. ರಾಮರಾವ್ (ಉಪಾಧ್ಯಕ್ಷ) ಶ್ರೀ. ಟಿ. ಎ. ಪಾಯಿದೇವನ್, ಶ್ರೀ. ಕೆ. ಕೆ ಎಲಾಕ್ಷ ಕಾಮತ್ (ಜತಕಾರ್ಯದರ್ಶಿಗಳು) ಮತ್ತು ಶ್ರೀಗಳಾದ ನಾರಾಯಣ ನಾಯಕ್ ಕಾಡಬೆಟ್ಟು, ಕಾರ್, ಯು. ರಾಮಚಂದ್ರ, ಸದಾನಂದ ಮಲ್ಯ, ಜಗನ್ನಾಥ ಶಾಮತ್, ಸದಸ್ಯರು.

ನೋಟೀಸು.

ಜಾರ್ಕಳ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬರು 31/1942.

ನಾಗಮೇಣಯ್ಯ—ವಾದಿಯು

ಮತ್ತು

ಪಟ್ಟಾಭಿರಾಮ ಬಿಳಿಯಾ, ದಬ್ಬಾಡಿ ಸುಬ್ರಾಯ ಬಿಳಿಯಾರು ಮ.ಗ. ೨ ಜಾರ್ಕಳ ತಾಲ್ಲೂಕು ಕಲ್ಲಬೆಟ್ಟು ಶ್ರೀರಾಮದ ದರ್ಬುಜೆ ಎಂಬಲ್ಲಿರ ವಸಿ –ಪ್ರತಿವಾದಿ

ಸದರಿ ಪ್ರತಿವಾದಿಗೆ–

ಇವರ ವಾದಿಗೆ ವರಿಗೆ ಬಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಸ್ಥೈಂಟು A ಕಿಮ್ಮಲು ಆಸ್ತಿ ಬೆಲ್ಲಿ ಮತ್ತು ಗೇರುಗಳನ್ನು ಕಡಿದು ಸಂಮ್ಮಂದ ನಷ್ಟವನ್ನು ಮತ್ತು ಸದ್ರಿ ಆಸ್ತಿಯಲ್ಲಿರುವ ಉಳಿದ ಮರಗಳನ್ನು ಕಡಿಯಬಾರದೆಂತ ಕಾಪ್ಯಕವಾದ ಯಾಂಜಂಕ್ಷನ್ ಆಗಲಾ ಕೇಳಿ ತಾವಿಳು ನಿಮ್ಮ ಮೇಲೆ ರೂಪಾಯಿ 10-0-0ಕ್ಕೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಖು 13-7.42ಕ್ಕೆ ಮತ್ತು ಸದರಿ ದಾವೆಯಲ್ಲಿ ದಾವಾ ಆಸ್ತಿಯಲ್ಲಿರುವ ಮರಗಳನ್ನು ಮತ್ತು ಅದರ ಗೆಲ್ಲುಗಳನ್ನು ಕಡಿದು ಕಡಿಯಲಾಗಿ ನಿಮ್ಮ ಮೇಲೆ ಪೆಂಪರಿ ಯಾಂಜಂಕ್ಷನ್ ಆಗಲಾ ಪಾತಿಲು ಕೊಟ್ಟರುವ R.I.A.No 93/42ನೇ ಅರ್ಜಿಯ ಕೂಡಾ ನಿಮ್ಮ ಹಾಜ್ರಾತಿಯ ಬಗ್ಗೆ ತಾರೀಖು 13-7.42ಕ್ಕೆ ಯಿಟ್ಟಿರುವುದರಿಂದ ಸದರಿ ದಾವೆಯ ಮತ್ತು ಅರ್ಜಿಯ ಮೇಲಿನ ನಿಮ್ಮ ಆದಾಕರಣೆಯ ಹಾಜ್ರಾತಿಯ ಬೆಳಿಗ್ಗೆ 10ಗಂಟೆಯ ಸಮಯಕ್ಕೆ ಹಾಜ್ರಾಗಬೇಕಾಗಿ ಸೂಚನೆ ಮಾಡಿಕೊಳ್ಳಬಹುದಾಗಿಯೂ ತಪ್ಪಿದಲ್ಲಿ ಸದರಿ ಅರ್ಜಿಯು ಮತ್ತು ದಾವೆಯು ಕೂಡಾ ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವುದಾಗಿಯೂ ಈ ಯಂತ್ರ ಕೊಂಡಿಯ ಮೂಲಕ ನಮಗೆ ತಿಳಿಸಿಕೊಳ್ಳಲಾಗುತ್ತದೆ.

Karkala } Sd/A.N.S.Achar.
3-6-42. } Pleader for Plaintiff

ಸಂತೋಷ ಕೂಟ

ಸಂತೋಷ ಕೂಟ—ಕಳ್ಳರೋಮಲ್ ವ್ಯಾಪಾರಿ ಶ್ರೀ ಕೆ ವೆಂಕಟರಮಣ ಭಟ್ಟರಿಂದ ಪಣಿಯಾಡಿ ಮಾರ್ಜನಲ್ಲಿ ಸ್ಥಾಪಿಸಲ್ಪಟ್ಟ ಶಾಲೆಗೆ ನಗರಸಭೆಯ ವಿರೋಧವಿದ್ದರೂ ಮಂಜೂರು ಆ ಬೋರೆಸಲು ದರ ಸಂತೋಷಾರ್ಥವಾಗಿ ಸಿಹಿಯೆಂದು ತಾ. 20—6—42ರಲ್ಲಿ ದಾವಿ ಪಿ ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಮೆಜಿಸ್ಟ್ರೇಟಾಧ್ಯಯರಿಂದ ವರದಿ ವಾಚನವಾಗಿ ಸಭಿಕರಲ್ಲಿ ಕೆಲವರು ಭಾಷಣವಿತ್ತರು. ಅಧ್ಯಕ್ಷರು ಪಣಿಯಾಡಿ ವಾರ್ಡಿಗೊಂದು ಶಾಲೆಯ ಅವಶ್ಯಕತೆಯನ್ನು ವಿವರಿಸಿ, ಅದಕ್ಕಿರುವ ವಿರೋಧವನ್ನು ಖಂಡಿಸಿ ಭಾಷಣವಿತ್ತರು. ನೀಲಿ ಧನ್ಯವಾದಗಳೊಡನೆ ಸಭಾಂಕ್ಯವಾಯಿತು.

ಮೊಲ್ಲಿ—ಯೂನಿಯನ್ ಕ್ಲಬ್ಬಿನ ವರ್ಧಂತಿಯು ತಾ. 16 6-42ರಲ್ಲಿ ಜನಾಬ್ ಯು ಎಸ್. ಹುಸ್ಸೇನ್ ಸಾಹೇಬ್ ಬಹದ್ದೂರರ ಅಧ್ಯಕ್ಷತೆಯಲ್ಲಿ ಜರಗಿತು.

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

OS. 4/42

ಸೋಮಪ್ಪ ರೈ . . . . . ವಾದಿ

ಮುತ್ತಪ್ಪರೈ ಕೊಡಾ ... ಪ್ರತಿವಾದಿರು

2ನೇ ಪ್ರತಿವಾದಿ ಕೊರಗಪ್ಪರೈ } ಸುಬ್ಬಕ್ಕ ಹೆಂಗಸು
3ನೇ ಪ್ರತಿವಾದಿ ಸುಬ್ಬಣ್ಣರೈ } ನ ಮಕ್ಕಳು.
5ನೇ ಸಂಕಕ್ಕರೈ ಕೊರಗಪ್ಪರೈ } ಮಂಜೆಕೋಲು
ಅಳಿಯ. ತರೀಗೆ } ಗ್ರಾಮದ ಪುತ್ತೂರು ವಂದಿರರು.

ವಾದಿಯು ಪ್ರತಿವಾದಿರಿಂದ ಬಹಾ ಅಡವಿನ ಅಸ್ಸು ಅಡಿಬಳ್ಳಿ, ಮಾಡಿದ ವೇಲ್ತೋರುವ ವ್ಯಾಸ್ಯವು ತಾ. 30 6 42ಕ್ಕೆ ಈ ಕೋರ್ಟಿನಲ್ಲಿ ತೆಗೆಗೆ ಯಿಟ್ಟಿರುವುದರಿಂದ ಆದಿವ್ಯ ಬೆಳಿಗ್ಗೆ 11ಘಂಟೆಗೆ ಸಾಪಿ ಸ್ವತಹಾ ಯಾ ವಕೀಲರ್ದ್ವಾರ ಹಾಜ್ರುಗಿ ಉಪರೋಧ ಕಿದ್ದರೆ ನಿಮ್ಮ ಗೈರಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತೆಂದ ರೀತಿಯಲ್ಲಿ ತೀರ್ಮಾನಿಸುವು.

By order of Court
M. Sanjiva Shetty.

Puttur } Advocate for Plaintiff
16-6-42 }

ಇನ್ನೊ ಯುದ್ಧದ ನೊದಲಿನ ದರದಲ್ಲಿ!



ಮಂಜೂರಾಗದೆ 7 ದಿನಗಳಲ್ಲಿ ಹಿಂದೆ ಕೆಳಸಿದರೆ ಹಣ ವಾಪಾಸು, ಸರಿಯಾಗಿ ಸಮಯ ತೋಸುವ 5 ವರ್ಷ ಗ್ಯಾರಂಟಿಯ ಸ್ವಿಸ್ ಮೇಕ್ ಗಡಿಯಾರಗಳು ನಿಕೊಲಿವರ್ ಆಫವಾ ರೈಲ್ವೆ ರೆಗ್ಯು ಲೇಟರ್ ವಾಚಿಗೆ ಯಾ 3 8-0, ಲುಕ್ತಮಜ್ಜಕ್ಕೆ ರೂ.4-8-0, ಅತ್ಯುತ್ತಮ ಕಂದ ಕ್ಕೆಗಡಿಯಾರಕ್ಕೆ ರೂ 5 8-0 18 ಕೆರೆಟ್ ಗೋಲ್ಡ್ ಪ್ಲೇಟೆಡ್ ರೂ. 6 8-0. ಲೇಡಿಸ್ವಾಚ್ ರೂ. 7 0-0, ರೋಲ್ಡ್ ಗೋಲ್ಡ್ ರೂ. 8 0 0, ಉರ ಬಟ್ಟಲಕ್ಕೆ ರೂ 9 8 0, ಉತ್ತಮ ರೂ. 10 8 0. 10ವರ್ಷ ಗ್ಯಾರಂಟಿ. 7 ಜುವೆಲ್ಸ್ ಗೋಲ್ಡ್ ಗೋಲ್ಡ್ ರೂ. 12 0 0 ಉಕ್ಕೆಸ್ಟ್ರಿ ರೂ. 14 0-0 ಓ ಖ, ಹತ್ತಾಣಿ, ಒಮ್ಮೆಯೇ 3 ತಿಂಗಳಿನೆರೆ ಅಂಚೆ ಮುಪತ್ತು ಕೆಲವು ಗಿಲ್ಲ ಉಚಿತ.

The Liver Whatch Co
Joy Mitra St. Calcutta.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ಜೊರೆಯುತ್ತವೆ. ಕುಪ್ಪುಟಾದಿ ಮತ್ತು ಮಿಲ್ ಬಟ್ಟೆಗಳೂ ನೂರಾರ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,
ಆಸ್ಪತ್ರೆ ಬಳಿ, ಉಡುಪಿ.

ANNOUNCEMENT.

From 1st July 1942 to 31st December 1942 the rate of interest allowed on Current Account balances will be half per cent per annum.

CANARA BANK LIMITED.

Estd. 1906.

ವಿಷ ಬಾಣಗಳು.

ವದಂತಿಗಳ ವಿಚಾರದಲ್ಲಿ ಎಚ್ಚರಿಕೆಯಿಂದಿರಿ. ಅವು ನಿಮ್ಮ ಮನಸ್ಸಿಗೆ ಕಳಂಕವನ್ನುಂಟು ಮಾಡಿ ನಿಮಗೆ ಬುದ್ಧಿ ಭ್ರಮೆ ಮಾಡುವುದಕ್ಕಾಗಿ ಶತ್ರುಗಳಿಂದ ಕಳುಹಿಸಲ್ಪಟ್ಟ ವಿಷ ಬಾಣಗಳು.

ವದಂತಿಗಳನ್ನು ನಂಬಬೇಡಿರಿ.

ಜಪಾನಿಯರನ್ನು ಎದುರಿಸುವುದ ಕ್ಕಾಗಿ ಇಂಡಿಯಾ ದೇಶದ ಯುದ್ಧ ಮುಖವನ್ನು ರಚಿಸಿರಿ.

ಧಾತುಪುಷ್ಟಿಲೇಹ

ಇದು ಬಾಣಂತಿಗೆ ಆವಶ್ಯಕವಾದ ರಕ್ತವರ್ಧಕ ರಸಾಯನ. ಸ್ವಪ್ನವಸ್ಥೆ, ಶರೀರದ ಉಷ್ಣತೆ, ಧಾತು ಮೂರ್ಛೆಪೆಡೆಸೆ ಹೋಗುವಿಕೆ, ಸೋದನೆಪು, ಕೈ ಕಾಲು ಬಚ್ಚುವಿದು, ಮಲಬದ್ಧತೆ, ಒಳ ಜ್ವರ, ಅರಕ್ತ, ಇವುಗಳನ್ನೆಲ್ಲ ಜೋಗಲಾಡಿಸಿ ಹಸಿವನ್ನು, ಜೀರ್ಣ ರಕ್ತಿಯನ್ನೂ ಹೆಚ್ಚಿಸುವುದು ಆರಲ್ಲದೆ ಪರಗೆಳೆ ದಾಬುಳ್ಳವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ 1ರ ದರ ರೂ. 2 8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಲಕ್ಕೆ ಅವಶ್ಯವಾದ ರಕ್ತವರ್ಧಕ ಪ್ರಸವಶುದ್ಧಿಕಾರಕವನ್ನು ಹೋಗಲಾಡಿಸಿ, ಉದರವೈಕಲ್ಯ ಅಂಗಗಳನ್ನು ಒಳಪಡಿಸಿ, ಗರ್ಭಕ್ಕೆ ಯನ್ನು ಪೂರ್ವ ತುಂಬಿಸುವುದೇ. ರಕ್ತಧಾತುವಿ ಅಭಿವೃದ್ಧಿಪಡಿಸಿ, ಬಣ್ಣಂತಿಯು ಪುಷ್ಟಿ ಹೊಂದಿವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ದರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಸಂಖ್ಯ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1)ಪೈಲರ್ ಸ್ಟೋರ್ಸ್, ಕೆವಾಸ್ಜಿ ಆಂಡ್ ಜನರಲ್ ಮರ್ಚೆಂಟ್ಸ್, 183 ಸ ಪಾರಿಬಾಗ್ ರೋಡ್, ಪರೇಲ್, ಬಾಂಬಯ್, ನಂಬ್ರ 12 (2) ಜನರಲ್ ಸ್ಟೋರ್ಸ್, ಪಿ. ಐ ಪಿ, ಮಾಯಿಂಗಾ. (3) ಮಿಲ್ಲರ್ ಪೆರ್ಫ್ಯೂಮರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ಫೈರ್ಮಸಿ, ಚಿಕ್ಪೇಟೆ ಬಜಾರ್, ಸೇಲಂ. (5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋವೆ ವಾರ ಪೇಟೆ. 7) ಪಾ! ಶ್ರೀನಿವಾಸ ಪೈ, ಪುತ್ತೂರು (8) ಕಾಂತಾವರ ವಾಸ್ತೇವ ಕವಿತ್ತಿ, ಬೆಳ್ತಂಗಡಿ. (9) ಮಲ್ಯ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ (11) ಕೃಷ್ಣ ಫಾರ್ಮಸಿ, ಕುಂದಾಪುರ. (12) ಕಾಪರಗೇಡು ಶ್ರೀ ದೇವಾ ಸ್ಟೋರ್ಸರಿ ಹೌಸ್, ಶ್ರೀ ರಾಮ ಪೇಟೆ (13)ಕೆ ಶ್ರೀನಿವಾಸಶೆಟ್ಟಿ, ತೀರ್ಥಹಳ್ಳಿ 14)ಬಿ.ಯಸ್.ಸಿಂಗರಾವ್ ಮಾರ್ಕೆಂಟ್ಸ್,ಚಿಕ್ಕಬಳ್ಳಾಪುರ

ದಾರಿ ಹೋಕನ ಡೈರಿ.

ಕಾಂಗ್ರೆಸ್ ಮೆಂಬರಾಗಿ ಸೇರುವ ಅ ಪ್ಲೈಕ್ ಅವಧಿಯು ಇದೇ ತಾ. 30 ಆಂತೆ. ಮುಂದೇನಾದರೂ ಸ್ಥಾನ ದೊರೆಯುವು ದಾದರೆ ಅದಕ್ಕೆ ತೊಂದರೆಯಾಗದಂತೆ ನಾನಿ ಹೋಕನಿಗೂ ಕಾಂಗ್ರೆಸ್ ಮೆಂಬ ರಾಗುವ ಮನಸ್ಸಾಗಿದೆ ಆದರೆ ಆಗುವುದು ಹೇಗೆ? ಸೇರಿಸುವವರೇ ಇಲ್ಲವಲ್ಲ! ನಾಲಾಜ್ ಜೆ ಮೆಂಬರಿಕೆಗೆ ಐದಾರು ರೂ. ವೆಚ್ಚ ಮಾಡಿ ಮಂಗಳೂರಿಗ ಹೋಗಿ ಬರಬೇ ಕೇನು? ೦೦ ೦೦ ೦೦

ಹಲವು ವರ್ಷದಿಂದ ಮುಂಬೈ ಪಟ್ಟಣದಲ್ಲಿ ಫೆಲಿಕ್ಸ್ ಪೈ ಬಜಾರಿನಲ್ಲಿದ್ದು ಬಹಳ ಪಬ್ಲಿಕಾಗಿದ್ದ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸು ಈಗ ಯಾವುದೋ ಒಂದು ಗಲ್ಲಿ ಸೇರಿ ಮೂಲೆ ಗುಂಪಾಗಲು ಕಾರಣವೇ ನು? ಸಂಬಂಧಪಟ್ಟವರು ಕಾರಣ ತಿಳಿಸ ಬಾರದೇಕೆ?

೦೦ ೦೦ ೦೦

ಅಮೆರಿಕ ಸೊದಲಾದ ದೇಶಗಳಲ್ಲಿ ತಿರು ಗಾಡಿ ಬಂದ ಮೇಲೆ ಶ್ರೀಮತಿ ಕನುಲಾ ದೇವಿಯರ ಕಾರ್ಯಕಲಾಪನೇನೆಂಬುದು ತಿಳಿದುಬಂದಿರಲಿಲ್ಲ. ಅವರು ಸುಮ್ಮನಿರುವ ವರೇನೂ ಅಲ್ಲ. ಏನಾದರೂ ಮಾಡುತ್ತಿರ ಬೇಕೆಂದು ದಾರಿ ಹೋಕನ ಎಣಿಕೆಯಾ ಗಿತ್ತು. ೦೦ ೦೦ ೦೦

ಅದೀಗ ಸತ್ಯವಾಯಿತು. ಬೊಂಬಾಯಿ ಕ್ರೋನಿಕ್ಲಿನ ಶ್ರೀ. ಸಿ. ಕೆ. ನಾರಾಯಣ ಸ್ವಾಮಿಯವರು ಆ ಕುರಿತು ಸರಿ ಬೆಳಕು ಬೀರಿದ್ದಾರೆ. ಮಾರ್ಚಿ ತಿಂಗಳಿಂದ ಇದೇ ಜೂನ್ ಮಧ್ಯದ ವರೆಗೆ ಶ್ರೀಮತಿಯವರು ಗುಜರಾಥಿನ ಅಬ್ಬಾಮ ಎಂಬ ಹಳ್ಳಿಯಲ್ಲಿ ಆಯೆಲ ಭಾರತ ಮಹಿಳಾ ಸಂಘದ ಪರ ವಾಗಿ ಶಿಬಿರವೊಂದನ್ನು ತೆರೆದು ಸ್ತ್ರೀ ಕೆಲಸ ಗಾರರನ್ನು ತರಬೇತು ಮಾಡುವುದರಲ್ಲಿ ನಿ ರತರಾಗಿದ್ದರಂತೆ. ದಾರಿ ಹೋಕನ ಕಂ ಗ್ರೇಜುಲೇಶನ್ಸ್! ೦೦ ೦೦

ಶ್ರೀಮತಿಯವರು ರಾಜಕೀಯದಿಂದ ದೂರವಾಗಿ ಇಂತಹ ಕೆಲಸದಲ್ಲೇ ನಿರತ ರಾಗಿಬಿಟ್ಟರೆ! ಕರ್ನಾಟಕ ಪ್ರಾಂತಿಕ ಕಾಂ ಗ್ರೆಸ್ ಕಮಿಟಿಯ ಪಾಡೇನು? ಸೋಷಿಯ ಲಿಸ್ಟ್ ಪಾರ್ಟಿಯ ಗತಿಯೇನು? ಜೀವ ನ್ಮೃತಾವಸ್ಥೆಯಲ್ಲಿರುವ ಮಂಗಳೂರಿನ ಕಾಂಗ್ರೆಸ್ ಕಮಿಟಿ ಮತ್ತು ಮಜೂರ ಸಂ ಘಗಳ ಭವಿಷ್ಯವೇನು? ಶ್ರೀ. ಶ್ರೀನಿವಾಸ ಮಲ್ಯರ ಹಾಯಿಯು ಗಾಳಿಯೇ ಇಲ್ಲದೆ ನಿಂತುಬಿಡಲಾರದೇ?. —ದಾರಿಹೋಕ.

ಜಪಾನಿಯರ ಮಾತುಗಳು ಸ್ನೇಹಭಾವದಿಂದ ಕೂಡಿರುತ್ತವೆ

—ಮತ್ತು ಅವರ ಮಹತ್ವಾಕಾಂಕ್ಷೆಯೂ ಪ್ರಬಲವಾಗಿರುತ್ತದೆ

ಪೂರ್ವಕಾಲದಲ್ಲಿ ರತ್ನುಗಳು ದ್ವೇಷ ಹುಟ್ಟುಸುವ ಮಾತುಗ-ನ್ನಾಡುತ್ತಾ ಯುದ್ಧಕ್ಕೆ ಬರುತ್ತಿದ್ದರು. ಈಗ ಜಪಾನಿಯರು ಹಾಗೆ ಮಾಡುವುದಿಲ್ಲ. ಸೈನ್ಯಗಳನ್ನು ಕಳುಹಿಸುವುದರಲ್ಲಿ ಲಾಭವಿರುವಂತೆ, ಮಾತುಗಳಲ್ಲಿಯೂ ಲಾಭ ವುಂಟೆಂಬ ಅವರಿಗೆ ತಿಳಿದಿದೆ. ಅವರ ಸವಿಯಾದ ಮಾತುಗಳು ನಿಮ್ಮನ್ನು ಮೋಸ ಗೊಳಿಸಿ, ನಿಮ್ಮನ್ನು ಕಂಗೆಡಿಸಿ, ನಿಮಗೆ ಬಲಹೀನತೆಯನ್ನುಂಟುಮಾಡುವುದು. ಇದು ಜೊತೆ ರಣ ಕಾಸಲ್ಯ ಎಷ್ಟ ರವಿಲ್ಲದ ಜನಗಳ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡುವುದು. ಆದರೆ, ಕೇಡಿಯೋ ಮೂಲಕ ಜಪಾನಿಯರು ಆಡುವ ಸ್ನೇಹಭಾವದ ಮಾತುಗಳಿಂದುಗಡೆ, ಮತ್ತು ಊರುಗಳಲ್ಲಿಯೂ, ಹಳ್ಳಿಗಳಲ್ಲಿಯೂ ಜಪಾನಿಯರ ಸಂಚಾರಿಗಳು ಸ್ಪೀಗಿನಂತೆ ಹರಡಿಸುವ ಮಾತುಗಳ ಹಿಂದುಗಡೆ, ಜಪಾನಿಯರ ಈ ಓಗಳು, ಮತ್ತು ಅವರ ಮಹತ್ವಾಕಾಂಕ್ಷೆಯೂ ಇಂಡಿಯಾ ದೇಶವು ತನ್ನ ರಕ್ಷಣಾ ಕಾರ್ಯಕ್ರಮವನ್ನು ತಗ್ಗಿಸುವುದು—ನಿಮ್ಮ ಸೊತ್ತುಗಳು ನಿನುಗೆ ಆಪೇಕ್ಷಿತ ವಲ್ಲವೇ? ಇಂಡಿಯಾ ದೇಶವು ಫಲವತ್ತಾದ ಜಮೀನಲ್ಲವೇ? ಇಂಡಿಯಾ ದೇಶದ ಸ್ತ್ರೀ ಯರು ಪಾಂಡರ್ಯವತಿಯರಲ್ಲವೇ? ಯುದ್ಧವಿಲ್ಲದೇ ಇಂಡಿಯಾ ದೇಶವನ್ನು ಪ್ರವೇಶಿ ಸಲು ಯಾರು ತಾನೆ ಜಪಾನಿಯರ ಸೈನ್ಯಕ್ಕೆ ಸೇರಲಾರರು!

ಚೀನಾ ದೇಶದ ಹೆಂಗಸರಿಗೆ ತಿಳಿದ

ಚೀನಾ ದೇಶದ ಹೆಂಗಸರು ಜಪಾನಿಯ ಸೈನಿಕರು ಎಂಥ ವರೆಂಬುದನ್ನು ನಿಮಗೆ ಹೇಳಬೇಕಿಲ್ಲ. ಜಪಾನಿಯರು "ನಿ ನ್ನನ್ನು ನಾವು ಬಿಡುಗಡೆಮಾಡುವುದಕ್ಕೆ ಬಂದಿದ್ದೇನೆ" ಎಂದು ಹೇಳುತ್ತಾರೆ—ಆದರೆ ಇದು ದುಷ್ಟ ಸುಳ್ಳು" ಎಂಬುದನ್ನು ಮಹಾಮ್ ಚಾಂಗ್-ಕೈ-ಷೇಕರು ಹೇ ಳುತ್ತಾರೆ. ರತ್ನುಗಳು ನಮ್ಮನ್ನು ಮತ್ತೆ ಬಾಗ ನಮ್ಮ ಇಂತಿ ಯೂ ದೇಶವನ್ನು ಆಕ್ರಮಿಸುವುದಕ್ಕೆ ತಯಾ ರಾಗಿ ಕಾದಿವೆ ನೀವು ರತ್ನುಗಳನ್ನು ಸೋಲಿಸುವುದ ಕ್ಕೆ ತಕ್ಕಷ್ಟು ಉಪಕಾರ ಮಾಡುತ್ತಿದ್ದೀರೋ?

ಜಪಾನಿಯರನ್ನು ಎದುರಿಸುವುದಕ್ಕೆ ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು)

ಮುಖ್ಯ ಕಾರ್ಯಾಲಯ:—ಕೋರ್ಟ್ ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶೇತ್ತ ಮೂಲಧನ ... ... ರೂ. 1,82,100-0- 0

ಕ್ಷೇಮ ನಿಧಿಗಳು ... ... ರೂ 1,71,898-2-11

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್

ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.

ಮಾರಾಟಕ್ಕೆ ಯಂತ್ರಚಾಲಿತ ಅಡಕೆಗಳು, ಚಿನ್ನಾಭರಣಗಳು, ಸರಾಫಾವಹಿವಾಟು ಇತರ ಭದ್ರತೆಗಳ ಮೇಲೂ ಹಿವಾಂಡ್ ನೋಟುಗಳು. ಬೀಲು ಹುಂಡಿಗಳ ಮೇಲೂ ಚಿಕ್ಕ ಮತ್ತ ದೊಡ್ಡ ಸಾಲಗಳು ಮತ್ತ ಓವರ್ ಡ್ರಾಫ್ಟು ಗಳು ಕೃಷಿಕರಿಗೆ ಮತ್ತ ಸುಲಭ ದರಗಳಲ್ಲಿ ಎತ್ತ ಕರಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಸೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೊಬಿತಾ ಅಥವಾ ಸತ್ಕಾರಾಧಿಕಾರಿಯವರಲ್ಲಿ ವಿಚಾರಿಸಿರಿ.

UDIPI, 16th April

— ಮಕ್ಕಳನ್ನು ಹಡೆಯುವದು ಸಾಕು—

ಆಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ಕೋಗದ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂಬೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಪಯ್ಯುಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಪೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಜಿಕ್ಕ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—೦—೦ ಪೋಸ್ಟ್ ಚಾರ್ಜು ಬ ಆಣೆ.

ಮೂಲಕರು —ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡ, ವಿಜಾಪುರ ಚಿಕ್ಕೋಡಿಯಲ್ಲಿ:—ಹಂಬರವಾಡಿ ಸ್ಟೋರ್ಸ್. ಡಾವಣಗೇರಿ.—ಡಾವಣಗೇರಿ ಪ್ರೆಸ್ಸ್. ಬಳ್ಳಾರಿ —ಎಚ್. ವಿಯಪಾಕ್ಷಪ್ಪ ಮರ್ಚಂಟ್, ಬಳ್ಳಾರಿ, ಗೋಕಾಕ—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಪ್ರೇಮವಿದ್ಯಾಶೀರ, ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಜೂಲ್ಯಾ1ನೇ ತಾರೀಖಿನಿಂದ ಪ್ರಾರಂಭವಾಗುವದು ನಿಖಿಲ ಭಾರತ ಆಯುರ್ವೇದ ಮಹಾಮಂಡಲದ "ಭಿಷಕ್" ಪರೀಕ್ಷೆಗೆ ಬೇಕಾದ ವಿಶೇಷ ಪೂರ್ವಭಾವಿ ತರಗತಿಗಳು ಪ್ರಾರಂಭವಾಗುವವು. ಮೆಟ್ರಿಕ್, S. S. L. C. ಮತ್ತು ಈ ಪರೀಕ್ಷೆಗಳಿಗೆ ಶಿಕ್ಷಣ ಪಡೆದವರು ಇಲ್ಲಿ ಸೇರಬಹುದು. ಪ್ರವೇಶಿಸಲಿಚ್ಛಿಸುವವರು ಈ ಜೂನ್ ತಿಂಗಳ ಕೊನೆಯೊಳಗೆ ನಮಗೆ ಬರೆದು ಮಾಹಿತಿ ತರಿಸಿಕೊಳ್ಳಬೇಕು

ವಿಶೇಷ ಮಾಹಿತಿಗಾಗಿ ಒಂದೂವರೆ ಆಣೆಗಳ ಸ್ಟ್ಯಾಂಪ್ ಇಟ್ಟು ಬರೆಯಿರಿ.

ಪಂಡಿತ ತಾರಾನಾಥ, ಪ್ರಿನ್ಸಿಪಲ್.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ನಿದಿವ ಬೆಲ್ಟಿ, ತಾವು, ಹಿತ್ತಾಳಿ, ಕಂಚು ಮೊದಲಾದ ವಿವಿಧ ಸಾತ್ರೆಗಳು ಸಾಮಾಗ್ರಿಗಳೂ ಒಂದೇ ಕದೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಕಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ವಾರ ಭವಿಷ್ಯ

ತಾ. ೨೫-೫-೪೨ರಿಂದ ೨-೬-೪೨ರ ವರೆಗೆ.

ಮೇಷ—ಈ ವಾರದಲ್ಲಿ ಸುಖ ದುಃಖಗಳೆರಡೂ ಮಿಶ್ರವಾಗಿ ಫಲಿಸುವವು. ಉದ್ಯೋಗಿಗಳ ಶ್ರಮ ವ್ಯರ್ಥವಾಗದು ಸ್ಥಾನ ಮಾನಗಳೂ ಯತ್ತ ರೀತಿಯಲ್ಲಿ ದೊರೆವವು ತಾ. 26ರಿಂದ 29ರ ವರೆಗೆ ರಾಜ ಭಯ ಆರಿ ಕ್ಷೆಗಳ ಆಪಾಯಗಳು ಬೀತಿಯಿವೆ

ವೃಷಭ—ಜ್ಞೆಗಳ ಬಲವು ಸಾಕಷ್ಟು ಕೃಷ್ಟಿ ಕರವಿದುವುದರಿಂದ ಭೂ ಕೃಷಿ ವ್ಯಾಪಾರದಿಗಳ ಮೂಲಕ ಧನ ಲಭಿಸುವ ಯೋಗವಿದೆ. ವಿಲಾಸಿ ಜನರಿಗೆ ಖರ್ಚು ಸುಖವಾಯಿಯಾಗುವದೆ. ಸ್ತೀ ಜನರಿಂದ ಆಕಸ್ಮಿಕ ಧನ ಲಭಿಸುವದು. ತಾ 25, 26, 27 ಮತ್ತು 2 ವಿಜಯ್ಯಧನ, ಮಾನದಾಯಿಗಳವೆ

ಮಿಥುನ—ಬುಧಳ ಪೆಂಪಾಟಕ್ಕೆ ಸಲುಕುವಿ ರಿ. ಹೆಚ್ಚಿನ ಸಮಯವನ್ನು ಪರ್ಯಟನೆಯಲ್ಲಿ ಕಳೆವಿ ರಿ. ಕಿತ್ತೂರ್ಣ ಸಂಬಂಧ ಕಹಿಲೆಗಳಪ್ಪ ವರ್ಗದವರ ವಿಶೇಷ ಸ್ಥಾನ ಮಾನಗಳು ಹುಸಿ, ಇತರೆಲ್ಲಂದ ನಿತ್ಯ ದುಃಖಿಸಿಕೊಡಾದ ನಿಮಗೆ ತಾ 26, 27, 28, 29ರಲ್ಲಿ ಸ್ತೀ ಮೂಲಕ ಧನ ಸ್ಪಾಪ್ತಿ, ವಿಜಯೋತ್ಸಾಹಗಳು ಲಭಿಸುವವ

ಕರ್ಕಾಟಕ—ನಿಮ್ಮ ಶ್ರಮಕ್ಕಿಂತ ಅಧಿಕವಾದ ಫಲ ವಾಪನುದಿಗಳನ್ನಿರ ಪ್ರಯಾಸವಿಲ್ಲದೆ ಆಪಾಯಕರವಿದೆ ತನು ಮನೋರೋಗಗಳ ಪೀಡೆಗಳು ನೀವು ಗುರಿಯಾಗಿರುವಿರಾದರೂ ತಾ. 28ರಿಂದ 1ರ ವರೆಗಿನ ದಿನಗಳು ಸಮ ಶಾಂತಿಯಿಂದ ಗಳೆವೆ.

ಸಿಂಹ—ವಾಸ್ತವಾಧಿಕವಲ್ಲದಿದ್ದರೂ ಕೆಲವು ಇವೆಕ್ಕೆ ನಿಮ್ಮ ದುರ್ವ್ಯವಹಾರವೇ ಮುಖ್ಯ ಕಾರಣ, ನಿಮ್ಮ ವರ್ತನೆಯೂ ಜನತೆಗೆ ಸಂತೋಷದಾಯಕವಾಗಿರಲಾರದು. ಆರೋಗ್ಯ ಸ್ಥಾನ ಮಾನ ಮತ್ತು ಧನ ಸ್ಪಾಪ್ತಿಗೆ ಈ ವಾರವು ಉತ್ತಮವಿದೆ ತಾ. 25, 30, 1, 2 ಉತ್ತಮ.

ಕನ್ಯಾ—ಹಿಂದಿನ ಸಾಲ ಶೂಲಗಳಿಂದ ಮುಕ್ತರಾಗಿ ಹೆಚ್ಚಾಗಿ ಸುಖದಿಂದ ದಿನಗಳಿವೆ ಉದರ ರೋಗ ಮತ್ತು ತಕ್ಕುಗಳ ಪೀಡೆಯು ನಿಮ್ಮನ್ನು ಸಾಧ್ಯವಿದೆ ತಾ. 26 27 2 ಈ ದಿನಗಳಲ್ಲಿ ಗೃಹ ಸುಖ, ಧನಲಾಭ, ವಿಜಯಗಳು ಲಭಿಸುವವು

ತುಲಾ—ನಿಮ್ಮ ಸಕಲ ವಾಂಚಿತಫಲಗಳೂ ನಿಶ್ಚಿಯವು ದಿನಗಳು ಈಗಾಗಲೆ ಸವಿಾಪಿಸುತ್ತಿವೆ. ಲಾಟ್ರಿ ಸಟ್ಟೆ ಮೊದಲಾಗಿ ಅನಿರೀಕ್ಷಿತ ದ್ರವ್ಯಗಳ ಸ್ಪಾಪ್ತಿಯೂಗುವದು ಗೃಹ ಪಾಪತ್ರಯಗಳಂದ ಮುಕ್ತರಾಗುವಿರಿ. ಸ್ಥಾನ ಮಾನ ಆರೋಗ್ಯಗಳಿ ಈ ವಾರವು ಉತ್ತಮ ತಾ 25, 28 29 ಸಮಿೀನ್ಸ್, ವಿಜಯ

ವೃಶ್ಚಿಕ—ಎಲ್ಲಿ ನೋಡಿದರೂ ವಿರೋಧಿಗಳ ತಂಡವೇ ಕಾಣಿಸುವದು. ಸದಾ ಪರಾಧೀ, ಮನೆಯವರೊಡನೆ ನಿತ್ಯವು ಕಲಹವಾಗಲಿದೆ. ಹಣದ ಮುಗ್ಗಟ್ಟು ಸಹಿಸಲಶಕ್ಯವೇ ಸರಿ. ಕಷ್ಟಾಪ್ತಿ ತಾ 25, 28 29ನ್ನು 2 ಅತ್ಯಂತ ಖರಾಬದಿನ.

ಧನು—ನೌಕರಿ ಬಗರಿಗಾ ಸೇವಕ ವರ್ಗದವರಿಗೂ ಈ ವಾರವು ಶ್ರೇಯೋದಾಯಕವಾಗಿದೆ ವ್ಯಾಪಾರಿ ಜನರಿಗೆ ಅಶಾಂತಿಕ್ಷೇತ್ರ ಸಹಪಟ್ಟಿಯಿಂದ ಗಲಿದೆ. ಕೋರ್ಟು ಕಛೇರಿಗಳ ಸಲುವಾಗಿ ವ್ಯರ್ಥ ಖರ್ಚುಗಳುಂಟಾಗುವವು. ಕಾರ್ಯಪೂರ್ಣವಾಗದ ವಿಷಯಗಳು ತಾ 26, 27, 30, 1ನೇ ದಿನಗಳಲ್ಲಿ ಪೂರ್ಣವಾಗುವವು ತಾ 25, 28 ಉತ್ತಮ.

ಮಕರ—ಪಕ್ಷೀ ಪುತ್ರರೂ ಸೇವಕ ಜನರೂ ನಿಮ್ಮ ಅಸ್ಥಿರಚಿತ್ತದಿಂದ ಪೀಡಿತರಾಗುವರು. ಮಾತ್ರವಲ್ಲ, ನಿಮ್ಮ ಕಲಕಪುಟಿಯಿಂದ ಇದರಿಂದ ಸಂಸಾರದಲ್ಲಿ ವಿರಸ ತೋರಬಹುದು. ಕಬ್ಬುಗಳಿಗೆ ಪ್ರತಿಕ್ರಿಯಾಚರಣೆಯಿಂದ ಕೃಪ್ತರಾಗಿ ವಿರಿ. ತಾ. 25, 26, 27, 30, 1 ಉತ್ತಮ.

ಕುಂಭ—ನಿಮ್ಮ ಸಕಲ ಕಾರ್ಯಗಳೂ ನಿರ್ವಿಘ್ನದಿಂದ ನೆರವೇರಲಿವೆ ಆದರೆ ತಂದೆ ಮಕ್ಕಳ ನಡುವೆ ಮತ ಭೇದವುಂಟಾಗಿತು. ತಾ, 25, 30, 1 ಶುಭಕಾಲವಿದೆ.

ಮೀನ—ಅಡಚಣಿ ಕಪ್ಪದು, ಕಪ್ಪು ಸಂಬಂಧವಾದ ಕಾಣಿಲೆಗೆ ಗುರಿಯಾಗಬಹುದು. ರಾಜಕೀಯ ರಂಗದಲ್ಲಿ ವಿಶೇಷ ಹಿರ್ಷ, ಪರಾಜಯ, ಮಾನಹಾನಿ ಮೃತಿ. ಹೆರವರಿಗೆ ತಲೆ ಬಗ್ಗಿ ನಡೆಯಬೇಕಾಗಿರಿ ಮಹದ್ವಿರೋಧಿಗಳನ್ನು ಕೂಡ ಎದುರಿಸುವ ಆತ್ಮಾತ್ಮ ಕ ಶಕ್ತಿ ನಿಮ್ಮದಿದೆ. ತಾ. 28, 29, 30, 1ನೇ ಸೋಮವಾರ ಮತ್ತು ಸುಖ ಸಾಧಕಗಳಾಗಿವೆ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಪ್ರೀ ಪುರುಷರ ಪ್ರೀತಿಯು ಘಾಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ವೇಶದ ಮೈಥ್ಯ ಕನ್ನೆಗಳು ಮೋಹಿಸುವ ರಹಸ್ಯಗಳು,



ಹಾಸಿಗೆಯ ಸುಖ ವಿಲಾಸಗಳು, ಪ್ರೀ ಪುರುಷರು ದಿನಂಪ್ರತಿ ಎದುರಿಸುವ ಗುಮ್ಮುಗಳು, ಪ್ರಣಯಚೆಷ್ಟೆ ಇವು ಎಲ್ಲಾ ವಿಷಯಗಳ ಸಚಿತ್ರ ಸಂಪೂರ್ಣ ವಿವರಣೆಗಳು ಪ್ರೇಮವನ್ನು ಸುತ್ತಿ ಸಂಯೋಗಕಾಲದ ಸರ್ಮಗಳು, ಇನ್ನೂ ಅನೇಕ ಪ್ರೀತಿಯ ಮತ್ತಿಕರವು, ವಿಲಾಸವು ವಿವಿಧ ಶೃಂಗಾರ ರಹಸ್ಯ ಕೋಷ್ಠಕಗಳು ಆಡಗಿವೆ. 300 ಪುಟಗಳುಳ್ಳ ಪೊಸ್ತ ಪುಸ್ತಕ

ಪುಸ್ತಕ ಒಂದಕ್ಕೆ ಕ್ರಯ ರೂ 1-4-0

ಜೈನಿನ ಪ್ರೀಡಿಂಗ್ ಕಂಪೆನಿ

260, ಪೈನಾಬಜಾರ್ ರೋಡ್, ಮದರಾಸ್

BHUVANENDRA PRODUCTS Ltd.,

Head Office and Factory:

Katapadi, S. Kanara

Depots:

1 Malrath, Galli, Hubli

2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all. Antiseptic, astringent, aromatic. Usfeul in Pyorrhoea, Alveolaris Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ

ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಸಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಡ್ರಗ್ಸ್‌ಲ್ಟಿಂಗ್ ಶೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಕೆಳ್ಕೆ ರಥಬೀದಿ (3) ಡಾಕ್ಟರ್ ಪಿ. ಜೆ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ ಶೇಷಗಿರಿ ಪೈ L. I. M. ಡಾಕ್ಟರ್ ಎಂಕಟರಾಸ್, ಕೊರಡ್ಡಲ್

ಅಮೃತಾಂಜನ

ತಲೆವ್ಯಥೆ, ತಿರೋವೇದನೆ, ಉಳಕು, ಕುತ್ತಿಗೆ, ಭುಜ, ಪಲ್ಲುನೋವುನೆಗಳಿಗೂ ಎದೆನೋವು, ಧಾಯಗಳು, ಬಾತುಕೊಳ್ಳುವುದು, ಜೇಳು ನಿಷ ಮುಂತಾದ ಬೇನೆ, ಸ್ವಸ್ಥಾತ, ಮೊದಿಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು

ಕಜ್ಜಿ,ತುರಿಕಜ್ಜಿ,ಹುಳುಕಡ್ಡಿ,ಪಿತ್ಥ ಉವದ್ರವ, ತಲೆ ಹುಣ್ಣು, ವ್ರಣ ನೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,
ಬೊಂಬಾಯಿ, ಮದ್ರಾಸು, ಕಲ್ಕತ್ತ

The Moolky Bank, Ltd.,

MOOLKY, S.K

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್, ಮೂಲ್ಕಿ, ದ ಕ

(ಗ್ರಾಮಸ್ವರ ಪ್ರಯೋಜನಾರ್ಥ, ಅನರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹೆಣಸನ್ನು ಸಾಲ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಹಕರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಬೇಪ್ಪಿಸುವುದು

M. R Punja, President & Manager

ಯಂ. ಆರ್ ಪೂಂಜ, ಪ್ರಸಿಡೆಂಟ್ ಮತ್ತು ಮಾನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸಸೂರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : ಮಂಗಳೂರು.

FIXED DEPOSITS

are now accepted at all our offices, at attractive rates of interest For further particulars please apply to any of our offices

ಖಾಯಮ್ ಠೇವಣಾತಿಗಳು.

ನಮ್ಮ ಜಿಂತಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

THE VIJAYA BANK, LIMITED.

ಸ್ಥಾಪನೆ ಪ್ರಾಮಾಣಿಕತೆ ಸ್ಥಾಪಿಸಿದ ಕಂಪನಿ 1936

18 ಎಲ್ಮರ ರಸ್ತೆ, ಮಂಗಳೂರು

ರಬ್ಬರ್ ಸ್ಟಾಂಪು ಸೈನ್ ಬೋರ್ಡ್ ಫೈಟ್ಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE

Approved firmly by the Govt Mysore
Certified by the Govt of India in Ceylon

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ಮಾಸಿಕಗಳ ಚರಿತ್ರೆಗಳು, ಸಾರವರ್ಧಕ ಮತ್ತು ಧಾರ್ಮಿಕ ಗ್ರಂಥಗಳು ನಾರಾರು ಬಗೆಯಲ್ಲಿ ಪ್ರಕಟವಾಗಿ ಅತ್ಯಧಿಕ ಮೌಲ್ಯತೆಯ ಸ್ವಲಂಕರಿಸಿವೆ, ಪ ಸವನ್ನು ಸೇರಿದೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅಮಾತ್ಯಹಂದಿನಿ	ಬೆಲೆ ೧ ೮ ೦
ಅನಿವಾಹಿತರ ಸಮಸ್ಯೆ	೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦

ಕಡಲಾಗಿ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾನೇರಿ

ಬರೆಯರಿ — ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು.

ಸೀಸೆ ೧ಕ್ಕೆ ೧೨ ಆಣೆ; ೪ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು.— ನವಭಾರತ ಬುಕ್ ಡಿಪೋ, ಉಡುಪಿ.

DIAMONDS! ವಜ್ರಗಳು! DIAMONDS!

K. R. K. SHET.

Opposite Govt College, Hampankatta MANGALORE.

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್ಮೆಸ್ಸೈ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎಮರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್ಟಿ, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ನಿಜಸ್ಯರು ಮಾಡಲ್ಪಟ್ಟ ಔಷಧಿ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸೂಕ್ಷ್ಮವಾಗಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅನೋಪಮಾನ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೧ ಡ್ರಾಮ್‌ನ ಬಾಟ್ಲಿಗಳು ಹೆಚ್ಚುಕಡಿಮೆ ಅರಿವಿಸಗಳಿಗೆ ಬರುವವು, ಆದರೆ ಕೇವಲ ಅಡಾಣಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದಕ್ಷಿ.

EDITED BY K. H. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No M. 3618

Estd. 1921 ಸ್ಥಾಪನೆ

ನವಯುಗ

ಜಾಹೀರಾತು ದರ

(ಒಂದು ಬಾರಿಗೆ)

1 ಪುಟಕ್ಕೆ ... ರೂ 25-0-0
½ „ ... ರೂ. 15-0-0
¼ „ .. ರೂ. 8-0-0
⅛ „ ... ರೂ. 5-0-0
ಕಲಂ ಇಂಚಿಗೆ... ರೂ 1-0-0

ಕಂಟ್ರಾಕ್ಟ್ ದರಗಳಿಗೆ ಬರೆಯಿರಿ
ಮೆನೇಜರ್,
ನವಯುಗ ಉಡುಪಿ.

WEEKLY. ವಾರಪತ್ರಿಕೆ.

ಸಂಪುಟ ೨೧ Vol. 21

FOUNDER
Sri. A. B Shetty, M. L. A

ಸಂಚಿಕೆ ೪೩ No. 43

ಉಡುಪಿ **2—7—1942** ಮಂಗಳೂರು

TOURISTS ONLY IDEAL RESORT

CAFE' ROYAL

(REGISTERED)

SHIVALLI BRAHMINS

High class boarding & lodging house

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮರ ಅತ್ಯುತ್ತಮ
ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಆಗ-!

ಕಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನೆಲಿಸಬಲ್ಲ, ಜೀವನದ ಬಿಂಗೋಲಿನೆತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾತಿಸಿದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ,ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿನ್ನದೇ ಆಗುವ ನಿಮ್ಮಾನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . : ದ. ಭಾರತ.

THE CANARA MUTUAL ASSURANCE COMPANY, LIMITED.

UDIPI : : . . : S INDIA

ಮಗುವನ್ನು ಸಂತೋಷವಾಗಿಟ್ಟಿರಿ.

ಅದಕ್ಕೆ ಗ್ರೈಪ್ ಸಿರಪ್ ಕೊಡಿ

ಟ್ರೇಡ್ T ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಪಾಗೂ ಗುಣಕಾರಿ

ತಯಾರಿಸುವವರು:

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟಿಸ್ಪಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ, ಬೆಂಗಳೂರು ಸಿಟಿ.

DOMINATE THE AIR and WIN!

Give to the

GOVERNOR'S WAR FUND

and provide

MORE PLANES!

ಗನೋರಿಯಾ ಜನಮಾರ್ಗದ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕಾರಣದಿಂದ ಕೀವು ಬರುತ್ತಿದ್ದರೆ, ಭೋತರಕ್ಕೆ ಹಂದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಿಯವಾಗಿದ್ದರೆ,.. ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಷುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರ ವ ಮುಂಜಾನೆ ಹಂಡಿ ಎರಡು ಸಲ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಛಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಣಿಹುಳಿ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿಗೆ ೫ರೂ. ಪೋಸ್ಟೇಜ್ ೪ ಆಣೆ.

ವಿಳಾಸ:—ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ ಧಾರವಾಡ.—ಧಾರವಾಡ ಫಾರ್ಮಸಿ, ಡಾವಣಗೆರೆ:—ಡಾವಣಗೆರೆ ಪ್ರೈಸ್.

ಮೂಲಿಕೆರ ವೈದ್ಯಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ.

ಮಾಲಿಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,**
ಆಯುರ್ವೇದ ಔಷಧಾಲಯ ಗದಗ.

The Pangal Nayak Bank Limited.

ದಿ ಪ್ಯಾಂಗಲ್ ನಾಯಕ್ ಬೇಂಕ್ ಲಿಮಿಟೆಡ್

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು)

ಮುಖ್ಯ ಕಾರ್ಯಾಲಯ — ಕೋರ್ಟ್ ರಸ್ತೆ, ಉಡುಪಿ ನಕ್ಷತ್ರ ಕನ್ನಡ

ತೆತ್ತ ಮೂಲಧನ ರೂ. [illegible]

ಶಾಖೆಗಳು — ಉಡುಪಿ, ಮಂಗಳೂರು, [illegible]

[illegible] ಮತ್ತು ಕುಂದಾಪುರ.

ನಾನಾ ರೀತಿಯ ಕ್ಷೇಮ ಪಡವಣಿಗಳು, ಚೆಕ್ಕ್ ಪ್ರಾಂಚಿಗಳು, ಸರ್ಕಾರೀ ಕಛೇರಿಗಳಿಂದ ಹೊರ ಬರ್ತಿಗೊಳಿಸಲಾದ ಡಿಮಾಂಡ್ ಗಾಡುಗಳ ಬಿಲ್ಲು ಹಂಡಿಗಳ ಮೇಲೂ ಚಿಕ್ಕ ನಿಷ್ಠೆಯಿಟ್ಟ ವ್ಯವಹಾರಗಳು ಪೆಟ್ಟಿಗೆ ದ್ರವ್ಯಗಳು ತೃಪ್ತಿಕರವಾಗಿ ಪರಿಹರಿಸಲ್ಪಡುತ್ತವೆ. ಇತರ ಬ್ಯಾಂಕುಗಳಿಗೆ ಹೋಲಿಸಿದಲ್ಲಿ ಬೇಂಕಿನ ಪ್ರತಿಯೊಂದು ಸೌಕರ್ಯಗಳು ಅತ್ಯಂತ ಕಡಿಮೆ ದರದಲ್ಲಿ ದೊರೆಯುತ್ತವೆ.

ಹೆಚ್ಚಿನ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿರಿ.

UDUPI, 16th April.

— ಮಕ್ಕಳನ್ನು ಪಡೆಯುವವರು ಸಾಕು —

ಅರಕ್ತ ಸ್ತ್ರೀಯರಿ, **ಬರ್ಧ. ಕಂಟೆ.ಸ್ರೋಲ** ರೋಗಗ್ರಸ್ತ ಪಣ್ಣು ಮಕ್ಕಳಿಗೆ

ನಿಮ್ಮ ಮಿನಸ ಈ ಪೌಷ್ಟಿಕಗಳನ್ನು ಅನಪಸ ಮಾಡುವುದರ ಮುಂಚೆ ಶಿಂಜಿತವಾಗಿ ಮುಕ್ತಾಯವಾದಲ್ಲಿ ಸ್ತ್ರೀಯರು ವ್ಯವಹಾರಗಳು ನಿರಾಯಾಸವಾಗಿ ಪಿಲ್ಲುಗುತ್ತಾರೆ ಎಷ್ಟಿದೆ ಸ್ತ್ರೀಯರ ಜೀವಿತದಲ್ಲಿ, ಪ್ರವರರೋಗ, ಹೊಲಕುಮ್ಮು ಗರ್ಭಪಾತ ಸ್ತ್ರೀಯರಿಗೆ ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮವನ್ನು ಪ್ರತಿದಿನವೂ ಪಾಲಿಸಲಾಗುವುದು, ಮತ್ತು ಗರ್ಭಿಣಿಗೆ ಗರ್ಭಪಾತವಾಗುವ ಸಂಭವವಿರುವುದಿಲ್ಲ. ಸಂಜೆಗೆ ಗರ್ಭಿಣಿಯಾಗಿ ಮೂರಿನ ಮೊದಲು ತಕ್ಕುದು ಬೇಕು ಏನು ದಿವಸ ಈ ಔಷಧವನ್ನು ಸೇವಿಸಬೇಕು.

ಹತ್ತೆ — ಪೆರಲೀಪಲ್ಲೆ ಬಿಡಬೇಕು ಒಂದನ ಸಂಪೂರ್ಣ ಔಷಧದ ಕೆಮ್ಮಲ್ಲು ರೂ. ೨—೦

ಮಾಲಕರು — ಹಾಲಪ್ಪಾ ಪತೇರಪ್ಪಾ ಡಾಪಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ನಿಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಮುದ್ರಕ ಧಾವ ಕಸಿ — ಹುಬ್ಬಳ್ಳಿ, ಗದಗ ಬೆಟ್ಟಿಹಾಳ ಇವರಿಂದ ವಿಜಾಪುರ — ದಾಸಪ್ಪ ಅಡ್ಡೆ ಒಂಗಿಪ್ಪ ಧಾರವಾಡದ ವಿಜಾಪುರ ಚಿಕ್ಕೊಡಿಯಲ್ಲಿ — ಶಂಬರಖಾದಿ ಸ್ಟೋರ್ಸ್ ದಾವಣಗೆರೆ — ಶಾಮಣ್ಣಾರ್ಥಿ ಪ್ರೆಸ್ಸ್ — ಬಳ್ಳಾರಿ ಪಾಜ್ ವಿಜಯಾಕ್ಷಿಪ್ಪ ಸರ್ಜಂಡಿ, ಬಳ್ಳಾರಿ, ಗೋಕಾಕ — ಸಂಗಪ್ಪ ವಿಜಯೇಪಪ್ಪ ಅಂಬಾಡಿ

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿನಗೆ? ಚಿಂತೆಯಿಂದ ಇಗುವ ಸ್ವಲ್ಪ ಪೌರುಷವೂ ಹಾಳಾಗುವದು — ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ತಲಪುವ ದಿವಸ ಉಪಯೋಗಿಸಿ ನೋಡಿ ಎಲ್ಲ ಧಾತು ಸಪ್ಪಗಳನ್ನು ಸರಿಪಡಿಸುತ್ತವೆ ಸಕ್ಕರೆ ಬ್ಯಾಧಿ, ನಪುಂಸಕತೆ ಬಿಗಿ ಸಾಮರ್ಥ್ಯ ಮಲಬದ್ಧತೆ, ಮೂರ್ಖತೆ — ಮುಂತಾದ ದುಷ್ಪರಿಣಾಮಗಳನ್ನು ತೆಗೆದು ಹಾಕುತ್ತವೆ ಬುದ್ಧಿಬಲ ಸ್ಮರಣಶಕ್ತಿ, ಆಲಸ್ಯದಲ್ಲಿ ಹುರುಪು ಇತ್ಯಾದಿಗಳನ್ನು ಬರಿಸುತ್ತವೆ ಬೆಲೆ ರೂ. ೨—೪—೦

ಸ್ಪೆಶಲ್ — ನವಯೌವನ ಸೌಂದರ್ಯಕ್ಕೆ ಬೆಲೆ ೬—೮—೦

ಬಾಲಬಲ — ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ ೧—೪—೦

ನಿಳ್ಳಾನ **'ಬಿಕ್ರಂ ಡಿಸ್ಪೆನ್ಸರಿ'**

21-ಕ ಸಿಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಡಿ ಸ್ವಾಮಿಸ್ಟರು **ನವಭಾರತ ಪುಸ್ತಕ ಭಂಡಾರ, ಉಡುಪಿ**

ವಾರ ಭವಿಷ್ಯ

ತಾ. ೨೬-೭-೪೨ರಿಂದ ೯-೮-೪೨ರ ವರೆಗೆ.

ಮೇಷ—ದೇಹ ಸೌಖ್ಯವನ್ನು ಗಮನಿಸಿಕೊಳ್ಳಿರಿ. ಸ್ವಲ್ಪವೂ ಸುಖವಿರಲಾರದು. ಕಷ್ಟಪಟ್ಟು ದುಡಿದರೂ ಇಷ್ಟಾರ್ಥವು ನೆರವೇರಲ್ಲೊಬ್ಬದು. ತಾ. ೨೭, ೨೮ರಲ್ಲಿ ದುಸ್ವಪ್ನದಿಂದ ಮನಸ್ತಾಪವುಂಟಾಗಿ ಧನಹಾನಿ ಸಂಭವ. ಸ್ಥಿರಾಸ್ತಿ ವಿಷಯಗಳು ಸಂಭವಿಸುವವು.

ವೃಷಭ—ಬಿದ್ಯಪ್ಪವು ಉತ್ಸಾಹವು ಮೂಡುವುದು. ಸಂತತಿಯಿಂದ ಸಂತೋಷವುಂಟಾಗುವುದು. ಸಂತತಿಯಿಂದ ಸಂತೋಷವೂ ಇಷ್ಟಾರ್ಥವೂ ಅಲ್ಪಾಯಾಸದಿಂದ ಲಭಿಸುವದು ಮಹತ್ವರವಾದ ಕಾರ್ಯಗಳಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ ತಾ. 2, 3, 4, 5 ಮತ್ತು 9 ಸುಖಲಾಭ.

ಮಿಥುನ—ದೇಹಬಲ ಇಲ್ಲದ ಕಾರಣ ವಿನಾಕಾರಕ್ಕೆ ಕುಂದಿತವಾಗುವದು ಅಧಿಕಾರಿ ವರ್ಗದವರಿಂದ ಉಪದ್ರವ, ಶರೀರಾಲಸ್ಯ ಇತ್ಯಾದಿಗಳಿಂದ ಸ್ವಲ್ಪ ಸಮಯವನ್ನು ನಿಮಗೆ ಶಾಂತಿಯಿರಲಾರದು. ಆದರೂ ತಾ. 10ರಿಂದ 15ರ ವರೆಗಿನ ದಿನಗಳಲ್ಲಿ ಕೊಂಚ ಲಾಭ, ಸುಖಕ್ಕೆ ದೆಯಿಪೆ

ಕರ್ಕಾಟಕ—ಉತ್ಪತ್ತಿಗಿಂತ ಖರ್ಚು ಸ್ವಲ್ಪ ಅಧಿಕ. ರೆತ್ತು ಜನರ ಪೀಡೆ, ಪ್ರವಾಸದಲ್ಲಿ ಕಷ್ಟ, ನಷ್ಟ, ಅಧಿಕಾರ್ಥಿಗಳು ಪ್ರಬಲವಾಗಿರುವರು ಪಾರಾಂತ್ಯದ 1 ದಿನಗಳು ಸುಗಮ

ಸಿಂಹ—ಉಪಾಯಜ್ಞರಾದ ನೀವು ಆಯಾಸವಿಲ್ಲದೆನೇ ಮನಸಂಕಲ್ಪವನ್ನು ನೆರವೇರಿಸಿಕೊಳ್ಳುವಿರಿ ಆದರೆ ಜನತೆಯಲ್ಲಿ ನಿಮ್ಮ ಕಲಹಗಳು ಅಧಿಕ್ಷನಗಳು ಬಹುದು ವಾಣಿಜ್ಯವೃತ್ತಿಯವರಿಗೀಕಾಲವು ಪ್ರತಿಕೂಲವಿದೆ ತಾ. 1, 5, 6, 7, 8, 9 ರ ಜಯ ಆಲಸ್ಯ ಮತ್ತು ಶ್ರಮ ದಾಯಿಗಳಾಗಿವೆ

ಕನ್ಯಾ—ನಿಮ್ಮ ಪರಿಶ್ರಮಕ್ಕೂ ಮಿಗಿಲಾದ ಪ್ರತಿಫಲ ಸಿಕ್ಕಿ ವ್ಯಾಪಾರ ಮತ್ತು ಕೋರ್ಟು ಕಛೇರಿಗಳಲ್ಲಿನ ಕಾರ್ಯಗಳಲ್ಲಿ ನಿಮ್ಮ ಅಭೀಷ್ಟವು ನಿರೀಕ್ಷೆಯಿಂದ ನೆರವೇರುವುದು

ತುಲಾ—ಆಪ್ತೇಷ್ಟರ ವಿರಹ, ವಿರೋಧಿಗಳ ಪೀಡೆ, ಲೇವಾದೇವಿ ನಿಮಿತ್ತ ಮನಸ್ತಾಪ, ವ್ಯಾಪಾರ ವಿಜ್ಞಾನಾದ್ಯುದ್ಯಮಿಗಳು ಒಳ್ಳೇ ಯಶಸ್ಸನ್ನು ಹೊಂದುವರು. ತಾ. 10ರಿಂದ 15ರ ವರೆಗಿನ ದಿನಗಳಲ್ಲಿ ಶರೀರ ಸುಖ, ಸ್ತ್ರೀ ಮೂಲಕ ಧನಾಪ್ತಿ, ವಿಜಯಾದಿಗಳು ಲಭಿಸಬಹುದು.

ವೃಶ್ಚಿಕ—ಸದ್ಯ ನೀವು ಋಣಾದುರ್ದೈವಿಗಳು ಶರೀರಕ ಮಾನಸಿಕ ಮತ್ತು ಸಾಂಸಾರಿಕ ವ್ಯಥೆ ಸಾಕಾಂಕ್ಷೆದೆ 4 ದಿನಗಳಲ್ಲಿ ಕಷ್ಟ ಸುಖಲಾಭ.

ಧನು—ನಿಮ್ಮ ಶಕ್ತಿಯುಕ್ತಿಗಳ ಪ್ರದರ್ಶನಕ್ಕೆದು ಅನುಕೂಲ ಸಮಯ, ಧನಜನ ಬಲವು ನಿಮಗೆ ಅಧಿಕವಿರುವುದು ವ್ಯವಹಾರಿಕ ಸೌಹಾರ್ದತೆಯೂ ನಿಮಿತ್ತ ಕಂಚಿತ್ಕಲಹ ವ್ಯಯಪ್ರಾಪ್ತಿಯು. ತಾ. 2, 3 ಮತ್ತು 9 ಈ ದಿನಗಳು ನಿಮ್ಮ ಸುಖ, ಲಾಭ, ವಿಜಯಗಳಿಗೆ ಕಾರಣಗಳಾಗಿವೆ

ಮಕರ—ಗೃಹತಾಪತ್ರಯಗಳು ದೂರವಾಗುವವು. ಅರ್ಧಿಕ ಸಮಸ್ಯೆಯಿಂದ ಪಾರಾಗುವಿರಿ ಸೇವಕ-ವರ್ಗದವರೊಡನೆಯೂ ಅಧಿಕಾರಿಯಿಂದಲೂ ಕೂಡ ಕಲಹವಾದೀತು ತಾ. 4, 5, 6, 7 ಉತ್ತಮ ದಿನಗಳು ನಿಮಗೆ ಬಹಳ ಪ್ರತಿಕೂಲವಿವೆ

ಕುಂಭ—ವಿಪಕ್ಷೀಯರೂ ಕೂಡ ನಿಮ್ಮ ಶೌರ್ಯ ಪರಾಯಣಾದಿ ಗುಣಗಳಿಗೆ ಮನಸೋತು ತಮ್ಮಲ್ಲಿನ ಅಂತಃಕಲಹವನ್ನು ಮರೆಸುವರು. ಗೃಹಚ್ಛಿದ್ರಗಳು ಅಲ್ಲಲ್ಲಿ ತಲೆದೋರಲಿವೆ. ಸುಖಸ್ಥಾನದಲ್ಲಿ ಶನೈಶ್ಚರನು, ಕುಳಿತಿರುವುದರಿಂದ ನಿಮ್ಮ ಮನಸ್ಸಿಗೆ ಸದಾ ನೆಮ್ಮದಿಯಿರಲಾರದು. ತಾ. 3, 6, 7, 8 ಅನುಕೂಲವಿವೆ

ಮೀನ—ಸ್ವಕೀಯರು ಆಪ್ತರು ಮಿತ್ರರು ಸ್ನೇಹಿತರು ನಿಮ್ಮಲ್ಲಿ ಅಭಿಮಾನವುಳ್ಳವರಾದ ನಿಮಗೆ ಕುಟುಂಬಿಕರ ಬೆಂಬಲವೂ ದೊರೆವುದರಿಂದ ಕೈಗೊಂಡ ಕಾರ್ಯಗಳಲ್ಲಿ ಹೆಚ್ಚಿನವು ನೆರವೇರುವವು ಜಿಗುಪ್ಸಾಗರ್ದವರಿಂದ ನಾನಾ ತರದ ಪೀಡೋಪದ್ರವಗಳು ಸಂಭವಿಸುವವು ಜಾಗರೂಕತೆಯಿಂದಿರಿ.

BHUVANENDRA PRODUCTS Ltd,

Head Office and Factory — Katapadi, S. Kanara

Depots — 1 Mahratha Galli, Hubli; 2. 57 Big street, Triplicane, Madras

"BHUVANENDRA"

Danthadavan Choorna

Economical in use Cheapest in value
Genuine in quality and choiced by all.
Antiseptic astringent, aromatic Useful in
Pyorrhoea Alveolaris Removes tartar
Prevents caries of the teeth.

ಭುವನೇಂದ್ರ ಸ್ಟೋರ್ಸ್ ಕನ್ಸಲ್ಟಿಂಗ್ ರೂಮ್ಸ್ ಇಂದ ಫಾರ್ಮಸಿ, (2) ಶ್ರೀ ಆರ್. ಎಸ್. ಶೆಟ್ಟಿ ರಥಬೀದಿ (3) ಡಾಕ್ಟರ್ ಪಿ. ಜೆ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ L. I. M. ದಾಕ್ಷರ್ ವೆಂಕಟ ರಾವ್, ಕೊರವಲ್

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ರೋಗಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಮಿ. ಚರ್ಚಿಲ್ಲರ ಆಗಮನ.

ರುಸವೆಲ್ಟ್- ಚರ್ಚಿಲ್ಲರು ಮುಖ್ಯವಾಗಿ ಎರಡು ವಿಷಯಗಳಲ್ಲಿ ಒಮ್ಮತಕ್ಕೆ ಬಂದಿರುವರು. ವಿರೋಧಿಯ ಸಬ್‌ಮೆರೀನ್ ಹಾವಳಿಯಿಂದ ವಿಪರೀತ ಹಡಗ ನಷ್ಟವಾಗುತ್ತಿರುವದರಿಂದ, ವ್ಯಾಪಾರೀ ಹಡಗಗಳ ನಷ್ಟವನ್ನು ತಗ್ಗಿಸಿ ಅವುಗಳ ಸಂಚಾರವನ್ನು ಸುಗಮಗೊಳಿಸುವ ಹಂಬಲಿಕೆ, ತಯಾರಿ; ಮತ್ತು ರಷ್ಯದ ಮೇಲೆ ಬಿದ್ದಿರುವ ಭಾರವನ್ನು ವಿಭಾಗಿಸುವ ಸಲುವಾಗಿ ಜರ್ಮನಿಯನ್ನು ಬೇರೆ ಕಡೆಗೆ ಆಯುವ ಹಂಬಲಿಕೆ ಇವೆರಡು ವಿಷಯಗಳಲ್ಲಿ ಆಂಗ್ಲೋ- ಅಮೆರಿಕನ್ ಒಪ್ಪಂದವಾಗಿದೆ.

ಮಿ. ಚರ್ಚಿಲ್ಲರು ಗುಪ್ತವಾಗಿ ವಾಷಿಂಗ್ಟನಿಗೆ ಪ್ರಯಾಣ ಬೆಳೆಸಿದಂತೆಯೇ, ಆಸಕ್ತಿಕರವಾಗಿ ಲಂಡನ್ನಿಗೆ ವಿಮಾನ ಮೂಲಕ ಮರಳಿ ಬಂದಿರುವರು. ವಾಷಿಂಗ್ಟನಿನ ಚರ್ಚೆಯಲ್ಲಿ ಅಲ್ಲಿರುವ ರಕ್ಷಣಾ ರಾಯಭಾರ ವರಿಷ್ಠೋ(ವ್)ವರೂ ಭಾಗವಹಿಸಿದ್ದರು. ಅಧ್ಯಕ್ಷ ರುಸವೆಲ್ಟರೊಡನೆ ಅಮೇರಿಕನ್ ಕಾಂಗ್ರೆಸ್ ಪ್ರಮುಖರು ಮತ್ತು ಫೆಸಿಫಿಕ್ ಯುದ್ಧ ಮಂಡಲದವರೊಡನೆ ಸಂಭಾಷಿಸುತ್ತಿದ್ದಲ್ಲಿಂದಲೇ ಮಿ. ಚರ್ಚಿಲ್ಲರು 'ಬ್ರಿಸ್ಟೋಲ್' ಎಂಬ ಲೋಕದ ಅತಿ ದೊಡ್ಡ ಬೋಟು ವಿಮಾನ ಹತ್ತಿ ಲಂಡನ್ನಿಗೆ ಸುಕ್ಷೇಮವಾಗಿ ಬಂದಿಳಿದು ಸಂಭ್ರಮದ ಸ್ವಾಗತ ಪಡೆದರು.

ಭೇಟಿಯ ಸಕ್ಷಿಪ್ತಾನುಮ.

ಚರ್ಚಿಲ್- ರುಸವೆಲ್ಟ್ ಭೇಟಿಯ ಕುರಿತು ಲಂಡನ್ ಮತ್ತು ವಾಷಿಂಗ್ಟನಿನಲ್ಲಿ ಜತೆಸೇಳಕೆಯೊಂದು ಹೊರಬಿದ್ದಿದೆ. "ಮಿತ್ರ ರಾಷ್ಟ್ರಗಳು ಯುದ್ಧ ವಿಜಯಕ್ಕಾಗಿ ಹಿಂದೆಂದೂ ಈ ರೀತಿಯ ಹೃದಯೈಕ್ಯತೆಯ ಹಾಗೂ ಸಮರ್ಥವಾದ ಒಪ್ಪಂದಕ್ಕೆ ಬಂದುದಿಲ್ಲ' ಎಂದು ಆ ಹೇಳಿಕೆಯಲ್ಲಿದೆ. ಹಡಗ ಸಂಚಾರದ ಉತ್ತಮ ವ್ಯವಸ್ಥೆ, ರಶ್ಯಾ ಧಾಳಿಯ ರಭಸ ಕುಗ್ಗಿಸುವ ಯೋಜನೆ, ಚೀನಾಕ್ಕೆ ಸಹಾಯ ಮೊದಲಾದ ವಿಭಾಗಗಳು ಈ ಒಪ್ಪಂದದಲ್ಲಿವೆ.

ಅಮೇರಿಕೆಯು ಧಾಳಿ ನಡಿಸುವದೆ?

ದಕ್ಷಿಣ ಶಾಂತ ಸಾಗರದಲ್ಲಿ ಮುನ್ನುಗ್ಗಲು ಅನುಕೂಲವಾಗಿರುವ ಸ್ಥಳವೊಂದಕ್ಕೆ ಹಲವು ಸಾವಿರ ಅಮೇರಿಕನ್ ಸೇನೆಗಳು ಬಂದಿಳಿದಿವೆ. ಅವೆಲ್ಲಾ ಸಕಲ ಯುದ್ಧೋಪಕರಣಗಳ ಅನುಕೂಲತೆಯಿಂದಿನ್ನು ಧಾಳಿ ನಡಿಸುವ ಸಿದ್ಧತೆಯಿಂದಲೇ ಬಂದಿವೆ- ಎಂದು ಅಮೇರಿಕದ ಮೇಜರ್ ಎಮ್. ಪೊಸ್ನರು ತಿಳಿಸಿರುವರು.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಣಿಯೂರ ಕಟ್ಟೆಯ್ಯಾ, ಉಡುಪಿ.

ಸೋಲ್ಡರಗಡಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶೇಷ ಅನುಕೂಲತೆಗಳಿವೆ.

ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್, ಮ್ಯಾನೇಜರ್.

ವಾರದ ವಿಶೇಷ ವಾರ್ತೆ

ಇಜಿಪ್ಶಿನಲ್ಲಿ ನಾಜೀ ಮುಂದೋಟ.

ಲಿಬ್ಯದ ಬೋಬ್ರುಕ್‌ನ್ನು ಜಯಿಸಿದ ನಾಜೀ ಸೇನಾನಿ ಜನರಲ್ ರೋಮೆಲರು ನೇರಾಗಿ ತನ್ನ ಸೇನೆಯನ್ನು ಇಜಿಪ್ಶಿನೊಳಗೆ ಹೊಗಿಸಿದ್ದಲ್ಲದೆ ಸುಯೇಜ್ ಕಾಲಿನೆಯ ನೇಲೆ ಬೋಂಬು ಧಾಳಿಮಾಡಹತ್ತಿರುವದರಿಂದ ಆತುರಕ್ಕೆಡೆಯಾಗಿದೆ. ಬ್ರಿಟಿಷ್ ಪತ್ರಿಕೆಗಳೂ ಪಾರ್ಲಿಮೆಂಟ್ ಸದಸ್ಯರೂ ಉದ್ವೇಗ ಪ್ರದರ್ಶಿಸುತ್ತಿದ್ದಾರೆ. ಕಾಮನ್ಸ್ ಸಭೆಯಲ್ಲಿ ಮಿ. ಚರ್ಚಿಲ್ಲರು ವಿಮರ್ಶಿಗುತ್ತರವೀಯಲಿರುವರು.

ಜನರಲ್ ರೋಮೆಲರ ಸೇನೆಯು ಇಜಿಪ್ಶಿನೊಳಗೆ ಒಳಹಾದಿ ಹಿಡಿದು ಒಂದೇ ಬಾರಿಗೆ 80 ಮೈಲು ನುಗ್ಗಿತು. ಬ್ರಿಟಿಷರ ಬೋಂಬು ಧಾಳಿ ನಡೆದೇ ಇತ್ತು. ಈಗ ಪಶ್ಚಿಮ ಕಂಠವಳಿಯಿಂದ ಮುಂದೊತ್ತಿ ಜರ್ಮನ್ ಸೇನೆಯು ಮೆರ್ಸ ಮಟ್ರೂ ಎಂಬ ಪ್ರಾಮುಖ್ಯ ನೆಲೆಯನ್ನು ಸವಿಾಪಿಸುತ್ತಿದೆ. ಬ್ರಿಟಿಷರ ಪ್ರಬಲ ಸೇನೆಯು ಹೋರಾಟ ಕೊಡುತ್ತಿದೆ. ಮೆರ್ಸಾ ಮಟ್ರೂ ತಮ್ಮ ಕೈವಶವಾಯಿತೆಂದು ನಾಜೀ ಪ್ರಕಟಣೆಯಿದೆ. ಸುಯೇಜ್ ಕಾಲಿವೆಯಲ್ಲಿ ಸಂಚರಿಸುತ್ತಿದ್ದ ಹಡಗಗಳ ಮೇಲೆ ಜರ್ಮನರು ಆಯರಸ್ತೀ ಧಾಳಿ ನಡಿಸಿದರು. ಬ್ರಿಟಿಷ್ ವಿಮಾನಗಳು ಕ್ಷಣ ಬಿಡದೆ ಕಾರ್ಯ ನಿರತವಾಗಿವೆ.

ಇಂಗ್ಲಾಂಡಿನಲ್ಲಿ ಅತೃಪ್ತಿ

ಲಿಬ್ಯದ ಪತನ ಮತ್ತು ಇಜಿಪ್ಶಿನ ದುರವಸ್ಥೆಯಿಂದ ಇಂಗ್ಲಾಂಡಿನಲ್ಲಿ ಅಸಮಾಧಾನವುಂಟಾಗಿದೆ. ಸೇನಾನಿಗಳ ಆಚಾತುರ್ಯ, ಹಿಂದಿನ ವಾಕಗಳಿಂದ ಬುದ್ಧಿ ಕಲಿಯದ ಸ್ವಮಾನ, ಕೈತಪ್ಪಿದು ನಿಲ್ಲುವ ಜಾತ್ಯ, ಯುದ್ಧ ಸಾಮಗ್ರಿಗಳ ಅಭಾವ ಮೊದಲಾದುವುಗಳ ಕುರಿತು ಟೀಕೆಗಾರಂಭವಾಗಿದೆ. ಮಧ್ಯ ಪೂರ್ವದ ಯುದ್ಧ ಚಾಲಕತ್ವದ ಕುರಿತು ಅವಿಶ್ವಾಸ ಸೂಚಕ ಸಭೆ ಸೂಚನೆಯು ಪಾರ್ಲಿಮೆಂಟಿನ ಮುಂದೆ ಬಂದಿದೆ. ಬೋಬ್ರುಕಿನ ಪತನವು ಅಗಣ್ಯ ಪ್ರಾಮುಖ್ಯವೆಂದು ಕದೆಗಣಿಸಿ, ಯುದ್ಧ ವಿಜಯದ ಕುರಿತು ಮಿ. ಚರ್ಚಿಲ್ಲರು ಆಶ್ವಾಸನೆಯಿತ್ತಿರುವರಾದರೂ ಪಾರ್ಲಿಮೆಂಟಿನಲ್ಲಿ ಎಲ್ಲವನ್ನೂ ವಿವರಿಸಿ ಸದ್ಯದಲ್ಲೇ ಅವರು ಭಾಷಣವೀಯಬೇಕಾಗಿ ಬಂದಿದೆ.

ರಶ್ಯದ ಯುದ್ಧ.

ರಶ್ಯದ ಕಾರ್ಕೋವ್‌ನ ರಣಕ್ಷೇತ್ರವು ಅತ್ಯುಗ್ರವಾಗಿದೆ. ಜರ್ಮನರು ಅಲ್ಲಿಯ ವಿಜಯಕ್ಕಾಗಿ ಅತಿ ಹೆಚ್ಚಿನ ವಿಮಾನ, ಟೀಂಕುಗಳನ್ನು ಪಯೋಗಿಸಿದುದರಿಂದ ರಶ್ಯನರಲ್ಲಿಯ ಕುಷ್ಯಾನ್ಸ್ ವಿಭಾಗದಿಂದ ಹಿಂಜರಿದು ನಿಂತಿರುವರು ಸೆಬಸ್ತ್ಪೂಲಿನಲ್ಲಿ ಪ್ರಬಲ ನಾಜೀ ಒತ್ತಾಟ ದಿದಿರು ರಶ್ಯನರ ಪ್ರತಿಭಟನೆ ನಡೆದಿದೆ.

ಕಾರ್ಕೋವಿನಲ್ಲಿ ಜರ್ಮನ್ ಧಾರಣಾ ಹೋರಾಟ ನಡೆಯುತ್ತಿದೆ. ಅಲ್ಲಿಯೊಂದೆಡೆ ಒಂದೇ ದಿನದಲ್ಲಿ 31 ವಿಮಾನ ಯುದ್ಧಗಳು ನಡೆದು 31 ಜರ್ಮನ್ ವಿಮಾನಗಳು ನಾಶವಾದವು. ರಶ್ಯನರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಜರ್ಮನ್ ವಿಮಾನಗಳ ಸಾಲು ಸಾಲಿಗ ಧಾಳಿ ನಡೆಯುತ್ತಿದೆ

ಸೆಬಸ್ತ್ಪೂಲ್ ಕಾಳಗ

ಸೆವಸ್ತ್ಪೂಲಿನ ಮುತ್ತಿಗೆಯಾರಂಭವಾಗಿ ಸುಮಾರು ವಾರಗಳು ಕಳೆದಿದ್ದರೂ ರಶ್ಯನರು ಪ್ರತಿಯೊಂದು ಇಂಚಿಗೆ ಜರ್ಮನರನ್ನು ತಡೆಗಟ್ಟುತ್ತಿದ್ದಾರೆ. ಅಲ್ಲಿಯಾಗುತ್ತಿರುವ ಪ್ರಾಣಹಾನಿಯನ್ನು ಕಂಡು ನಾಜೀಗಳು ಇಟಾಲಿಯನ್ ಸೈನಿಕರನ್ನಲ್ಲಿ ಮುಂದೂಡುತ್ತಿರುವರೆಂದು ತಿಳಿದು ಬರುತ್ತದೆ. ಕಳದ ಮೂರು ವಾರಗಳ ಸೆಬಸ್ತ್ಪೂಲ್ ಯುದ್ಧದಲ್ಲಿ 70 ಸಾವಿರ ಜರ್ಮನರು ಮಡಿದರು ಅಥವಾ ಧಾಯಾಳಾದರೆಲ್ಲವೆ ನೂರಾರು ಟಿಸ್ಸಾಗಳು ಮತ್ತು 200 ಟೀಂಕುಗಳು ನಾಶವಾಗಿವೆ. ರಿಸನ್‌ಗ್ರಾಡಿನ ಮೇಲೆ ಧಾಳಿ ನಡಿಸಲು ಬಂದ ವಿಮಾನಗಳಲ್ಲಿ ಸುದಾರನ್ನು ರಶ್ಯನರು ಉರುಳಿಸಿರುವರು.

ಗಾಂಧಿಯವರ ಧೋರಣೆ

ಬ್ರಿಟಿಷರು ಹಿಂದುಸ್ಥಾನದಿಂದ ಕೂಡಲೇ ಮರಳಿ ಬೇಕು ಎಂಬ ಗಾಂಧಿಯವರ ಹೇಳಿಕೆ ಮತ್ತು ಅವರ ಹೊಸ ಚಳವಳಿಯ ಸಿದ್ಧತೆಗಳು ಇಂಗ್ಲಾಂಡು ಅಮೇರಿಕಗಳಲ್ಲಿ ಆತುರವನ್ನು ಹುಟ್ಟಿಸಿವೆ.

ಮಿ. ಜಿನ್ನಾರವರು 'ಬ್ರಿಟಿಷರು ಬಿಟ್ಟು ಹೋದೊಡನೆ ಜಾತೀಯ ಐಕ್ಯ'ನೆಂಬ ಗಾಂಧಿಯವರ ಮಾತಿಗಾಗಿ ಮಹಾತ್ಮರನ್ನು ಹ್ಯಂಗ್ಯಾಗಿ ಟೀಕಿಸಿರುವರು. ತನ್ನ ನಾಲ್ಕು ಬೀಜ ಮಂತ್ರಗಳಲ್ಲೊಂದಾದ 'ಹಿಂದೂ ಮುಸ್ಲಿಮ್ ಐಕ್ಯವಿಲ್ಲದೆ ಸ್ವರಾಜ್ಯವಿಲ್ಲ' ಎಂಬುದನ್ನು ಬಿಟ್ಟು ಗಾಂಧಿಯವರೀಗ ನಿಜಕೇಷ ಪ್ರದರ್ಶಿಸಿರುವರೆಂದು ಜಿನ್ನಾರ ಟೀಕೆ. ಅವರ ನೂತನ ಚಳವಳಿಯ ಬೆದರಿಕೆಗೆ ಸರಕಾರವು ಸೊಪ್ಪುಹಾಕಬಾರದೆಂದು ಮುಸ್ಲಿಂ ಲೀಗ್ ಅಧ್ಯಕ್ಷರು ಎಚ್ಚರಿಸಿರುವರು.

ವಿದೇಶಿಯರ ಅಭಿಪ್ರಾಯ.

ಮಹಾತ್ಮರ ನೂತನ ಧೋರಣೆಯ ಕುರಿತು ಇಂಗ್ಲಾಂಡು ಅಮೇರಿಕದ ಮುಖ್ಯ ಪತ್ರಿಕೆಗಳೂ ಟೀಕೆಗಾರಂಭಿಸಿವೆ. ನ್ಯೂಯೋರ್ಕಿನ 'ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆಯು "ಗಾಂಧಿ ಹೇಳಿಕೆಯಿಂದ ಸಾಧಿಸಲ್ಪಟ್ಟ [illegible] ಗಳಂದರೆ ಜಪಾನಿಯರಿಗೆ ಆಶಯವೀಯುವದೊಂದು; ಗಾಂಧಿಯವರಿಗೆ ಇಂದಿನ ಜಾರ್ತಿ ಪ್ರಪಂಚದಲ್ಲಿ ಸಾಕಷ್ಟು ಸ್ಥಾನ ಸಂಪಾದಿಸಿಕೊಳ್ಳುವದಿನ್ನೊಂದು." ಎಂದು ಟೀಕಿಸಿದೆ. "ನನ್ನ ಸೂಚನೆಯಂತೆ ಮಿತ್ರ ರಾಷ್ಟ್ರೀಯರ ಸೇನೆಗಳು ಭಾರತದಿಂದ ಮರಳಿನಲ್ಲಿ ಜಪಾನಿಯಾಕ್ರಮಣವಾಗುವದಾದರೆ, ಆಗ ಇಲ್ಲಿಯ ರಾಷ್ಟ್ರೀಯ ಸರಕಾರವು ಅನುಮತಿಯೊಗಾಗಿ ಅವು ಇಲ್ಲಿರಬಹುದು." ಎಂದು ಗಾಂಧಿಯವರು ವಿಮರ್ಶಕರಿಗುತ್ತರವಿತ್ತಿದ್ದಾರೆ.

ಚಿಂತಿಸುತ್ತಿರುವುದೇಕೆ?

ವಿಮಾನಧಾಳಿ ಆಥವಾ, ಜನತೆಯ ಮೇಲೆ ನೈರಿಯ ಯಾವ ರೀತಿಯ ಕಾರ್ಯಾಚರಣೆಯಾಗಲಿ, ಹಿಂದುದೇಶದಲ್ಲಿ ವಿಮಾನಧಾಳಿ ಸಂರಕ್ಷಣಾ ಕೆಲಸದಲ್ಲಿ ಕಾರ್ಯನಿರತವುಂಟಾಗುವ ಆಪಾಯವನ್ನು ನಿರ್ಲಕ್ಷಿಸಿ ಒಳಗೊಂಡ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೂಡತ್ತದೆ.

ಆದುದರಿಂದ ಈ ಗಂಭೀರತೆಯ ಸಂದರ್ಭದಲ್ಲಿ ನೀವು ಸ್ವೀಕರಿಸಬೇಕಾದ ಕೆಲವಾಗಿ

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ಪೋಲಿಸಿಯನ್ನು ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದುನ್ನು ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ವಿಜಸ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನೆಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ವಿಜಂಟರು.

ವಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ

ಅಥವಾ ಅವು ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮುಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

The Bombay Life Insurance Company Limited.

Degrees. Books: Medicines

Free H. L. M. S. M. B. H. M. D. etc Free Homeo-Ayur-Unani-Naturo degree by post also—Practitioners also get soon Homeo Materiamedica Rs. 5. Homeo Practice book Rs 4. Insanity Cure Pill Rs. 10 Enclose 2 annas stamp:—

Principal Indian Homeopath Institute & Society (Govt. Regd)

P.O. Mahuva, (Kathiawar Dt, India.)

Sidha-Kalpa Kavach (Regd. No 3 Rs 2, No 2 Rs. 5 No. 1 Rs. 7. Special Rs. 10, Extra Special Rs 17. for ove marriage health wealth. Ask any six questions with M. O Re 1/4 and get correct answers by return post Life reas Rs phle No V. P. P. Send M. O. Fried P. O.ts Prof. Dr N. H. Chhatbar 2upam Mahuva (Kathiawar India)

ಭಾರತದಲ್ಲಿರುವ ವಿದೇಶೀ ಸೇನೆಗಳ ಕುರಿತು ಗಾಂಧಿಯವರ ಅಭಿಪ್ರಾಯ.

ಬ್ರಿಟಿಷರು ಭಾರತವನ್ನು ಬಿಟ್ಟು ತೆರಳ ಲೇಂಬ ತನ್ನ ಸೂಚನೆಯನ್ನು ಸರಿಯಾ ಏವಂಸಬೇಕೆಂದು ಬಂದ ಪತ್ರವೊಂದ ಮಹಾತ್ಮಾ ಗಾಂಧಿಯವರು ಈ ಕೆಳ ನ ಉತ್ತರವಿತ್ತಿರುವರು:—

"ಎಂತಹ ಬೆಲೆಯನ್ನು ತೆತ್ತಾದರೂ ಹಿಂಸಾ ತತ್ವವನ್ನು ನಿಷ್ಠೆಯಿಂದ ಮ ರ್ಯಾದಿಸಲೇ ಬೇಕು. ಅದನ್ನು ಬೌರ್ಬ ಲ್ಯವೆನ್ನುವದಾದರೆ ಸಾರ್ವಜನಿಕರು ನನ್ನ ಬೌರ್ಬಲ್ಯದಿಂದಾಗಿ ಕಷ್ಟಕ್ಕೊಳಗಾಗಬೇ ಕಾಗಿದೆ. ನಿಜವಾದ ಅಪಜಯ ಹೇತುವಾ ಗುವ ಕಾರ್ಯ ಕೈಗೊಳ್ಳುವಂತೆ ಮಿತ್ರ ರಾ ಷ್ಟ್ರೀಯರನ್ನು ಕೇಳಿಕೊಳ್ಳುವ ಅಪರಾಧಿ ಯು ನಾನಾಗುವಂತಿಲ್ಲ. ಜಪಾನರನ್ನು ಹೊರಗೆ ನಿಲ್ಲಿಸುವ ಯಥಾರ್ಥ ಅಹಿಂಸಾ ತ್ಮಕ ಕುರಿತು ನಾನು ಭರವಸೆ ಕೊಡು ವಂತಿಲ್ಲ. ಮಿತ್ರ ರಾಷ್ಟ್ರೀಯ ಸೇನೆಗಳು ಗಡಿಬಿಡಿಯಿಂದ ಹಿಂದೆಗೆಯಲ್ಪಟ್ಟರೆ, ಆ ಸು ಜಪಾನರು ಹಿಂದುಸ್ಥಾನವನ್ನು ಆಕ್ರ ಮಿಸುವದರಲ್ಲಿ ಹಾಗೂ ಚೀನಾದ ಪತನ ದಲ್ಲಿ ಪರಿಣಮಿಸ ಬಹುದು. ನನ್ನ ಕೃತ್ಯದ ಪರಿಣಾಮವಾಗಿ ಇಂತಹ ಅವಾಂತರ ಉಂ ಟಾಗ ಬೇಕೆಂಬ ಲವಲೇಶ ಅಭಿಪ್ರಾಯವು ನನ್ನಲ್ಲಿಲ್ಲ. ಆದ್ದರಿಂದ, ನನ್ನ ಸೂಚನೆ ಯ ಅಂಗೀಕಾರವ ನಂತರವೂ, ಜಾಪಾನ ರ ಆಕ್ರಮಣವನ್ನು ತಡೆಗಟ್ಟುವದಕ್ಕಾಗಿ ಮಿತ್ರ ರಾಷ್ಟ್ರಗಳಿಗೆ ಭಾರತದಲ್ಲಿ ನಿಲ್ಲುವ ಆಗತ್ಯ ಬಿದ್ದಲ್ಲಿ ಅವರು ಹಾಗೆ ಮಾಡಬ ಹುದೆಂದು ನನಗನ್ನಿಸುತ್ತದೆ. ಅದು ಮಾತ್ರ, ಬ್ರಿಟಿಷರ ಆಗಲುವಿಕೆಯ ನಂತರ ಬ ರುವ ರಾಷ್ಟ್ರೀಯ ಸರಕಾರದ ಶರ್ತಗಳಿ ಗೊಳಪಟ್ಟಿರಬೇಕು.

ಬಹಳವಾಗಿ ಘೋಷಿಸಲ್ಪಡುತ್ತಿರುವ ನ್ಯಾಯ, ಪ್ರಜಾಸತ್ತಾರಕ್ಷಣೆ, ವಾಕ್ಸ್ವಾ ತಂತ್ರ್ಯ ಮತ್ತು ಧೈರ್ಯಸ್ಥೈರ್ಯಗಳ ನ್ನು ಒರೆಗೆ ಹಚ್ಚಿ ಪರೀಕ್ಷಿಸುವ ಸರ್ವ ಸ್ವತಂತ್ರ್ಯವು ಭಾರತಕ್ಕಿದೆ. ಭಾರತವೊಂ ದು ಪ್ರಜಾಸತ್ತಾ ರಾಷ್ಟ್ರವಾಗಿರುವದೆ? ಆ ಶ್ರಿತ ರಾಜ್ಯಗಳು ಪ್ರಜಾಸತ್ತಾತ್ಮಕವಾಗಿ ರುವವೆ? ಬ್ರಿಟನು, ಅನ್ಯಾ ಮತ್ತು ಆಫ್ರಿಕ ಪ ಸ್ಥಾನವನ್ನು ಳಿಸಿಕೊಳ್ಳುವುದಕ್ಕಾಗಿ ಹೋರಾಡುವಪಾದರೆ, ನ್ಯಾಯವನ್ನು ಉಳ ರಿಸಿ ಜರ್ಮ ಯುದ್ಧ ಜಯಿಸಲು ಆರ್ಹವಾಗಿ ಲಾರದು. ನನ್ನ ಸೂಚನೆಗಳ ಅಂಗೀಕಾರ ದಿಂದ ಬ್ರಟನ್ನಿನ ಆರ್ಥಿಕ ಪೋಷಣೆಯ ಲ್ಲಾಗಲಿ ಪ್ರಬಲವ್ಯತ್ಯಾಸವನ್ನು ನಾನು ತಿಳಿಯದಿಲ್ಲ. ಆದರೆ, ಈ ಯುದ್ಧವು ಸಮಾ ಧಾನಕರವಾಗಿ ಅಂತ್ಯಗೊಳ್ಳಬೇಕಾದರೆ ಆ ಬದಲಾವಣೆಯು ಅತ್ಯಗತ್ಯ ನನ್ನ ಸೂಚನೆ ಯನ್ನು ಬ್ರಿಟೀಷರು ಅಂಗೀಕರಿಸಿದಲ್ಲಿ ಆ ದು ಆಕ್ಸಿಸ್ ರಾಷ್ಟ್ರಗಳ ಘೋರಣೆಯಲ್ಲಿ ಕೂಡಾ ವ್ಯತ್ಯಾಸವನ್ನುಂಟು ಮಾಡಿ, ಆ ದರಿಂದಲೇ ಈ ಯುದ್ಧ ಮುಗಿಯಬಹುದಾಗ ಲಾರದೆಂದು ಬಲ್ಲವರಾರು?

ನನ್ನ ಅಹಿಂಸೆಯು ಪ್ರಾಮುಖ್ಯ ಆವಶ್ಯ ಕತೆಯನ್ನು ಅಂಗೀಕರಿಸಲು ಅನುಮತಿ ಈಯುವಂತಹದ್ದೆಂದು ನನ್ನ ಸಂಬುಗೆ. ಇಂಗ್ಲಾಂಡಾಗಲೀ, ಅಮೇರಿಕಾಗಲೀ, ನನ್ನ ಅಹಿಂಸೆಯ ವಿಶ್ವಾಸದಲ್ಲಿ ಭಾಗಿಯಾ ಗಿಲ್ಲ. ಅಹಿಂಸಾತ್ಮಕ ಪ್ರಯತ್ನದಿಂದಾಗಿ ಭಾರತವು ಜಪಾನರ ಆಥವಾ ಇನ್ನಾವ ಆ ಕ್ರಮಣಗಾರರ ವಿರುದ್ಧ ಒಂದು ಮಾದರಿ ಯಾಗುವದೆಂದು ಹೇಳಲು ನಾನು ಅಸ ಮರ್ಥನು. ಇಡೀ ಭಾರತವು ಅಗತ್ಯವಿದ್ದ ಷ್ಟು ಅಹಿಂಸಾತ್ಮಕವಾಗಿದೆ ಎಂದು ನಾನು ವದಕ್ಕೆ ಕೂಡಾ ನನಗಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ, ನನ್ನ ಸೂಚನೆಯಂತೆ ಮಿತ್ರರಾಷ್ಟ್ರೀಯರ ಸೇನೆಯು ಕೂಡಲೇ ಬಿಟ್ಟುಹೋಗಬೇಕೆಂದು ಬಗೆದರೆ ಆದು ನನ್ನ ಕಪಟಾಚರಣೆಯಾಗಬಹುದು. ಭಾ ರತದ ಮಟ್ಟಿಗೆ ಆದಕ್ಕೆ ಜಾಪಾನಿನೊದ ನೆ ಯಾವ ಜಗಳವೂ ಇಲ್ಲವಾದ್ದರಿಂದ ಸ್ವ ರಕ್ಷಣೆಗಾಗಿ ಸೇನೆಗಳ ಆಗತ್ಯವೇ ಅದಕ್ಕಿ ಲ್ಲ. ಆದರೆ, ಹಿಂದುಸ್ಥಾನವು ತನ್ನ ಸ್ವ ರಾಷ್ಟ್ರೀಯ ಆತ್ಮಹತ್ಯದಂತಹ ಕೃತ್ಯದಿಂದ ಚೀನದ ಪತನವನ್ನಾಗಲೀ, ಮಿತ್ರರಾಷ್ಟ್ರೀ ಯರ ದುರವಸ್ಥೆಯನ್ನಾಗಲೀ ಸಾಧಿಸ ಕೂಡದು, ತಮ್ಮ ರಕ್ಷಣಾ ವ್ಯವಸ್ಥೆಗಾಗಿ- ಇದೊಂದೇ ಉದ್ದೇಶದಿಂದ-ನೈನ್ಯಗಳ ಸಂ ಚಾಲಕರು ಹಿಂದುಸ್ಥಾನದಲ್ಲಿ ಸೇನೆಗಳ ನ್ನಿರಿಸುವದಾದರೆ, ಭಾರತವು ಹೊರಗಣ ಆಕ್ರಮಣವನ್ನು ವಿರೋಧಿಸುವಷ್ಟು ಆ ತ್ಮಕವಾಗಿರದ ತನಕ, ಯುದ್ಧದ ನಡುನೆ ಆ ಸೇನೆಗಳನ್ನು ಹಿಂದೆಗೆಯರೆನ್ನುವದು ಹಿಂಸಾತ್ಮಕ ಕಾರ್ಯವೇ ಸರಿ.

ವಿಚಿತ್ರ ವಾರ್ತೆಗಳು.

ಶಾಂತಾ ಆಪ್ಟೆ ಪ್ರಕರಣ

ಸುಪ್ರಸಿದ್ಧ ಸಿನೆಮಾ ನಟಿ ಶಾಂತ ಆಪ್ಟೆಯ ಮೇಲೆ ಲಾಯೋರು ಕೋರ್ಟಿ ನಲ್ಲಿ ಪಾಂಜೋಲಿ ಪಿಕ್ಚರ್ಸಿನ ಯಜಮಾ ನ ಶ್ರೀ. ಪಾಂಜೋಲಿಯವರ ದಾವಾ ಹಾಮಿಲಾಗಿದೆ. ಶಾಂತಾ ಆಪ್ಟೆಯನ್ನು ಮುಖ್ಯ ನಟಿಯಾಗಿ ಆರಿಸಿ ತಾವು ಕಂ ಟ್ರಾಕ್ಟ್ ಮಾಡಿಕೊಂಡಿದ್ದೆವು. ಆಕೆ ಮಧ್ಯದಲ್ಲೇ ಕರಾರು ಪ್ರಕಾರ ಕೆಲಸಕ್ಕೆ ಬಾರದೆ ತಮ್ಮ ಚಿತ್ರ ಪೂರ್ತಿಯಾಗದಂ ತಾಗಿದೆ. ಆದ್ದರಿಂದ ನಷ್ಟ ಪರಿಹಾರ ದ್ರವ್ಯವಾಗಿ ಶಾಂತಾ ಆಪ್ಟೆ ಕಂಪೆನಿಯವ ರು ತಮಗೊಂದು ಲಕ್ಷ ರೂ. ತೆರತಕ್ಕದ್ದೆಂ ದು ಶ್ರೀ ಪಾಂಜೋಲಿಯವರ ದಾವೆ. ಈ ದಾವೆಯ ತೀರ್ಮಾನದ ಮೊದಲು ಪ್ರತಿ ವಾದಿಯು ಸ್ಥಳೀಯ ಬೇಂಕೊಂದರಲ್ಲಿಟ್ಟ ರುವ ರೂ. 29,000ವನ್ನು ತೆಗೆಯದಂತೆ ಯೂ, ಪಂಜಾಬಿನ ಡಿಪೋಸಿಟ್ ಎಲ್ಲಾ ಒಂದರಲ್ಲಿ ಡಿಪೋಸಿಟ್‌ರುವ ಆಕೆಯ ಆಭರ ಣಗಳನ್ನು ಬೇಗಮುದ್ರೆಯೊಳಗಿಡುವಂತೆ ಯೂ ವಾದಿಯು ಕೋರ್ಟು ಹುಕುಂ ಜ್ಯಾ ರಿ ಮಾಡಿಸಿದ್ದಾರೆ. ವಾದಿಯೇ ಕರಾರು ಮುರಿದಿದ್ದಾನೆ. ನಿಶ್ಚಿತಾವಧಿ ದಾಟುವ ತ ನಕವೂ ಚಿತ್ರ ಪೂರ್ತಿಗೊಳಿಸಲಿಲ್ಲ. ಅವ ಧಿಯ ನಂತರ ದಿನಕ್ಕೆ 500 ರೂ. ಗಳಂ ತೆ ಕೊಡಲು ವಾದಿಯ ಸಮ್ಮತಿಯಿದೆ. ತಾನು ತೂಟಂಗಿನ ಸಮಯದಲ್ಲಿ ಬಿದ್ದು ಜಖಂಗೊಂಡು ಈ ತನಕವೂ ಗುಣಹೊಂ ದಿಲ್ಲವೆಂದು ಶಾಂತಾ ಆಪ್ಟೆಯ ಪ್ರತಿವಾ ದನೆ. ತನ್ನ ಖರ್ಚಿಗಾಗಿ ರೂ. 10 ಸಾ ವಿರವನ್ನು ಬೇಂಕಿನಿಂದ ತೆಗೆಯಲು ಕೋ ರ್ಟಿನ ಅನುಮತಿ ಕೇಳಿದ್ದಕ್ಕೆ ಹೊಟೆಲು ಬಿಲ್ಲನ್ನು ಕೊಡುವರೆ 500 ರೂ. ಗಳನ್ನು ಮಾತ್ರ ತೆಗೆಯಬಹುದೆಂದು ಕೋರ್ಟು ಸಮ್ಮತಿ ದೊರೆತಿದೆ.

ಭಾರತ 'ಪುರಾರ್'!

ಜರ್ಮನಿಯ ಪುರಾರರ ದಯೆಯಿಂದ ಭಾರತಕ್ಕೊಬ್ಬ ಪುರಾರ್ ದೊರೆತ ವಾರ್ತೆ ಯನ್ನು ಕಲ್ಕತ್ತದ 'ಅಮೃತ ಬಝಾರ್' ಪತ್ರಿಕೆಯು ಪ್ರಕಟಿಸಿದೆ. ಇತ್ತೀಚೆಗೆ ಬರ್ಲಿನಿನಲ್ಲಿ ವಿದೇಶೀ ಪತ್ರಿಕಾ ವ್ಯವಸಾ ಯಿಗಳಿಗೆ, ಶ್ರೀ. ಸುಭಾಷಚಂದ್ರ ಬೋಸರ ಪರಿಚಯ ಮಾಡಿಕೊಡುವಾಗ ಹಿಟ್ಲರ ರವರನ್ನು 'ಇಂಡಿಯದ ಪುರಾರ್' ಎಂದ ರಂತೆ! ಸುಭಾಸ ಬಾಬುಗಳು ತರಿ ಪೋ ಷಾಕಿನ ಯುನಿಫೋರ್ಮ್ ಧರಿಸಿಕೊಂಡು ಗಂಭೀರವಾಗಿದ್ದರೆಂದು 'ಸಂಡೇ ಎಕ್ಸ್ ಪ್ರೆಸ್'ನ ಸ್ಪೋಕ್‌ಹೋಮ್ ಬಾತ್ಮೀದಾ ರನು ತಿಳಿಸಿದುದನ್ನು ಅಮೃತ ಬಝಾರ್ ಪತ್ರಿಕೆ ಪ್ರಕಟಿಸಿದೆ. ಬೋಸರಿಗಲ್ಲಿ ವಿದೇ ಶೀ ರಾಯಭಾರಿಗಳ ಸ್ವಾಗತವಾನ ದೊರ ಕುತ್ತಿದೆಯೆಂದೂ ಅವರ ಹೆಸರಿನ ಹಿಂದೆ 'ಹಿಸ್ ಎಕ್ಸೆಲ್ಲೆನ್ಸಿ' ಸಂಭೋದನೆಯಿದೆ ಯೆಂದೂ ತಿಳಿದುಬರುತ್ತದೆ.

ಹುಲಿ-ಜಿರಾಫೆ ಕಾಳಗ!

ನಮ್ಮ ಮೈಸೂರಿನ ತರುಣ ಮಹಾರಾ ಜರ ವಿಹಾರಗೋಷ್ಠಿಯು ಸಂಯುಕ್ತ ಪ್ರಾಂತ್ಯದ ಸರಕಾರಕ್ಕೊಂದು ಸಮಸ್ಯೆಯ ನ್ನುಂಟುಮಾಡಿದ ವಿನೋದಕರ ಪ್ರಸಂಗ ವೊಂದು ಪ್ರಕಟವಾಗಿದೆ. ಮಹಾರಾಜರು ಲಕ್ನೋವಿಗೆ ಹೋಗಿದ್ದಾಗ ಅಲ್ಲಿಯ ಸಕ ಕಾರದ ಪ್ರಾಣಿ ಪದರ್ಶನಾಲಯಕ್ಕೆ ಭೇ ಟಿಯಿತ್ತರು. ಅಲ್ಲಿದ್ದ ಒಂದು ಹುಲಿಯ ಮೇಲೆ ಮಹಾರಾಜರಿಗೆ ಮನಸ್ಸಾಯಿತು. ಅಧಿಕಾರಿಗಳೊಡನೆ ಮಾತಾಡಿ ಆ ಹುಲಿ ಯ ಬಗಲಿಗೆ ತಮ್ಮಲ್ಲಿಯ ಒಂದು ಜಿರಾಫೆ ಯನ್ನು ಕೊಡುವಪೆಂದು ಒಪ್ಪಂದವಾಯಿ ತು. ಲಕ್ನೋ ಪ್ರಾಣಿ ಸಂಗ್ರಹಾಲಯದಲ್ಲಿ ಮಿಕ್ಕವೆಲ್ಲಾ ಇದ್ದರೂ ಜಿರಾಫೆಯೊಂದಿಲ್ಲ ವಾದ್ದರಿಂದ ಅಲ್ಲಿಯ ಅಧಿಕಾರಿಗಳು ಸಂ ತೋಷದಿಂದ ಒಪ್ಪಿಕೊಂಡರು. ಹುಲಿಯ ನ್ನು ಮೈಸೂರಿಗೆ ತಂದ ಗೂಡಿನಲ್ಲೇ ಜಿ ರಾಫೆಯನ್ನು ಲಕ್ನೋವಿಗೆ ತರುವ ಕರಾ ರಾಗಿತ್ತು. ಹುಲಿ ಮೈಸೂರಿಗೆ ಹೊರಟ ತು. ಆವರೆ ಈ ಬದಲಾವಣೆಯ ಸಂಗತಿ ಸಂಯುಕ್ತ ಪ್ರಾಂತ್ಯದ ಆರ್ಥಿಕ ಕಾಪಾ ಧಿಕಾರಿಗಳಿಗೆ ತಿಳಿದೊಡನೆ ಈ ಯುದ್ಧ ಕಾಲದಲ್ಲಿ ಜಿರಾಫೆ ಸಾಕುವ ಖರ್ಚು ಅಸ ಹನೀಯವೆಂದು ಅವರು ಅಸಮಾಧಾನಪ ಟ್ಟರು. ಗವರ್ನರರು ಕೂಡಾ ಅಸಮ್ಮತಿ ಸೂಚಿಸಿದರೆಂದು ವರ್ತಮಾನ. ಲಕ್ನೋ ಪ್ರಾಣಿ ಸಂಗ್ರಹಾಲಯದ ಅಧಿಕಾರಿಗಳು ಅನ್ಯೋಪಾಯ ಕಾಣದೆ ಹುಲಿಯನ್ನೂ ಜಿರಾಫೆಯನ್ನೂ ಮೈಸೂರಿನವರೇ ಇಟ್ಟು ಕೊಳ್ಳಬಹುದೆಂದು ಮೈಸೂರು ದರ್ಬಾರಿ ಗೆ ತಂತಿಕೊಟ್ಟರು. "ಇನ್ನಾಗಲಿಲ್ಲ; ಜಿ ರಾಫೆ ಹೊರಟಾಗಿದೆ" ಎಂದು ಕೂಡಲೇ ಉತ್ತರಬಂತು. ಈಗ ಸಂಯುಕ್ತ ಪ್ರಾಂ ತ್ಯದ ಸರಕಾರವು ಮಿಕ್ಕ ಆಪತ್ತುಗಳಂತೆ ಇನೂ ಒಂದು ಅನಿವಾರ್ಯ ಆಪತ್ತೆಂದು ಜಿರಾಫೆಯನ್ನು ಸ್ವಾಗತಿಸಿದೆ.

THE RAINY DAY.

One saves for a rainy day but if when the rainy day comes he can get at his savings only in driblets of Rs. 100/- or 200/- a week It is not at all helpful. A Savings Account with us not only helps you to save and accumulate but whenever the rainy day comes you can withdraw all your balance in lump sum.

CANARA BANK LIMITED.

Estd. 1906.

(Incorporated in Br India with Limited Liability)

NOTICE.

In the Court of the District Munsif of Mangalore.

S. C. No. 150/1942.

Between

Messrs. Vithaldji Madhavji Plaintiff

and

M. K. Ramanna Shetty Defendant

To

Defendant M.K. Ramanna Shetty, nephew of Annapp Shetty, Cloth Merchant, residing at Shankernarayana Kundapur Taluk, South Kanara District.

Whereas the Plaintiff ha instituted a suit against yo for recovery of Rs. 120-.-1 with future interest till dat of payment from 14-3-4 and the costs of suit wit interest, you are hereby s mmoned to appear in th said Court in person or b a pleader on the 10th day July 1942 at 10. 30. a. and contest the suit, failin which the suit will be hea and determined in yo absence.

Mangalore } H.Keshava Kama
29-6-1942 } Vakil for Plaintiff

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability.)

ESTD: 1906.

ಉಡುಪಿ, ಗುರುವಾರ, ೨-೭-೧೯೪೨

ಹಿಂದೀ ರಾಜಕೀಯ ಬಿಕ್ಕಟ್ಟು.

ಹಿಂದೀ ರಾಜಕೀಯ ಪರಿಸ್ಥಿತಿಯು ಪುನಹ ಸಂಧಿಗ್ಧ ಪರಿಸ್ಥಿತಿಗೆ ಮುಟ್ಟಿರುವುದು. ಐಗುಪ್ತದ ಯುದ್ಧದ ವಿದ್ಯಮಾನಗಳಿಂದಾಗಿ ಹಿಂದುದೇಶಕ್ಕೀಗ ಪೂರ್ವದಿಂದಲೂ ಆಪಾಯವು ಸನ್ನಿಹಿತವಾಗುವುದೋ ಎಂಬ ಸಂದೇಹೋತ್ಪಾದನವಾಗಿರುತ್ತದೆ. ಈ ನಡುವೆ ಗಾಂಧಿಜಿಯವರು, ಬ್ರಿಟನಿನ ಘೋರಣೆ ಮತ್ತು ವರ್ತನೆಯಿಂದ ಜುಗುಪ್ಸೆಗೊಂಡು ಹೊಸತಾಗಿ ಸಾಮುದಾಯಿಕ ಚಳವಳವೊಂದನ್ನು ಹೂಡುವ ನಿರ್ಧಾರ ಮಾಡಿರುವಂತಿದೆ. ಈ ಚಳವಳವು ಯಾವ ಸ್ವರೂಪ ತಾಳುವುದೆಂದು ಈ ವರೆಗೆ ನಿಶ್ಚಿತವಾಗಿ ಏನೂ ತಿಳಿದಿಲ್ಲ. ಆದರೆ ಆ ಕುರಿತು ಇಷ್ಟರಲ್ಲೇ ಜನರಲ್ಲಿ ನಾನಾ ಸುದ್ದಿಗಳು ಹಬ್ಬಿರುತ್ತವೆ.

ದೇಶವು ಪರಕೀಯ ಆಕ್ರಮಣದ ಆಪಾಯಕ್ಕೊಳಗಾಗಿರುವ ಗಂಡಾಂತರದ ಪರಿಸ್ಥಿತಿಯಲ್ಲಿ ಯಾವ ತರದ ಚಳವಳವನ್ನಾದರೂ ಹೂಡುವುದು ಯುಕ್ತವಲ್ಲೆಂಬುದನ್ನು ನಾವು ಒಪ್ಪುತ್ತೇವೆ. ಹೊಸ ಚಳವಳದ ಸುದ್ದಿಯಿಂದಲೇ ಮಿ. ಜಿನ್ನಾರವರು ಪೌಹಾರಿ ಗಾಂಧಿಜಿಯವರ ಉದ್ದೇಶದ ಕುರಿತು ತನಗೆ ಬೇಕಾದ ಅರ್ಥಮಾಡಿ, ಮುಸ್ಲಿಮ್ ಲೀಗು ಅದನ್ನು ಪ್ರಬಲವಾಗಿ ವಿರೋಧಿಸುವುದೆಂದು ಉದ್ಘೋಷಿಸಿರುವರು. ಸರಕಾರವೂ ಈ ಸಂದರ್ಭದಲ್ಲಿ ತನ್ನ ವಿರೋಧವಾದ ಯಾವ ಚಳವಳವನ್ನಾದರೂ ವಜ್ರ ಹಸ್ತದಿಂದ ಅಣಗಿಸಿ ಶಿರಲಾರದು. ಅವಕ್ಕಾಗಿ ಅದರ ಬತ್ತಳಿಕೆಯಲ್ಲಿ ಬೇಕಾದ ಅಸ್ತ್ರಗಳು ಸಿದ್ಧವಾಗಿಯೇ ಇರುತ್ತವೆ. ಅಮೆರಿಕ ಮೊದಲಾದ ದೇಶಗಳಲ್ಲಿಯೂ ಈಗಿನ ಚಳವಳಕ್ಕೆ ಹೆಚ್ಚೇನೂ ಬೆಂಬಲ ದೊರೆಯಲಾರದು. ಆಂದಮೇಲೆ ಈ ಸಂದರ್ಭದಲ್ಲಿ ಚಳವಳ ಹೂಡುವುದು ವಿವೇಕವಾಗಲಾರದು.

ಆದರೆ ಬ್ರಿಟನು ಹಿಂದೀಯರ ಆಕಾಂಕ್ಷೆಯನ್ನೇನೂ ಮನ್ನಿಸದೆ ತನ್ನಿಚ್ಛಾನುಸಾರ ನಡೆಯುತ್ತಿರುವಾಗ, ಕಾಂಗ್ರೆಸಿನ ನ್ಯಾಯ ಹಾಗೂ ಸೂತ್ರಬದ್ಧ ಕಾರ್ಯಕಲಾಪಗಳನ್ನು ದಬಾಯಿಸುತ್ತಿರುವಾಗ ಅದು ಸಮ್ಮನಿರುವುದಾದರೂ ಹೇಗೆ? ಅದು ತನ್ನ ಆತ್ಮ ಗೌರವವನ್ನು, ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಏನಾದರೊಂದು ಚಳವಳ ಹೂಡಿ ಸರಕಾರವನ್ನು ಪ್ರತಿಭಟಿಸಲೇ ಬೇಕಾಗಿದೆ. ಅಂತಹ ಅನಿವಾರ್ಯ ಪರಿಸ್ಥಿತಿಯಲ್ಲಿ ನ್ಯಾಶನಲ್ ಮುಖಾತ್ಮರು ಸಾಮುದಾಯಿಕ ಚಳವಳ ಹೂಡುವ ಆಲೋಚನೆ ನೂಡಿರುತ್ತಾರೆ. ಈ ಸಂದರ್ಭದಲ್ಲಾದರೂ ಸರಕಾರವು ಹಿಂದೀ ಬಿಕ್ಕಟ್ಟನ್ನು ನಿವಾರಿಸಲು ಇನ್ನೊಮ್ಮೆ ಯಥಾರ್ಥ ಪ್ರಯತ್ನ ಮಾಡದಿದ್ದರೆ, ಆ ಕುರಿತು ಅಮೆರಿಕ, ಚೈನಾ ಮೊದಲಾದ ಸಂಯುಕ್ತ ರಾಷ್ಟ್ರಗಳು ಅವನ್ನು ಒತ್ತಾಯ ಪಡಿಸಿದ್ದಲ್ಲಿ ಮಲಯ, ಬರ್ಮಗಳಿಗಿಂತಲೂ ವಿಷಮ ಪರಿಸ್ಥಿತಿಯನ್ನು ಬ್ರಿಟನು ಎದುರಿಸಬೇಕಾಗುವದೆಂಬುದರಲ್ಲಿ ಸಂದೇಹವಿರಲಾರದು.

ಹಿಂದೀ ರಾಜಕೀಯ ಸಮಸ್ಯೆಯನ್ನು ಬಿಡಿಸಲು ಇನ್ನೊಮ್ಮೆ ಪ್ರಯತ್ನಮಾಡಲಾಗುವುದೆಂಬ ಸುದ್ದಿಯು ಪುನಹ ಹಬ್ಬಹತ್ತಿರುತ್ತದೆ. ಪ್ರೆಸಿಡೆಂಟ್ ರುಸವೆಲ್ಟರ ನೈಯಕ್ತಿಕ ಪ್ರತಿನಿಧಿಯಾಗಿ ಹಿಂದುದೇಶಕ್ಕೆ ಬಂದಿದ್ದು ಅನಂತರ ಅಮೆರಿಕಕ್ಕೆ ಹಿಂದಿರುಗಿರುವ ಕರ್ನಲ್ ಲೂಯಿಸ್ ಜೋನ್ಸನರು ಒಂದೀ ಬಿಕ್ಕಟ್ಟನ್ನು ನಿವಾರಿಸುವ ಕುರಿತು ಬಹಳ ಆಸಕ್ತಿಯಿಂದಿರುವರೆಂದೂ, ಸಂದಿತ ನೆಹರುಗಳಿಂದ ಪ್ರೆಸಿಡೆಂಟ್ ರುಸವೆಲ್ಟರಿಗೊಂದು ಸತ್ಪತ್ರವನ್ನವರು ಒಯ್ದಿರುವರೆಂದೂ ಪ್ರಕಟವಾಗಿರುತ್ತದೆ. ಹಿಂದೀಯರಿಗೆ ಸ್ವಾತಂತ್ರ್ಯವೀಯಬೇಕೆಂದು ರಾಷ್ಟ್ರೀಯ ಚೈನವು ಒತ್ತಾಯಮಾಡುತ್ತಾ ಬಂದಿದೆ. ಆದುದರಿಂದ ಈ ಸಲದ ರುಸವೆಲ್ಟ್ ಚರ್ಚಿಲ್ ಮಾತುಕತೆಯಲ್ಲಿ ಹಿಂದೀ ಪ್ರಶ್ನೆಯು ಬಂದಿರಬಹುದೆಂದೂ, ಆ ಕುರಿತು ಜೊಯಿಂಟ್ ಹೇಳಿಕೆಯೊಂದನ್ನ ಪ್ರಟ ಹೊರಡಿಸಬಹುದೆಂದೂ ನಂಬಲಾಗಿದೆ.

ಶ್ರೀ. ರಾಜಗೋಪಾಲಾಚಾರ್ಯರು ಎರಡೆರಡು ಸಲ ಮಿ.ಜಿನ್ನಾರೊಡನೆ ಅತಿ ದೀರ್ಘ ಮಾತುಕತೆ ನಡೆಸಿರುತ್ತಾರೆ. ವಾರ್ಧಕ್ಕೆ ಹೋಗಿ ಗಾಂಧೀಜಿಯವರೊಡನೆ ಕೂಡಾ ಅಭಿಪ್ರಾಯ ವಿನಿಮಯ ಮಾಡಿರುತ್ತಾನೆ. ಈಗ ದಿಲ್ಲಿಗೆ ಹೋಗಿರುವ ಆಚಾರ್ಯರು ವೈಸರಾಯರೊಡನೆಯೂ ಮಾತಾಡ ಬಹುದೆಂದು ಸುದ್ದಿಯುಂಟಾಗಿದೆ ಈ ಮಧ್ಯಸ್ಥಿಕೆಯಲ್ಲವರು-ಜಯಶೀಲರಾದರೆ ದೇಶಕ್ಕೆ ಮೊದ್ದ ಉಪಕಾರಮಾಡಿದಂತಾಗುವುದು. ಹೇಗಾದರೂ ದೇಶವು ಈ ಉತ್ಕಟ ಪರಿಸ್ಥಿತಿಯಲ್ಲಿ ಆಂತರಿಕ ಅಂದೋಲನದಿಂದ ಪಾರಾಗಿ ಒಕ್ಕಟ್ಟಿನಿಂದ ಹೊರಗಣ ಆಕ್ರಮಣವನ್ನು ವಿರೋಧಿಸುವಂತಾದರೆ ಅಥವಾ ನಿವಾರಿಸುವಂತಾದರೆ ಅದೊಂದು ಮಹತ್ಕಾರ್ಯದ ಶುಭ್ಯವನೇ ಸರಿ.

ಏಕಮಾತ್ರ ಆಶೆ.

ಇಂದೀಗ ಯುದ್ಧದ ಪರಿಸ್ಥಿತಿಯು ಮಿತ್ರ ರಾಷ್ಟ್ರಗಳಿಗೆ ಬಹಳ ಪ್ರತಿಕೂಲವಾಗಿ ಜನಸಾಮಾನ್ಯರಲ್ಲಿ ತಳಮಳವುಂಟಾಗಿದೆ. ಮಿತ್ರ ರಾಷ್ಟ್ರಗಳ ಪರಿಸ್ಥಿತಿಯು ಹಿಂದೆಂದಿಗಿಂತಲೂ ಈಗ ಉತ್ತಮವಾಗಿ ಆಶಾಪೂರ್ಣವಾಗಿದೆ. ತಮ್ಮ ಶಕ್ತಿಯನ್ನೆಲ್ಲಾ ಸಂಪೂರ್ಣವಾಗಿ ಕೇಂದ್ರೀಕರಿಸಿ ವೈರಿಯನ್ನು ಆದಷ್ಟು ಬೇಗ ಗೆಲ್ಲುವ ವಿಷಯದಲ್ಲಿ ಅಮೆರಿಕ ಮತ್ತು ಇಂಗ್ಲೆಂಡುಗಳೂ ಈಗೆ ಸಂಪೂರ್ಣ ಒಮ್ಮತವುಂಟಾಗಿದೆ. ಅವುಗಳೊಳಗೆ ಹಿಂದೆಂದೂ ಇಲ್ಲದ ಸ್ನೇಹ ಮತ್ತು ಸೌಹಾರ್ದತೆಯು ಈಗ ನೆಲೆಗೊಂಡಿರುತ್ತದೆಂದು ರುಸವೆಲ್ಟ್ ಮತ್ತು ಚರ್ಚಿಲ್ಲರು ಎನ್ನೊಂದು ಆಲೋತ್ತೇಜಕ ಹೇಳಿಕೆ ಹೊರಡಿಸಿದರೂ, ಕಾರ್ಯದ ಬೆಂಬಲವಿಲ್ಲದ ಬಾಯಿಮಾತಿನಿಂದ ಜನತೆಯಲ್ಲಿ ಆಭಯವುಂಟಾಗಲಾರದು. ಇತ್ತಲಾಗಿ ಅತ್ಲಾಂತಿಕ ಮತ್ತು ಭೂಮಧ್ಯ ಸಾಗರಗಳಲ್ಲಿ ಬ್ರಿಟನು ಮತ್ತು ಅಮೆರಿಕಗಳು ಆತಿ ಹೆಚ್ಚಿನ ಹಡಗ ನಷ್ಟ ಹೊಂದಿರುತ್ತವೆ. ಲಿಬಿಯದ ಆಕಸ್ಮಾತ್ತಾದ ದೊಡ್ಡ ಅಪಜಯದಿಂದ ಎಲ್ಲರೂ ಒನ್ಮೆಯೇ ಕಣ್ಣು ತೆರೆದು ಬೆರಗುಗೊಳ್ಳುವಂತಾಗಿರುವುದು ಇನ್ನು ಐಗುಪ್ತವಲ್ಲಿ ಬ್ರಿಟಿಷರು ರೊಮ್ಮೆಲರ ಸೇನೆಯನ್ನು ಹೇಗೆ ತಡೆಯುವರೋ ತಿಳಿಯಲಾರದು. ಐಗುಪ್ತವನ್ನು ರೊಮ್ಮೆಲರು ಗೆದ್ದು ನುಂಗೊತ್ತಿದರೆ ಮಧ್ಯಪೂರ್ವ ಪರಿಸ್ಥಿತಿಯು ಸಂಪೂರ್ಣವಾಗಿ ಆಕ್ಸಿಸ್ ರಾಷ್ಟ್ರಗಳಿಗೆ ಅನುಕೂಲವಾಗಿ ಭೂಮಧ್ಯ ಸಾಗರವು ಅವರ ಕೈಯಲ್ಲಾಗುವಂತಾಗುವುದು. ಸೆಬಸ್ತೋಪೋಲನ್ನು ರಸ್ಯನರಿಗೆ ರಕ್ಷಿಸಿಕೊಳ್ಳಲು ಸಾಧ್ಯವಾಗುವಂತೆ ತೋರುವುದಿಲ್ಲ. ಜರ್ಮನರ ನರಮಾಯಿತೆಂದರೆ ಆ ನೇಲೆ ಕೊಕಸಸಿನ ಧಾಳಿಗೆ ಬಹಳ ಅನುಕೂಲವಾಗುವುದು ಪೂರ್ವೋವ್ ರಣರಂಗದಲ್ಲಿ ಭಾರಿ ಯುದ್ಧವು ಆರಂಭವಾಗಿ ಜರ್ಮನರು ಮುಂದೊತ್ತುತ್ತಿದ್ದಾರೆ. ಜರ್ಮನರ ಪ್ರಚಂಡ ಒತ್ತಾಟವನ್ನು ರಸ್ಯನರಿಗೆ ತಾಳಿಕೊಳ್ಳಲು ಸಾಧ್ಯವಾಗುವಂತೆ ತೋರುವುದಿಲ್ಲ. ನಾಯ್ಗುಗಳು ಕೊಕಸಸನ್ನು ಗೆಲ್ಲುವಂತಾದರೆ ಅನಂತರ ಬ್ರಿಟನು ಮಧ್ಯಪೂರ್ವದ ಹಾಗೂ ಪೂರ್ವದ ಆಶೆಯನ್ನೇ ಬಿಡಬೇಕು. ಚೈನದಲ್ಲಿ ಕೂಡಾ ಜಾಪಾನೀಗ ಭರದಿಂದ ಮುಂದೊತ್ತಿ ಹಿಂದಿನಿಂದ ಆವರಿಸುತ್ತಿದೆ. ಚೀನೀಯರಿಗೆ ಅವರನ್ನು ಹೆಚ್ಚು ಕಾಲ ತಡೆಯಲು ಸಾಧ್ಯವಾಗುವಂತೆ ತೋರುವುದಿಲ್ಲ.

ಇಂತಹ ಉತ್ಕಟ ಪರಿಸ್ಥಿತಿಯಲ್ಲಿ ಸಂಯುಕ್ತ ರಾಷ್ಟ್ರಗಳವರ ಏಕಮಾತ್ರ ಆಶೆಯೆಂದರೆ ಜಯಶೀಲ ಪ್ರಟ್ಟನು ರಣರಂಗ. ಅಮೆರಿಕ ಮತ್ತು ಬ್ರಿಟನು ತಮ್ಮ ಸೇನಾ ಶಕ್ತಿಯನ್ನೆಲ್ಲಾ ಸಂಗ್ರಹಿಸಿ ಅದಷ್ಟು ಬೇಗನೆ ಯುರೋಪಿನ ಪಶ್ಚಿಮದಲ್ಲಿ ರಣರಂಗವೊಂದನ್ನು ಜಯಶೀಲವಾಗಿ ತೆರೆದು ಸೋವಿಯರನ್ನು ಹಿಂದಿಫಿಂದ ಆವರಿಸಿದರೆ ಮಿಂಚಿನ ವೇಗದಿಂದ ವಿದ್ಯಮಾನಗಳು ಬದಲಾವಣೆ ಹೊಂದಿ ಹಿಟ್ಲರರು ಕಂಗೆಡುವಂತಾಗಬಹುದು. ಇದೇ ರುಸವೆಲ್ಟ್ ಚರ್ಚಿಲ್ಲರ ಮಾತುಕತೆಯ ಮುಖ್ಯ ವಿಷಯವಾಗಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಬ್ರಿಟನು ಮತ್ತು ಅಮೆರಿಕಗಳು ಇನ್ನೂ ಇನ್ನೂ ಸಂದೇಹಪಟ್ಟು ಹಿಂಜರಿಯಬಾರದು. ಆದದ್ದಾಯಿತೆಂಬ ಸಾಹಸಪರ ಯೋಜನೆಯಿಂದ ಒನ್ಮೆಯೇ ಮುನ್ನುಗ್ಗಿ ಹಿಟ್ಲರರ ಮೇಲೆ ಬೀಳಬೇಕು. ಅವರ ಯುದ್ಧಕ್ರಮದಿಂದಲೇ ಅವರನ್ನು ಬಗ್ಗುಬಡಿಯುವ ಎದೆಗಾರಿಕೆ ತೋರಿಸಬೇಕು. ಆದರಿಂದ ಭಯಂಕರ ನಷ್ಟವಾಗಬಹುದು. ಲಕ್ಷಾಂತರ ಸೈನಿಕರನ್ನು ಬಲಿಕೊಡಬೇಕಾಗಬಹುದು. ಇತಿಹಾಸದಲ್ಲೇ ಘೋರ ಹಾಗೂ ಅತ್ಯಧಿಕ ಕ್ರಮದ ಯುದ್ಧವು ಯುರೋಪಿನ ಪಶ್ಚಿಮದಲ್ಲಿ ನಡೆಯಬಹುದು. ಹಿಟ್ಲರರ ಆಗ ತನ್ನ ಸಂಪೂರ್ಣ ಲಕ್ಷ್ಯವನ್ನು ಪಶ್ಚಿಮಕ್ಕೆ ಕೊಡಬೇಕಾಗುವುದು. ಆಗ ರಸ್ಯವೂ ತನ್ನ ಸಂಪೂರ್ಣ ಶಕ್ತಿಯನ್ನು ಪಯೋಗಿಸಿ ಧಾಳಿಕಾರಕಹೋರಾಟ ನಡೆಸಿ ಮುಂದೊತ್ತಿದರೆ ಹಿಟ್ಲರರ ಪತನ ನಿಶ್ಚಯವೆಂದೇ ಹೇಳಬಹುದು ಹೀಗೆ ನಾಝಿ ಸೇನೆಯು ಜರ್ಮನಿಯಲ್ಲಿ ಪರಾಜಿತವಾದರೆ ಮಧ್ಯ ಪೂರ್ವದ ಯುದ್ಧವು ಕೂಡಲೆ ನಿಂತು ಹೋಗುವುದು. ಆ ಮೇಲೆ ಜಾಪಾನನ್ನು ಗೆಲ್ಲುವುದೇನೂ ಕಷ್ಟವಲ್ಲ. ಹೀಗೆ ಯುರೋಪಿನ ಪಶ್ಚಿಮ ರಣರಂಗದ ಭವಿಷ್ಯದ ಮೇಲೆ ಇಡೀ ಯುದ್ಧದ ಅದೃಷ್ಟವು ಅವಲಂಬಿಸಿಕೊಂಡಿದೆ.

ದಿವಂಗತ ಕೊಡಿಯಾಲ ಗುತ್ತು ರಾಮಯ ಹೆಗ್ಡೆಯರು.

ಹೃದ್ರೋಗದಿಂದಾದ ಇವರ ಆಕಸ್ಮಿಕ ಮರಣದ ವಾರ್ತೆಯನ್ನು ನಾವು ಇನ್ನೊಂದೆಡೆ ಪ್ರಕಟಿಸಿರುತ್ತೇವೆ. ದಿವಂಗತರು ಬಂಟ ಯಾನೆ ನಾಡವ ಸಂಘದ ಪ್ರಮುಖ ಸದಸ್ಯರಲ್ಲೊಬ್ಬರಾಗಿ ಅದರ ಮಹಾಸಭೆ ಅಧ್ಯಕ್ಷರಾಗಿ ಆರಿಸಲ್ಪಡುವ ಗೌರವ ಪಡೆದಿದ್ದರು. ಒಬ್ಬರು ಬೆಂಚ್ ಮೆಜಿಸ್ಟ್ರೇಟರಾಗಿ ಹಲವು ವರ್ಷ ಕೆಲಸಮಾಡಿದ್ದರು. ಸಾತ್ವಿಕ ಸ್ವಭಾವಿಯೂ, ವಿನಯಶೀಲರೂ, ಸಚ್ಚರಿತರೂ, ನಿರಹಂಕಾರಿಯೂ ಆಗಿ ಸರ್ವಾದರಣೀಯರಾಗಿದ್ದರು. ಹಿಂದಿನ ತಲಾಂತರದವರಾದರೂ ಇಂದಿನ ಮನೋವೈತ್ತಿಯುಳ್ಳವರಾಗಿ ಪ್ರಗತಿಪರ ಕಾರ್ಯಗಳ ಕುರಿತೆಲ್ಲಾ ಸಹಾನುಭೂತಿಯುಳ್ಳವರಾದ್ದು ಶಕ್ತ್ಯಾನುಸಾರ ಸಹಾಯ ಮಾಡುತ್ತಿದ್ದರು. ಶ್ರೀ. ಹೆಗ್ಡೆಯವರ ನಿಧನದಿಂದ ಬಹಳ ದುಃಖಿತರಾಗಿರುವ ಅವರ ಮಕ್ಕಳು ಮತ್ತು ಇತರ ಸಂಬಂಧಿಕರೊಡನೆ ನಾವು ತುಂಬಾ ಸಾನುಭೂತಿಯುಳ್ಳವರಾಗಿರುತ್ತೇವೆ.

ದೇವದಿನ ಸುಧಾರಕ ಸಂಘ, ಮುಂಬಾಯಿ:—ಇದರ ವರ್ಷಾಂತಿಯು ತಾ.14-6-42ರಲ್ಲಿ ಶ್ರೀ. ನಾರಾಯಣ ವಿ. ಉಳ್ಯಾಲ್ L. T. M, (Hons) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಕ್ಕೆ ವಾರ್ಷಿಕ ಸಭೆಯ ಭಾಷಣಕ್ಕಾಗಿ ಅಧ್ಯಕ್ಷರ ಭಾಷಣವಾಗಿ ಸಲ ಹಾರ ಮಂಡಿಸಿ ಸಭಾಲಂಕೃತವಾಯಿತು.

★ ಐಗುಪ್ತದಲ್ಲಿ ಪ್ರಬಲ ಹೋರಾಟ ★

ಸೆಬಸ್ತೋಪೋಲಿನಲ್ಲಿ ಇನ್ನೂ ಭೀಷಣ ಕದನ ನಡೆಯುತ್ತಿದೆ.

ಮಿಡ್ವೇ ಯುದ್ಧದಲ್ಲಿ ಜಾಪಾನರಿಗಾದ ದೊಡ್ಡ ನಷ್ಟ.

ಐಗುಪ್ತದ ಯುದ್ಧ

ಇದೇ ಕಳವ ತಾ. 27ರಲ್ಲು ಐಗುಪ್ತದ ಮರ್ಸಮಟ್ರೂವಿನ ಬಳಿ ಪ್ರಬಲ ಹೋರಾಟ ನಡೆಯಿತು. ಮರ್ಸಮಟ್ರೂವನ್ನು ಸೈರಿಯು ಈ ವರೆಗೆ ಗೆದ್ದಿರುವುದಿಲ್ಲ. 100ಗಜ ಚದರ ಮೈಲು ವಿಸ್ತೀರ್ಣದಲ್ಲಿ ಭೀಷಣ ಹೋರಾಟ ನಡೆಯುತ್ತಿದೆ. ಜನರಲ್ ರೊಮ್ಮೆಲರು ತನ್ನ ರಕ್ತ ಸರ್ವಸ್ವವನ್ನೂ ಉಪಯೋಗಿಸಿ ಭರದಿಂದ ಅಲೆಗ್ಸಾಂಡ್ರಿಯದ ಕಡೆಗೆ ಮುಂದೊತ್ತುವ ಸಾಹಸ ಮಾಡುತ್ತಿದ್ದಾರೆ. ಈ ಯುದ್ಧದ ಭವಿಷ್ಯವು ಹೇಗೆ ನಿಲ್ಲುವುದೆಂದು ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಐಗುಪ್ತವು ಯಾವ ಪಕ್ಷಕ್ಕೂ ಸೇರದೆ ತಟಸ್ಥವಾಗಿದೆ. ಬ್ರಿಟಿಷರು ಐಗುಪ್ತವನ್ನು ರಕ್ಷಿಸಬಲ್ಲರೆಂಬ ಅಭಿಪ್ರಾಯವನ್ನು ಪ್ರಧಾನಮಂತ್ರಿ ನಹಾಸ್ ಪಾಶಾರವರು ಕೊಟ್ಟಿರುತ್ತಾರೆ. ಬ್ರಿಟಿಷರು ಐಗುಪ್ತದಲ್ಲಿ ಕೋಟೆ ಕೊತ್ತಳ ಕಟ್ಟಿ ಮೊದಲೇ ಭದ್ರಪಡಿಸಿರುತ್ತಾರೆ. ತದನಂತರ ಜನರಲ್ ರೊಮ್ಮೆಲರಿಗೆ ಒಂದೇ ಸವನೆ ಮುಂದೊತ್ತಲು ಸಾಧ್ಯವಿಲ್ಲ. ಅಮೆರಿಕದಿಂದ ಯುದ್ಧಸಾಮಾಗ್ರಿಗಳು ಒಂದೇ ಸವನೆ ಐಗುಪ್ತಕ್ಕೆ ಬರುತ್ತಿವೆ. ರೊಮ್ಮೆಲರಿಗೆ ಟೊಬ್ರೂಕನ ಆಶಯ ಸಿಕ್ಕಿದುದರಿಂದ ಬಹಳ ಪ್ರಯೋಜನವಾದರೂ ಐಗುಪ್ತದಲ್ಲಿ ಒಹಳ ದೂರ ಮುನ್ನುಗ್ಗಿದರೆ ಹಿಂದಿನಿಂದ ಮಾರ್ಗವು ಕಡಿದು ಹಾಕಲ್ಪಡುವ ಅಪಾಯವಿರುತ್ತದೆ. ಆದುದರಿಂದ ಅವರು ಜಾಗ್ರತೆಯಿಂದ ಮುಂದುವರಿಯಬೇಕಾಗಿದೆ. ಬ್ರಿಟಿಷ್ ವಿಮಾನಗಳು ಎದೆಬಿದಿದೆ ರಾತ್ರಿಹಗಲು ಸೈರಿ ಸೈನ್ಯ ಮತ್ತು ವಿಮಾನ ಸಿಲಯಗಳ ಮೇಲೆರಿ ಹೋಗಿ ಹಾನಳಿ ಮಾಡುತ್ತಿವೆ.

ಸೆಬಸ್ತೋಪೋಲಿನ ಐತಿಹಾಸಿಕ ಯುದ್ಧ

ಸೆಬಸ್ತೋಪೋಲಿನಲ್ಲಿ ಇನ್ನೂ ಯುದ್ಧವು ಭೀಷಣವಾಗಿ ನಡೆಯುತ್ತಿದೆ. ಅವರ ರಕ್ಷಕರು ಜರ್ಮನರನ್ನು ಕಲವೆಡೆ ಜಯಶೀಲವಾಗಿ ಪ್ರತಿಬಟಿಸಿರುವುದರಿಂದ ನಾಯ್ರಿ ಸೇನಾನಾಯಕ ಜನರಲ್ ಮೇನ್‌ಹೈಮರು ಹೊಸಸೈನ್ಯವನ್ನು ತರಬೇಕಾಗಿದೆ. ಆದರೂ ಅನರಿಗೆ ಹೆಚ್ಚಿಗೆ ಮುಂದುವರಿಯಲು ಸಾಧ್ಯವಾಗಿರುವುದಿಲ್ಲ. ಸೆಬಸ್ತೋಪೋಲಿನ ರಕ್ಷಕರು ಐತಿಹಾಸಿಕ ಹೋರಾಟ ನಡಿಸಿರುವರೆಂದೇ ಹೇಳಬಹುದು. ಪ್ರಾಕೋವಿನ ಕುಚ್ಯಾಂಸ್ಕ್ ರಣಾಂಗದಲ್ಲಿ ಪ್ರಚಂಡ ಹೋರಾಟ ನಡೆಯುತ್ತಿದೆ ಜರ್ಮನರು ಕಲವೆಡೆ ಸ್ವಲ್ಪ ಮುಂದೊತ್ತಿರುತ್ತಾರೆ. ಇಲ್ಲಿಯೂ ಜರ್ಮನರು ದೊಡ್ಡ ವಿಜಯಪಡೆದಿರುವುದಿಲ್ಲ. ಮತ್ತು ಹೆಚ್ಚಿನ ಸ್ಥಳವನ್ನೇನೂ ಗೆದ್ದಿರುವುದಿಲ್ಲ.

ಮಿಡ್ವೇ ಯುದ್ಧದ ಪರಿಣಾಮ.

ಶಾಂತ ಸಾಗರದ ಮಿಡ್ವೇ ದ್ವೀಪವನ್ನು ಗೆಲ್ಲಲು ಜಾಪಾನು ಪ್ರಯತ್ನ ಮಾಡಿ ನಡೆದ ದೊಡ್ಡ ನೌಕಾಯುದ್ಧದಲ್ಲಿ ಜಾಪಾನು (ವಿಮಾನವಾಹಕ ಹಡಗು) ೩ ಕ್ರೂಸರ್ ಹಡಗ ಮತ್ತು ೩ ಡಿಸ್ಟ್ರೋಯರುಗಳನ್ನು ಕಳಕೊಂಡು ಅತಿ ದೊಡ್ಡ ನಷ್ಟಹೊಂದಿರುವುದೆಂದೀಗ ಅಧಿಕಾರಿವಾಗಿ ಪ್ರಕಟಿಸಲ್ಪಟ್ಟಿದೆ. ತನ್ನವಿಮಾನವಾಹಕ ಹಡಗಗಳನ್ನೆಲ್ಲಾ ಅದು ಈವರೆಗೆ ಕಳಕೊಂಡಿರುವುದೆಂದೂ ನಂಬಲಾಗಿದೆ. ಈ ಯುದ್ಧದಲ್ಲಿ ಅತಿ ಹೆಚ್ಚು ಮಂದಿ ಜಾಪಾನ ನಾವಿಕರು ಕೂಡಾ ಕೊಲ್ಲಲ್ಪಟ್ಟಿರುತ್ತಾರೆ.

ಗಾಂಧಿ ರಾಜೇಂದ್ರ ಪ್ರಸಾದರ ಮಾತುಕತೆ.

ಇದೇ ಕಳವ ತಾ. 28ರಲ್ಲು ವಾರ್ಧದಲ್ಲಿ ಬಾಬು ರಾಜೇಂದ್ರ ಪ್ರಸಾದರು ಗಾಂಧಿಯಜಿಯವರನ್ನು ಕಂಡು ದೇಶದ ಪ್ರಕೃತದ ರಾಜಕೀಯ ಸ್ಥಿತಿಯನ್ನು ಚರ್ಚಿಸಿದರು. ಈ ಮಾತುಕತೆಯು ಮುಂದುವರಿಯುತ್ತಿದೆ. ಶ್ರೀ. ರಾಜಗೋಪಾಲಾಚಾರ್ಯರು ಇದೇ ಕಳವ ತಾ. 28ರಲ್ಲು ವುನಹ ವಾರ್ಧಕ್ಕೆ ಹೋಗಿ ಮಹಾತ್ಮ ಗಾಂಧಿಯವರೊಡನೆ ಮಾತಾಡಿರುವರು.

ಚೈನದ ಯುದ್ಧ

ಶಸ್ತ್ರಿ ಮತ್ತು ಹೊನಾನ್ ಎಲ್ಲೆಯ ಪ್ರಾಮುಖ್ಯ ಸಬ್ಬಣವಾದ ಲಿನ್‌ಚೆಯನ್ನು ಚೀನೀಯರು ಜಾಪಾನರಿಂದ ಗೆದ್ದಿರುತ್ತಾರೆ. ತಿಯೆನ್ ಪರ್ವತ ಬುಡದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ಕಿಯಂಗ್ಸಿಯ ಜಾಪಾನ ಸೈನಿಕ ಸ್ಥಾನಗಳ ಮೇಲೆ ಚೀನೀ ವಿಮಾನಗಳು ವಿಮಾನ ಧಾಳಿ ನಡಿಸಿ ಹಾನಳಿ ಮಾಡಿರುತ್ತವೆ. ಚೈನಕೈ ವಿಮಾನ ಮೂಲಕ ಯುದ್ಧೋಪಕರಣ ಸಹಾಯನೀಯುವ ವಿಷಯವನ್ನು ಅಮೆರಿಕವು ಮಾಡುತ್ತದೆ. ಚೀನೀ, ಅಮೆರಿಕಾನ ಮತ್ತು ಬ್ರಿಟಿಷ್ ಸೈನ್ಯಗಳು ಒಟ್ಟುಗೂಡಿ ಇದಷ್ಟು ಬೇಗನೆ ಅನುಕೂಲ ಸಂದರ್ಭ ದೊರೆತಾಗ ಬರ್ಮದ ಮೇಲೀರಿ ಹೋಗಿ ಯುದ್ಧ ಮಾಡುವ ಸಿದ್ಧತೆ ನಡೆದಿರುತ್ತದೆ

ಮದ್ರಾಸ್ ಎಸೆಂಬ್ಲಿ ಕಾಂಗ್ರೆಸ್ ಪಕ್ಷ.

ಇದರ ಸಭೆಯು ಇದೇ ತಾ. 12ರಲ್ಲು ಮದ್ರಾಸಿನ ಹಿಂದೀ ಪ್ರಚಾರ ಸಭಾಸದನದಲ್ಲಿ ನಡೆಯಲಿರುವುದು. ಈ ಸಭೆಯಲ್ಲಿ ಪಕ್ಷದ ಅಧಿಕಾರಿಗಳು ಆರಿಸಲ್ಪಡಲಿರುವರು. ಶ್ರೀ. ರಾಜಗೋಪಾಲಾಚಾರ್ಯರ ನಾಯಕತ್ವದ ಕುರಿತು ಪ್ರಬಲ ವಿರೋಧ ವಿರುವ ಕಾರಣ ಅವರು ಪುನಹ ಪಕ್ಷದ ನಾಯಕರಾಗಿ ಆರಿಸಲ್ಪಡುವುದು ಸಂದೇಹ ಕರವಿದೆ.

Expert Coaching undertaken by a graduate in all subjects for High School Classes.
Apply,- X
C/o Navayuga, Udipi.

ಅಪೂರ್ವ ೫ ಗ್ರಂಥರತ್ನಗಳು! ಅಪೂರ್ವ ೫ ಗ್ರಂಥರತ್ನಗಳು!

ದಾಂಪತ್ಯದ ಗುಟ್ಟು, ಎಂಬ ಸಚಿತ್ರ
ಕಾಮಶಾಸ್ತ್ರ

ಕಾಮಶಾಸ್ತ್ರವೆಂದಾಕ್ಷಣ ಯಾರೂ ಹಿಗುಬ್ಬೆಗೊಳ್ಳಬೇಡಿರಿ! ಇಮ ಸಮಸ್ತ ಜನರ **ಕಾಮನಾ ಸಿದ್ಧಿ ಶಾಸ್ತ್ರವು!!** ೧ನೇ ಭಾಗದಲ್ಲಿ ದಾಂಪತ್ಯ ಸುಖದ ಅನೇಕ ಮಜಲ್ಗಳ ಸೂಚನೆಗಳಿಂದ ಕೂಡಿವೆ. ೨ನೇ ಭಾಗದಲ್ಲಿ ಎಷ್ಟೋ ಗಿದಮೂಲಿಕೆಗಳ ವಚ ಸ್ಸು, ಮಂತ್ರ ಶಾಸ್ತ್ರದ ಮಹಿಮೆ, ತಂತ್ರಶಾಸ್ತ್ರದ ಪ್ರಭಾವ, ಶ್ರೇಷ್ಠ ಔಷಧಗಳ ಕ್ರಿಯೆ, ನಾನಾತರದ ಅಂಜನ ಕ್ರಮ, ಕರ್ಣ ಪಿಶಾಚಿ ಮೊದಲಾದ ಈ ತರದ ಯಕ್ಷಿಣಿ ವಶೀಕರಣ, ಅದೃಶ್ಯ (ಕಣ್ಮುಚ್ಚಿ), ಸಂಜೀವಿನಿವಿದ್ಯೆ, ಮಾಟ, ಏರು, ಇಳುವು, ವಶೀಕರಣದಿ ಪಟ್ಟುಗಳ ಸಂಗತಿಗಳು ತುಂಬಿವೆ. ಬೆಲೆ ೩ ೦, ಪೋಷ್ಟು ೦ ೮ ೦.

ಸಂಸಾರ ಸುಖನಾಗರ, ಎಂಬ ಸಚಿತ್ರ
ಕೋಕಶಾಸ್ತ್ರವು

ಇದು ಅಶ್ಲೀಲ ಚಿತ್ರಗಳುಳ್ಳ-ಓದಬಾರದ ವಿಷಯಗಳುಳ್ಳ ಕೋಕಶಾಸ್ತ್ರವಲ್ಲ. ಕಾಶ್ಮೀರದ ರಂಭೂಸಿಂಹ ಮಹಾರಾಜರ ರಾಜ್ಯ **ಸಭಾಪಂಡಿತ ಕೋಕಾಜಿ** ಎಂಬವರಿಂದ ಆರೋಗ್ಯ ವೈಷ್ಟಿಯಲ್ಲಿ ಸಂಸಾರಿಗಳ ಉದ್ಧಾರಾರ್ಥವಾಗಿ ಬರೆದ ಮನೋಹರ ಸಂಗತಿಗಳ ಗ್ರಂಥವಿದೆ. ಸ್ತ್ರೀ-ಪುರುಷರನ್ನು ಆನಂದ, ಸುಖ, ಸಾಮ್ರಾಜ್ಯದಲ್ಲಿಟ್ಟು, ಶರೀರವನ್ನು ಯಾವ ರೋಗಗಳಿಗೂ ಸಿಲುಕದಂತೆ ಕಾಪಾಡಿ, ನೂರಾರು ವರ್ಷ ಆರೋಗ್ಯದಲ್ಲಿರಿಸುವದು. ಸುಂದರ ಮತ್ತು ಇಚ್ಛಾ ಸಂತಾನವನ್ನು ಕೊಟ್ಟು, ಪ್ರಪಂಚರಥವನ್ನು ನಿಶ್ಚಿಂತೆಯಿಂದ ಸಾಗಿಸುವ ರಾಜಮಾರ್ಗ ದರ್ಶಕವಾದ ಪುಸ್ತಕ. ಬೆಲೆ ೧೫ ರೂ. ಪೋ. ೫ ಆ.

ಲೋಕದ ಕಾಮಧೇನು, ಎಂಬ ಸಚಿತ್ರ
ವಿದ್ಯಾ ಭಂಡಾರ

ಜ್ಯೋತಿಷ್ಯ, ವೈದ್ಯ, ರಸಲ, ಪಂಚಪಕ್ಷಿಮೆಸ್ಮೆರಿಜಂ, ಕೈಗುರಿಕೆ, ಯಂತ್ರ-ಮಂತ್ರ, ಹಸ್ತ ಮತ್ತು ಅಂಗಸಾಮುದ್ರಿಕ, ಸಂಸಾರಸುಖ ವಿಲಾಸ ರಹಸ್ಯ ಇತ್ಯಾದಿ ೧೦ಶಾಸ್ತ್ರಗಳ ಗಾಢ್ಯವಿಚಾರಗಳನ್ನೆಲ್ಲ ಸಾಧಾರಣ ಕನ್ನಡ ಕಲಿತವರಿಗೆ ಸಹಿತ ಸ್ಪಷ್ಟ ತಿಳಿಯುವಂತೆ ವಿಸ್ತಾರವಾಗಿ ಬರೆದಿದೆ (ಮರ್ಮ ಉಳಿಸಿಲ್ಲ!) ಶಾಸ್ತ್ರಾಭ್ಯಾಸರಂತೂ ತಪ್ಪದೆ ಓದಿ ಗುರುತ್ವದ ಯೋಗ್ಯತೆ ಕಾಯ್ದುಕೊಳ್ಳಿರಿ ಸ್ವತಃಜೊಂದು ಮನೆಯಲ್ಲಿಯೂ ಇರಬೇಕಾದ ಮಾನ್ಯ ಗ್ರಂಥವು. ಇಂಗ್ಲೀ ೮ ನಾವಿರ ಗ್ರಂಥಗಳು ಹಾಗಿವೆ! ಆಗಾ ಪ್ರಟಗಳ ಮೆಚ್ಚಿಪ್ಪಸ್ತಕ!! ಬೆಲೆ ೭ರೂ ಪೋ ಮೆ. ೦ ೮ ೦

ಪ್ರಪಂಚ ದರ್ಪಣ
(ವ್ಯಾಪಾರ ಸಂಜೀವಿನಿ ಸಹಿತ)

ಇದು ಕೇವಲ ಜ್ಯೋತಿಷ್ಯ ಶಾಸ್ತ್ರದ ಸುಲಭಶೈಲಿಯಲ್ಲಿ ಬರೆದ ಗ್ರಂಥವು. ೧ನೇ ಭಾಗದಲ್ಲಿ ಯಾವತ್ತೂ ವಸ್ತುಗಳ ವ್ಯಾಪಾರದ **ತೇಜಿ-ಮಂದಿ** ವಿಷಯ (ಮುಂಬಯಿ ಮುಂತಾದ ಪಟ್ಟಣಗಳಲ್ಲಿ ನಡೆಯುವ ಸಟ್ಟಾ ವ್ಯಾಪಾರಸಂಗತಿ ಸಹಿತ) ಬರೆದಿದೆ. ಉಳಿದ ೬ಭಾಗಗಳಲ್ಲಿ ಸ್ತ್ರೀಯರ ಯತುವಾದ (ಮೈನೆರೆತ) ನಿಸ್ತಾರ ಫಲಗಳೂ, ಬಾಲ-ಬಾಲಕಿಯರು ಜನಿಸಿದ ತಿಥಿ, ನಕ್ಷತ್ರಾದಿಗಳ ಯಾವತ್ತು ಜಾತಕಫಲಗಳೂ, ಹೊಸಮನೆ ಕಟ್ಟಿಸುವಾಗ್ಗೆ ನೋಡಬೇಕಾದ ಆಯ-ಪಾಯ-ಆಯುವ್ಯಾದಿ ವಿಷಯಗಳೂ, ಇನ್ನಿತರ ಅನೇಕ ಮುಹೂರ್ತ ಸಂಗತಿಗಳೂ ಬರೆಯಲ್ಪಟ್ಟಿವೆ.
ಬೆಲೆ ೧-೪-೦, ಪೋ. ಖ. ೬೮೦

ಪ್ರತ್ಯಕ್ಷಫಲ ಪಂಚಸಿದ್ಧಿ

ಇದು ರಾಯಚೂರ ಪಟ್ಟಣನಿವಾಸಿ ಸಾಧುನರ್ಯ **ಭೀಮಾನಂದರಿಂದ** ಕಾಶಿ, ಗಯಾ, ಪ್ರಯಾಗ, ಬದರೀ, ಕೇದಾರ, (ಹಿಮಾಲಯ) ಮುಂತಾದ ಪುಣ್ಯಸ್ಥಳಗಳಲ್ಲಿಯ ಅನುಭವಿಕ ಸಿದ್ಧ ಯೋಗಿಗಳ ಸಹಾಯ ಪಡೆದುಕೊಂಡು ಬರೆದ ಪುಸ್ತಕವು. ಯಾತ್ರಿ ಮತ್ತು ಸಿದ್ಧಿಪ್ರದವಾದ ಎಷ್ಟೋ ಔಷಧಗಳ ತಯಾರಿವಿಷಯ, ಭವಾನಜಿಗಳ ಚುಟ್ಟಾಸಂಗತಿಗಳು, ನಾನಾ ತರದ ಜ್ಯೋತಿಷ್ಯ-ವಿಚಾರ, ಮಂತ್ರ, ತಂತ್ರ-ಯಂತ್ರ, ಇನೇ ಮೊದಲಾದ ಸಂಗತಿಗಳನ್ನು ಸುಗಮವಾಗಿ ಬರೆಯಲ್ಪಟ್ಟಿದೆ. ಈ ಗ್ರಂಥದ ವರ್ಣನೆಯನ್ನು ಎಷ್ಟು ಮಾಡಿದರೂ ತೀರದು! ಬೆಲೆ ರೂ. ೨, ಪೋ ೭ ಆ.

ಒಂದೇಸಾರಿಗೆ ಎರಡ ಪುಸ್ತಕ ಕಳುಹಿಸಿಕೊಂಡರೆ ಪೋಸ್ಟುಖರ್ಚು ಇಲ್ಲದೆ ಎಂದು (೮, ಕಾಸಾಯಗಳಿಗೆ ವಾತ್ರವೆ ವ್ಯಿ. ಪಿ. ಕಳಿಸುವೆವು.
೬ ಪುಸ್ತಕ ಒಟ್ಟಿಗೆ ತರಿಸಿದರೆ ಪೋಸ್ಟು ಖರ್ಚು ಮಾತ್ರ ಸೂಚಿಸಲ್ಪಟ್ಟು ವ್ಯಿ. ಪಿ. ವಾಡುವೆವು. ೧೨ ಮಸ್ತಕಗಳಿಗೆ ಯಾವುದನ್ನೂ ಬಿಡುವುದಿಲ್ಲ.
ಈ ಎಲ್ಲಾ ಗ್ರಂಥಗಳು **ಪಂಚರತ್ನ**ಗಳೆಂದು ತಿಳಿದು ಸಂಗ್ರಹಿಸಿರಿ.

ಪತ್ರಕ್ಕೆ:—**ವೈದ್ಯಭೂಷಣ, ಜ್ಯೋತಿರ್ವಿದ್ವಾನ್, ಪಂಡಿತ,**
ವೇ॥ ತೋಟಪ್ಪಯ್ಯ ಶಾಸ್ತ್ರಿಗಳು ಪಿರೇಮನಹ,
ಸುಪ್ರಸಿದ್ಧ ಶ್ರೀ ಬಸವೇಶ್ವರ ಪಂಚಾಂಗ ಕರ್ತರು,
ಕತಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

WANTED

Applications are invited for the posts of Agents and Accountants, to serve at any of the offices of the Bank, so as to reach this office on or before 15-8-1942.

The applicants should have passed at least S.S.L.C. or an equivalent Examination. Preference will be given to those having higher qualifications, especially in Banking and accountancy, and who have practical banking experience, and know type-writing, book-keeping and jewel-appraising.

The selected candidates must be prepared to undergo a period of probation and furnish the necessary security, as per the rules of the Bank.

For further particulars please apply to—

The Vijaya Bank Ltd.

Head Office, Mangalore.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31-12-1941.

Assets exceed	Rs.	1,10,00,000
Life Fund exceeds	,,	92,00,000
Business in force	,,	4,28,00,000
Claims paid over	,,	56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾಮಾನ್ಯಕೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಬಡಿಮಾಸಿಕ, ಸಾಮಾಸಿಕ, ಪತ್ರಿಕಾದಿ, ಪೌರಾಣಿಕ ಕಾದಂಬರಿಗಳು, ಸಾಮಾಜಿಕ ಚಿಂತ್ರಗಳು, ಸಾರವರ್ಧಿಕ ಮತ್ತು ಧಾರ್ಮಿಕ ಗ್ರಂಥಗಳು ಪಠಾರು ಬಗೆಯಲ್ಲಿ ಪ್ರಕಟಿಸಿ ಕಡಿಮೆ ಬೆಲ್ಲಕ್ಕೆ ಪ್ರಜೆಗಳಿಗೆ ಮನವನ್ನು ಸಲ್ಲಿಸಿದ.

ಪ್ರಸ್ತು ಕೆಲ ಅಮ್ಮಕ್ತವು ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮	ಭಯಂಕರ ಸೇಡು	ಬೆಲೆ ೧ ೮
ಭೀಷಣ ಸಾಹಸ	ಬೆಲೆ ೧ ೧೪	ಮೋಹಿನಿ	ಬೆಲೆ ೧ ೮
ಕಿರೀಟರು	ಬೆಲೆ ೨ ೦ ೦	ಅಮಾಕ್ಯಸುಂದರಿ	ಬೆಲೆ ೧ ೮
ಅವಿವಾಹಿತರ ಸಮಸ್ಯೆ	೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪

ಕೆಲವುಗಳಿಗೆ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆಫೀಸಂದನ್ನು, ಇಷ್ಟೇ ಬರೆಯಿರಿ:— ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.

DIAMONDS! ವಜ್ರಗಳು! DIAMONDS!

K. R. K. SHET.

Opposite Govt. College, Hampankatta MANGALORE.

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್ಮೆನ್ಸ್ ಡಿಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಕಾಪಿ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಶಲ್ಯಂಜಿ ವ್ಯಾಸರಾಯರ್ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ [redacted] 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟ ಟ್ರೇಡ್.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ಪಿಸ್ಕೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘಶಾಸ್ತ್ರ** ಮುಧುರ ದ್ರವ ಔಷಧಿಯ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೂ ಸುಲಭವಾಗಿರುವುದು.

ಈ ದಿವ್ಯ ಔಷಧಿಯನ್ನು ಹೆಚ್ಚು ಔಷಧಿ ಅವಶ್ಯವಿರುವವರಿಗೆ ಬರುವಷ್ಟು ಉದರೆ ಔಷಧ ಉಚಿತವಾಗಿ ಸಿಗುವುದು ಮತ್ತು ಒಂದು ಬಾಣಂತನಕ್ಕೆ ಸಾಕಾಗುವಷ್ಟು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಪ್ರಸಾದ್, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲ್, ಮಂಗಳೂರು.

EDITED BY K. H. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No. M. 3618

ತುಳು ಕರ್ನಾಟಕ ಹೊಸ ಮೂದರಿಯ ನಗೆ ಪತ್ರಿಕೆ

ಅಂತರಂಗ

ನಕ್ಕು, ನಲಿಸುವ ವಿಚಿತ್ರ ವಿಚಾರಗಳ ಸಚಿತ್ರ ವಾರಪತ್ರಿಕೆ.

ಚಂದಾದಾರಿ ಚೆಂದಾದಾರರಾಗಲು ಪತ್ರದಲ್ಲಿ ಸುವರ್ಣಪ್ಪರ್.

ಇಡೀ ವರ್ಷಕ್ಕೆ ಮಾಮೂಲು ರೂ. 3—0—0.
ಅರ್ಧ ವರ್ಷಕ್ಕೆ ರೂ. 0—1—0.
ಇಂಡಿಯಾದ ಯಾವ ಭಾಗಕ್ಕೂ ಪೋಸ್ಟೇಜ್ ಫ್ರೀ.

ANTARANGA' WEEKLY, UDIPI.

NAVAYUGA

WEEKLY. ● ವಾರಪತ್ರಿಕೆ.

ಸಂಪುಟ ೨೧ Vol. 21

FOUNDER
Sri. A. B. Shetty, M. L. A.

ಸಂಚಿಕೆ ೫೦ No. 50

ಉಡುಪಿ 20—8—1942 ಮಂಗಳೂರು

Estd. 1921 ಸ್ಥಾಪನೆ

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High class boarding & lodging house

HOSPITAL ROAD, UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿದ್ಯಾರ್ಥಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

Do you know?

You need for your old age;
Your children require schooling;
Your daughters need dowry;
And that the joy of your whole family depends
on the income of an unencumbered estate

ALL THAT IS NEEDED—A POLICY WITH

"INDO-UNION"

Indo-Union has varied plans and it is ever ready to solve your problems

Consult this Progressive Life Office for Your Needs

THE

INDO-UNION ASSURANCE COMPANY LTD.,

Head Office: TANJORE.

For Agency please apply to:-

Sri A. Karunakara Hegde,
ORGANISER.
Sudarshan Tile Works
Bolar, Mangalore

or

Sri K. Jagannath Shetty
UDIPI, S. K.

GENERAL MANAGER.
K. S. RAMAMURTHI, M. A.

ಸ್ವೋಗಿಕ ವಿದ್ಯಾಭ್ಯಾಸ

ಗಿನ ವಿದ್ಯಾಭ್ಯಾಸ ಕ್ರಮದಿಂದಾಗಿ ಸ್ವೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಅಭ್ಯಾಸ ಕ್ರಮದ ದೋಷ. ಇಂದಿನ ಯು ಯಾವುದಾದರೊಂದು ನೌಕರಿ ಸು ಸಾಧನಮಾತ್ರವಾಗಿದೆ; ಆದರ ಮೂಡ ಸ್ಥಾನಗಳಿಗೆ ವಿಸ್ತರಿಸುವ ಸಂಖ್ಯೆ ಉನ್ನೋದ್ಯಾರಿಗಳನ್ನು ಅದು ಇನ್ನೂ ಸಿರ್ಮಿಸುತ್ತಾ ಹೋಗುತ್ತಿದೆ; ತ ನಿರುದ್ಯೋಗವನ್ನೇ ನಿರ್ಮಿಸು ತ್ತಿದೆ.ಈ ಸಮಸ್ಯೆಯ ಪರಿಹಾರಕ್ಕೆ ಔದ್ಯೋಗಿಕವಿದ್ಯಾ ಪ್ರಚಾರವೊಂದೇ ಸಾಧನವೆಂಬುದು ನಿರ್ವಿವಾದ. ಆದ್ದರಿಂದಲೇ ಈಗ ಜೀವನದ ಅನುಕೂಲತೆಗಳಾಗಿರುವ ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮತ್ತು ಇಂತಹ ವಿವಿಧ ವಿಭಾಗಗಳಲ್ಲಿ ವಿದ್ಯಾಭ್ಯಾಸ ದೊರೆಯತಕ್ಕದ್ದೆಂದು ತಜ್ಞರೆಲ್ಲರ ಅಭಿಪ್ರಾಯವಿದೆ. ಅಮೇರಿಕ ಹಾಗೂ ಯುರೋಪು ರಾಷ್ಟ್ರಗಳಲ್ಲಿ ಇಂತಹ ಶಾಲೆಗಳನ್ನು ಸರಕಾರವೇ ನಡೆಸುತ್ತಿದೆ. ಭಾರತದಲ್ಲಿಯೂ ಅಲ್ಲಿ ಇಲ್ಲಿ ಅಂತಹ ಸದ್ವಿದ್ಯಾದಾನ ನಡೆಯುತ್ತಿದೆ. ಕಲ್ಕತ್ತ ಯುನಿವರ್ಸಿಟಿಯವರು ಈ ಭಾಗದಲ್ಲಿ ಮೇಲ್ಪಂಕ್ತಿ ಹಾಕಿರುವದು ಸಂತೋಷಕರ.

ಮೇಲಿನ ಮಾದರಿಯನ್ನನುಸರಿಸಿ ಡಾ| ಟಿ. ಎಮ್. ಎ. ಸೈಗಳ ನೇತೃತ್ವದಲ್ಲಿ ಕೆಲವು ಜನೋಪಕಾರೀ ಸದ್ಗೃಹಸ್ಥರು 'ಎಕೇಡಮಿ ಓಫ್ ಜನರಲ್ ಎಜ್ಯುಕೇಶನ್' ಎಂಬ ಔದ್ಯೋಗಿಕ ಸಾಮಾನ್ಯ ಸಂಸ್ಥೆಯೊಂದನ್ನು ಮಣಿಪಾಲದಲ್ಲಿ ತೆರೆದಿರುವದು ಸ್ತುತ್ಯವಿದೆ. ಅಲ್ಲಿ ಕೊಡುವ ತರಬೇತಿಯ ವಿಭಾಗಗಳನ್ನು ಳಕದ ಸಂಖ್ಯೆಯಲ್ಲಿ ಕೊಟ್ಟಿದ್ದೆವು. ಇಂತಹ ವಿದ್ಯೆಯಷ್ಟು ಅಗತ್ಯವೆಂಬ ಕುರಿತು ಹೇಗೆ ಅನುಮಾನವುಳಿದಿಲ್ಲವೋ ಹಾಗೇನೇ ಡಾ| ಟಿ. ಎಮ್ಮಾಧವ ಸೈಗಳಂತಹ ಚತುರ ಮುತ್ಸದ್ದಿಗಳ ವ್ಯವಸ್ಥಾಪಕತ್ವದಲ್ಲಿ ಅದು ಇಚ್ಛಿತ ಪರಿಣಾಮವನ್ನೀಯುವದರಲ್ಲಿಯೂ ಸಂದೇಹವಿಲ್ಲ. ಸಾರ್ವಜನಿಕರು ಈ ವಿದ್ಯಾಸಂಸ್ಥೆಯ ಕುರಿತು ಆಸಕ್ತಿ ತೋರಿಸಿ ಜೀವಲ ವಿತ್ತಲ್ಲಿ ಅದು ಮೈತುಂಬಿ ಬೆಳೆಯಲನುಕೂಲವಾಗುವದು. ಹಾಗಾಗಲೆಂದು ಹಾರೈಸುತ್ತೇವೆ.

ಎಚ್ಚರವಿಲ್ಲದವರನ್ನು ವದಂತಿಗಳು ಹೇಗೆ ಮೋಸಗೊಳಿಸುತ್ತವೆ

ವಿಚಾರಗೇಡಿಯು ನಂಬಿದ ಅಂಗಡಿಯವನ ಉದಾಹರಣೆ...


೧
ಒಂದು ದಿನ ಅಂಗಡಿಯವನ ಊಹಿತ ಸ್ನೇಹಿತನೊಬ್ಬನು ಅವನಲ್ಲಿಗೆ ಬಂದು ಹೇಳಿದನು...
"ಸರಕಾರದವರು ಈ ಊರಿನಲ್ಲಿರುವ ಅಂಗಡಿಗಳನ್ನೆಲ್ಲಾ ಮುಚ್ಚುತ್ತಾರೆಂದು ಎಲ್ಲರೂ ಹೇಳುತ್ತಾರೆ. ನೀನು ಅಂಗಡಿಯಲ್ಲದ ಅಂಗಡಿಯವನಾಗಿರುವುದಕ್ಕೆ ಹೇಗೆ ಇಷ್ಟಪಡುತ್ತಿ?"
"ಏನಾಗುವುದಕ್ಕೆ ಮೊದಲೇ ನನ್ನ ಅಂಗಡಿಯನ್ನೆಲ್ಲಾ ಬಂಡವಾಳ ಹಾಕಿ ಮಾಯವಾಗುವುದಕ್ಕೆ ಪ್ರಯತ್ನ ಪಡಲೇ ಬೇಡ"


೨
ಮಾರನೆಯ ದಿವಸ..
"ಈ ಅಂಗಡಿಯು ೧೦,೦೦೦ ರೂಪಾಯಿಗಳ ಬೆಲೆ ಬಾಳುತ್ತದೆ. ಆದರೆ ವ್ಯಾಪಾರಿಗಳೆಲ್ಲಾ ಈ ವದಂತಿಯನ್ನು ನಂಬಿದ್ದಾರೆ ಮತ್ತು ನನ್ನ ಅಂಗಡಿಗೆ ೩,೦೦೦ ರೂಪಾಯಿಗಳ ಮೇಲೆ ಯಾರೂ ತೂಡುವುದಿಲ್ಲವಂತೆ. ಇದನ್ನು ಒಪ್ಪಿದಿದ್ದರೆ ನನ್ನ ಸರ್ವಸ್ವವೂ ನಷ್ಟ ಹೊಂದುತ್ತಿದೆ."



ಅಸ್ಥಿರವಾದ ವದಂತಿಗಳನ್ನು ನಂಬಿ ಅವನ ಸರ್ವಸ್ವವೂ ಹಾಳಾಯಿತು

ಕತ್ಯಗಳ ಸುಳ್ಳು ನವಂತಿಗಳಿಂದ ಇಂದಿಯೂ ದೇಶದಲ್ಲಿ ನ್ಯತಿ ವಾರವೂ ಇಂಥಾ ಆಸಾಹುತಿಗಳು ನಡೆಯುತ್ತಿವೆ "ಪ್ರತಿಯೊಂದು ಸುಳ್ಳು ವದಂತಿಯೂ ಕತ್ಯಗಳ ಗುಂಪು." ಎಂದು ಚೈನಾದವರು ಹೇಳುತ್ತಾರೆ. ಯಾ ಕೆಂದರೆ ವದಂತಿಗಳಿಂದ ಉಂಟಾಗುವ ನಿಸ್ಕಾರಣವಾದ ಭಯವೆಂಬ ಜನಾಂಗದ ಶಕ್ತಿಯನ್ನೂ ಕುಂದುತ್ತದೆ. ಅನಾವಶ್ಯಕವಾಗಿ ಸಜ್ಜ ಹೊಂದದೆ ಇರುವುದಕ್ಕೆ ಸರಕಾರದ ಪ್ರಕಟಣೆಗಳನ್ನೇ ನಂಬಿರಿ.

ಅಸ್ಥಿರವಾದ ವದಂತಿಗಳನ್ನು ನಂಬಬೇಡಿರಿ
ಜಾಹಿರಾತನ್ನು ಪ್ರಕಟಿಸುವುದಕ್ಕೆ ಕಾಸ್ಮೋಪಾಲಿಟನ್ ಪತ್ರಿಕೆಯನ್ನು ಕಾಣಿರಿ

ಸಮಾಚಾರ ಸಂಗ್ರಹ

ಸಖಲಿನ ಮೇಲೆ ಜಾಪಾನಿನ ದೃಷ್ಟಿ

ಜರ್ಮನರು ಅತ್ತ ಸ್ಟೆಲಿನ್ ಗ್ರಾಡನ್ನು ಗೆದ್ದೊಡನೆಯೇ ಇತ್ತ ಜಾಪಾನು ಪೂರ್ವದಿಂದ ರಸ್ಯದ ಮೇಲೆ ಬೀಳುವುದು ನಿಶ್ಚಯವೆಂದು ನಂಬಲಾಗಿದೆ. ಆ ಬಗ್ಗೆ ಬೇಕಾದ ಸಿದ್ಧತೆಯನ್ನೆದು ಒಳಗಿಂದೊಳಗೆ ಮಾಡುತ್ತಿರುವಂತಿದೆ. ಈ ಎರಡು ರಾಷ್ಟ್ರಗಳನ್ನು ವಿಭಾಗಿಸುವ ಗಡಿನಾಡಾದ ಸಖಲಿನ್ ದ್ವೀಪದಲ್ಲಿ ರಸ್ಸೋ ಜಾಪಾನೀಯ ದ್ಯಾರಂಭವಾಗಬಹುದೆಂದು ನಂಬಲಾಗಿದೆ. ಪೂರ್ವ ಸೈಬೀರಿಯದ ಪೂರ್ವ ಕರಾಹಳೆಯ ಬಳಿ ಇರುವ ಸಖಲಿನ್ ದ್ವೀಪದ ದಕ್ಷಿಣ ಭಾಗವು ಜಾಪಾನರ ವಶವಿದೆ. ಉತ್ತರವು ರಸ್ಯಕ್ಕೆ ಸೇರಿರುತ್ತದೆ. ಅದನ್ನೂ ಗೆಲ್ಲಬೇಕೆಂದು ಜಾಪಾನರ ಪ್ರಬಲ ಆಕಾಂಕ್ಷೆ. ಆದುದರಿಂದ ಅವರ ದೃಷ್ಟಿಯು ಅದರ ಮೇಲೆ ಬಿದ್ದಿರುತ್ತದೆ. ಈ ದ್ವೀಪವು 600 ಮೈಲು ಉದ್ದವಿದ್ದು ವರ್ಷದ 5 ತಿಂಗಳುಗಳಲ್ಲಿ ಹಿಮಾವರಿತವಾಗಿರುತ್ತದೆ. ಸೆಕೆಕಾಲದಲ್ಲಿಯೂ ಬಿರುಗಾಳಿ ಮತ್ತು ಮಂಜಿನಿಂದ ತುಂಬಿರುತ್ತದೆ. ಪೆಟ್ರೋಲು, ಇದ್ದಲು, ಸಿಮೆನ್ಸು, ಮುರಮಟ್ಟು ಮೊದಲಾದುವುಗಳೇ ಈ ದ್ವೀಪದ ಮುಖ್ಯ ಉತ್ಪತ್ತಿ.

ಜಾಪಾನಿಗೆ ಚೈನವನ್ನು ಗೆಲ್ಲಲು ಸಾಧ್ಯವಿಲ್ಲ.

ಜಾಪಾನರ ಪ್ರಕೃತದ ಹೊಸ ಧಾಳಿಯಿಂದ ಚೈನವು ಸುತ್ತೂ ಹೆಚ್ಚಿನ ಕಷ್ಟಕ್ಕೊಳಗಾಗಿದೆ. ಆದಕ್ಕೆ ಬೇಕಷ್ಟು ಯುದ್ಧೋಪಕರಣವಿರುವುದಿಲ್ಲ. ಆದರೂ ಜಾಪಾನಿಗೆ ಅದನ್ನು ಗೆಲ್ಲಲು ಎಂದೂ ಸಾಧ್ಯವಿಲ್ಲ. ಅತ್ಯಂತ ಹತ್ತಿರ ಬಂದಿರುವ ಜಾಪಾನ ಸೇನೆಯು ಚುಂಕಿಂಗಿನಿಂದ ಇನ್ನೂ 1000ಕ್ಕಿಂತಲೂ ಹೆಚ್ಚು ಮೈಲು ದೂರ ವಿರುತ್ತದೆ. ಜಾಪಾನರು ಹೆಚ್ಚೆಂದರೆ ಪ್ರತಿ ವರ್ಷ 150 ಮೈಲು ಮುಂದುವರಿದಿರುತ್ತಾರೆ. ಈ ಪ್ರಕಾರ ಚುಂಕಿಂಗಿಗೆ ಮುಟ್ಟಲು ಅವರಿಗೆ ಹಲವು ವರ್ಷ ಬೇಕಾಗುವುದು. ಚೈನವು ಕೊನೆಯ ವರೆಗೂ ಹೋರಾಡುವುದೆಂದು ಲೀಡ್ಸ್ ಯುನಿವರ್ಸಿಟಿಯ ಚೀನೀ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಮ್. ಪಿ. ಲೂಯಿಯವರು ಬೈಡ್ ಫೋರ್ಡ್ ಡೊಮಿಂಕ್ಲ್ಬನಲ್ಲಿ ಭಾಷಣವೀಯುವಾಗ ಹೇಳಿರುವರು.

ರಸ್ಯದ ಸೇನೆಯು ನಾಶವಾಗಿಲ್ಲ.

ರಸ್ಯವು ಈಗ ದೊಡ್ಡ ಅಪಜಯ ಪಡೆದು ಕೋಕಸಸ್ ಮತ್ತು ಡೋನ್ ನದಿ ಪ್ರದೇಶದಲ್ಲಿ ಹಿಂದೆ ಸರಿದು ಪರಿಸ್ಥಿತಿಯು ಅತ್ಯಂತ ವಿಷಮವಾಗಿದೆ. ಆದರೆ ಒಂದು ಆಶಾದಾಯಕ ವಿಷಯವೆಂದರೆ ಜರ್ಮನರು ಈ ವರೆಗೆ ಎಲ್ಲಿಯೂ ದೊಡ್ಡ ಸೋವಿಯೆಟ್ ಸೇನೆಯನ್ನು ನಾಶಮಾಡಲು ಶಕ್ತರಾಗಿರುವುದಿಲ್ಲ. ನಾರ್ಶಲ್ ಟಿಮೊಶೆಂಕೋರವರು ಬಹಳ ಯುಕ್ತಿಯಿಂದ ಹಿಂದೆ ಸರಿದು ತನ್ನ ಸೇನೆಯನ್ನು ಉಳಿಸಿಕೊಂಡಿರುತ್ತಾರೆ. ಆದುದರಿಂದಲೇ ಸ್ಟೆಲಿನ್ ಗ್ರಾಡಿನ ಬಳಿ ಈಗ ಜರ್ಮನರನ್ನು ತಡೆಗಟ್ಟಿಲು ಅವರಿಗೆ ಸಾಧ್ಯವಾಗಿದೆ. ಅವರ ಸೇನೆಯು ಇನ್ನಾದರೂ ಅನುಕೂಲ ಸ್ಥಳದಲ್ಲಿ ಜರ್ಮನರನ್ನು ಪ್ರತಿಭಟಿಸಿ ನಿರ್ಧಾರಕಾರಕ ಯುದ್ಧಗಳು ಇನ್ನು ಮುಂದೆ ನಡೆಯಲಿವೆ. ಓಲ್ಗಾದ ಮತ್ತು ರಸ್ಯದ ಇತರ ಸೇನೆಗಳಿಗೆ ಎಣ್ಣೆ ಸರಬರಾಯಿ ಆಗುವ ಪ್ರಾಮುಖ್ಯ ರಸ್ತೆಗಳು ಕತ್ತಿಯಲ್ಲಬ್ಬನೆ. ಆದರೆ ರಸ್ಯವು ಇನ್ನು ರಲ್ಲೇ 2 ವರ್ಷಕ್ಕೆ ಬೇಕಷ್ಟು ಎಣ್ಣೆ ಮತ್ತು ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಿಟ್ಟಿರುವುದೆಂದು ನಂಬಲಾಗಿದೆ. ಒಂದಲ್ಲೊಂದು ದಿನ ತಾನು ಯುದ್ಧ ನಡಿಸಬೇಕಾಗುವುದು ನಿಶ್ಚಯವೆಂದು ರಸ್ಯವು ಕಳದ 10 ವರ್ಷಗಳಿಂದ ಮುಂಜಾಗ್ರತೆ ತೆಗೆದುಕೊಂಡು ಧನಸಂಧಾನ್ಯ ಮೊದಲಾದುವನ್ನು ಸಂಗ್ರಹಿಸುತ್ತಾ ಬಂದಿದೆ.

ಜರ್ಮನಿಯ ಮೇಲೆ ಪ್ರಚಂಡ ವಿಮಾನ ಧಾಳಿ

ಎಂತಹ ಹೆವಾಗುಣವನ್ನೂ ಲೆಕ್ಕಿಸದೆ, ರಾತ್ರಿಹಗಲು ಎಡೆಬಿಡದೆ ಜರ್ಮನಿಯ ಮೇಲೆ ಪ್ರಚಂಡ ವಿಮಾನ ಧಾಳಿ ನಡಿಸುವ ಕಾರ್ಯಕ್ರಮವನ್ನು ಬ್ರಿಟನು ಮತ್ತು ಅಮೆರಿಕಗಳು ಬೇಗನೆ ಕೈಕೊಳ್ಳುವನೆಂದು ಪ್ರಕಟಿಸಲಾಗಿದೆ. ಬರ್ಲಿನಿನ ಮೇಲೆ ಕೂಡಾ ಧಾಳ ನಡಿಸಲಾಗುವುದಂತೆ. ಜರ್ಮನಿಯ ಹೆಚ್ಚಿನ ಫೈಟರ್ ವಿಮಾನಗಳು ರಸ್ಯ ನುತ್ತು ಮಧ್ಯ ಪೂರ್ವದಲ್ಲಿರುತ್ತವೆ. ಆದುದರಿಂದ ತನ್ನ ನೇಲಿನ ಪ್ರಬಲ ವಿಮಾನ ಧಾಳಗಳನ್ನು ಪ್ರತಿಭಟಿಸಲು ಬೇಕಷ್ಟು ವಿಮಾನಗಳು ಜರ್ಮನಿಯಲ್ಲಿರುವುದಿಲ್ಲೆಂದು ನಂಬಲಾಗಿದೆ. 4 ಇಂಜಿನುಗಳ ದೊಡ್ಡ ಬೋಂಬರ್ ವಿಮಾನಗಳನ್ನು ನಾಶಮಾಡುವುದು ಕಷ್ಟವಾಗಿದೆ. ಆದುದರಿಂದ ಇನ್ನು ಮುಂದೆ ಹೆಚ್ಚೆಚ್ಚಾಗಿ ಈ ದೊಡ್ಡ ಬೋಂಬರುಗಳ ಮೂಲಕವೇ ಜರ್ಮನಿಯ ಮೇಲೆ ಭೀಷಣ ಧಾಳ ನಡಿಸಲಾಗುವುದು

ರಸ್ಯದಲ್ಲಿ ಯುದ್ಧೋಪಕರಣ ತಯಾರಿ.

ರಸ್ಯವು ಜರ್ಮನಿಯೊಂದಿಗೆ ಪ್ರಚಂಡ ಹಾಗೂ ಭೀಷಣ ಯುದ್ಧ ನಡಿಸುತ್ತಿರುವಂತೆಯೇ ಹೆಚ್ಚೆಚ್ಚಾಗಿ ಯುದ್ಧೋಪಕರಣಗಳನ್ನು ತಯಾರಿಸುತ್ತಿದೆ. ಆದರೆ ಉತ್ಪತ್ತಿಯು ಯುದ್ಧಾರಂಭದ ನಂತರ 7 ಪಾಲನ್ನು ಹೆಚ್ಚಿರುವುದೆಂದು ತಿಳಿದುಬರುತ್ತದೆ. ಸೇನೆಯಂತೆಯೇ ಕಾರ್ಖಾನೆಗಳನ್ನೂ ರಸ್ಯನರು ವೀಕ್ಷ್ಯವಾಗಿ ಒಂದೆಡೆಯಿಂದ ಇನ್ನೊಂದು ಕಡೆಗೊಯ್ಯಬಲ್ಲರು. ಲೆನಿನ್‌ಗ್ರಾಡ್, ಮೋಸ್ಕೋ, ಖಾರ್ಕೊವ್ ಮೊದಲಾದ ಸ್ಥಳಗಳಿಂದ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಉರಾಲ್ ಪರ್ವತ ಶ್ರೇಣಿಯ ಹಿಂಬದಿಗೆ ಮತ್ತು ಪಶ್ಚಿಮ ನೈಬೀರಿಯಕ್ಕೊಯ್ದು ಸ್ಥಾಪಿಸಲಾಗಿದೆ. ರಸ್ಯದ ಲಕ್ಷಗಟ್ಟಲೆ ಕಾರ್ಮಿಕರು ಈ ಕಾರ್ಖಾನೆಗಳಲ್ಲಿ ರಾತ್ರಿ ಹಗಲು ಮಧಿಯುತ್ತಿದ್ದಾರೆ. ರಸ್ಯನರ ರೈಲ್ ಮಾರ್ಗ ವ್ಯವಸ್ಥೆಯು ವಿಚಿತ್ರವಾಗಿದೆಯೆಂದು ಇತ್ತಲಾಗಿ ರಸ್ಯದಲ್ಲಿ 14,000 ಮೈಲು ಸಂಚರಿಸಿ ಬಂದಿರುವ ಇಂಗ್ಲೆಂಡಿನ ರೈಲ್ವೇ ಕೆಲಸಗಾರ ಸಂಘವು ಮಾಜಿ ಅಧ್ಯಕ್ಷರಾದ ಮಿ. ಜೆ. ಎಚ್. ಹೋಟ್ಸ್‌ರೆಂಬವರು ಪ್ರಕಟಿಸಿರುತ್ತಾರೆ.

ಗೆದ್ದ ರಾಜ್ಯಗಳಿಂದ ಜಾಪಾನು ಪಡೆದ ಸಂಪತ್ತು.

ದಕ್ಷಿಣ ಅಸ್ಯಾದ ರಾಜ್ಯಗಳನ್ನು ಜಾಪಾನು ಗೆದ್ದು 320,000 ಟನ್‌ಗಳ ಹತ್ತಿ, ಸಕ್ಕರೆ, ಜೋಳ ಮೊದಲಾದ ಆಹಾರ ಸಾಮಾಗ್ರಿಗಳನ್ನು ಅವುಗಳಿಂದ ಒಯ್ದಿರುವುದೆಂದು ತಿಳಿದುಬಂದಿದೆ. ಜಾಪಾನಿನಿಂದ ಸೈನ್ಯ ತರುವ ಹಡಗುಗಳು

16ನೇ ಪುಟ ನೋಡಿ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬ್ಯೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋಟ್ಯ ರಸ್ತೆ, ಉಡುಪಿ, ದಕ್ಷಿಣ ಕನ್ನಡ.

ಶೇತ್ತ ಮೂಲಧನ ... ... ರೂ. 1,82,100-0- 0

ಕ್ಷೇಮ ನಿಧಿಗಳು ... ... ರೂ. 1,71,898-2-11

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಗಿಂಗಾಡ್ ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.

ವಾಣಿಜ್ಯಕ್ಕೆ ಯುಕ್ತವಾದ ದಸ್ತಾವೇಜುಗಳ, ಚಿನ್ನಾಭರಣಗಳ, ಸರಕಾರಾಶಕರವಾದ ಇತರ ಭದ್ರತೆಗಳ ಮೇಲೂ ಡಿಮಾಂಡ್ ನೋಟುಗಳ, ಬೇಲು ಹುಂಡಿಗಳ ಮೇಲೂ ಚಿಕ್ಕ ವ ದೊಡ್ಡ ಸಾಲಗಳು ನ ಓವರ್ ಡ್ರಾಫ್ಟುಗಳು ಕೃಷಿಕರವಾದ ಸುಲಭ ದೆಗಳಲ್ಲಿ ವರ್ಷಕೆಯೂ ಇತರರಿಗೂ ಇತರರಿಗೆ ಕುಬೆಂಕಿನ ಪ್ರತಿ ಪಾವೆಯಲ್ಲಿಪೆ ಪಿ ದೊರಕುತ್ತವೆ.

ತೇವಣಾತಿಗಳು ಆಂಗೀಕರಿಸಲ್ಪಡುತ್ತವೆ.

ಹೆಚ್ಚಿನ ವಾಹಿತಿಗೆ ಮೊಯಿತಾ ಅಧವಾ ಸತ್ಕಾರ್ಯಾರ ಸನಿಹದ ತುಪೆಯ ಲ್ಲಿ ವಿಚಾರಿಸಿ.

UDIPI, 16th April.

ಚಿಂತಿಸುತ್ತಿರುವುದೇಕೆ?

ವಿಮಾನಧಾಳ ಆಧವಾ, ಜನತೆಯ ಮೇಲೆ ನೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುಮೇರದಲ್ಲಿ ವಿಮಾನಧಾಳ ಸಂರಕ್ಷಣಾ ಕೆಲಸ ನಲ್ಲಿ ಕೂಡಾ ಮೆರಣವುಂಟಾಗುವ ಅಪಾಯವನ್ನು ಸಂಪೂರ್ಣ ಒಳಗೊಂಪ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಸ್ವೀತಿಸುವವರ ಸಲುವಾಗಿ

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ಪೋಲಿಸಿಯನ್ನು ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳ ವರಾಗುವುದುಸಾನ್ನು ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ವಿಜಸ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಧವಾ ಆವರ ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟಿ, ತಿರುವಾಂಕೂರು ಮತ್ತು ಬೊಂಬಾಯಿ.

The Bombay Life Insurance Company Limited.

ನೋಟೀಸು.

ದಿ ತುಳುನಾಡ್ ಬೇಂಕ್ ಆಫ್ ಸಬ್ಸ್ಕ್ರಿಪ್ಷನ್ಸ್ ಲಿಮಿಟೆಡ್, ಉಡುಪಿ

(In Liquidation)

ಸದ್ರಿ ಬ್ಯಾಂಕಿಗೆ ಕೆಲವು ಕುಳವಾರುಗಳಿಂದ ಬರಕಳ್ಳ ಹೊರಬಾಕಿಗಳ ವಸೂಲಿ ಹಳ್ಳಮ್ಮನ ತಾ. 26-8-42ನೇ ಬುಧವಾರ ಅಪರಾಹ್ನ ಗಂಟೆ 4ಕ್ಕೆ ಸದ್ರಿ ಬ್ಯಾಂಕಿನ ಆಫೀಸಿನಲ್ಲಿ (ವಿಶ್ವಜ್ಞ ಭವನದ ಉಪ್ಪರಿಗೆಯಲ್ಲಿ) ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಸಂಬಂಧಪಟ್ಟ ದಸ್ತಾವೇಜುಗಳ ವ ಇತರ ಮಾಹಿತಿಗಳನ್ನು ಕೆಂಪೆನಿಯ ಲಿಕ್ವಿಡೇಟರ್ರುಗಳಿಂದ ತಿಳಿಕೊಳ್ಳಬಹುದು.

K. Gururaja Rao.
Narayana Rao. K.
Joint Liquidators,

Dated, 14-8-42. Udipi.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

S. C. 218/1942.

ದಿ. ಉಡುಪಿ ಮುನ್ಸೀಪಾಲಿಟಿ ಕವರ್ನರ್, ದಿ. ವಿಶ್ವನಾಥ ರೆಡ್ಡಿ— ಹಾಲಿ.

ವರ್ತು

ವೆಂಕಟ್ರಾಯಾಚಾರ್ಯರ್-- ಪ್ರತಿವಾದಿ.

ಇವರೆಲ್ಲರಿಗೆ

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯಿಂದ ಉಡುಪಿ ಮುನ್ಸೀಪಾಲಿಟಿಗೆ ಟೇಕ್ಸಿನ ಬಾಬ್ತು ಬರಕಳ್ಳ ವಸೂಲಿನ ಬಗ್ಗೆ ನಾಡಿದ್ದಾಗಿ ಸದ್ರಿ ಸಂಬಂಧವು ಪ್ರತಿವಾದಿಯ ಸೋಲಿನಲ್ಲಿ ಬಗ್ಗೆ ತಾ. 31-8-42ಕ್ಕೆ ಇತ್ಯರ್ಥವಾಗುತ್ತದೆ, ಪ್ರತಿವಾದಿಯು ಆಕ್ಷೇಪ ವಗೈರೆ ತಂದು ವಾದಿಸಲು ಕಾಲ ಸ್ವಸ್ಥಾ ನ ಮಿಲಿಂದ ಮುಖಾಂತರ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬೇಕು, ಇಲ್ಲವಾದಲ್ಲಿ ಆತನ ಗೈರುಹಾಜರಿಯಲ್ಲಿ ಸದ್ರಿ ಸಂಬಂಧ ಕೋರ್ಟಿನ ಮಂದೆ ತೀರ್ಮಾನಕ್ಕೆಳ್ಳಬಹುದೆಂಬ ಸಂಗತಿ ಈ ಮೂಲಕ ಜ್ಯಾಹೀರು ಮಾಡಲ್ಪಟ್ಟಿದೆ

P. Padmanabha Rao,
B. A., B. L.,

ಉಡುಪಿ, 11.8.42 } Vakil for Plaintiff.

ಆ ಹಿಂದುಸ್ತಾನವು ಹೇಗಿರಬಹುದು?

[ಮುಂ ಕಿವಿಗಳ ವಾನೆಯಲ್ಲಿ ದ್ವನೀ ಕತ್ಯನಿರುವ ನೆ. ಶ್ರೀ ರವೀಂದ್ರನಾಥ್ ಠಾಕೂರ್ ಅವ್ಯಕ್ತನೆಯ ಪ್ರವಚನವನ್ನಿಂದ ಹೊರಟ ಕೆಳಗಿನ ಕಲ್ಪಗಳು ಸರ್ವಕ್ಕ ಕ್ಕಾರ್ಯಕರ್ತರಿಯೂ ಅವರ್ಯಾಗಿಯೂ ಭಾವವನ್ನು [ಉಂದುವಾತಲಲ್ಲುವ ಆ ವಚನಗಳಲ್ಲಿ ಧ್ವನಿಸ್ಯವಾನೆಯಿದೆ, ಅಕ್ಷಾಸನೆಯಿದೆ ಂರೋಷವಿದೆ . ಮತ್ತು ಮಾರ್ಗದರ್ಶಕತೆಯೂ ಇದೆ]

ಶಾಂಗ್ರೀಸರು ತಮ್ಮ ಹಿಂದೀ ಸಾರ್ವಜ್ಯನ್ನು ಬಿಬ್ಬುಹೋಗಲೇಬೇಕಾಯಿತು ಮತ್ತೆ ತಮ್ಮ ಕರ್ತವ್ಯವೆಂದು ತಿಳಿದವ ಒಂದು ದಿನವೂ ಅವರು ಭಾಗ್ಯಲಕ್ಷ್ಮಿ ನಿವಾಗಿಯೂ ಮೂಡದೆಯಿರಲಿಕ್ಕಿಲ್ಲ. ಆದರೆ ಉಪಾಯವಿಲ್ಲದೆ ಶಾಶ್ವತ ತೊರೆಯಲೇ ಬೇಕಾದ ಆ ದಿನದ ಭಾರತವು ಹೇಗಿರಬಹುದು? ಅವರಿಗದು ಎಷ್ಟು ದುಃಖದಾಯಕವಾಗಿರಬಹುದು?

೦೦ ೦೦ ೦೦

ಶತಮಾನಗಳಿಂದ ಮುಂದುವರಿಯುತ್ತಿರುವ ಅವರ ವಿವಾಹವನ್ನ ಪ್ರವಾಹವು, ಕೊನೆಗೆ ಬತ್ತಿ ಹೋದಾಗ, ತನ್ನ ಹಿಂದೆ ಅವಿಚ್ಛಿ ಕೆಸರನ್ನೂ ದುರ್ವಾಸನೆಯನ್ನೂ ಬಿಟ್ಟು ಹೋಗಲಿರುವುದು?

೦೦ ೦೦ ೦೦

ನೂತನ ಸಂಸ್ಕೃತಿಯ ಅಧಿಪತಿಯಾ ಯು.ರೋಪಿನ ಹೃದಯದಿಂದಾಗಲಿಹುದೆಂಬು ನಾನು ಒಂದು ಕಮಯದಲ್ಲಿ ನಂಬುತ್ತಿದ್ದೆ. ಆದರೆ ಇಂದು, ಈ ಜಗತ್ತಿನಿಂದ ವಿದಾಯವನ್ನು ಪಡೆಯುವ ಗಳಿಗೆಯು ನನ್ನ ಸಮೀಪಕ್ಕೆ ಬಂದಾಗ, ಪಶ್ಚಿಮದ ಮೇಲಿನ ನನ್ನ ಈ ಅಚಲವಾದ ಶ್ರದ್ಧೆಯು ಬಿರುಬಿರುಗಾಳಿ ಹಾಂಡಿಹೋಯಿತು.

೦೦ ೦೦ ೦೦

ನಮ್ಮೀ ದಾರಿದ್ರ್ಯ ಪೀಡಿತ ದೇಶದಿಂದಲೇ ಜಗತ್ಕಲ್ಯಾಣದ ಅಧಿಪತ್ಯವಾದೀತೆಂಬ ಒಂದೇ ಒಂದಾದರೂ ಮತ್ತು ಕೊನೆಯದಾಗಿ ಆಶೆಯನ್ನು ನಾನು ಇಂದು ಸೆದಿಸುತ್ತಿದ್ದೇನೆ. ಅಂದಿನ ಈ ಸ್ವರ್ಗೀಯ ಸಂದೇಶವು ಭೂಮಿಯಿಂದಲೇ ಎದ್ದು, ಮಾನವ-ಅಂತರಂಗಕ್ಕೆ ಅಸಾಧಾರಣ ಆಶೆಯ ಸಂಚಾರವನ್ನು ಮಾಡಿಸುತ್ತಾ, ನಿಶ್ಚಿದಲ್ಲಿ ಪ್ರತಿಧ್ವನಿಗೈಯಲಿರುವುದು.

೦೦ ೦೦ ೦೦

ಜೀವನ ಪ್ರವಾಸದಲ್ಲಿ ನಾವು ಮುಂದುವರಿದಂತೆಲ್ಲಾ ಮತ್ತು ಮುಗಿಸಲ್ಪಟ್ಟ ಪ್ರಯಾಣದ ಅವಧಿ ಹಿಂತಿರುಗಿ ನೋಡಿದಂತೆಲ್ಲಾ, ಈ ಸಂಗತಿಯು ಪದೇ ಪದೇ ಪ್ರಜ್ಞಾಪೂರ್ವಕವಾಗಿ ಹೋಗುತ್ತಿದೆ.

೦೦ ೦೦ ೦೦

ಮೊನಚಿ-ವಿಶ್ವಲತೆಯಿಂದ ದುರ್ಬಲತೆಯನ್ನು ಕೆಡಿಸುತ್ತಿರುವ ಈಗಿನ ಸಂಸ್ಕೃತಿಯ ಕೆಸರ ರಾಶಿಯು ಕೆಳಗೆ ಬಿಳುತ್ತಿರುವುದೆನ್ನು ನಾನಿಂದು ನೋಡುತ್ತಿದ್ದೆನೆ.

೦೦ ೦೦ ೦೦

ನಿಶ್ಚಯವಿತ್ತ ಅಳ್ಳ ಸಂತೋಷದ ಭಾವನೆಯಲ್ಲಿ ಅತಿದು ಬಾಳುತ್ತಿರುವ ಇಗಿನ ಅತಿ ವಿಶಾಲ ಶಕ್ತಿಗಳ ಕೆಡಿಸ ಹಿತಕರವಲ್ಲವೆಂದು ಸಾರಿ ಕ್ತಿರುವ ದಿನದಿಂದು ಬಂದಿದೆ.

ಅಧರ್ಮದಿಂದ ಮನುಷ್ಯನು ತನು ಹೊತ್ತಿನ ವರೆಗೆ ಹಿರಿಹಿರಿಗಳಾಗಬಹುದು ಮತ್ತು ಅವನಲ್ಲಿ ಳ್ಳಿಗೆ ಗೆಯುತನ್ನು ಪಡೆದಂತೆಯೂ ಅವನಿಗೆ ಭೂಮಿಯ ಗುಹೆಯು ಳ್ಳೆಣಾಲದ ವರೆಗೆ ತನ್ನ ಕೈಬಿಸಿಕೆ ಮೇರೆ ವಿಜಯವನ್ನು ಕೆಡಿಸ ಪಡೆಯಬಹುದು. ಆದರೆ ಆ ಅಧರ್ಮವು ಅಂತ್ಯದಲ್ಲಿ ಅವನ ನರ್ನಾಶವನ್ನು ಮಾಡುತ್ತದೆ.

ಹೀಗೆಂದು ಕುರಾನಿನ ಮಹಾವಾಕ್ಯಗಳು ಹೇಳಿರುತ್ತವೆ. ಸತ್ಯವಾದುದು.

—ರವೀಂದ್ರನಾಥ ಠಾಗೂರ್.

(1941ನೇ ಇಸ್ವಿಯ ಮೇ ತಿಂಗಳಲ್ಲಿ ತನ್ನ ಎಂಭತ್ತನೆಯ ವರ್ಷದ ವಿಶಾಖದೆಯ ಪ್ರಸಂಗದಲ್ಲಿ ಶಾಂತಿನಿಕೇತನದಲ್ಲಿ ಮಾಡಿದ ಒಂದು ಪ್ರಸಂಗದ ವಿಂದ)

—ಜಸ್ಟ್ ಳಿವಿ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೈದ್ಯಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ,ಮನೆಯಲ್ಲಿ ನಗೆಯ ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮನಾಡಿನ ಕಂಪೆನಿಯಲ್ಲಿಯೇ ನಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

THE CANARA MUTUAL ASSURANCE COMPANY, LIMITED.

UDIPI : : : : S. India

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾಪತ್ಯ, ಶರೀರದ ಉಷ್ಣತೆ, ಧಾತು ಮಾತ್ರದೊಡನೆ ಹೊರಗೆ ಹೋಗುವುದೆ, ಸೋದಪೋಡಿ, ಕೈ ಕಾಲು ಉಚ್ಚುತ್ತಿರು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಪುಷ್ಟಿಯನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಕಾಂಟುಮಾಡುವುದು. ಬಾಟ್ಲಿ 1ರ ದರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಲೇಕ್ಕ ಅತೀಪ್ರಶಸ್ತ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗರ್ಭಕ್ಕೆ ಮೊದಲಿನ ಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವಿನ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ, ಹೊಂದಿ ಕಳ್ಳುವಿ, ತಿಂಬುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ದರ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ಪೋಷ್ಟ್, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1)ಕುಕ್ಕೇ ಶ್ರೀ ಸ್ಟೋರ್ಸ್, ಕೆಂಪ್ಸ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ ಪಾರಿಜಾತ್ ರೋಡ್, ಪರೇಲ, ಬೊಂಬಾಯಿ, ಸಂಖ್ಯೆ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಯಂಗಾ. (3) ಮಿಲ್ಲರ್ ಬೆಡರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಲೈಸೆನ್ಸಿಡ ಮೆಡಿಸಿನ್ ವೆಂಡರ್ಸ್, ವೈಕೋಮ್. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಶಿಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ,(7)ಡಾ! ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ಮಾಸ್ತೇವ ಶೆಟ್ಟಿ, ಬೆಳ್ತಂಗಡಿ. (9) ಮುಳ್ಳಿ ಮೆಡಿಕಲ್ ಸ್ಟೋರ್ಸ್, ಮುಳ್ಳಿ. (10) ನವಭಾರತ ಬುಕ್ ಡಿಪೊ, ಕೋಳದ ಪೇಟೆ, ಉಡುಪಿ (11) ಕೃಷ್ಣ ಫಾರ್ಮಸಿ, ಕುಂದಾಪುರ. (12) ಜಾವಗೋಡು ಶ್ರೀ ರಾಮಚಂದ್ರ ಶ್ರೇಯಸರಿ ಹೌಸ್, ಶ್ರೀ ರಾಮ ಪೇಟೆ (13)ಕೆ.ಶ್ರೀನಿವಾಸಶೆಟ್ಟಿ,ತೀರ್ಥಹಳ್ಳಿ/14)ಬಿ.ಯಸ್,ನರಿಂಗರಾವ್.ಮುಖೇರ್ಜಿ,ಚಿಕ್ಕಮಂಗಳೂರು

DOMINATE THE AIR and WIN!

Give to the

GOVERNOR'S WAR FUND

and provide

MORE PLANES!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೆಟ್ಟ ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಭಾಯುವಾಗಿದ್ದರೆ....ಚಟ್ಟ ಬದ್ದಿದ್ದರೆ, ಉಷ್ಣದಿಂದ ಜೀರು ಇಳದಿದ್ದರೆ, ಉಷುಜ್ಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ತೊಡಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ತೊಲಿ ಕುಟು ಗರ್ಮಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ವೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ಮುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ಮುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೀರು ಮುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಮಾರ, ಕುಂಬಳಕಾಯಿ, ಒಳ್ಳೆಣ್ಣೆ ವಿಷವೇಕು.

ಬಾಟ್ಲಿಗೆ ೪ ಆಣೆ. ಪೋಸ್ಟೇಜ್ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಬಾದಾಮಿಗೇರಿ:—ಬಾದಾಮಿಗೇರಿ ಪ್ರೆಸ್.

ಮೂಲಕರ್ತರ ವಿಳಾಸ: ದೇವಣಸಿದ್ಧಪ್ಪ ಶಾಲಪ್ಪ ಬಾದಾಮಿಗೇರಿ, ಆಯುರ್ವೇದ ಔಷಧಾಲಯ ಗದಗ.

ಎಲ್ಲೆಲ್ಲಿಯೂ ಕಾಂಗ್ರೆಸ್ ಮುಖಂಡರ ದಸ್ತಗಿರಿ.

ವಿದ್ಯಾರ್ಥಿಗಳ ಮತ್ತು ಕೆಲಸಗಾರರ ಮುಷ್ಕರ
ಹಲವು ಕಡೆಗಳಲ್ಲಿ ಗೋಳಿಬಾರು.

ಬೊಂಬಾಯಿಯಲ್ಲಿ 32 ಮಂದಿ ಕೊಲ್ಲಲ್ಪಟ್ಟು ಸುಮಾರು 300 ಮಂದಿ ಗಾಯಗೊಂಡಿರುವರು. 400ಕ್ಕಿಂತಲೂ ಮಿಕ್ಕಿದವರು ಕೈದುಮಾಡಲ್ಪಟ್ಟಿರುವರು. ಬೊಂಬಾಯಿ ಪಟ್ಟಣದಲ್ಲಿ ಕರ್ಫ್ಯೂ ಹುಕುಮನ್ನು ಇನ್ನೂ 15 ದಿವಸಗಳ ವರೆಗೆ ಮುಂದುವರಿಸಲಾಗಿದೆ. 4ದಿವಸಗಳ ಗಲಾಟೆಯ ನಂತರ ತಾ. 13ರಲ್ಲಿ ಬೊಂಬಾಯಿಯಲ್ಲಿ ಸ್ವಲ್ಪ ಶಾಂತತೆಯುಂಟಾದಂತಿದೆ. ಪೋಲೀಸ್ ಮತ್ತು ಸೈನಿಕರು ಎಡೆಬಿಡದೆ ಪಹರೆ ನಡಿಸುತ್ತಲೇ ಇದ್ದಾರೆ. ಬೊಂಬಾಯಿಯ ಹೊರವಲಯದಲ್ಲಿ ಅಂಧೇರಿ ಮತ್ತು ವಿಲ್ಲಿ ಪಾರ್ಲೆಗಳಲ್ಲಿ ಟಪ್ಪಾಲು ಆಫೀಸುಗಳ ಮೇಲೆ ಜನರು ಧಾಳಿ ನಡಿಸಿ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಕಡಿದುಹಾಕಿರುತ್ತಾರೆ.

ಬೊಂಬಾಯಿ, ಅಹಮ್ಮದಾಬಾದ್, ಬೆಂಗಳೂರು, ಕೋಲಾಪುರ ಮೊದಲಾದ ಪಟ್ಟಣಗಳಲ್ಲಿ ಕೆಲಸಗಾರರು ಗಿರಣಿ ಮತ್ತು ಕಾರ್ಖಾನೆಗಳಿಂದ ಹೊರಬಂದು ಮುಷ್ಕರ ಹಿಡಿದಿರುತ್ತಾರೆ. ಬೊಂಬಾಯಿಯ ಸ್ಟೋಕ್ ಎಕ್ಸ್‌ಚೇಂಜ್' ಕೋಟನ್ ಮಾರ್ಕೆಟ್ ಮೊದಲಾದವು ಮುಚ್ಚಲ್ಪಟ್ಟಿವೆ.

ಪೂನದಲ್ಲಿ ಇದೇ ತಾ. 12ರಲ್ಲು ಸೈನಿಕರು ಗುಂಡು ಹಾರಿಸಿದ ಪರಿಣಾಮವಾಗಿ 4 ಮಂದಿ ಕೊಲ್ಲಲ್ಪಟ್ಟು 10 ಮಂದಿಗೆ ಬಹಳ ಜಖಮ್ ಆಗಿರುವುದು. ಲಕ್ಷ್ಮಿ ರಸ್ತೆಯಲ್ಲಿ ದೊಡ್ಡ ಜನಸ್ತೋಮವು ಟೆಲಿಗ್ರಾಫ್ ಮತ್ತು ಟೆಲಿಫೋನ್ ಸಂಗೆಗಳನ್ನು ಕಡಿಯುತ್ತಿರುವಾಗ ಪೋಲೀಸರು ತಡೆದು ಗಲಾಟೆಯಾಗಿ ಸೈನಿಕರು ಬಂದು ಗುಂಡು ಹಾರಿಸಿ ಜನರನ್ನು ಚೆದರಿಸಿದರು. ಸೈನಿಕರು ಇನ್ನೊಂದು ಕಡೆಯಲ್ಲಿ ಗುಂಡು ಹಾರಿಸಬೇಕಾಯಿತು. ಡಗ್ಡಿಪೂಲ್' ಎಂಬಲ್ಲಿ ಜನರು ಪೋಲೀಸ್ ಸ್ಟೇಶನ್ನೊಂದರ ಮೇಲೆ ಧಾಳಿ ನಡಿಸಿ ಬೆಂಕಿ ಕೊಟ್ಟಿರುವರು ಒಟ್ಟು 40 ಮಂದಿ ಈ ದಿನ ದಸ್ತಗಿರಿಮಾಡಲ್ಪಟ್ಟಿರುವರು. ಪೂನ ಜಿಲ್ಲೆಯ ಒರುಮತ ರೈಲ್ವೇ ಸ್ಟೇಶನಿನ ಮೇಲೆ ಜನರು ಧಾಳಿ ನಡಿಸಿ ಎಂಜಿನ್ ರೈಲ್ವೇ ಗಾಡಿಗಳನ್ನು ಸುಟ್ಟುಹಾಕಿರುವರೆಂಬ ತಿಳಿದು ಬರುತ್ತಿದೆ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳು ಕಡಿದುಹಾಕಲ್ಪಟ್ಟಿರುವುದರಿಂದ ದಕ್ಷಿಣ ಹಿಂದುಸ್ಥಾನಕ್ಕೆ ತಂತಿ ಮತ್ತು ಫೋನ್ ವರ್ತಮಾನ ಕಳುಹಿಸಲು ತೊಂದರೆಯಾಗಿದೆ.

ಇದೇ ತಾ. 13ನೇ ರಾತ್ರಿ ಅಹಮ್ಮದಾಬಾದಿನಲ್ಲಿ ಜನರು ಲುನ್ಸವಾಲ ಪೋಲೀಸ್ ಸ್ಟೇಶನಿಗೆ ಬೆಂಕಿ ಕೊಟ್ಟರು. ಆದರೆ ಅದು ಕೂಡಲೆ ನೊಂದಿಸಲ್ಪಟ್ಟಿತು. ಒಟ್ಟು ಈದಿನ 30ಮಂದಿ ಕೈದು ಮಾಡಲ್ಪಟ್ಟಿರುವರು. ಇದೇ ತಾ. 12ಮತ್ತು 13ರಲ್ಲಿ ನಾಗಪುರದಲ್ಲಿ ದೊಡ್ಡ ಗಲಾಟೆ ಎದ್ದು ಪೋಲೀಸರು ಲಾಠಿ ಚಾರ್ಜು ಮತ್ತು ಗುಂಡು ಹಾರಿಸಿ ಗಲಾಟೆ ನಿಲ್ಲಿಸಿದರು. 4ಮಂದಿ ಕೊಲ್ಲಲ್ಪಟ್ಟು 13ಮಂದಿ ಗಾಯಗೊಂಡಿರುವರು. ವಾರ್ಧಾದ ಗೋವಿಂದ್ರಾಮ್ ಸಕ್ಸೇರಿಯ ಕಮರ್ಸಿಯಲ್ ಕೊಲೆ ಜನ್ನು ಸರಕಾರವು ಮುಚ್ಚಿ ಬೀಗ ಮುದ್ರೆ ಹಾಕಿರುವುದು

ಸರಕಾರವು ಗಲಾಟೆಗಳನ್ನಣಗಿಸಲು ಉಗ್ರ ರಂಡನೆಯನ್ನು ಡ್ಯಾರಿಗೆ ತಂದಿರುವುದು. ತಂತಿ, ರೈಲ್ವೇ ಕಂಬಿಗಳನ್ನು ಮುರಿದು ಹಾವಳಿ ಮಾಡುವವರಿಗೆ ಕೊರೆದೆ ಮತ್ತು ಮರಣ ದಂಡನೆ ವಿಧಿಸಲಾಗುವುದು ಮತ್ತು ಸಾಮುದಾಯಿಕ ಜುಲ್ಮಾನೆಯನ್ನು ಹೊರಿಸಲಾಗುವುದೆಂದು ಬೊಂಬಾಯಿ ಸರಕಾರವು ಪ್ರಕಟಿಸಿರುವುದು. ಎಚ್ಚರ ಕೂಡಾ ಕೊಡದೆ ಗಲಾಟೆಗಾರರ ಮೇಲೆ ಗುಂಡು ಹಾರಿಸುವ ಅಧಿಕಾರವನ್ನು ಪೋಲೀಸರಿಗೆ ಮತ್ತು ಸೈನಿಕರಿಗೆ ಕೊಡಲಾಗಿದೆ. ಕಾಂಗ್ರೆಸಿನ ಚಳವಳಿ ಕೈ ಪ್ರೇರಿತವಾಗಿಯೂ ಯಾವ ಸಮಾಚಾರ ಮತ್ತು ಅಭಿಪ್ರಾಯವನ್ನೂ ಪತ್ರಿಕೆಗಳು ಪ್ರಕಟಿಸಬಾರದೆಂದು ಆಜ್ಞಾಪಿಸಲಾಗಿದೆ. ಕೆಲವು ಪತ್ರಿಕೆಗಳು ನಿಲ್ಲಿಸಲ್ಪಟ್ಟಿವೆ.

ರಾಮ್ನಾಡು ಜಿಲ್ಲೆಯ ರಾಜಪಾಲಯಂ ಮಿನಲ್ಲಿ ಪೋಲೀಸರು ಗೋಳಿಬಾರು ಮಾಡಿ 3ಮಂದಿ ಗಾಯಗೊಂಡಿರುತ್ತಾರೆ. ನುಘರಿಯಲ್ಲಿ ದೊಡ್ಡ ಗಲಾಟೆ ಎದ್ದು ಪೋಲೀಸರು ಗುಂಡು ಹಾರಿಸಿ 3ಮಂದಿ ಕೊಲ್ಲಲ್ಪಟ್ಟು 22ಮಂದಿ ಗಾಯಗೊಂಡಿರುತ್ತಾರೆ. 12ಮಂದಿ ಅತ್ಯಂತ ಅಪಾಯಕರ ಪರಿಸ್ಥಿತಿಯಲ್ಲಿರುವರು ಇದೇ ತಾ. 12ರಲ್ಲು ನಾಗಪುರದಲ್ಲಿ ಜನರು ಸಿಟಿ ಪೋಲೀಸ್ ಆಫೀಸಿನ ಮೇಲೆ ಧಾಳಿ ನಡಿಸಿದಾಗ ಪೋಲೀಸರು ಗುಂಡುಹಾರಿಸಿ ಒಬ್ಬನು ಕೊಲ್ಲಲ್ಪಟ್ಟಿರುವನು. 19 ಮಂದಿ ಪೋಲೀಸರು ಗಾಯಗೊಂಡಿರುತ್ತಾರೆ.ಜಲ್ಲಾ ಕಲೆಕ್ಟರರ ಆಫೀಸಿನ ಮೇಲೆ ಇನ್ನೊಂದು ಜನ ಗುಂಪು ಧಾಳಿ ಇಟ್ಟಾಗ ಪೋಲೀಸರು ಗುಂಡು ಹಾರಿಸಿದರು, ಜಬಲಪುರ ಮತ್ತು ಅಮರಾವತಿಗಳಲ್ಲಿಯೂ ಗಲಾಟೆಯಾಗಿರುತ್ತದೆ.

ಇದೇ ತಾ. 13ರಲ್ಲು ಆಂಧ್ರ ದೇಶದ ತೆನ್ನಾಲಿ ರೈಲ್ವೇ ಸ್ಟೇಶನ್ನನ್ನು ಜನರು ಸುಟ್ಟುಹಾಕಲೆತ್ನಿಸಿದಾಗ ಪೋಲೀಸರು ಗುಂಡುಹಾರಿಸಿ 4 ಮಂದಿ ಕೊಲ್ಲಲ್ಪಟ್ಟು 10 ಮಂದಿಗೆ ಜಖಮಾಗಿರುವುದು. ತೆನ್ನಾಲಿ ಹತ್ತಿರದ ಇನ್ನು 4 ಪೋಲೀಸ್ ಸ್ಟೇಶನುಗಳು ಸುಡಲ್ಪಟ್ಟಿರುವನೆಂದು ತಿಳಿದುಬರುತ್ತದೆ. ಗುಂಟೂರು ಮತ್ತು ತೆನ್ನಾಲಿಗಳ ನಡುವೆ ಹಲವು ಕಡೆ ರೈಲ್ವೇ ಕಂಬಿಗಳು ಕಿತ್ತುಹಾಕಲ್ಪಟ್ಟನೆ ಎಲ್ಲೆಲ್ಲಿಯೂ ಟೆಲಿಗ್ರಾಫ್ ಮತ್ತು ಟೆಲಿಫೋನ್ ಸರಿಗೆಗಳು ತುಂಡುಮಾಡಲ್ಪಡುತ್ತಿವೆ. ಪೋಲೀಸರನ್ನೊಯ್ಯುತ್ತಿದ್ದ ಸ್ಪೆಶಲ್ ಟ್ರೈನೊಂದು ಬೆಜ್ವಾಡ ಮತ್ತು ಗುಂಟೂರುಗಳ ನಡುವೆ ಕಂಬಿತಪ್ಪಿ ಬಿದ್ದಿರುತ್ತದೆ. ಪ್ರೋದನೂರು ಮತ್ತು ಸಿಂಗನೆಲ್ಲೂರು ಸ್ಟೇಶನುಗಳ ನಡುವೆ ಇದೇ ತಾ. 13ರಲ್ಲು ಮಿಲಿಟರಿ ಸ್ಪೆಶ್ಯಲ್ ಟ್ರೈನೊಂದು ಉರುಳಿ ಬಿದ್ದಿರುವುದು. ರೈಲ್ವೇ ಕಂಬಿ ತಪ್ಪಿಸಿ ಹಾಕಿಹೋದೇ ಇದಕ್ಕೆ ಕಾರಣವಿರುತ್ತದೆ.

ಅಮೆರಿಕಾನ ಸೇನೆಯು ಆಕ್ಸಿಸ್ ರಾಷ್ಟ್ರಗಳ ವಿರುದ್ಧವಾಗಿ ಹೋರಾಡುವದಕ್ಕಾಗಿ ಮಾತ್ರ ಹಿಂದುಸ್ಥಾನದಲ್ಲಿರುವುದರಿಂದ ಆಂತರಿಕ ಗಲಾಟೆಗಳನ್ನು ಯಾವ ರೀತಿಯಲ್ಲಿಯೂ ಧಾಗವಹಿಸಬಾರದೆಂದು ಯು ನ್ಯಾಟೆಡ್ ಸ್ಟೇಟ್ಸ್ ಸರಕಾರವು ಆಜ್ಞೆ ಇತ್ತಿರುವುದೆ..

ತಂಜಾವೂರು, ಕೊಯಮುತ್ತೂರು ಮೊದಲಾದ ಪಟ್ಟಣಗಳ ಹೆಚ್ಚಿನ [illegible] ಮತ್ತು ಗಿರಣಿಗಳು ಮುಚ್ಚಲ್ಪಟ್ಟಿವೆ. ಬೊಂಬಾಯಿಯಲ್ಲಿ ಇದೇ ತಾ. 14ರಲ್ಲು ಗಲಾಟೆಯೇನೂ ನಡೆದಿರುವುದಿಲ್ಲ. ಅಹಮ್ಮದಾಬಾದಿನಲ್ಲಿ ಟೆಲಿಗ್ರಾಫ್ ತಂತಿಗಳು ಮಾತ್ರ ಕತ್ತಿಯಲ್ಲಿ ಕಡಿಯಲ್ಪಡುತ್ತಿವೆ. ರಾಜಕೋಟೆಯಲ್ಲಿ ದೊಡ್ಡ ಗಲಾಟೆಯಾಗಿದೆ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ನಿದ್ಯಾರ್ಥಿಗಳು ಶಾಲೆ ಮತ್ತು ಕೊಲೆಜುಗಳಿಂದ ಹೊರಬಂದಿರುತ್ತಾರೆ. ಬೆಂಗಳೂರಿನ ದೇಶೀಯ ವಿದ್ಯಾಲಯವು ಮುಚ್ಚಲ್ಪಟ್ಟಿದೆ. ಮಹಾರಾಜ ಕೊಲೆಜ್ ಮೊದಲಾದ ಎಲ್ಲಾ ಕೊಲೆಜುಗಳ ವಿದ್ಯಾರ್ಥಿಗಳೂ ಹೊರಬಂದು ಪ್ರಚಂಡ ಮೆವಣಿಗೆ ಮತ್ತು ಸಭೆ ನಡಿಸಿರುತ್ತಾರೆ ಹಿಂದುಸ್ಥಾನ ಯಾರ್ಕಶೈರ್ ಕಾರ್ಖಾನೆ ಬೆನ್ನಿ ಮೊದಲಾದವುಗಳಿಂದ ಕೆಲಸಗಾರರು ಮಿಲ್ಸ್ ಹೊರ ಬಂದಿರುತ್ತಾರೆ.

ಇದೇ ತಾ 14ರಲ್ಲು ಕಲ್ಕುತ್ತದಲ್ಲಿ ಮೊತ್ತ ಗಲಾಟೆಯಾಗಿ ಸೆಂಟ್ರಲ್ ಎಸೆಂಬ್ಲಿಯಿಲ್ಲೆ ಪೋಲೀಸರು ಗುಂಡು ಹಾರಿಸಿ ನಮಂದಿ ಗಾಯಗೊಂಡಿರುವೆಂದು ತಿಳಿಬರುತ್ತಿದೆ. ಜನರು ಒಬ್ಬ ಸೈನ್ಯಾಧಿಕಾರಿ ಮತ್ತು ಇತರ 1ಮಂದಿ ಹೋಗುವ ಮೋಟಾರ್ ಕಾರು ನಿಲ್ಲಿಸಿ ಅವರಿಗೆ ಹೊಡೆ

(ಪೂರ್ತಿ ಪುಟ ನೋಡಿ)

ಹಲವು ಕಡೆಗಳಲ್ಲಿ ಗೋಳಿಬಾರು.

ವಾಯಸ್ರಾಯ್ ಗಡಿನಾಡಿನ ಹೊರತು ಇತರ ಎಲ್ಲಾ ಪ್ರಾಂತಗಳಲ್ಲಿಯೂ ಕಾಂಗ್ರೆಸ್ ಮುಖಂಡರುಗಳೆಲ್ಲಾ ದಸ್ತಗಿರಿ ಮಾಡಲ್ಪಟ್ಟಿರುವರು. ಇದೇ ಕಳದ ತಾ. 10ರಲ್ಲು ಡಾಕ್ಟರ್ ಖಾನ್ ಸಾಹೇಬರು ಪೇಶಾವರದಲ್ಲಿಯೂ, ಖಾನ್ ಅಬ್ದುಲ್ ಗಫಾರ್ ಖಾನರು ಭರ್ಸದ್ದದಲ್ಲಿಯೂ ಭಾಷಣಗಳನ್ನಿತ್ತರೂ ಕೈದು ಮಾಡಲ್ಪಟ್ಟಿರುವುದಿಲ್ಲ. ಬೇರೆ ಬೇರೆ ಕಡೆಗಳಿಂದ ಬೊಂಬಾಯಿಯ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಗೆ ಹೋಗಿದ್ದ ಮುಖಂಡರುಗಳೆಲ್ಲಾ ಅವರವರ ಪ್ರಾಂತಗಳಿಗೆ ಹಿಂದೆ ಬರುವಾಗಲೆ ದಸ್ತಗಿರಿ ಮಾಡಲ್ಪಟ್ಟಿರುವರು. ಪ್ರತಿದಿನವೂ ದಸ್ತಗಿರಿಗಳು ನಡೆಯುತ್ತಲೇ ಇವೆ.

ಹೆಚ್ಚಕಡಿಮೆ ಎಲ್ಲಾ ಪ್ರಾಂತಗಳ ಕೊಲೆಜು ಮತ್ತು ಶಾಲಾ ವಿದ್ಯಾರ್ಥಿಗಳೂ ಚಳವಳಿದಲ್ಲಿ ಆಗ್ರಭಾಗ ವಹಿಸಿರುವರು. ಬೊಂಬಾಯಿ, ಅಲಹಾಬಾದ್, ಕಲ್ಕುತ್ತವೇ ಮೊದಲಾದ ಯುನಿವರ್ಸಿಟಿಗಳೇ ಕೆಲದಿನಗಳ ಮಟ್ಟಿಗೆ ಮುಚ್ಚಲ್ಪಟ್ಟಿರುವವು ಕೆಲವು ಕಡೆ ವಿದ್ಯಾರ್ಥಿಗಳು ಅನಿಶ್ಚಿತ ಕಾಲದ ವರೆಗೆ ಕೊಲೆಜುಗಳಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟಿರುವರು

ಬೊಂಬಾಯಿ, ಪೂನೆ, ಅಹಮ್ಮದಾಬಾದ್, ನಾಗಪುರ, ದಿಲ್ಲಿ, ಅಲಹಾಬಾದ್, ಲಕ್ನೋ, ಮಧುರ, ರಾಜಮಾಲಯಮ್ ಕಕ್ಕಿಕುಡಿ, ಗುಂಟೂರು ಮೊದಲಾದ ಸ್ಥಳಗಳಲ್ಲಿ ಪೋಲೀಸರು ಗೋಳಿಬಾರು ಮಾಡಿ ಅನೇಕರು ಗಾಯಗೊಂಡು ಕೆಲವರು ಕೊಲ್ಲಲ್ಪಟ್ಟಿರುತ್ತಾರೆ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.
O. P. No 60/1942.

1. ಸುಬ್ರಾಯ್ ಬಾಯಿ- ಅಂತೋಜಿ ರಾವ್.ರಾಯರ ವಿಧವೆ 2 ಪುಂಡ್ಲಿಳ ರಾವ್, ಸದ್ರಿ ರಾವು ರಾಯರ ಮಗ. (ಮೈನರ) ಇವನ ಪ್ರೇಮು ಚಿಂತೆ ರವರು ತಾಯಿ 1ನೇ ಅರ್ಜಿದಾರರು ಸುಬ್ರಾಯ್ ಬಾಯಿ... ಅರ್ಜಿದಾರರು.

ಮತ್ತು

1. ಅಂತೋಜಿ ಆನಂದ ನಾರಾಯಣ ರಾವ್ ನಾರಾಯಣ ರಾಯರ ತಗ.

2. ವೆಂಕಟ ರಾವ್, 3, ನರಸಿಂಗ ರಾವ್, 4, ಸಂಜೀವ ರಾವ್, 1ನೇ ಎದ್ರಿಯ ಮಕ್ಕಳು. ಕಾರ್ಕಳ ಊರು ಮತ್ತಿಬಿಪ್ಪೆ ಕೈಪೆಯಲ್ಲಿರುವವರು... ಎದ್ರಿ ಅರ್ಜಿದಾರರು.

ಇವರೊಳಗೆ

ಸದ್ರಿ ಯೆದ್ರಿಗಳಿಗೆ ನ ಇತರ ಸಮಸ್ತ ಜನರಿಗೆ ಈ ಮುಖೇಲ ತಿಳಿಯಪಡಿಸುವುದೇನೆಂದರೆ-

ವೆಂಕಟ್ರಮಣ ವೈದ್ಯರಿಗೆಯವ್ವಿ 1ನೇ ಅರ್ಜಿದಾರಳಿ ಗಂಡ 2ನೇ ಅರ್ಜಿದಾನ ತಂದೆ ಮೈತಪಟ್ಟ ಅಂತೋಜಿ ರಾಮರಾಯರಿಗೆ ಬರಬೇಕಾದ ಸಾಲ ವಸೂಲಿಗಳನ್ನು ಪಡೆಯಲು ನಾಮಕರಣ ಪತ್ರ ಮಾಡಿಕೊಟ್ಟು ಕೊಡಿಸಿಬೇಕಾಗಿ ಪತ್ರಿಕೆ 1ನೇ ಅರ್ಜಿದಾರಳು ಈ ಕೋರ್ಟಿಗೆ ಅರ್ಜಿ ಬರೆಕೊಂಡಿರುವದರಿಂದ ಈ ಕಾರಿತು ನೀವೇ ಪಾರ್ಥರು ಆಕ್ಷೇಪಿಸುವವರಿದ್ದರೆ ತಾ 10-6-42 ನೇ ಬುಧವಾರ ಪೂರ್ವಾಹ್ನ ಗಂಟೆ 10ಕ್ಕೆ ನೀವಾಗಲಿ ಕೋರ್ಟಿನಲ್ಲಿ ನೀತಿ ಸ್ವತಃ ಯಾ ವಕೀಲರ ಮೂಲಕ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಜ್ಞಾಪನೆ ಮಾಡಿಕೊಳ್ಳತಕ್ಕದ್ದು. ಪ್ರಸ್ತಿದ್ದಕ್ಕೆ ತಕ್ಕಂತೆ ಯಾಕ್ತಿ ತಿಂದಾಕೆ ಅವರಾಗಿ ಹೋಗದಿರಲು ಎಂತ ಕಾರಣ ಈ ಮುಖ್ಯ ತಿಳಿಯ ಪಡಿಸಲಾಗುತ್ತದೆ.

(By order of the Court)
Karkala, } K. L. Kudva.
12-6-42 } Vakil for Petitioners.

THE VIJAYA BANK LIMITED, MANGALORE.

ಒಂಟರ ಯಾಕೆ ಸಾಹುವರ ಸೈಜಾತಿ ಧಾಂಡವರಲ್ಲಿ ವಿಜ್ಞಾಪನೆ:—

ವಿಜಯಾ ಬ್ಯಾಂಕಿನ ಕಾರ್ಕಳ ಶಾಖೆಯ ಏಜಂಟನಾಗಿದ್ದ ನನ್ನನ್ನು ಈ ವರುಷ ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ಓರ್ವನೈಜರನನ್ನಾಗಿ ನೇಮಿಸಿರುವರು.

ನಾನು ನಮ್ಮ ಜಿಲ್ಲೆಯ ಬೇರೆ ಬೇರೆ ತಾಲೂಕುಗಳ ಹಳ್ಳಿ ಪಟ್ಟಣಗಳಲ್ಲೂ, ಮಧರಾಸು, ಬೊಂಬಾಯಿ ಮೊದಲಾದ ಶಹರುಗಳಲ್ಲೂ ಸಂಚಾರಮಾಡಿ ಬ್ಯಾಂಕಿನ ಸುಮಾರು ಒಂದು ಸಾವಿರಕ್ಕೆ ಮಿಕ್ಕಿದ ಪಾಲುಗಳನ್ನು ಸಂಗ್ರಹಿಸಿರುವೆನು. ನನ್ನ ಈ ಕೆಲಸವು ಫಲಕಾರಿಯಾಗುವಂತೆ ಸಹಕರಿಸಿದ ಸ್ವಗೋತ್ರಿ ನ ಸಜ್ಜನಿಯೆಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುವೆನು.

ಇನ್ನುಳಿದ ಬಲೇ ಸ್ವಲ್ಪ ಸಂಖ್ಯೆಯ ಪಾಲುಗಳನ್ನು ಆದಷ್ಟು ಬೇಗನೆ ಪಡಕೊಳ್ಳ ಬೇಕಾಗಿ ನನ್ನ ಆರಿಕೆ.

ಮೊಲ್ಕಿ ಮಂಜಯ ಭಂಡಾರಿ,
ಏಜಂಟ್.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

The Canara Banking Corporation Limited.

(Incorporated in British India with limited liability).

ESTD: 1906.

Our rates of interest on deposits from 7-8-194.

1.	Current	1 % p. a. from Jan. to June ½ % p. a. from July to Dec.
2.	Savings Bank	2 % p. a.
3.	Short-term	1½ p. a.
4.	Fixed 3 months	1¾ p. a.
	6 ,,	2 % p. a.
	9 ,,	2¾ % p. a.
	12 ,,	3 % p. a.
	24 ,,	3¼ % p. a.

Advances against approved securities made at very competitive rates

ಉಡುಪಿ, ಗುರುವಾರ, ೨೦-೮-೧೯೧೪

ರಸ್ಯದ ಪರಿಸ್ಥಿತಿ.

ಪಶ್ಚಿಮ ರಣರಂಗವು ಯಾವಾಗ ತೆರೆಯಲ್ಪಟ್ಟಿದುವುದೆಂದು ಇನ್ನೂ ನಿಶ್ಚಯವಾಗಿಲ್ಲದಿರುವಾಗ ಪೂರ್ವ ರಣರಂಗದ ಪಾರ್ತೆಯು ಅತ್ಯಂತ ಚಿಂತಾಜನಕವಿರುತ್ತದೆ. ದಕ್ಷಿಣ ಕೋಕಸಸಿನ ನೈಋತ್ಯ ಎಲ್ಲೆ ಬಾವಿಗಳನ್ನೂ, ಕುಬಾನ್ ಪ್ರದೇಶದ ಮುಖ್ಯ ಪಟ್ಟಣ ಮತ್ತು ಎಣ್ಣೆ ಶೋಧನಾ ಕೇಂದ್ರವಾದ ಕ್ರಸ್ನೋದರನ್ನೂ ತಾವು ಗೆದ್ದಿರುವೆವೆಂದು ಜರ್ಮನರು ಪ್ರಕಟಿಸಿರುತ್ತಾರೆ. ಸೆಬಸ್ತೋಪೋಲಿನ ಪತನದ ನಂತರ ಕಪ್ಪು ಸಮುದ್ರ ಕರಾವಳಿಯಲ್ಲಿ ಎರಡನೇ ಪ್ರಾಮುಖ್ಯ ನೌಕಾ ನಿಲಯವಾದ ನವೊರೊಸಿಸ್ಕನ್ನು ಜರ್ಮನರು ಸನ್ನಾಹಿಸುತ್ತಿರುವರು. ಇನ್ನೊಂದೆಡೆ ಕೆಸಸಿಯನ್ ಸಮುದ್ರದ ಮಾರ್ಗದಲ್ಲಿ ಮಿನರಲೆಸಿ ಒಡಿ ಎಂಬಲ್ಲಿ ತೀವ್ರ ಹೋರಾಟ ನಡೆಯುತ್ತಿರುವುದು. ಇದರಿಂದ ಇಡೀ ಕೋಕಸಸಿನ ಅದೃಷ್ಟವೆ ತಕ್ಕಡಿಯಲ್ಲಿ ತೂಗುತ್ತಿರುವುದೆಂಬುದು ಸ್ಪಷ್ಟವಾಗುವುದು. ಈ ಭಾಗದ ರಸ್ಯಾನ ಸೇನೆಯು ಉತ್ತರದ ಸಂಬಂಧವು ಸಂಪೂರ್ಣವಾಗಿ ಕಡಿದುಹಾಕಲ್ಪಟ್ಟು ರಸ್ಯಕ್ಕೆ ಮಾತ್ರವಲ್ಲದೆ, ಮಿತ್ರ ರಾಷ್ಟ್ರಗಳಿಗೇನೇ ಅತಿ ದೊಡ್ಡ ಅನಾಹುತವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ವಾರ್ ಬೊಕ್ಕರು ಇದೇ ರೀತಿ ಮುಂದೊತ್ತಿ ನವೊರೊಸಿಸ್ಕ್ ಟೋಪ್ಸೆ ಮತ್ತು ಬೆಟುಮುಗಳನ್ನು ನಶಸಡಿಸಿಕೊಂಡರೆ ಕಪ್ಪು ಸಮುದ್ರದ ಸೋವಿಯೆಟ್ ಸಡಗಸದೆಯ ಗತಿ ಏನಾಗುವುದೆಂದು ಹೇಳಬರುವುದಿಲ್ಲ. ಅದಕ್ಕೆ ಕಪ್ಪು ಸಮುದ್ರದಿಂದ ಹೊರಹೋಗಲು ಸಾಧ್ಯವಿಲ್ಲ. ಹೋದರೂ ಫಲವಿಲ್ಲ. ಅಮ ಒಂದೋ ಟರ್ಕಿಯ ಆಶಯ ಪಡೆದು ನಿಶ್ಯಸ್ತ್ರೀಕರಿಸಲ್ಪಟ್ಟು ಅಲ್ಲಿ ಕೊಳೆಯುತ್ತಿರಬೇಕು. ಇಲ್ಲವೆ ಕಪ್ಪು ಸಮುದ್ರದಲ್ಲಿ ತಾನಾಗಿ ಮುಳುಗಿ ಅತ್ಯಲ್ಪತವಾಡಿಕೊಳ್ಳಬೇಕು. ಜರ್ಮನರು ಇಸ್ತಾರ್ಲ್ಲೇ ಕಪ್ಪು ಸಮುದ್ರ ಕರಾವಳಿಯ ನೌಕಾ ಪ್ರಬಲ ವಿಹಾರಾಣ ಛಾಳಿ ಆರಂಭಿಸಿರುವರು. ಇದಕ್ಕಿಂತ ದೊಡ್ಡ ಗಂಡಾಂತರವಾದರೂ ಇನ್ನೇನು?

ಚರ್ಚಿಲ್ ಸೈರಿಸ್ ಮಾತುಕತೆ.

ರಸ್ಯದ ಪರಿಸ್ಥಿತಿಯು ಅತ್ಯಂತ ಉತ್ಕಟವಿರುವುದರಿಂದಲೇ ಬ್ರಿಟನ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರು ನೌಕಾಪಟ್ಟಣಕ್ಕೆ ಹೋಗಿ ಸೈಲಿನರೊಡನೆ ಮಾತುಕತೆ ಪಡಿಸಿರುವರು. ಈ ಮಾತುಕತೆಯ ಉದ್ದೇಶ ಮತ್ತು ಪರಿಣಾಮವೇನೆಂದು ಈವರೆಗೆ ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಆದರೆ ಅದು ನಡೆಯುವಾಗ ಹಿಂದುಸ್ಥಾನದ ಮುಖ್ಯ ಸೇನಾನಿ ವೇವೆಲರೂ, ಬ್ರಿಟಿನಿನ ಪ್ರಧಾನ ಸೇನಾನಿ ಸರ್. ಎಲ್ಲೆನ್ ಬ್ರುಕ್ಕರೂ ಹಾಜರಿದ್ದುದರಿಂದ ಎರಡನೇ ರಣರಂಗ ತೆರೆಯುವುದು ಮತ್ತು ಕೊಳಸಸಿಗೆ ಸೇನಾ ಸಹಾಯ ಕಳುಹಿಸುವುದೇ ಅದರ ಉದ್ದೇಶವಿರಬೇಕೆಂದು ಎಣಿಸಬಹುದು. ರಸ್ಯವು ಪತನ ಹೊಂದಿದರೆ ಸಂಯುಕ್ತ ರಾಷ್ಟ್ರಗಳು ಮತ್ತೆ ತಲೆಯೆತ್ತುವುದೇ ಅಸಾಧ್ಯವೆಂದರೆ ಅತಿಶಯೋಕ್ತಿಯಾಗಲಾರದು. ಅದರ ಪ್ರಚಂಡ ಸೇನಾಶಕ್ತಿಯು ಕುಂಠಿತವಾದರೆ ಕೂಡಾ ಸಂಯುಕ್ತ ರಾಷ್ಟ್ರಗಳು ದೊಡ್ಡ ಗಂಡಾಂತರಕ್ಕೊಳಗಾಗ ಬೇಕಾಗುವುದು. ಆದುದರಿಂದ ಈ ಕಂಟಕ ಕಾಲದಲ್ಲಿ ರಸ್ಯಾನರಲ್ಲಿ ನವ ಉತ್ಸಾಹ ತುಂಬಿ ಅವರು ಯಥಾ ಪ್ರಕಾರವಾದ ಸೈರ್ಯ ಮತ್ತು ಸ್ಥೈರ್ಯದಿಂದ ಹೋರಾಟವನ್ನು ಮುನ್ನಡೆಸುವಂತೆ ಮಾಡುವುದು ಸಂಯುಕ್ತರಾಷ್ಟ್ರಗಳ, ವಿಶೇಷವಾಗಿ ಬ್ರಿಟನು ಮತ್ತು ಅಮೆರಿಕಗಳ ಅದ್ಯ ಕರ್ತವ್ಯವಿರುತ್ತದೆ. ಅದಕ್ಕಾಗಿಯೇ ಚರ್ಚಿಲ್ಲರು ನೋಸ್ಕೊವಿಗೆ ಹೋದುದಾಗಿದೆ. ಕೊಕಸಸಿನಲ್ಲೇ ಜರ್ಮನರು ತಡೆಗಟ್ಟಲ್ಪಡಬೇಕು. ಬ್ರಿಟನು ಮತ್ತು ಅಮೆರಿಕಗಳು ಇಂಥಾ ಸಿನ ಮೂಲಕ ಕೊಕಸಸಿಗೆ ಸೇನಾ ಸಹಾಯವಿತ್ತು ರಸ್ಯನರನ್ನು ಬಲಪಡಿಸಬಹುದು. ಮಾತ್ರವಲ್ಲದೆ ಅದಷ್ಟು ಬೇಗನೆ ಪಶ್ಚಿಮ ರಣರಂಗ ತೆರೆದರೆ ರಸ್ಯದ ಮೇಲಿನ ಜರ್ಮನರ ಒತ್ತಾಟವು ಕಡಿಮೆಯಾಗಿ ಸೋವಿಯೆಟ್ ಸೇನೆಯು ಪ್ರತಿಧಾಳಿ ನಡಿಸುವಂತಾಗಬಹುದು. ಬದಲಿಗೆ ವಿದ್ಯಮಾನಗಳು ಇದೇ ರೀತಿ ನಡೆದು ಜರ್ಮನರು ಕೋಕಸಸ್ ಮತ್ತು ಸೈಲಿನ್ ಗ್ರಾಡನ್ನು ಗೆಲ್ಲುವಂತಾದರೆ ಅತ್ತ ಜಾಪಾನು ಕೂಡಾ ರಸ್ಯದ ಮೇಲೆ ಬಿದ್ದು ದೊಡ್ಡ ಅನಾಹುತ ಉಂಟಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಅಂತಹ ಗಂಡಾಂತರ ವುಂಟಾಗದಂತೆ ನೋಡುವುದು ಬ್ರಿಟನು ಮತ್ತು ಅಮೆರಿಕಗಳ ಪ್ರಥಮ ಕರ್ತವ್ಯ ವಿರುತ್ತದೆ.

ಮಹದೇವ ದೇಸಾಯಿಗಳ ಆಕಸ್ಮಿಕ ಮರಣ.

ಮಹಾತ್ಮ ಗಾಂಧಿಯವರೊಂದಿಗೆ ಕೈದುವಾಡಲ್ಪಟ್ಟ ಶ್ರೀ. ಮಹದೇವ ದೇಸಾಯಿಗಳು ಒಂಭತ್ತನೆದಲ್ಲೇ ಆಕಸ್ಮಿಕವಾಗಿ ಮರಣ ಪಟ್ಟರುವುದು ಅತ್ಯಂತ ವಿಷಾದ ಕರವಿದೆ. ಶ್ರೀ. ದೇಸಾಯಿಗಳು ಉಜ್ವಲ ದೇಶಾಭಿಮಾನಿ ಮತ್ತು ದೊಡ್ಡ ವಿದ್ವಾಂಸರಾಗಿ ಮಹಾತ್ಮ ಗಾಂಧಿಯವರ ಭಾಷ್ಯಕಾರದಂತಿದ್ದರು. ಎಸ್. ಡಿ. ಯವರ ಲೇಖನವೆಂದರೆ ಅತ್ಯಂತ ಬೋಧದರ ಹಾಗೂ ವಿಚಾರ ಪ್ರಚೋದಕವಾದುದು. ಮಹಾತ್ಮರ ಆಪ್ತ ಶಿಷ್ಯರಲ್ಲೊಬ್ಬರು ಮಹದೇವ ದೇಸಾಯಿಗಳು. ಅವರ ರೀತಿ, ನೀತಿ, ವಿಚಾರ, ತತ್ವ, ಮತ್ತು ಜೀವನದ ಕುರಿತೆಲ್ಲಾ ಅಧಿಕಾರಿಕವಾಗಿ ಬರೆಯಬಲ್ಲ ವರೆಂದರೆ ಶ್ರೀ. ದೇಸಾಯಿಗಳು. ಗಾಂಧಿಜಿಯವರ ನೆರಳಿನಂತಿದ್ದವರವರು. ಅತ್ಯಂತ ಸರಳ ಸ್ವಭಾವದ, ಸ್ವತಂತ್ರ ವೃತ್ತಿಯ, ನಿಸ್ವಾರ್ಥ ದೇಶ ಹಾಗೂ ಸಾಹಿತ್ಯ ಸೇವಕರು. ಅವರ ನಿಧನದಿಂದ ಗಾಂಧಿಜಿಯವರ ಪಟ್ಟ ಶಿಷ್ಯರಲ್ಲೊಬ್ಬನೂ, ಉಜ್ವಲ ದೇಶಾಭಿಮಾನಿಯೂ, ಅಸಾಧಾರಣ ಸಾಹಿತಿಯೂ ಅಂತರ್ಧಾನವಾದಂತಾಯಿತು.

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ ಇಪ್ಪತ್ತೊಂದನೆ ಸಂಪುಟವು ಕೊನೆಗೊಂಡು ಇದೇ ಬರುವ ಸೆಪ್ಟಂಬರ ತಿಂಗಳಾದಿಯಿಂದ ಇಪ್ಪತ್ತೆರಡನೆ ಸಂಪುಟಾರಂಭವಾಗುವುದು. ಈ ಸಂದರ್ಭದಲ್ಲಿ ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಬಾಕಿ ಚಂದಾ ಹಣವನ್ನು ದಯವಾಡಿ ಆದಷ್ಟು ಬೇಗನೆ ಕಳುಹಿಸಿಕೊಡುವಂತೆ ವಿಜ್ಞಾಪಿಸಿಕೊಳ್ಳುತ್ತೇವೆ.

ಜೀವ ವಿಮೆ.

ಜೀವವಿಮೆಗಾಗಿ ಕೊಡುವ ಪ್ರತಿಯೊಂದು ಕಂತಿನ ಹಣವು ಮನುಷ್ಯನ ಆಯುರ್ಮಾನದ ಅರ್ಥಿಕ ಭದ್ರತೆಯ ಒಂದು ಸ್ಮೈಲು ಕಲ್ಲಾಗಿದೆ. ಅಂಥಾದ ಇನ್ಶೂರನ್ಸ್ ಕಂಪನಿಗೆ ಪೂರಾಯುಷ ನಿಮ್ಮ ಪ್ರತಿಯೊಂದು ಪಾವತಿಯೂ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುತ್ತದೆಂಬ ಭರವಸೆಯನ್ನು ಕೊಡುತ್ತದೆ.

ಆಂಧ್ರ ಇನ್ಶೂರನ್ಸ್ ಕಂ. ಲಿ.

ಸ್ಥಾಪನೆ] ಹೆಡ್ ಆಫೀಸು ಮುನಲಿ ಪಟ್ಟಣ. [1925.

ಸುಲಭ ಪ್ರಿಮಿಯಮ್ ದರ. ಖರ್ಚಿನ ದಾಖಾಕೆ ಕಡಿಮೆ. ಉತ್ತಮ ಆದಾಯ, ಉದಾತ್ತ ಧ್ಯೇಯೋದಿಗಳು ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯ ರಕ್ಷಣೆಗಾಗಿ ಏರ್ಪಡೆತವಾಗಿವೆ. ಇಂಡಿಯಾದ ಕೇಂದ್ರ ಪಟ್ಟಣಗಳಲ್ಲಿ ಆಫೀಸ್ ಲಯಗಳಿದ್ದು ನಮ್ಮ ಕಂಪನಿಯು ರಾಷ್ಟ್ರವ್ಯಾಪಕ ಸಂಸ್ಥೆಯಾಗಿದೆ.

ಆಂಧ್ರದ 16 ವರ್ಷಗಳ 1941ರ ಪ್ರಗತಿ!

ಮೂಲಧನ 19 ಲಕ್ಷಕ್ಕೆ ಹೆಚ್ಚಿದೆ 37ಲಕ್ಷಕ್ಕೆ ಮಿಕ್ಕಿ ನ್ಯಸ್ತವಾಗಿದೆ.
ಒಟ್ಟು ಆದಾಯ 19 ಲಕ್ಷಕ್ಕೆ ಮಿಕ್ಕಿದೆ.

ಆಂಧ್ರದ ಕಾರ್ಯರಂಗವನ್ನು ಪ್ರವೇಶಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

K. T. Naik,
Divisional Officer, Thalakawadi Belgaum.

★ಚರ್ಚಿಲ್ ಸ್ಟೆಲಿನ್ ಮಾತುಕತೆ.★

ಮಹದೇವ ದೇಸಾಯಿಗಳ ಆಕಸ್ಮಿಕ ಮರಣ.

ಬೆಂಗಳೂರು, ಕುಂಭಕೋಣಮ್, ಕಲ್ಕತ್ತ, ಮಧುರ, ಡಕ್ಕಗಳಲ್ಲಿ ಗೋಳಿಬಾರು.

ಎಲ್ಲೆಲ್ಲಿಯೂ ವಿದ್ಯಾರ್ಥಿಗಳ ಅನಿಶ್ಚಿತಕಾಲದ ವರೆಗಿನ ಮುಷ್ಕರ.

ಚರ್ಚಿಲ್ ಸ್ಟೆಲಿನ್ ಭೇಟಿ.

ಇದೇ ತಾ. 12ರಲ್ಲು ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ. ಚರ್ಚಿಲ್ಲರು ವಿಮಾನ ಮೂಲಕ ರಷ್ಯದ ಮೋಸ್ಕೋ ಪಟ್ಟಣಕ್ಕೆ ಹೋಗಿ ಸ್ಟೆಲಿನರೊಡನೆ, ಯುದ್ಧತಂತ್ರದ ಕುರಿತು ಸ್ವಾಮುಖ್ಯ ಮಾತುಕತೆ ನಡಿಸಿರುವರೆಂದು ತಿಳಿದು ಬರುತ್ತದೆ. ಅವರೊಂದಿಗೆ ಪ್ರಧಾನ ಬ್ರಿಟಿಷ್ ಸೇನಾನಾಯಕ ಸರ್, ಎಲ್ಲೆನ್ ಬ್ರುಕ್ಕರೂ, ಹಿಂದುಸ್ಥಾನದ ಮುಖ್ಯ ಸೇನಾಪತಿ ಸರ್. ಆರ್ಚಿಬಾಲ್ ವೇವೆಲರೂ ಇದ್ದರು. ಸೈ ನಿಡೆಂಟ್ ರುಸವೆಲ್ಟರ ಪ್ರತಿನಿಧಿ ಮಿ. ಹೆರಿಮೆನರೂ ಈ ಮಾತುಕತೆಯ ಸಂದರ್ಭದಲ್ಲಿ ಹಾಜರಿದ್ದರು. ಅದರ ಪರಿಣಾಮವಾಗಿ ಸೋವಿಯೆಟ್ ರಷ್ಯವು ಬೇಗನೆ ವೈರಿಯನ್ನು ಗೆದ್ದು ವಿಜಯ ಹೊಂದುವಂತಾಗುವುದೆಂಬ ಆಕೋದಯವು ರಷ್ಯದ ಬ್ಲಂಟಾಗಿದೆ. ಅದು ಜರ್ಮನಿಗೆ ದೊಡ್ಡ ರಾಜಕೀಯ ಅಪಜಯವೆಂದು ಬ್ರಿಟಿಷ್ ಮತ್ತು ಅಮೆರಿಕಾನ ಪತ್ರಿಕೆಗಳೆಲ್ಲಾ ಅದಕ್ಕೆ ಬಹಳ ಮಹತ್ವಿಕೆ ಕೊಟ್ಟಿರುತ್ತವೆ. ಎರಡನೇ ರಣರಂಗ ತೆರೆಯುವ ಪ್ರಶ್ನೆಯೇ ಈ ಮಾತುಕತೆಯ ಪ್ರಾಮುಖ್ಯ ಉದ್ದೇಶ ವಿರಬೇಕೆಂದು ನಂಬಲಾಗಿದೆ. ಯಾಕಂದರೆ ಜರೂರಾಗಿ ಎರಡನೇ ರಣರಂಗ ತೆರೆಯಬೇಕೆಂಬ ಕುರಿತು ರಷ್ಯನರಲ್ಲಿ ತೀವ್ರ ಆತುರವು ತೋರಿಬರುತ್ತದೆ. ಸೋವಿಯೆಟ್ ರಷ್ಯವು ವಿಶಾಕಿಯಾಗಿಯೇ ವೈರಿಯನ್ನು ಎದುರಿಸಬೇಕಾಗಿರುವ ಕುರಿತು ತಳ ಮಳವುಂಟಾಗಿದೆ. ರಷ್ಯವನ್ನು ಸಮಾಧಾನ ಪಡಿಸುವುದಕ್ಕೇನೇ ಚರ್ಚಿಲ್ಲರು ಮೋಸ್ಕೋವಿಗೆ ಹೋಗಿ ಸ್ಟೆಲಿನರೊಡನೆ ಮಾತಾಡಿದುದೆಂಬುದರಲ್ಲಿ ಸಂದೇಹವಿಲ್ಲ.

ಸೆರೆಮನೆಯಲ್ಲಿ ಮಹದೇವ ದೇಸಾಯಿಗಳ ನಿಧನ.

ಇದೇ ತಾ. 17ನೇ ಬೆಳಿಗ್ಗೆ ಘಂಟೆ 8-40ಕ್ಕೆ ಮಹಾತ್ಮಾ ಗಾಂಧಿಯವರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಮಹದೇವ ದೇಸಾಯಿಗಳು ಆಕಸ್ಮಿಕ ನಿಧನ ಹೊಂದಿರುವುದು ಅತ್ಯಂತ ಖೇದಕರವಿದೆ. ಶ್ರೀ. ದೇಸಾಯಿಗಳು ಸೆರೆಮನೆಗಳ ಇನ್ ಸ್ಪೆಕ್ಟರ್ ಜನರಲರಾದ ಕರ್ನೆಲ್ ಭಂಡಾರಿಗಳೊಡನೆ ಮತ್ತು ಇತರ ಕೆಲವುಂದಿ ಸಹ ಕೈದಿಗಳೊಡನೆ ಮಾತಾಡುತ್ತಿರುವಾಗ ತಲೆತಿರುಗುವುದೆಂದು ಹೇಳಿದರು. ಕರ್ನೆಲ್ ಭಂಡಾರಿಗಳು ಅವರನ್ನು ಮಲಗ ಹೇಳಿದರು. ಅಷ್ಟರಲ್ಲಿ ಡಾಕ್ಟರ್ ಸುಶೀಲ ನಾಯರರು ಕರೆಯಲ್ಪಟ್ಟರು. ಓರ್ವ ಐ. ಎಮ್. ಎಸ್. ಆಫೀಸರರು ಬಂದು ಇಂಜೆಕ್ಷನ್ ಕೊಟ್ಟರೂ ಪ್ರಯೋಜನವಾಗಲಿಲ್ಲ. 20 ಮಿನಿಟುಗಳೊಳಗೆ ಶ್ರೀ. ದೇಸಾಯಿಗಳು ಹೃದಯಸ್ತಂಭನವಾಗಿ ಮೃತರಾದರು. ಅವರ ಶವಸಂಸ್ಕಾರವು ಹಿಂದೂ ಕ್ರಮದಂತೆ ಬಂಧನ ಸ್ಥಳದಲ್ಲೆ ಸಮಾಪನೆ ನಡೆಯಿತು. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ಹಾಜರಿದ್ದರು.

ಹಲವು ಊರುಗಳಲ್ಲಿ ಗೋಳಿಬಾರು.

ಇದೇ ತಾ. 16ನೇ ಸಂಜೆ ಬೆಂಗಳೂರಿನಲ್ಲಿ ದೊಡ್ಡ ಜನಸ್ತೋಮವು ಪೋಲೀಸರ ಕೇರಳೆ ಮೇರೆಗೆ ಚದರದ್ದರಿಂದ ಗುಂಡು ಹಾರಿ 2ಮಂದಿ ಕೊಲ್ಲಲ್ಪಟ್ಟು 24 ಮಂದಿ ಗಾಯಗೊಂಡಿರುವರು. ಕುಂಭಕೋಣದಲ್ಲಿ ತಾ. 16ನೇ ಸಂಜೆ ಸುಮಾರು 10,000 ಜನರು 144ನೇ ಸೆಕ್ಷನನ್ನು ಉಲ್ಲಂಘಿಸಿ ರಸ್ತೆಗಳಲ್ಲಿ ತಡೆ ಹಾಕಿದುದರಿಂದ ಪೋಲೀಸರು ಗೋಳಿಬಾರು ಮಾಡಿ ಒಬ್ಬನು ಕೊಲ್ಲಲ್ಪಟ್ಟ 4ನುಂದಿ ಗಾಯಗೊಂಡಿರುತ್ತಾರೆ. ಕಲ್ಕತ್ತದಲ್ಲಿ ಸಬ್ ಪೋಸ್ಟ್ ಆಫೀಸೊಂದು ಸುಡಲ್ಪಟ್ಟಿರುವುದು. ಉತ್ತರ ಕಲ್ಕತ್ತದಲ್ಲಿ ಜನರು ಗಲಾಟೆ ಮಾಡಲು ಪೋಲೀಸರು ಗುಂಡು ಹಾರಿಸಬೇಕಾಯಿತು. ಕಲ್ಕತ್ತದಲ್ಲಿ ಗೋಳಿಬಾರಿನಿಂದಾಗಿ ಒಟ್ಟು 20ಮಂದಿಯು ವರೆಗೆ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಬೆನಾರೀಸಿನ ಸುನಾರಪುರ ಎಂಬಲ್ಲಿ ಇದೇ ತಾ. 12ರಲ್ಲು ಪೋಲೀಸರು ಜನರನ್ನೇ ಗುಂಡು ಹಾರಿಸಿ ಒಬ್ಬನು ಕೊಲ್ಲಲ್ಪಟ್ಟು ಇಬ್ಬರು ಗಾಯಗೊಂಡಿರುವರು.

ಇದೇ ತಾ. 15ರಲ್ಲು ಮಧುರೆಯಲ್ಲಿ ಪೋಲೀಸರು ಜನರ ಮೇಲೆ ಗುಂಡು ಹಾರಿಸಿ 3 ಮಂದಿ ಕೊಲ್ಲಲ್ಪಟ್ಟು 7 ಮಂದಿ ಗಾಯಗೊಂಡಿರುತ್ತಾರೆ. ಸಂಯುಕ್ತ ಪ್ರಾಂತದ ಗೋರಕ ಪುರದಲ್ಲಿ ಪೋಲೀಸರು ಗುಂಡು ಹಾರಿಸಿ ಒಬ್ಬನು ಕೊಲ್ಲಲ್ಪಟ್ಟು ಹಲವರು ಗಾಯಗೊಂಡಿರುತ್ತಾರೆ. ಡಕ್ಕದಲ್ಲಿ ಜನಸ್ತೋಮವು ಗಲಾಟೆ ಮಾಡಿದೆ ನಿಮಿತ್ತ ಪೋಲೀಸರು ಗೋಳಿಬಾರು ಮಾಡಿದ್ದು ಮಂದಿ ಕೊಲ್ಲಲ್ಪಟ್ಟಿರುವರು. ಭಾಗಲಪುರದ ಬಳಿಯ ಕುಲಂಜ್ ರೈಲ್ವೇ ಸ್ಟೇಶನು ಸುಟ್ಟುಹಾಕಲ್ಪಟ್ಟಿರುವುದು. ಮನ್ನರ ಗುಡಿಯಲ್ಲಿ ರೆಲ್ವೇ ಸ್ಟೇಶನು ಮುನಿಸಿಪಲ್ ಆಫೀಸು ಮತ್ತು ಡಿಪ್ಯುಟಿ ಕಲೆಕ್ಟರರ ಆಫೀಸುಗಳು ಸುಡಲ್ಪಟ್ಟಿರುತ್ತವೆ. ಇದೇ ತಾ. 16ರಲ್ಲು ಗುಂಟೆಕಲ್ ಮತ್ತು ಬಂಟನಕಲ್ ಸ್ಟೇಶನುಗಳ ನಡುವೆ ಗೂಡ್ಸ್ ಟ್ರೈನಿನ ಇಂಜಿನು ಮತ್ತು 15 ಗಾಡಿಗಳು ಉರುಳಿ ಬಿದ್ದಿರುತ್ತವೆ. ಗುಂಟೂರು ಮತ್ತು ನಂದೂರು ಸ್ಟೇಶನುಗಳ ನಡುವೆ ಇನ್ನೊಂದು ಪ್ರಯಾಣಿಕ ಟ್ರೈನು ಉರುಳಿ ಬಿದ್ದಿರುತ್ತವೆ ಹುಬ್ಬಳ್ಳಿ ಪೂನಾ ಪ್ರಯಾಣಿಕ ಟ್ರೈನು ಕೂಡಾ ಉರುಳಿ ಬಿದ್ದಿರುತ್ತವೆ. ಎಸ್. ಎಂ. ಎಂಡ್. ಎಸ್. ಎಮ್. ರೈಲ್ವೆಯವರು ಟ್ರೈನುಗಳ ರಾತ್ರಿ ಚಲಾವಣೆ ನಿಲ್ಲಿಸಿರುತ್ತಾರೆ. ಜಿ. ಐ. ಪಿ. ರೈಲ್ವೆಯ ಗಟ್ಟಿ ಭಾಗದಲ್ಲಿ ಗೂಡ್ಸ್ ಟ್ರೈನೊಂದು ಉರುಳಿ ಬಿದ್ದಿದುತ್ತದೆ. ಬೊಂಬಾಯಿ ಮತ್ತು ಪೂನಗಳ ಹಡುವಿನ ಟ್ರೈನುಗಳೆಲ್ಲಾ ನಿಲ್ಲಿಸಲ್ಪಟ್ಟಿವೆ.

ಹಲವು ಕೊಲೆಜು ಮತ್ತು ಯುನಿವರ್ಸಿಟಿಗಳು ಮುಚ್ಚಲ್ಪಟ್ಟಿರುತ್ತವೆ. ವಿದ್ಯಾರ್ಥಿಗಳು ಅನಿಶ್ಚಿತ ಕಾಲದ ವರೆಗೆ ಮುಷ್ಕರ ಹಿಡಿದಿರುತ್ತಾರೆ. ಬೆನರ್ಸ್ ವಿಶ್ವವಿದ್ಯಾಲಯವು ಮುಚ್ಚಲ್ಪಟ್ಟಿದೆ. ಮದ್ರಾಸಿನ, ಪಚಯಪ್ಪ, ಪ್ರೆಡೆಸ್ಸಿ, ಲೋಯಲ ಕೊಲೆಜ್, ಕ್ರಿಶ್ಚನ್ ಕೊಲೆಜ್, ಟೀಚರ್ಸ್ ಕೊಲೆಜ್, ವೆಟರ್ನರಿ ಕೊಲೆಜ್, ಲೋ ಕೊಲೆಜ್ ಮೊದಲಾದ ವಿದ್ಯಾ ಸಂಸ್ಥಗಳ ವಿದ್ಯಾರ್ಥಿಗಳು ಅನಿಶ್ಚಿತಕಾಲ ಮುಷ್ಕರ ಹಿಡಿಯುವ ನಿರ್ಧಾರ ಮಾಡಿರುತ್ತಾರೆ ಕಳ್ಳಿಕೋಟೆಯ ಜಾನೋರಿನ್ ಕೊಲೆಜಿನವರೂ ಇದೇ ರೀತಿ ನಿರ್ಧರಿಸಿರುತ್ತಾರೆ.

ಶ್ರೀಗಳಾದ ವಿ. ವಿ. ಗಿರಿ ಮತ್ತು ಕಾ ಮರಾಜ ನಾಡರರು ಇದೇ ತಾ. 17ರಲ್ಲು ದಸ್ತಗಿರಿಮಾಡಲ್ಪಟ್ಟಿರುತ್ತಾರೆ. ದೇಶದ ಎಲ್ಲಾ ಕಡೆಗಳಲ್ಲಿಯೂ ದಸ್ತರಿಯು ನಡೆಯುತ್ತಿದೆ. ನೆಶನಲ್ ಹೆರಾಲ್ಡ್ ಪತ್ರಿಕೆಯು ನಿಲ್ಲಿಸಲ್ಪಟ್ಟಿದೆ.

ರಷ್ಯಕ್ಕೆ ದೊಡ್ಡ ಸಹ್ಯ

ಸ್ಟೆಲಿನ್ ರಷ್ಯ ಮತ್ತು ಉಕ್ರೈನಿನಲ್ಲಿ ರಷ್ಯವು ಆತಿ ಫಲವತ್ತಾದ ಕಣಜಗಳನ್ನು ಕಳಕೊಂಡಿರುವುದು ಮಾತ್ರವಲ್ಲದೆ ಈಗ ಕುರ್ಸ್ಕ್ ಮತ್ತು ವರೊನೆಜಿನ ಫಲಭರಿತ ಕಳ್ಳು ಮಣ್ಣು ಪ್ರದೇಶಗಳೂ, ಹಾಲು ಮತ್ತು ಜೇನು ತುಪ್ಪ ಪ್ರದೇಶವಾದ ಕುಬನ್ ನದಿ ಪ್ರದೇಶವೂ ಜರ್ಮನರ ತುಳ ತಕ್ಕೊಳ್ಳಾಗಿದೆ. ಸೇನೆಗೂ ಯುದ್ಧ ಕಾರ್ಖಾನೆಗಳಿಗೂ ಅತ್ಯಾವಶ್ಯಕವಾದ ಎಣ್ಣೆ ಪ್ರದೇಶಗಳು ತೀವ್ರ ಅಪಾಯಕ್ಕೊಳಗಾಗಿದೆ. ಇಷ್ಟರಲ್ಲೇ ಹಿಂದಿನ ಮಾರ್ಗಗಳಿಂದ ಎಣ್ಣೆಯನ್ನೊಯ್ಯುವುದು ಬಹಳ ಲಾಭಾಯಕರವಾಗಿದೆ. ತೀವ್ರ ಚಳಿಗಾಲ ಬರಲು ಇನ್ನೂ 4 ತಿಂಗಳಿದೆ. ಅವರಿಗೆ ಸೇನೆಗಳು ಹೋರಾಡಬಹುದು. ಅದುವರಿಂದ ರಷ್ಯವು ಇನ್ನು ಮುಂದೆ ಎಂತಹ ಏಪತ್ತಿಗೊಳಗಾಗುವುದೆಂದು ಹೇಳಬರುವುದಿಲ್ಲ. ಕೊಕಸಸಿನ ಪರಿಸ್ಥಿತಿಯು ದಿನೇ ದಿನೇ ಕೆಡುತ್ತಾ ಬರುತ್ತದೆ. ಅಲ್ಲಿ ಜರ್ಮನರು ಈ ವರೆಗೂ ತಡೆಗಟ್ಟಲ್ಪಟ್ಟಿರುವುದಿಲ್ಲ. ಸ್ಟೆಲಿನ್ ಗ್ರಾಡಿನ ಬಳಿ ತಡೆಗಟ್ಟಲ್ಪಟ್ಟಿರುತ್ತಾರೆ.

ಸೋವಿಯೆಟ್ ಪ್ರೀತಿಯ ಯುದ್ಧ.

ಅಮೆರಿಕಾನರು ಹೆಚ್ಚೆಚ್ಚು ಸೈನಿಕರನ್ನು ತಂದು ಈ ಯುದ್ಧವನ್ನು ಪ್ರಬಲವಾಗಿ ನಡಿಸುತ್ತಿದ್ದಾರೆ. ಟುಲಗಿ ಎಂಬ ಪ್ರಾಮುಖ್ಯ ಸ್ಥಳವನ್ನು ಮೊದಲಾಗಿ ಹಿಡಿಯುವುದೇ ಅವರ ಉದ್ದೇಶವಿರುತ್ತದೆ. ಜಪಾನರು ತೀವ್ರ ಹೋರಾಟ ನಡಿಸುತ್ತಿದ್ದಾರೆ. ಟಿಮೂರು, ಲೇ ಮೊದಲಾದ ಸ್ಥಳಗಳ ಮೇಲೆ ಅಮೆರಿಕಾನ ವಿಮಾನಗಳು ಧಾಳಿ ನಡಿಸುತ್ತಿವೆ. ಗ್ಯೂಗಿನಿಯ ಕೊಕೋಡದಲ್ಲಿ ಜಪಾನರು ತಡೆಗಟ್ಟಲ್ಪಟ್ಟಿರುತ್ತಾರೆ. ಜಪಾನರು ಪೋರ್ಟ್ ಮೋರೆಸ್ಬಿಯಾ ಮೇಲೆ ಪ್ರಬಲ ವಿಮಾನಧಾಳಿ ಹಡಿಸಿರುತ್ತಾರೆ.

THE CANARA BANKING CORPORATION LIMITED.

(Incorporated in British India)

ESTD: 1906

NOTICE.

(Under Articles 41 & 42 of the Articles of Association of the Bank)

The repeated reminders and notices issued to the undermentioned partly paid up Ordinary share-holders of the Bank, demanding payment of the calls in arrears in respect of the shares held by them as per particulars furnished below, having been returned undelivered, the said shares are liable to be forfeited on or after 20-9-1942 without any further notice, unless all monies due thereunder are remitted to our Udipi Office by the aforesaid date either by the share-holders or their legal representatives as the case may be. The legal representatives who may claim the shares will have to furnish to the satisfaction of the Bank proof of their title to such shares.

Name of Shareholder	No. of Shares held.	Calls in arrears. Capital.	Premium	Interest up to 31-12-41.	Remarks.
		Rs.	Rs.	Rs. A. P.	
1. B. Subbanna Bhat, son of Narasimha Bhat, Landholder, 76, Badagabettu, Post Udipi.	10	150/-	120/-	83- 3- 8	Further interest from 1-1-42 to date of payment on the amount of Capital and premium at 12½%
2. Venkatesh Keshav Kotnis son of Keshav Narayana Kotnis, General Manager, The Laxmi Forests Co. Ltd., Coondapoor.	2	30/-	24/-	16-10- 4	
3. Parashuram Ishwar Ghatge, son of Ishwar Ghatge, Contractor, C/o The Laxm. Forests Co. Ltd., Coondapoor.	1	10/-	8/-	4- 3-10	

Office of the Corporation, UDIPI, 18th August, 1942.

V. R. Kamath, B. A., LL. B., Manager.

ವಿಷ್ಣು ಕನ್ನಡ

ಕೆನರಾ ಟೀಚರ್ಸ್ ಅಸೋಸಿಯೇಷನ್ ಸಭೆ ನಿನ್ನೆಯಂದು ತಾ 11-8-1942ರಲ್ಲಿ ಶ್ರೀಮತಿ ರಾಧಾಬಾಯಿ ನೇತೃತ್ವದಲ್ಲಿ ಜರಗಿ, ಶ್ರೀಯುತರು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಶ್ರೀಯುತರು ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡಿರುವಾಗ ಅಧ್ಯಕ್ಷರು ಭಾಷಣಕ್ಕಾಗಿ ಕೇಳಿಕೊಳ್ಳಲಾಗಿ ಸ್ವೀಕರು ಹಾಗೆಯೇ ಮಾಡಿದರು.

ಮಿಸ್ಸಸ್ ಹೈಸ್ಕೂಲಿನಲ್ಲಿ 26 ವರ್ಷ ಉಪಾಧ್ಯಾಯರಾಗಿದ್ದ ಶ್ರೀ ಎಂ ಆನಂದಪೈಯ್ಯ, ಬಿ. ಎ. ಎಲ್. ಬಿ. ರವರು ತಾ. 9-8-42ರಲ್ಲಿ ತಮ್ಮ 52ನೇ ವರ್ಷದಲ್ಲಿ ದಿನಂಗತರಾದರೆಯ್ಯಲು ವರ್ತಮಾನವುತ್ತಿದೆ. ತಾ: 10ರಲ್ಲಿ ನಡೆಸಲು ಬಗ್ಗೆ ಚಾಲೆಯನ್ನು ಮುಚ್ಚಲಾಗಿತ್ತು. ಮತ್ತು ಸಭೆ ಸೇರಿ ದಿವಂಗತರ ಗುಣ ಕೀರ್ತನಮಾಡಲಾಯಿತು.

ತಾ. 12ರಲ್ಲಿ ನಗರದಲ್ಲಿ ಪ್ರಬಂಧ ಹಾಡುವಿಕ್ಷ್ಪ. ಸಂಜೆ ಸಾರ್ವಜನಿಕರು ಜನರು ರಾಷ್ಟ್ರಧ್ವಜದೊಂದಿಗೆ ಸೇರುವದಕ್ಕೆ ನಡೆಸು ಮೈದಾನಿನಲ್ಲಿ ಶ್ರೀ ಎಂ ಡಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಮಾನ್ ಡಾ॥ಮೋದ ಬಾಳಿಗ ನೊಬಲಾದವರು ಸರ್ಕಾರದ ವರ್ತನೆಯನ್ನು ಖಂಡಿಸಿದರು. ಶ್ರೀ ಕೆ ಈಶ್ವರ. ಎಂ ಎಲ್ ಎ ರವರು ಧನ್ಯವಾದಾರ್ಪಣೆ ಮಾಡಿದರು

ಶ್ರೀ ರಾಮಕೃಷ್ಣ ಶಾರಂಕ್ಕೆ ಎಂ ಎಲ್ ಎ ರವರನ್ನು ತಾ. 12ರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನನ್ವಯ ಬೆಳಿಗ್ಗೆ ೭॥ ಗಂಟೆಗೆ ಪೆಂಟ್ಲೆಂಡ್ ಪೇಟೆಯ ಅವರ ಮನೆಯಲ್ಲಿ ದಸ್ತಗಿರಿ ಮಾಡಿದರು. ಈ ವರ್ತಮಾನ ಬಿರುಚಿನಂತೆ ಹಬ್ಬಲು ಹಲವರು ಆತುರದಲ್ಲಿಗೆ ಧಾವಿಸಿ ವಿತ್ತರು. ಶ್ರೀ ಕಾಂತರನ್ನ ಅದೇ 8-30ಕ್ಕೆ ವೆಲ್ಲೂರಿಗೆಯ್ಯಲಾಗಿದೆ.

ಪುತ್ತೂರು ತಾಲೂಕು ಆಲಂಗಾರು ಗ್ರಾಮದಲ್ಲಿ ಶಿವಪ್ಪ ಪೂಜಾರಿ ಎಂಬವನು ತನ್ನ ಹೆಂಡತಿ ಕಾವೇರಿ ಅಳಿಯ ದೇವು ಮತ್ತು ಮಕ್ಕಳ ಸಂಬಂಧಿಕ ಒಂದು ವರುಷ ನ್ಯಾಯದ ಲಿಂಗಪ್ಪ ಎಂಬವರೊಂದಿಗೆ ಇರುತ್ತಿದ್ದನು. ಕಳೆದ ಗಣೇಶ ಚತುರ್ಥಿಯಂದು ಶಿವಪ್ಪನಿಲ್ಲದ ದಿನ ರಾತ್ರಿ ಕಾವೇರಿಯು ದೇವು ಎಂಬ ಇವರುಷದ ಹುಡುಗನೂ ಮನೆಯಲ್ಲಿ ಮಲಗಿದ್ದ ಸಮಯ ಆಲೆ ಲಿಂಗಪ್ಪ ಪೂಜಾರಿಯು ಕೊಟ್ಟಿಗೆಯಲ್ಲಿ ಮಲಗಿದ್ದವನು ಒಳಹೊಕ್ಕು ಕಾವೇರಿಯೊಡನೆ ತನಗೆ ಮನಸ್ಸಾಗಿದೆ ಎಂದು ಹೇಳಿದನು. ಆಗ್ಗೆ ಆ ಕಡೆಯೂ ದೇವು ಅವನ ವರ್ತನೆಯನ್ನು ಖಂಡಿಸಿ ಶಿವಪ್ಪನು ಮನೆಗೆ ಬಂದಾಗ ತಾನು ಈ ಕಂಗತಿಯನ್ನು ಆತಗೆ ತಿಳಿಸುವುದಾಗಿ ಹೆದರಿಸಲು ಆಲೆ ಲಿಂಗಪ್ಪ ಪೂಜಾರಿಯು ದೊಡ್ಡದೊಂದು ಕತ್ತಿಯಿಂದ ಕಾವೇರಿಯನ್ನು ಕಡಿದು ಕೊಂದದ್ದಲ್ಲದೆ ದೇವು ಎಂಬವನಿಗೂ ಕಡಿದು ಅನಂತರ ಮನೆಗೆ ಕೊಡಾ ಬೆಂಕಿ ಕೊಟ್ಟು ಪರಾರಿಯಾಗಿದ್ದನು. ದೇವು ಹೇಗೂ ಎದ್ದು ನೆಲ್ಲಾಸೆ ಸಮೀಪದ ಕೊರಗಪ್ಪ ಗೌಡನನ್ನು ಹೋಗಿ ಕರೆಸಿಕೊಂಡನು. ಕಾವೇರಿಯ ಶವವು ಮನೆಯೊಳಗಿಗೆ ಬಿದ್ದುಹೋಯಿತು. ಈ ಕೃತ್ಯಕ್ಕಾಗಿ ಲಿಂಗಪ್ಪನ ಮೇಲೆ ಮಂಗಳೂರು ಸೆಶನ್ಸ್ ಕೋರ್ಟಿನಲ್ಲಿ ನಡೆದು ಆತಗೆ ಮರಣಾಂತರ ವಿಧಿಸಲ್ಪಟ್ಟಿತ್ತು. ಮೊನ್ನೆ ಎಸೆಸರು ಆಲೆಯ ತಪ್ಪು ಗಾರನೆಂತ ಕೊಟ್ಟ ಅಭಿಪ್ರಾಯವನ್ನು ಜಡ್ಜರು ಮಂಜೂರುಮಾಡಿದರು.

ಉಡುಪಿ.

ಗೌಡ ಸಾರಸ್ವತ ಬ್ರಾಹ್ಮಣ ಸಮಾಜದವರು ಬತಬಗ್ಗರಿಗೆ 0-2-4ರಂತೆ ಅಕ್ಕಿ ವಿತ್ತ ವಾಡುವ ಬಗ್ಗೆ ಶ್ರೀಲ ಕಾರ್ಯಕಾರಿಸಂಸ್ಥಾನಾಧೀಶರಿಂದ 3ದಿವಸಗಳ ಬಗ್ಗೆ ಮುಡಿ 75, ಶ್ರೀಗಳಾದ ವೆಂಕಟರಮಣ ಬೋಗಪ್ಪ ಶಾನುಭಾಗ ಮತ್ತು ವಕ್ಕಳು 20ಮುಡಿ, ತೋನ್ಸೆ ಬಾಲಕೃಷ್ಣ ಕೆಣಿ ಮತ್ತು ಬ್ರದರ್ 17ಮುಡಿ, ವಾಮನ ಸಬ್ಬಾಯ ಕಾಮತ್ ಸರ್ಕಾರ್ 3ನೇ ಸಲ 21 ಮುಡಿ ಕೆ. ಶ್ರೀನಿವಾಸ ಕೃಷ್ಣ, ಕೊಚ್ಚಿಕಾರ ವೆಂಕಟರಾಯ ಪೈಗಳು ವಕ್ತ ಡಾಕ್ಟರ್. ಪಿ. ರಾಘವೇಂದ್ರ ನಾಯಕರು ಮುಡಿ 7ರಂತೆ ವಕ್ತ ಐದಿಯಲ್ ಸಂಸ್ಥೆಯವರು ಮುಡಿ 23 ಸಹ ಕೊಟ್ಟು ಪುಣ್ಯಭಾಗಿಗಳಾಗಿರುವರು.

ಶ್ರೀ ಲಕ್ಷ್ಮೀ ವೆಂಕಟೇಶ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವಕ್ಕಸಪ್ತಾಹ ಮಹೋತ್ಸವವು ತಾ. 16-8-42ಂದ ಪ್ರಾರಂಭವಾಯಿತು. ಈ ವರ್ಷ ಕಾಣಿಯೂರು ಶ್ರೀಪಾದಂಗಳವರು ಇಲ್ಲಿ ಇಪ್ಪುದರಿಂದಲೂ, ಊರ ಮಹಜನರು ಉತ್ಸಾಹದಿಂದ ವಂತಿಗೆಯ ತ್ತಿ ನೆರವೇರಿಸುವದರಿಂದಲೂ ಪೆಚ್ಚಿನ ವೈಭವದಿಂದ ನಡೆಯುವದೆಂತ ನೀಕ್ಷಿಸಲಾಗಿದೆ

ಉಡುಪಿಯ ವಿವಿಧ ಕಲಾಶ್ಕೈಗಾರಿಕೆಗಳ ಸಂಘಾಲಕ ಸಭೆಯೊಂದು ಶ್ರೀ ರಾಮಕೃಷ್ಣ ಥಿಯೇಟರ್ ಆಫೀಸಿನಲ್ಲಿ ನಿನ್ನೆಯು ರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ॥ ವಾಧವ ಭೈಗಳು ಮಣಿಪಾಲದಲ್ಲಿ ತೆರೆಯಲಿರುವ ಎಳೆವೆಂ ಆಫ್ ಜನರಲ್ ಎಜ್ಯುಕೇಶನ್ ಇದರ ಉದ್ದೇಶ, ರೂಪರೇಷೆಗಳನ್ನು ವಿವರಿಸಿದರು. ಸಭೆಯಲ್ಲಿ ಶ್ರೀಗಳಾದ ಶ್ರೀನಿವಾಸ ಪೈ, ನರಹರಿ ಕಾಮತ್, ನರಸಿಂಹ ಪೈ, ಕೆ. ಸಂಜೀವಯ್ಯ ಶೆಟ್ಟಿ, ಶ್ರೀ ಪಿ. ಶೀನ ಶೆಟ್ಟಿ ಮೊದಲಾದವರು ಮಾತನಾಡಿ ಡಾ॥ ಭೈಗಳ ಯೋಜನೆಯು ಸಾಧ ಯಿಸಿದ್ದು ಅದನ್ನು ಕೂಡಲೇ ಪ್ರಾರಂಭಿಸಬೇಕೆಂದು ಪುಷ್ಟೀಕರಿಸಿ ಮಾತನಾಡಿದರು. ಧನ್ಯವಾದ ಉಪಹಾರದೊಡನೆ ಸಭಾಂತ್ಯವಾಯಿತು.

ಹರತಾಳ—ಉಡುಪಿಯಲ್ಲಿ ತಾ. 18ರಂದು ಮಾಸುರು ದಿನಗಳ ಜಯಶೀಲ ಹರತಾಳವಾಚರಿಸಲ್ಪಟ್ಟಿತು ವಿದ್ಯಾರ್ಥಿಗಳೇ ಮೊದಲಾದವರ ಉತ್ಸಾಹ ಹರ್ಷಗಳಿಂದ ಪ್ರಬಂಧ ಮೆರವಣಿಗೆಯು ರಾಜ್ಯಬೀದಿಯ, ಜಯ ಘೋಷದಿಂದ ಪೇಟೆಯಿಡೀ ಸಂಚರಿಸಿದ್ದಿತು. ಅಂಗಡಿಗಳನ್ನು ಮುಚ್ಚಿಸಿದರು. ಸಾಯಂಕಾಲ ಪ್ರಬಂಧ ಮೆರವಣಿಗೆಗೆ ಸಭೆಗಳು ನಡೆದು ಭಾಷಣಗಳಾದವು. ಉಡುಪಿ ಕಾಲಾಶಿಕ್ಷಕೆಲವೆಡೆಗಳಲ್ಲಿ ತಂತಿಗಳು ಕಡಿಯಲ್ಪಟ್ಟಿವೆಯೆಂಬಾಗಿ ವದಂತಿಯಿದೆ. ಹಿರಿಯಡ್ಕ, ಕರ್ಕಲ, ಕಟಪಾಡಿ ಮೊಲಾದ ಎಲ್ಲಾ ಊರುಗಳಲ್ಲಿಯೂ ಹರತಾಳ. ಸಭೆಗಳು ನಡೆದಿವೆ. ಕಟಪಾಡಿ ಹೊರಲಾಪ ಕಡೆಗಳಲ್ಲಿ ತಾ, 10ರಲ್ಲಿ ಸಂಪೂರ್ಣ ಹರತಾಳವಿತ್ತು.

ಹರ್ಕಾಳ—ನ್ಯೂಮಂಡರ ದಸ್ತಗಿರಿಯ ಸಂಬಂಧ ತಾ. 10ರಲ್ಲಿ ಇಲ್ಲಿ ಪೂರ್ಣ ಹರತಾಳವಿತ್ತು. ಇದೇ ತಾ. 14-8-42ರಲ್ಲಿ ಕಾಂಗ್ರೆಸ್ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ. ಪಿ. ಮಂಜುನಾಥ ನಾಯ್ಕರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಎಂ. ವಿ. ಹೆಗ್ಡೆ ಮತ್ತು ಅಧ್ಯಕ್ಷರು ಸದ್ಯದ ಕಾಂಗ್ರೆಸ್ ಕಾರ್ಯಕಲಾಪಗಳನ್ನು ಆ ಉತ್ಸಾಹ ಸಭೆಯಲ್ಲಿ ವಿವರಿಸಿ ಹೇಳಿದರು. ಆ ಭಾಗದವರು ಸಂಪೂರ್ಣವಾಗಿ ಕಾಂಗ್ರೆಸಿಗೆ ಬೆಂಬಲವಿತ್ತುವೆಂದು ಮತ್ತು ಯದ್ಧ ಪರಿಸ್ಥಿತಿಯಿಂದ ಉಂಟಾಗಿರುವ ಕಷ್ಟಗಳ ನಿವಾರಣೆಯ ವಿಷಯ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವುದು.

ತಾ. 16ರಲ್ಲಿ ಪೆರ್ಡೂರಿನಲ್ಲಿ ಶ್ರೀಗಳಾದ ಪಿ. ಮಂಜುನಾಥ ನಾಯಕ್, ಎಂ. ವಿ. ಹೆಗ್ಡೆಯರು ಭಾಷಣಗಳನ್ನಿತ್ತರು.

ಹಿರಿಯಡ್ಕ—ತಾ. 17ರಲ್ಲಿ ಜರಗಿದ ಸಭೆಯೊಂದು ಶ್ರೀ. ಪಿ. ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ನೆರೆಯಿತು. ಅಧ್ಯಕ್ಷರೂ ಶ್ರೀ. ಬಾಳಕೃಷ್ಣ ಕೃಷ್ಣಯ್ಯ ಹೆಗ್ಡೆ ಮತ್ತು ಎಂ. ವಿ. ಹೆಗ್ಡೆಯರೂ ಕಾಂಗ್ರೆಸ್ ಕಾರ್ಯಕ್ರಮಗಳ ಕುರಿತು ಭಾಷಣಗೈದರು

ಕಾರ್ಕಳ:—ಮಿ. ಗಾಂಧಿ ಮೊದಲಾದ ರಾಷ್ಟ್ರಧುರೀಣರನ್ನು ಬಂಧಿಸಿದ ಬಗ್ಗೆ ಸರಕಾರದ ವರ್ತನೆಯನ್ನು ಖಂಡಿಸುವ ನಿರ್ಣಯವನ್ನು ತಾ. 10ರಲ್ಲಿ ಪ್ರವೀಣ ಜಿಲ್ಲಾಸಭೆಯು ಸಾಯಂಕಾಲ ಶ್ರೀ. ಬಿ. ದಾನೇಶ್ವರ ಬಂಗೇರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಜರಗಿತು. ಹಲವರು ಮಾತನಾಡುತ್ತ ಮುಂದಿನ ಸ್ವಾತಂತ್ರ್ಯ ಉದ್ಯೋಷಣೆಯಾಗಬೇಕೆಂದರು.

ಬೊಂಬಾಯಿ:—ಡಾಕ್ಟರ್ ಯು. ಪಿ. ನಾರಾಯಣ ರಾವ್ ವೆನೆಜುಂಗ್ ಎಡಿಟರ್, ಪೀಪಿಲ್ಸ್ ವೈಬ್ಸ್, ಇತರ ಇದೇ ತಿಂಗಳಲ್ಲಿ ನಡೆಯುತ್ತ ಇರ್ಪ್ಪತ್ತನೆಯ ಬೊಂಬಾಯಿ ಯ ಮೆಡಿಕಲ್ ಕಾನ್ಫರೆನ್ಸ್ ನೋಸ್ ಗೈಯನೆಕಾಲಜಿ ಸೆಕ್ಷನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

NOTICE.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O.S 321 1940 R E.P. 274/1942.

ಬೆಳಗಲೆ ತಿಮ್ಮಪ್ಪಯ್ಯ — ಅರ್ಜಿದಾರ.

ಸುಬ್ರಾಯ ಭಟ್ಟ—ಕಾಯರಪಾಡಿ ರಾಮಭಟ್ಟ ಮಗ-ಇಳಂತಿಲ ಗ್ರಾಮದ ಕಾಯರಪಾಡಿ—ಎದ್ರಿ.

ಸದ್ರಿ ಅರ್ಜಿಯಿಂಯಲ್ಲಿ ಎದ್ರಿಯು ಸ್ಥಿರ ಆಸ್ತಿಯನ್ನು ಹರಿಜಿಸಿ ಪಲಂ ಇನ್ಜಂಕ್ಷನ್ ಮಗ್ಗೆರೆ ರಾಜಿ ಪರಿಸುವ ಆದೇ ಕಲ್ಪುಗಳನ್ನು ನಿಗದಿಪಡಿಸಿಲ್ಕೆಂಬ ತಾ 31-8-1942ಕ್ಕೆ ನೋಟೀಸು ಜಾರಿ ಆಗಿರುವುದರಿಂದ ಆ ತಾರೀಕಿಗೆ ಎದ್ರಿಯು ತನ್ನ ಆಕ್ಷೇಪಣೆಗಳೇನಾ ಇದ್ದರೆ ಹೇಳುವಿದ್ದಿದ್ದರೆ ಆ ತಾರೀಕಿಗೆ 10 ಗಂಟೆಗೆ ಕೋರ್ಟಿಗೆ ಹಾಜರಾಗಿ ಬಗ್ಗೆ ಪರಿಷ್ಕರ ಕೊಳ್ಳಕಲ್ಪಕ್ಕೆದ್ದು, ತಪ್ಪಿದರೆ ಆ ಕಡೆಯ ಒಬ್ಬ ಎಂತ ವಾದಿಕ ವ್ಯವಹಾರಕ್ಕೆ ಮುಂದಿನ ತೀರ್ಮಾನ ತೀರ್ಮಾನಿಸಿ ಏಕಪಕ್ಷೀಯವಾಗಿ ಆಗುವುದು. ಎಂತ ಈ ಪೆಟೀಷನರೆ ಹಾಜರಿಂ ಪ್ರಕಾರ ಈ ನೋಟೀಸು ಮಾಡಿಸಿಂಡೆ.

B. Ramchandra Rao.
Pleader for Petitioner.

ತಾ.13-8-1942.
Puttur, S. K.

ವಿನು ನೂಡಲಿಕ್ಕಾಗಲೀ, ಬಿಡಿಸಿ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—
ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಬಿ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಬಿ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

Be a shareholder
and share the success of
Sri Ramakrishna Theater
Limited, Udipi.

ಬರುವ ಚಿತ್ರಗಳು.
ಶಾಂತಾ ಹುಬ್ಬೀಕರ್ ನಟಿಸಿರುವ **ಪ್ರಭಾತ್**, ನೇತಾಜಿ ಸ್ಟುಡಿಯೋ ಪರ ಆಸ್ತಾ, ಪ್ರಭಾತದವರ **ಸಂತಸು** ಇತ್ಯಾದಿ.

ಶಾಂತಿ ಪೈನ್ ಓಯಿಲ್
ಬಿಳಿ ನೋವು, ಗಾಯ ಮತ್ತು ಬಾವುಗಳಿಗೆ ಇದಕ್ಕಿಂತ ಉತ್ತಮ ಎಣ್ಣೆ ಬೇರೊಂದಿಲ್ಲ ಪರೀಕ್ಷಿಸಿರಿ
ಇತರ ಔಷಧಗಳೂ ನಮ್ಮಲ್ಲಿ ಮಾರಾಟಕ್ಕಿವೆ.
WANTED STOCKISTS.
Shanthi Products (Regd.)
Kurady (S. Kanara)

ಸೀರೆಗಳು
ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣಾದಲ್ಲಿ ಅಂದವಲ್ಲಿ ನಮೂನೆಯಲ್ಲಿ ದೊರೆಯುತ್ತಿವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.
ಪಿ. ಎ. ಷೆ. ಬ್ರದರ್ಸ್,
ಆಸ್ಪತ್ರೆ ಬಳಿ, ಉಡುಪಿ.

ಜಪಾನಿಯರ ಮಾತುಗಳು ಸ್ನೇಹಭಾವದಿಂದ ಕೂಡಿರುತ್ತವೆ

—ಮತ್ತು ಅವರ ಮಹತ್ವಾಕಾಂಕ್ಷೆಯೂ ಪ್ರಬಲವಾಗಿರುತ್ತದೆ

ಪೂರ್ವಕಾಲದಲ್ಲಿ ಶತ್ರುಗಳು ದ್ವೇಷ ಹುಟ್ಟಿಸುವ ಮಾತುಗಳನ್ನಾಡುತ್ತಾ ಯುದ್ಧಕ್ಕೆ ಬರುತ್ತಿದ್ದರು. ಈಗ ಜಪಾನಿಯರು ಹಾಗೆ ಮಾಡುವುದಿಲ್ಲ. ಸೈನ್ಯವನ್ನು ಕಳುಹಿಸುವುದರಲ್ಲಿ ಲಾಭವಿರುವಂತೆ ಮಾತುಗಳಲ್ಲಿಯೂ ಲಾಭವುಂಟೆಂದು ಆವರಿಗೆ ತಿಳಿದಿದೆ. ಅವರ ಸವಿಮಾತುಗಳು ನಿಮ್ಮನ್ನು ನೋಸಗೊಳಿಸಿ, ನಿಮ್ಮನ್ನು ಕಂಗೆಡಿಸಿ, ನಿಮಗೆ ಬಲಹೀನತೆಯನ್ನುಂಟು ಮಾಡುವುದು. ಇದು ಹೊಸ ರಣಕೌಶಲ್ಯ. ಎಚ್ಚರವಿಲ್ಲದ ಜನಗಳ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡುವುದು. ಆದರೆ ರೇಡಿಯೋ ಮೂಲಕ ಜಪಾನಿಯರು ಆಡುವ ಸ್ನೇಹಭಾವದ ಮಾತುಗಳ ಹಿಂದುಗಡೆ, ಮತ್ತು ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಜಪಾನಿಯರ ಏಜಂಟುಗಳು ಪ್ಲೇಗಿನಂತೆ ಹರಡಿಸುವ ಮಾತುಗಳ ಹಿಂದುಗಡೆ, ಜಪಾನಿಯ ಈಟಿಗಳೂ ನುಸ್ಸು ಅವರ ಪಾಹತ್ವ ಕಾಂಕ್ಷೆಯೂ ಇಂಡಿಯಾ ದೇಶದ ರಕ್ಷಣಾ ಕಾರ್ಯಕ್ರಮವನ್ನು ತಗ್ಗಿಸುವುವು—ನಿನ್ನು ಸೊತ್ತುಗಳು ಅಮೌಲ್ಯವಲ್ಲವೇ? ಇಂಡಿಯಾ ದೇಶವು ಸ್ವಲಪ ತ್ರಾದ ಜಮೀನಲ್ಲವೇ? ಹೊಸ ಜಯಶಾಲಿಗಳಿಗೆ ಇಲ್ಲಿ ಜೀಕಾವಶ್ಯ ಲೂಟಿ ಸಿಕ್ಕು ಕ್ಕದೆ. ಯುದ್ಧವಿಲ್ಲದೆ ಇಂಡಿಯಾ ದೇಶವನ್ನು ಪ್ರವೇಶಿಸಲು ಯಾರು ತಾನೆ ಜಪಾನಿಯರ ಸೈನ್ಯಕ್ಕೆ ಸೇರಲಾರರು!

ಬೇಕಾ ದೇಶದ ಹೆಂಗಸರಿಗೆ ತಿಳಿದಿದ
ಬೇಣಾ ದೇಶದ ಹೆಂಗಸರು ಜಪಾನಿಯ ಸೈನಿಕರು ಎಂಥ
ಸಂಬಂಧವನ್ನು ನಿಮಗೆ ಹೇಳಿಬಿಟ್ಟಿದು ಜಪಾನಿಯರು "ನಿ
ನ್ನನ್ನು ನಾವು ಬಿಡುಗಡೆಮಾಡುವುದಕ್ಕೆ ಬಂದಿದ್ದೇವೆ"
ಎಂದು ಹೇಳುತ್ತಾ ಹೋ—ಆವರೆ ಇದು ಶುದ್ಧ ಸುಳ್ಳು"
ಎಂಬುದನ್ನು ಮಡಾಮ್ ಚಾಂಗ್-ಕೈ-ಶೇಕರು ದೇ
ಶಾತ್ಯಾದ ರತ್ನುಗಳು ನಮ್ಮನ್ನು ಮುತ್ತಿದಾಗ ನಮ್ಮ ಇಂಡಿ
ಯಾ ದೇಶದ ಸೈನ್ಯವು ಅವರನ್ನು ಎದುರಿಸುವುದಕ್ಕೆ ತಯಾ
ರಾಗಿ ಕಾದಿದೆ. ನೀವು ಶತ್ರುಗಳನ್ನು ಸೋಲಿಸುವುದ
ಕ್ಕೆ ತಕ್ಕುಷ್ಟು ಉಪಕಾರ ಮಾಡುತ್ತಿದ್ದೀರೋ?

ಜಪಾನಿಯರನ್ನು ಎದುರಿಸುವುದಕ್ಕೆ ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಎಲ್ಲೆಲ್ಲಿಯೂ ಕಾಂಗ್ರೆಸ್ ನುಮುಂದರ ಪತ್ರ ಪತ್ತಿಗಿರಿ.

(ಪೂರ್ವ ಪುಟದಿಂದ ಮುಂದುವರಿದುದು.)

ದು ಗಾಯಗೊಳಿಸಿದುತ್ತಾರೆ. ಚಿತ್ತೂರ ರಸ್ತೆಯಲ್ಲಿ ಪೋಲೀಸರು ಟೀರ್‌ಗ್ಯಾಸ್ ಉಪಯೋಗಿಸಿ ಜನರನ್ನು ಚೆದರಿಸಿರುತ್ತಾರೆ. ಕೆಲವೆಡೆ ಜನರು ಪ್ರತಿಯಾಗಿ ಬೆಂಕಿ ಕೊಟ್ಟು ಸುಟ್ಟಿರುತ್ತಾರೆ.

ತಿರ್ಪಯಲ್ಲೆದ್ದ ದೊಡ್ಡ ಗಲಾಟೆಯಲ್ಲಿ ಒಬ್ಬ ಪೋಲೀಸಾಂಗ್ ಕೊಲ್ಲಲ್ಪಟ್ಟಿರುವರೆಂದು ಸರಕಾರ ಪ್ರಕಟಿಸಿರುತ್ತದೆ. 55 ಮಂದಿ ಗಾಯಗೊಂಡಿರುವರೆಂದು ಪ್ರಕಟಿಸಲಾಗಿದೆ

ಇದೇ ತಾ. 15ರಲ್ಲು ತಂಜಾವೂರಿನ ತಿಲಕ ಮೈದಾನಿನಲ್ಲಿ 10,000 ಮಂದಿ ಸಭೆ ಸೇರಿದಾಗ ಪೋಲೀಸರು ಲಾತಿ ಚಾರ್ಜ್ ಮಾಡಿ 15 ಮಂದಿಗೆ ಪೆಟ್ಟುಬಿಗಿರುತ್ತದೆ. ಅನಂತಪುರದಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾತಿ ಪ್ರಹರ ಮಾಡಿ 30 ಮಂದಿ ಗಾಯಗೊಂಡಿರುತ್ತಾರೆ. ಮದನಪಳ್ಳಿ ಕೊಲೆಜಿನ ವಿದ್ಯಾರ್ಥಿಗಳು, ರಾಷ್ಟ್ರೀಯ ಮುಖಂಡರು ಬಿಡುಗಡೆಯಾಗುವ ವರೆಗೆ ಮುಷ್ಕರ ಹಿತಿಯುವ ನಿರ್ಧಾರ ಮಾಡಿರುತ್ತಾರೆ. ಸೇಲಮ್‌ನಲ್ಲಿ 2000 ಕ್ಕಿಂತಲೂ ನುಸ್ಸಿದ ವಿದ್ಯಾರ್ಥಿಗಳು ಇದೇ ತಾ. 18ರಿಂದಲ್ಲಿ ಮುಷ್ಕರ ಹಿಡಿದಿರುತ್ತಾರೆ.

ಜೇಲಿದೆ ಹೊರುವ ಕಾನೂನಿನ ವಕೀಲ ಸಂಘ, ವ್ಯಾಪಾರಿ ಸಂಘಗಳೇ ಮೊದಲಾದವರು ಸರಕಾರದ ದಬ್ಬಾಳಿಕೆಯನ್ನು ಸಿಳ್ಳೇ ವಿಸಿರುವರು. ಸರಕಾರದೆ ಧೋರಣೆಗೆ ವಿರುದ್ಧವಿರುವುದರಿಂದ ಲಂಗಾಳದ ಶ್ರೀ ಸುರೇಶ ಕುಮಾರ ಭಾಗು, ಶ್ರೀ. ಪ್ರಾಣ್ಸಿನಥ ಬೆನರ್ಜಿ ಮತ್ತು ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿಯವರು ಕೂಡಾ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಡುವರೆಂದು ಸುದ್ದಿಯಿಂದಾಗಿದೆ ಕಲ ಮಂದಿ ವಕೀಲರು ವಕಾಲತು ನಿಲ್ಲಿಸಿರುತ್ತಾರೆ. ಫ್ಯಾಕ್ಟರಿಯವರು ತಮ್ಮ ಉದ್ಯೋಗ ಬಿಟ್ಟಿರುತ್ತಾರೆ. ಕೈಲ್ವೇ ಕಂಬಿ ತಪ್ಪಿಸಿರುವ ಕೆಲಸವು ಎಲ್ಲೆಲ್ಲಿಯೂ ನಡೆಸಲ್ಪಡುತ್ತಿದೆ.

ಪರಿಸ್ಥಿತಿಯನ್ನು ಇಷ್ಟೇ ರೀತಿ ಬಿಡಬಾರದು. ಸರಕಾರವು ಏನಾದರೂ ರಾಜಿ ಮಾಡಬೇಕೆಂಬ ಕೂಗು ಪ್ರಬಲವಾಗಿದೆ.

ನಿಮ್ಮ ನಿಕಟ ಮಿತ್ರ

ನಿಮ್ಮ ಸಂಸಾರ ಪ್ರಪಂಚದಲ್ಲಿ ಸದಾ ಕಾಲವೂ ಬೆಲೆ ಬಾಳುವ ವಸ್ತು ನೇನೆ ನಿಮ್ಮನೇ ಸರಿ. ಅವರಲ್ಲೂ ಇಂದು ನಡಿಯುತ್ತಲಿರುವ ಪ್ರಚಂಡ ಯುದ್ಧವು ನಮಗೆಲ್ಲಾ ಬಹಳ ಚಿಂತೆಯನ್ನು ಹೆಚ್ಚಿರುತ್ತದೆ. ಇಲ್ಲವೆ ಇನ್ನಷ್ಟು ಸೇವೇರಲೂ ಬಹುದು. ಪರಿಸ್ಥಿತಿ ಹೀಗಿರುವಲ್ಲಿ ನಿಮ್ಮಲ್ಲಿ ಏನ ಚಿನ್ನವಸ್ತು ಬೆಲೆಯಾನೆಯೆಂದ ವಿಕ್ರಯಿಸುವುದೆಂದರೆ ನಿಮ್ಮೊಬ್ಬ ಆಪ್ತೇಯನಾನ ಬಂಧುವಿನಿಂದ ಅಗಲುವಂತೆನೆ. ಆದುದರಿಂದ ನಿಮ್ಮಲ್ಲಿರುವ ಅತೀ ಅಮೂಲ್ಯವಾದ ಸೊತ್ತಾದ ಚಿನ್ನವನ್ನು ಬಹು ಚನ್ನಾಗಿ ಕಾಪಾಡಿರಿ. ಅಗತ್ಯ ವಿದ್ದರೆ ಈ ಒಡನೆಯ ಉಡಿನ ಪೇಲೆ ಅತೀ ಸುಲಭ ದಂದಲ್ಲಿ ನಿಮ್ಮಿಂದ ಪಾಲ ಪಡೆಯಬಹುದು.

ಕೆನರಾ ಬ್ಯಾಂಕ್ ಲಿಮಿಟೆಡ್.

ಸ್ಥಾಪನೆ: 1906.

CANARA BANK LIMITED.

ಸ್ವದೇಶಿ ಔಷಧ ಭಂಡಾರ(ರಿಜಿಸ್ಟರ್ಡ್) ಕುಂಜಾಲು

–ಪ್ರಭೂಸ್–ಬಾಲಾಮೃತ–

ನಾನಾ ರೋಗ ರುಜೆಗಳಿಂದ ಪೀಡಿತವಲ್ಲಿ ಕೃಶವಾಗಿ ಸದಾ ಅಳುತ್ತಾ ಕಳೆಗುಂದಿರುವ ಬಾಲಕರು ದಷ್ಟಪುಷ್ಟರಾಗಿ ಸದಾ ನಗುತ್ತಿರುವಂತೆ ಮಾಡುವ ಅಮೋಘ ಗುಣಗಳುಳ್ಳ ಈ ಮಹೌಷಧದ 1 ಬಾಟ್ಲೆಯನ್ನು ಉಪಯೋಗಿಸಿಯೇ ಇದರ ಮಹತ್ವವನ್ನು ಪ್ರತಿ ಮಕ್ಕಳ ತಾಯ್ತಂದೆಗಳು ತಿಳಿದುಕೊಳ್ಳಬೇಕಾಗಿದೆ. ಬಾಟ್ಲಿ 1ಕ್ಕೆ 0-12-0

ನಮ್ಮ ಔಷಧಿ ಸಿಕ್ಕುವ ಸ್ಥಳಗಳು.—ಪೆರಾಂಟ್ ಟ್ರೇಡಿಂಗ್ ಕಾರ್ಪರೇಷನ್ ಮುಬ್ಬಳ್ಳಿ, ನವಭಾರತ ಬುಕ್‌ಡಿಪೋ, ಮೆಜಿಸ್ಟಿಕ್ ಸ್ಟೋರ್ಸ್, ಮೂಡರ್ನ್ ಸ್ಟೋರ್ಸ್ ಬಜನ್ಸ್, ಉಡುಪಿ, T. ಗೋಪಾಲಕೃಷ್ಣ ಸೈ ಬ್ರಹ್ಮಾವರ, H. ಗಣಪಯ್ಯ ಕಾಮತ್, C. B, Agency ಹಾಲಾಡಿ. ಗಣಪಯ್ಯ ಲಕ್ಷ್ಮಣ ನಾಯಕ್ ಅಂಡ್ ಬ್ರದರ್ಸ್ ಕೊಡಿ, ನರಸಿಂಹ ನಾಯಕ್ ಕುಂಕರ ನಾರಾಯಣ, ವೆಂಕಟೇರ (ಶೀನಪ್ಪ ಭಟ್ಟ, ಕೋಟೇಶ್ವರ.

ಎಚ್ಚರಿಕೆ.

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ಪಸ್ಟೇಂದ್ರಿಯ, ನವುಂಸಕತೆ, ಅಗ್ನಿ ಮಾಂದ್ಯ, ನುಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦.

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ ೧—೪—೦.

ವಿಳಾಸ: **'ಬಿಕ್ರಂ ಡಿಸ್ಪೆನ್ಸರಿ'**

೨೬-ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

ಉಡುಪಿ ಸ್ಟೋಕಿಸ್ಟರು: **ನವಭಾರತ ಪುಸ್ತಕ ಭಂಡಾರ**, ಉಡುಪಿ.

(೩ನೇ ಪುಟದಿಂದ ಮುಂದುವರಿದುದು)

ಹಿಂದೆ ಹೋಗುವಾಗ ಕಚ್ಚಾ ಸ್ಟಾಲುಗಳನ್ನು ಒಯ್ಯುವ ವ್ಯವಸ್ಥೆ ಮಾಡಲಾಗಿದೆ. ಹೀಗೆ 3,000,000 ಟನ್ ಕಚ್ಚಾ ಸ್ಟಾಲುಗಳನ್ನೊಯ್ಯಬಹುದಾಗಿದೆ. ಬರ್ಮದಿಂದ ಜಾಪಾನು 1,000,000 ಟನ್ ಎಣ್ಣೆ, 7,000,000 ಟನ್ ಅಕ್ಕಿ, ಹತ್ತಿ ಮತ್ತು ಇತರ ಖನಿಜಗಳನ್ನು ಪಡೆಯಬಹುದೆಂದು ಜಾಪಾನು ನಿರೀಕ್ಷಿಸುತ್ತದೆ. ಸುಮಾತ್ರದ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕಾಗಿ 100,000 ಜಾಪಾನ ಕುಟುಂಬಗಳನ್ನು ಅಲ್ಲಿಗೆ ಕಳುಹಿಸುವ ಯೋಜನೆ ಮಾಡಲಾಗಿದೆ. ಜಾವದ ಸಕ್ಕರೆ ಕಾರ್ಖಾನೆಗಳೇ 5,000,000 ಜಾಪಾನರಿಗೆ ಕೆಲಸಕೊಡಬಲ್ಲವಂತೆ. ಬೋರ್ನಿಯೋದ ಕಬ್ಬಿಣದ ಗಣಿಗಳಲ್ಲಿ ಸಾವಿರಾರು ಮಂದಿ ಉದ್ಯೋಗ ಪಡೆಯಬಹುದು. ಪುಲಯ ಮತ್ತು ಸುಮಾತ್ರಗಳಿಂದ ಇಷ್ಟರಲ್ಲೇ 'ಬೋಕ್ಸೈಟ್' ಜಾಪಾನಿಗೆ ಹೋಗಲಾರಂಭವಾಗಿದೆ. ಜಾಪಾನಿಗೆ ಬೇಕಾಗುವುದಕ್ಕಿಂತಲೂ ಹೆಚ್ಚಿನ ರಬ್ಬರು ಮತ್ತು ತವರವು ಅದಕ್ಕೆ ದೊರೆಯುತ್ತಿರುವುದು. ಸುಂಗೈಪಾಯ, ಕೊಲಿಯ, ಜೈನಾ, ಪೋರ್ಟ್‌ಡಿಕ್ಸನ್, ಪಿಲಿಪ್ಪೈನ್‌ಗಳಿಂದಲೂ ಜಾಪಾನು ತನಗೆ ಬೇಕಾದ ವಸ್ತುಗಳನ್ನು ಪಡೆಯುಬಹುದೆಂದು ಜಾಪಾನ ಅಧಿಕಾರಿಗಳು ಬಹಳ ಹಿಗ್ಗಿನಿಂದ ಉದ್ಘೋಷಿಸುತ್ತಿದ್ದಾರೆ.

ಜರ್ಮನಿಯು ಮಾಡುತ್ತಿರುವ ಸೂರೆ.

ಜರ್ಮನಿಯು ತನ್ನ ಪ್ರಚಂಡ ಸೇನೆಯನ್ನು ಪೋಷಿಸಲು ಮತ್ತು ಬಲಪಡಿಸಲು ಅಗತ್ಯವಾದ ಆಹಾರ ಸಾಮಗ್ರಿಗಳನ್ನೂ ಯುದ್ಧೋಪಕರಣಗಳನ್ನೂ ತಾನು ಗೆದ್ದ ರಾಜ್ಯಗಳಿಂದ ಸೂರೆಮಾಡಿ ತರುತ್ತಿರುವುದು. ಈ ರಾಜ್ಯಗಳ ಜನರು ಉಪವಾಸಬಿದ್ದು ಸಾಯುವಂತಾದರೂ ಜರ್ಮನರು ಗಣ್ಯಮಾಡುವ ಹಾಗಿಲ್ಲ. ಹೊಲ್ಲಂಡಿನ ಗೆದ್ದೊಡನೆಯೇ ನಾಯಿಗಳು ಅಲ್ಲಿ ದೊರವ ಹಾಲುಗಡ್ಡೆಯನ್ನೆಲ್ಲಾ ಪಡಕೊಂಡರು. 8 ಮಿಲ್ಯ ಸೇರು ಬೆಣ್ಣೆಯನ್ನು ಜರ್ಮನಿಗೆ ಕಳುಹಿಸಿದರು. ನೋರ್ವೆಯಲ್ಲಿ ದೊರೆವ ಮೀನಿನ ಎಣ್ಣೆ ಮತ್ತು ಗೋದಿಯನ್ನು ಜರ್ಮನಿಯೇ ಪಡೆಯುತ್ತಿದೆ. ಯುದ್ಧಸಂಬಂಧದಲ್ಲಿ ನೋರ್ವೆಯಲ್ಲಿ ಸಾವಿರಾರು ಮಂದಿ ಪುರುಷರು, ಸ್ತ್ರೀಯರು ಮತ್ತು ಮಕ್ಕಳು ಉಪವಾಸಬಿದ್ದು ಸತ್ತರೂ ಚಿಂತೆಯಲ್ಲೆಂದು ಅಲ್ಲಿಯ ನಾಯಿ ಅಧಿಕಾರಿಯು ಸ್ಪಷ್ಟವಾಗಿ ಹೇಳಿರುವರು. ಸರಿಯಾದ ಆಹಾರದ ಬಲ್ಲದೆ ನರಳುವ ಫ್ರಾನ್ಸಿನಿಂದ 800,000 ಟನ್ ಗೋದಿ ಜರ್ಮನಿಗೆ ಕಳುಹಿಸಲ್ಪಟ್ಟಿದೆ. ಫ್ರೆಂಚರು ಬೆಳೆಸುವ ಗೋದಿ ಮತ್ತು ಬಟಾಟೆಗಳನ್ನು ಅವರು ಜರ್ಮನರ ಪಾವಾಸಿಗೆ ಇಲ್ಲದೆ ಕೊಯ್ಯಲಿಕ್ಕಿಲ್ಲ. ತಮ್ಮ ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲಲಿಕ್ಕಿಲ್ಲ. ಸೇಕಡ 60ರಷ್ಟನ್ನು ಜರ್ಮನಿಗಿನ್ನು ಉಳಿದುದನ್ನು ಮಾತ್ರ ಅವರು ಉಪಯೋಗಿಸಬೇಕು. ಫ್ರೆಂಚ್ ಕಾರ್ಖಾನೆಗಳಲ್ಲಾ ಈಗ ಜರ್ಮನಿಗೆ ಬೇಕಾದ ಯುದ್ಧೋಪಕರಣಗಳನ್ನು ತಯಾರಿಸುವುದು ಮಾತ್ರವಲ್ಲದೆ ಅವುಗಳ ಸ್ಟಾಲುಗಳೂ ಜರ್ಮನರಾಗಿ ಹೋಗಿದ್ದಾರೆ. ಬೆಲ್ಜಿಯಮ್ಮಿನ ವೇಕಿಯದ ಲೋಕಪ್ರಸಿದ್ಧ ಸ್ಕೋಡ ಯುದ್ಧೋಪಕರಣ ತಯಾರಿ ಕಾರ್ಖಾನೆಯನ್ನು ಕಳೆದ 3 ವರ್ಷಗಳಿಂದ ಗೋರಿಂಗರೇ ತಮ್ಮನು ನಡಿಸುತ್ತಿದ್ದಾನೆ.

ಅಮೃತಾಂಜನ

REGD.

ತಲೆನೋವಿಗೆ, ಶೀತ, ನೆಗಡಿ, ಉಳುಕು, ಕೈಕಾಲು ಕೀಲು, ಭುಜ, ಹಲ್ಲು ನೋವಿಗೆ, ಸುಟ್ಟ ಗಾಯ ಎಸೆನೋವು, ಪ್ರಾಯುಗಳು ಬಾವು ಕೊಳ್ಳುವುದು, ಚೇಳು ಏಷಮುಂತಾದ ಬೆನೆ ಪಕ್ಷಿಕಾತ, ಮೊಡಿತು, ನೊಡಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

Degrees! Books! Medicines Free H. L. M.S.M.B. H. M.D. etc. Free Homeo-Ayur-Unani Nature cure by post also—Practitioners also soon Homeo Materiamedica Rs. 5 Homeo Practice book Rs 4, Insanity Cure Pills Rs. 10 Enclose2 annas Stamp.—
1914—18ರ ಯುದ್ಧದ ಕೊನೆಯ ಭಾಗದ ಮನೋಸ್ಥಿತಿಯೇ ಈಗ ಜರ್ಮನ್ ಜನತೆಯಲ್ಲಿ ತೋರಿಬರುತ್ತದೆ. ಅವರು ಬಹಳ ಉತ್ಸಾಹ ಕುಂದಿಹೋಗಿರುತ್ತಾರೆ. ತೀವ್ರ ನಿರಾಶೆಯೇ ಎಲ್ಲೆಲ್ಲಿಯೂ ತೋರಿ ಬರುತ್ತದೆ. ಬ್ರಿಟಿಷ್ ವಿಮಾನ ಧಾಳಿಗಳಿಂದ ಜನರು ಬಹಳ ತಲ್ಲಣಗೊಂಡಿರುತ್ತಾರೆ. ವಿಮಾನ ಧಾಳಿಯಿಂದ ನಾಶ ಗೊಳಿಸಲ್ಪಟ್ಟ ಪಟ್ಟಣಗಳ ಜನರು ಇಷ್ಟರ ವರೆಗೆ ಬೇರೆ ಕಡೆಗೊಯ್ಯಲ್ಪಡುತ್ತಿದ್ದರು. ಆದರೆ ಅವರು ಜನರಲ್ಲಿ ದಿಗಿಲನ್ನೆಬ್ಬಿಸಿದುದರಿಂದ ಈಗ ಹಾಗೆ ಮಾಡಲ್ಪಡುವುದಿಲ್ಲ. ಅಮೆರಿಕವು ಬ್ರಿಟನಿಗೆ ವಿಮಾನ ಸಹಾಯ ಮಾಡುತ್ತಿರುವುದೆಂಬುದನ್ನು ಜರ್ಮನರು ತಿಳಿದು ಬಹಳ ಚಿಂತಾಮಗ್ನರಾಗಿರುತ್ತಾರೆ. ಬರುವ ಚಳಿಗಾಲದಲ್ಲಿ ಆಹಾರದ ತೀವ್ರ ಕೊರತೆಯುಂಟಾಗುವುದೆಂಬುದು ಖಂಡಿತ. ಈಗಲೇ ಆಹಾರ ಸಾಮಾಗ್ರಿಗಳು ಅಂಗಡಿಗಳಲ್ಲಿ ಸಿಗುವುದಿಲ್ಲ. ಜನರು ಈ ವಿಷಯದಲ್ಲಿ ಬಹಳ ವ್ಯಥೆಗೊಳ್ಳತೊಡಗಿರುತ್ತಾರೆಂದು ಇತ್ತಲಾಗಿ ಜರ್ಮನಿಯಲ್ಲಿ ತಿರುಗಿ ಇಂಗ್ಲೆಂಡಿಗೆ ಬಂದಿರುವ ಸ್ವಿಸ್ ವ್ಯಾಪಾರಿ ಯೋರ್ವರು ಅಭಿಪ್ರಾಯಪಟ್ಟಿರುತ್ತಾರೆ.

ಘಂಟೆಗೊಂದು ಬೋಂಬರ್ ವಿಮಾನ.

ವರ್ಷಕ್ಕೆ 40,00,000 ಮೋಟರ್ ವಾಹನಗಳನ್ನು ತಯಾರಿಸುತ್ತಿದ್ದ ಅಮೆರಿಕದ ಮೋಟರ್ ಕಾರ್ಖಾನೆಗಳು ಈಗ ಮೋಟರ್ ಕಾರು ತಯಾರಿಸುವುದನ್ನೇ ನಿಲ್ಲಿಸಿ, ಟೇಂಕ್, ವಿಮಾನಾದಿಗಳನ್ನು ತಯಾರಿಸುತ್ತಿವೆ. ಈ ಕಾರ್ಖಾನೆಗಳು ಈ ವರ್ಷ 45,000ಕ್ಕಿಂತಲೂ ಮಿಕ್ಕಿದ ಟೇಂಕುಗಳನ್ನು ತಯಾರಿಸುವವು. ಸರ್ವ ಸಾಮಾನ್ಯವಾಗಿ ಒಂದು ಬೋಂಬರ್ ವಿಮಾನದಲ್ಲಿ 1,50,000 ಬೇರೆ ಬೇರೆ ಭಾಗಗಳಿರುತ್ತವೆ. 4 ಇಂಜಿನಿನ ಬೋಂಬರ್ ವಿಮಾನವೊಂದನ್ನು ತಯಾರಿಸಲು ಮೊದಲಾದರೆ ಕೆಲವು ತಿಂಗಳು ತಾಗುತ್ತಿತ್ತು. ಈಗ ವಿಲ್ಲೋರನ್ ಎಂಬಲ್ಲಿ ಹೆಸ್ರಿ ಫೋರ್ಡರು ಕಟ್ಟಿಸಿರುವ ಕಾರ್ಖಾನೆಯಲ್ಲಿ ಘಂಟೆಗೊಂದು 4 ಇಂಜಿನ್ ಬೋಂಬರ್ ವಿಮಾನ ತಯಾರಾಗಿ ಹೊರಗೆ ಕಳುಹಿಸಲ್ಪಡುತ್ತದೆ. 84 ನಿಮಿಷಗೊಂದು ಸರ್ವ ಸಾಮಾನ್ಯ ವಿಮಾನ ತಯಾರಾಗುತ್ತದೆ ಯುನ್ಯಾಟೆಡ್ ಸ್ಟೇಟ್ಸ್‌ನಲ್ಲಿ ಒಟ್ಟು 25 ಮಿಲ್ಯ ಮಂದಿ ಕೈಗಾರಿಕ ಕೆಲಸಗಾರರಿರುತ್ತಾರೆ. ಈಗ ಇವರಲ್ಲಿ ಅರವಾಸಿಗಿಂತ ಹೆಚ್ಚಿನವರು ಯುದ್ಧ ಸಾಮಾಗ್ರಿಗಳನ್ನು ತಯಾರಿಸುವುದರಲ್ಲಿ ನಿರತರಿರುತ್ತಾರೆ. ಬರುವ ವರ್ಷಾರಂಭದಲ್ಲಿ ಈ ಸಂಖ್ಯೆ 17 ಮಿಲ್ಯಕ್ಕೇರಲಿದೆ.

ದಿನವೊಂದರ 3 ಹಡಗ ತಯಾರಿ.

ಹಡಗ ಕಟ್ಟುವುದು ಬಹಳ ಕಷ್ಟದ ಕೆಲಸ. ಸರ್ವಸಾಮಾನ್ಯವಾದೊಂದು ಹಡಗ ತಯಾರಿಸಲು ಮೊದಲು ಕಡಿಮೆಯೆಂದರೆ 5 ತಿಂಗಳು ಬೇಕಿತ್ತು. ಈಗ 42 ದಿನಗಳಲ್ಲಿ ಒಂದು ವ್ಯಾಪಾರಿ ಹಡಗ ತಯಾರಾಗುತ್ತದೆ. ಇಂದೀಗ ಯುನ್ಯಾಟೆಡ್ ಸ್ಟೇಟ್ಸ್‌ನಲ್ಲಿ ದಿನವಹಿ 3 ಹಡಗುಗಳು ತಯಾರಾಗಿ ಹೊರ ಕಳುಹಿಸಲ್ಪಡುತ್ತವೆ. ಬರುವ ವರ್ಷಾರಂಭದಿಂದ ದಿನವೊಂದರ ನಾಲ್ಕು ಹಡಗುಗಳು ತಯಾರಾಗಲಿವೆ. 50 ಟನ್ ಸಾಮಾಗ್ರಿಗಳನ್ನೊಯ್ಯುವ ಅತಿ ದೊಡ್ಡದಾದ ಕಾರ್ಗೋ ವಿಮಾನ ಗಳನ್ನು ಅನಷ್ಟ ಹೆಚ್ಚಾಗಿ ತೀಪ್ರದಲ್ಲೇ ತಯಾರಿಸುವ ಹೊಸ ಯೋಜನೆಯನ್ನು ಇತ್ತಲಾಗಿ ಯುನ್ಯಾಟೆಡ್ ಸ್ಟೇಟ್ಸು ಕೈ ಕೊಂಡಿದೆ.

ಆಹಾರ ವಸ್ತು ಉತ್ಪತ್ತಿ.

ಯುದ್ಧೋಪಕರಣಗಳಂತೆಯೇ ಯುನ್ಯಾಟೆಡ್ ಸ್ಟೇಟ್ಸು ಆಹಾರ ವಸ್ತುಗಳನ್ನೂ ಅಪಾರವಾಗಿ ಉತ್ಪಾದಿಸಿ ಸಂಗ್ರಹಿಸುತ್ತಿದೆ ಆಲ್ಲಿ 60,00,000 ಫಲವತ್ತಾದ ಹೊಲಗೇರಿಗಳಿರುತ್ತವೆ. ಅವುಗಳಲ್ಲಿ 3,00,00,000 ಬೇಸಾಯಗಾರರು ಕೆಲಸ ಮಾಡುತ್ತಿರುತ್ತಾರೆ. ಈ ಬೇಸಾಯಗಾರರು ಒಂದೇ ಸವನೆ ಆಹಾರ ವಸ್ತುಗಳನ್ನು ಅತ್ಯಧಿಕವಾಗಿ ಬೆಳೆಸುವುದರಲ್ಲಿ ನಿರತರಾಗಿರುತ್ತಾರೆ. ಇಷ್ಟರಲ್ಲೇ ಯುನ್ಯಾಟೆಡ್ ಸ್ಟೇಟ್ಸಿಗೆ 2 ವರ್ಷಕ್ಕೆ ಬೇಕಷ್ಟು ಗೋದಿಯು ಬೆಳೆಸಲ್ಪಟ್ಟಿದೆ. ಹಣ್ಣು ಹೆಂಪಲು, ಮಾಂಸ, ಮೊಟ್ಟೆ, ತರಕಾರಿ, ಹಾಲು ಮೊದಲಾದವು ಕೂಡಾ ಅತಿ ಹೆಚ್ಚಾಗಿ ತಯಾರಿಸಲ್ಪಡುತ್ತಿವೆ. ಈ ವರ್ಷ ಯುನ್ಯಾಟೆಡ್ ಸ್ಟೇಟ್ಸು 4,00,00,00,000 ಡಜನು ಮೊಟ್ಟೆಗಳನ್ನು ಉತ್ಪಾದಿಸಿರುವುದು. ಅದೇ ರೀತಿ 63,00,00,00,000 ಲಿಟರ್ ಪಾಲನ್ನು ಕೂಡಾ ತಯಾರಿಸುವುದು.

ಯುನ್ಯಾಟೆಡ್ ಸ್ಟೇಟ್ಸು ಯುದ್ಧ ಗೆಲ್ಲುವುದು.

ಯುದ್ಧವು ಎಷ್ಟು ದೀರ್ಘ ಕಾಲ ನಡೆದರೂ ಯುನ್ಯಾಟೆಡ್ ಸ್ಟೇಟ್ಸು ಗೆಲ್ಲುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಹಿಟ್ಲರರು ದೀರ್ಘ ಯುದ್ಧಕ್ಕೆ ತಯಾರಿಲ್ಲ. ಇಷ್ಟರಲ್ಲೇ ಜರ್ಮನಿಯಲ್ಲಿ ಮಾನವ ಶಕ್ತಿಯ ಕೊರತೆಯುಂಟಾಗಿದೆ. ಈಗ ಸುಮಾರು 10 ವರ್ಷಗಳಿಂದ ಜರ್ಮನರು ಯುದ್ಧ ಪ್ರಯತ್ನದಲ್ಲಿ ತೊಡಗಿರುತ್ತಾರೆ. ಆದರೆ ಮಿತ್ರ ರಾಷ್ಟ್ರಗಳ ಯುದ್ಧ ಪ್ರಯತ್ನವು ಈಗ ತಾನೆ ಭರದಿಂದ ಆರಂಭವಾಗಿದೆ. ಇತೀ ಯುರೋಪ್ ಖಂಡದಲ್ಲಿ ಆಹಾರದ ಪರಿಸ್ಥಿತಿಯು ಬಹಳ ಕೆಟ್ಟದಾಗಿದೆ. ಹಿಟ್ಲರರು ಇಡೀ ಯುರೋಪ್ ಖಂಡದ ಮೇಲೆ ಈಗ ಅಧಿಕಾರ ನಡಿಸುತ್ತಿರುವರಾದರೂ, ಜನರ ವಿರೋಧ ಮತ್ತು ವಿಘಾತುಕ ಕೃತ್ಯಗಳಿಂದಾಗಿ ಅದರ ಸಂಪತ್ತನ್ನೇನೂ ಹೆಚ್ಚಿನ ಮಟ್ಟಿಗೆ ಉಪಯೋಗಿಸಿಕೊಳ್ಳಲವರಿಗೆ ಸಾಧ್ಯವಾಗಿರುವುದಿಲ್ಲ. ಹಿಂದೀ ಸ್ವಾತಂತ್ರ್ಯದ ಕುರಿತು ಅಮೆರಿಕಾನರು ತುಂಬಾ ಸಹಾನುಭೂತಿಯುಳ್ಳವರಿರುತ್ತಾರೆ. ಆದರೆ ತನ್ನ ಗೃಹಕಲಹವನ್ನು ಬ್ರಿಟನು ತಾನಾಗಿ ಇತ್ಯರ್ಥಪಡಿಸಿಬಿಡಬೇಕೆಂಬುದೇ ಯುನ್ಯಾಟೆಡ್ ಸ್ಟೇಟ್ಸ್ ಸರಕಾರದ ಘೋಷಣೆಯಾಗಿದೆ. ಸಂಯುಕ್ತ ರಾಷ್ಟ್ರಗಳ ಹಿತದೃಷ್ಟಿಯಿಂದ ಬ್ರಿಟನು ಮತ್ತು ಹಿಂದುದೇಶವು ತಮ್ಮ ಕಲಹವನ್ನು ರಾಜಿಮಾಡಿಕೊಳ್ಳಬೇಕೆಂದೇ ಅಮೆರಿಕಾನರ ಅಪೇಕ್ಷೆ. ಯುದ್ಧಾನಂತರ ಬ್ರಿಟನು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವೀಯುವುದು. ಮತ್ತು ಅಟ್ಲಾಂಟಿಕ ಘೋಷಣೆಯು ಹಿಂದುಸ್ಥಾನಕ್ಕೂ ಅನ್ವಯಿಸುವುದೆಂದು ಅಮೆರಿಕಾನರು ನಂಬಿರುತ್ತಾರೆಂದು ಕರಾಚಿಗೆ ಬಂದಿರುವ ನ್ಯೂಯೋರ್ಕ್ ಟೈಮ್ಸ್ ಪತ್ರಿಕೆಯ ಸ್ಪೆಶ್ಯಲ್ ಬಾತ್ಮಿದಾರರಾದ ಮಿ. ಹೆರ್ಬರ್ಟ್ ಮೇಥ್ಯೂಸರು ಅಭಿಪ್ರಾಯವಿತ್ತಿರುತ್ತಾರೆ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

ಶ್ರಮಸಂಖ್ಯ 157/1942.

1. ಸಂಕು R. Amin, 2. ಗಿರಿಯಮ್ಮ ಸೆಂಗಪ್ಪ— ವಾದಿರು,

ಮತ್ತು

ಕೊರಗ ಪೂಜಾರಿ ವಗೈರರು. ಪ್ರತಿವಾದಿರು,

ಯಾವಧಿಗೆಗೆ

5 ದುಗ್ಗು ಹೆಂಗಸು 3ನೇ ಪ್ರತಿವಾದಿಳು ತಂಗಿ ಹೆಂಗ್ಸಿನ ಮಗಳು, ಮತ್ತು ಕಾಂತಕ್ಕ ಪೂಜಾರಿಯ ಹೆಂಡತಿ, ವಂಗಳೂರು ತಾಲೂಕು ಸುರತಕಲ್ಲು ಗ್ರಾಮ ಸ್ಥಳು

9. ಕಾಂತಪ್ಪ ಪೂಜಾರಿ, ಅಂಜು ಪೂಜಾರಿಯ ಮಗ, ಮಂಗಳೂರು ತಾಲೂಕು ಪಂಜ ಗ್ರಾಮದ ಮುಲ್ಕೋಡಿಯಬಳ್ಳಿರ-ವನ-

10. ದಾಮು ಪೂಜಾರಿ, ಚೀಂಕ್ರ ಪೂಜಾರಿಯ ಮಗ, ಕಾರ್ಕಳ ತಾಲ್ಲೂ ಕಡಂದಲೆ ಗ್ರಾಮದಲ್ಲಿ ವಾಸ ವನ-

ವಾದಿರ ಪ್ಲೆಂಟು A ವೆಡ್ಡೂಲಿನಿಂದ ತೋರುವ ಆಸ್ತಿಯು ತಮ್ಮ ಹಕ್ಕಿನದೆಂಕಲೂ ಅದರಲ್ಲಿ ನನಗೆ ಯಾ ನನ್ನ ಕುಟುಂಬದವರಿಗೆ ಯಾವ ತರದ ಹಕ್ಕೂ ಯಿಲ್ಲವೆಂಬುದಾಗಿ ದಿಕ್ಕೀರ ವಿವಾದ ಬೇಕಾಗಿಯೂ ಪ್ಲೆಂಟು C ವೆಡ್ಡೂಲಿನಿಂದ ತೋರುವ ಪಗ್ಗಲ ತೆಂಟೆ ಮನೆಯನ್ನು ತಮಗೆ ನಿಮ್ಮಿಂದ ಕೂಡಾ ಬಿಡ್ಡಿಸಿಕೊಡಬೇಕಾಗಿಯೂ ಪ್ಲೆಂಟು A ವೆಡ್ಡೂಲು ಆಸ್ತಿಯಲ್ಲಿ ನೀವು ಯಾ ನಿಮ್ಮ ಕುಟುಂಬದವರು ಪ್ರವೇಶ ಆಗಬಾರ್ದೆಂತ ನಿಮ್ಮ ವೇಲೆ ಕಡಾ ಶಾಶ್ವತವಾದ ಯಿಜಂಕ್ಷನ್ ಕೊಡಬೇಕಾಗಿಯೂ ವೆಗೈರೆ ನನ್ನತ್ಕಿಗಳನ್ನು ಕೇಳಿ ವಾದಿರು ನಿಮ್ಮ ಮೇಲೆ ಕಡಾ ದಾಖಲು ಮಾಡಿದ ಈ ನಾನೆಯು ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮ ಹಾಜರ್ತಿಕಿಯ ಬಗ್ಗೆ ತಾರೀಕು21-1-1942 ಕ್ಕೆ ಯಿಟ್ಟಿರುವುದರಿಂದ ಸದರಿ ದಾವೆಯ ಕಿರಿತು ನಿಮ್ಮ ಸೈಟ್‌ಮೆಂಟ್ ಯಿರುವಿದ್ದಿ ಅದನ್ನು ಸದರಿ ತಾರೀಕಿನಲ್ಲು ಬೆಳಗ್ಗೆ 10 ಗಂಟೆಯ ಸಮಯಕ್ಕೆ ಹಾಜ್ರು ಆಗಿ ಬ್ಯಾಟೀರು ಮೊದಿಕೆಕ್ಕೆ ಬಹುದಾ ಗಿಯೂ ತಪ್ಪಿದ್ದಲ್ಲಿ ಸದರಿ ದಾವೆಯು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವುದೆಂಬಿಯೂ ಯೆಂಬ ಸಂಗ್ತಿ ಯೂ ಮೇಲಕ್ಕೆ ನಿಮಗೆ ತಿಳಿಯಪಡಿಸೋಣವಾಗುತ್ತದೆ

A. N. S. Achar.
Pleader for Plaintiffs.

ಸಮಾಚಾರ ಸಂಗ್ರಹ

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 55/42.

ದೇವಕಿ ಅಮ್ಮ — ಪಾದಿ.

ಲಕ್ಷ್ಮಿನಾರಾಯಣಪ್ಪಯ್ಯ ಕೊಡಾ— ಪ್ರತಿವಾದಿರು.

ಸದ್ರಿ ವ್ಯಕ್ತಿಯ 2ನೇ ಪ್ರತಿವಾದಿ ರಾಮಕೃಷ್ಣಯ್ಯಗೆ- ಇದರಿಂದ ತಿಳಿಸತಾವೆನೆಂದ್ರೆ—

ಸದ್ರಿ ಪ್ರತಿವಾದಿಳು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯಕ್ಕೆ ತಮ್ಮ ಬಗ್ಗೆ ತಾ. 11-9-42ಕ್ಕೆ ಇಟ್ಟಿದೆ. ಅಲ್ಲಿಪ್ಪ ವ್ಯವಹಾರವಿದ್ದರೆ ಆ ದಿವಸ ಹಗ್ಗು 10 ಘಂಟೆಗೆ ಸರಿಯಾಗಿ ಸ್ವತಃ ಅಗ್ಲೀ ವಕೀಲರ ಮುಖಾಂತ್ರವಾಗಲೀ ಹಾಜ್ರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ವಿಚಿಡಾಟ್ಸ್ ವಿಚಾರಣೆಯಂದ ತೀರ್ಮಾನಿಸಲಾಗುತ್ತದೆ. ತಿಳಿದಿರಲಿ.

ಪುತ್ತೂರು, ತಾ. 25-8-42 } **C. S. Shastry.**
Vakil for Plaintiff.

Degrees! Books! Medicines

Free H. L. M. S. M. B. H. M. D. etc. Free Homeo-Ayur- Unani Naturco degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 12 annas stamps—

Principal Indian Homeopath Institute & Society (Govt. Regd.)
P.O. Mahuva, (Kathiawar Dt. India.)

Sidha-Kalpa Ravach (Regd.)
No. 3 Rs. 2, No 2 Rs 5 No. 1 Rs. 7. Special Rs. 10, Extra Special Rs 17 for love marriage health, wealth. Ask any six questions with M. O. Re 1/- and get correct answers by return post Life reading Rs phic No. V. P. P. Send M. O. For P. O is Prof. Dr N H. Chhabra 2 nparn Mahuva (Kathiawar India.)

ವಿಜಯ

ವಿಜಯ ಹೊಂದಲು ಜನವಿಶ್ವಾಸಬೇಕು. ಜನವಿಶ್ವಾಸ ಪಡೆಯಲು ಸುರಕ್ಷಿತತೆ, ಸುದೃಢತೆ, ಸುಭದ್ರತೆಗಳಿರಬೇಕು.

ವಿಜಯಾ ಬ್ಯಾಂಕಿನ ದಿನ ದಿನದ ಪ್ರಗತಿಗೆ-ಸರ್ವತ್ರ ವಿಜಯಕ್ಕೆ ಇವೇ ಕಾರಣವಾಗಿವೆ.

ವಿಜಯಾ ಬ್ಯಾಂಕ್, ಲಿಮಿಟೆಡ್.

ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ, ಕಾಪು, ಬ್ರಹ್ಮಾವರ.

- ನೇಮಕಾತಿದಾರರಿಗೆ ಭದ್ರತೆಯ ಆಶ್ವಾಸನೆ.
- ಯಾವತ್ತೂ ಬ್ಯಾಂಕಿಂಗ್ ವ್ಯವಹಾರದ ಸಲಕರಣೆ.

THE VIJAYA BANK LIMITED, MANGALORE.

ಡ್ಯೂಕ್ ಆಫ್ ಕೆಂಟರ ಮರಣ.

ಬ್ರಿಟನಿನ ಅರಸ ಜೋರ್ಜರ ಕೊನೆಯ ತಮ್ಮ ಡ್ಯೂಕ್ ಆಫ್ ಕೆಂಟರು, ಕಳದ ತಿಂಗಳ ತಾ 25ರಲ್ಲು ಏಸ್ಲೆಂಡಿಗೆ ಜಲಯಾನ ಮೂಲಕ ಹೋಗುವಾಗ ಉತ್ತರ ಸ್ಕೋಟ್ಲೆಂಡಿನಲ್ಲಿ ಅದು ಮುರಿದು ಬಿದ್ದು ಕೊಲ್ಲಲ್ಪಟ್ಟರುವರು. ಅವರೊಂದಿಗೆ ಇತರ 14 ಮಂದಿ ಹತರಾಗಿರುವರು. ಈ ಜಲಯಾನದಲ್ಲಿದ್ದವರ ಸೈಕಿ ಒಬ್ಬರು ಮಾತ್ರ ಜೀವಂತವಿದ್ದರು. ಡ್ಯೂಕ್ ಆಫ್ ಕೆಂಟರ ಮರಣದ ಕುರಿತು ಪ್ರೆಸಿಡೆಂಟ್ ರುಸವೆಲ್ಟರೇ ಮೊದಲಾದವರೆಲ್ಲರೂ ತಮ್ಮ ಹಾರ್ದಿಕ ಸಂತಾಪ ಸೂಚಿಸಿರುವರು. ಡ್ಯೂಕರು ಕೇವಲ 40 ವರ್ಷ ಪ್ರಾಯದವರಿದ್ದರು. 1934ರಲ್ಲಿ ಗ್ರೀಸಿನ ಅರಸರ ಪುತ್ರಿಯನ್ನು ಸಂಭ್ರಮದಿಂದ ಮದುವೆಯಾಗಿ ಮೂರು ಮಕ್ಕಳನ್ನು ಪಡೆದಿರುವರು. ಕೊನೆಯ ಗಂಡು ಮಗುವು 8 ವಾರಗಳ ಹಿಂದೆ ಹುಟ್ಟಿದ್ದು ಪ್ರೆಸಿಡೆಂಟ್ ರುಸವೆಲ್ಟರು ಅವರ 'ಗೋಡ್ ಫಾದರ್' ಆಗಿದ್ದರು. ಡ್ಯೂಕರು ತನ್ನ ತಂದೆಯ ಮತ್ತು ಅನಂತರ ತನ್ನ ಅಣ್ಣನ ಪ್ರತಿನಿಧಿಯಾಗಿ ಕೆನಡ, ದಕ್ಷಿಣ ಅಮೆರಿಕ ಮತ್ತು ದಕ್ಷಿಣ ಆಫ್ರಿಕಗಳಲ್ಲೆಲ್ಲಾ ಸಂಚಾರ ನಾಡಿದ್ದರು. ಯುದ್ಧಾರಂಭವಾದಂದಿನಿಂದ ನೌಕಾ ಖಾತೆ ಮತ್ತು ವಿಮಾನಪಡೆಯಲ್ಲಿ ಅತ್ಯಾಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ಕಳದ ವರ್ಷ ವಿಮಾನದಲ್ಲಿ 15,000 ಮೈಲು ಸಂಚರಿಸಿದ್ದರು. ಕೆಂಟರ ಶವವು ಲಂಡನಿಗೆ ತರಲ್ಪಟ್ಟು ವಿಂಡ್ಸರ್ ಅರಮನೆಯ ಸೈಂಟ್ ಜೋರ್ಜ್ ಮಂದಿರದಲ್ಲಿ ಹೂಳಲ್ಪಟ್ಟಿರುವುದು.

ದೊಡ್ಡ ವಿಜಯ.

ಜರ್ಮನರು ಸುಮಾರು ಒಂದು ಮಿಲ್ಯ ಸೇನೆಯನ್ನು ಪಯೋಗಿಸಿ ಸ್ಟೆಲಿನ್ ಗ್ರಾಡನ್ನು ಗೆದ್ದೇ ಸಿದ್ಧವೆಂಬ ಭೀಷ್ಮ ನಿರ್ಧಾರದಿಂದ ಹೋರಾಡುತ್ತಿರುವಾಗ ರಸ್ಯಾನರು ಮಧ್ಯ ರಣರಂಗದಲ್ಲಿ ಜರ್ಮನರ ಮೇಲೆ ಧಾಳಿ ನಡಿಸಿ ಅವರನ್ನು 60 ಮೈಲು ಹಿಂದಕ್ಕಟ್ಟಿರುವರು. ಕಲಿನಿನ್ ಪಾತ್ತು ಲೆನಿನ್‌ಗ್ರಾಡ್ ಪ್ರದೇಶಗಳಲ್ಲಿ ಕೆಂಪು ಸೇನೆಯು ಧಾಳಿಕಾರಕ ಹೋರಾಟವನ್ನಾರಂಭಿಸಿರುತ್ತದೆ. ಮಧ್ಯ ರಣರಂಗದಲ್ಲಿ ರಸ್ಯನರು 610 ಊರುಗಳನ್ನು ಗೆದ್ದು 45,000 ಜೈರಿ ಸೈನಿಕರನ್ನು ಕೊಂದಿರುತ್ತಾರೆ.ಜೈರಿಗಳ 250ಟ್ಯಾಂಕು 757 ತೋಪು,567 ಟ್ರೆಂಚ್ ಮೋರ್ಟರ್ಸ್, 120 ಮಿಶನ್ ತೋಪು, 121 ಆಟೊಮೆಟಿಕ್ಸ್, 11,000 ರೈಫ್ಲ್ಸ್, 170,190 ಸೆಲತೋಟಿ, 2,311,750 ರೌಂಡ್ಸ್ ಮದ್ದು, 32,473 ಕೆಲ್ಸ್, 65 ರೇಡಿಯೋ ಯಂತ್ರ, 2220 ಲೋರಿ, 959 ಮೋಟರ್ ಸೈಕ್ಲ್ಸ್, 1959 ಸೈಕ್ಲ್ಸ್ ಮೊದಲಾದುವುಗಳು ರಸ್ಯನರ ವಶವಾಗಿರುತ್ತವೆ. ಪ್ರಮುಖ ರಸ್ಯನ ಸೇನಾನಾಯಕ ಜನರಲ್ ಜುಖೋವರು ಸುಮಾರು 15 ದಿನಗಳಿಂದ ಈ ಧಾಳಿಯನ್ನಾರಂಭಿಸಿ ಜೈರಿ ಸೇನೆಯನ್ನು ಸಂಪೂರ್ಣ ನಾಶಮಾಡಿಬಿಟ್ಟಿರುತ್ತಾರೆ. ರಿಜರ್ವ್ ಮತ್ತು ವ್ಯಾಸ್ಮ ಪಟ್ಟಣಗಳ 90 ಮೈಲುದ್ದ ರಣರಂಗದಲ್ಲಿ ಭೀಷಣ ಸಮರ ನಡೆದು ರಸ್ಯನರು ಸುಭದ್ರ ಜರ್ಮನ್ ಕೋಟೆ ಕೊತ್ತಳಗಳನ್ನು ಮುರಿದು ದೊಡ್ಡ ವಿಜಯ ಪಡೆದಿರುತ್ತಾರೆ. ಇದರಿಂದ ರಸ್ಯನರಲ್ಲಿ ಹೊಸ ಹುರುಪು ಬಂದಿದೆ. ಜರ್ಮನರು ಬಹಳ ತಳಮಳಗೊಂಡಿರುತ್ತಾರೆ; ಈಗ ವ್ಯಾಸ್ಮ ಪಟ್ಟಣದ ಸುತ್ತಿನಲ್ಲಿ ತೀವ್ರ ಕದನ ನಡೆಯುತ್ತಿದೆ.

ಸೊಲಮನ್ ಯುದ್ಧದ ಪರಿಣಾಮ.

ಈ ಯುದ್ಧವು ಕಳದ ತಾ. 24ರಲ್ಲಿ ಕೊನೆಗೊಂಡಂತೆ ತೋರುತ್ತದೆ ಜಪಾನ ಪಡೆಯು ಹೆಚ್ಚಿನ ನಷ್ಟ ಹೊಂದಿ ಹೋರಾಟ ನಿಲ್ಲಿಸಿ ಹಿಂದೆ ಸರಿದಿರುತ್ತದೆ. ಆಮೆರಿಕವು ದೊಡ್ಡ ನೌಕಾ ವಿಜಯ ಪಡೆದಿರುವಂತಿದೆ. ಅಮೆರಿಕಾನರನ್ನು ಸೊಲಮನ್ ದ್ವೀಪದ ಟುಲಗಿಯಿಂದ ಹೊರದೋಡಿಸಬೇಕೆಂದು ಜಪಾನು ಮಾಡಿದ ಪ್ರಯತ್ನ ನಿಷ್ಫಲವಾಗಿದೆ. ಆದರೂ ಅದು ಇಸ್ಪರಿಂದಲೇ ನಿರಾಕರಿಸಿರುವ ಸಂಭವವಿಲ್ಲ. ಇನ್ನೊಮ್ಮೆ ಪ್ರಯತ್ನಮಾಡಬಹುದೆಂದು ನಿರೀಕ್ಷಿಸಲಾಗಿದೆ. ನ್ಯೂಗಿನಿಯಲ್ಲಿ ಏಲ್ಲೆ ಕೊಲ್ಲಿಯಲ್ಲಿ ಇನ್ನೊಂದೆಡೆ ಜಪಾನರು ಬಂದಿಳಿದಿರುತ್ತಾರೆ. ಮಿತ್ರ ರಾಷ್ಟ್ರೀಯ ವಿಮಾನಗಳು ಮತ್ತು ಸೈನಿಕರು ಅವರನ್ನು ತಡೆಗಟ್ಟಲಿತ್ನಿಸುತ್ತಿದ್ದಾರೆ.

ಪತ್ರಿಕೆಗಳ ಮೇಲಿನ ನಿರ್ಬಂಧ.

ಅಖಿಲ ಭಾರತದ ಪತ್ರಿಕಾ ಕರ್ತರುಗಳ ಪರಿಷತ್ತಿನವರು ದಿಲ್ಲಿಯೆಲ್ಲಿ ೨ ದಿನಗಳ ವರೆಗೆ ಸಭೆ ಸೇರಿ ಸರಕಾರದೊಡನೆ ಮಾತುಕತೆ ನಡಿಸಿದ ಪರಿಣಾಮವಾಗಿ, ಸರಕಾರವು, ಕೆಲವೊಂದು ವಾರ್ತೆಗಳ ಪ್ರಕಟನೆಯ ನಿರ್ಬಂಧನ ಕುರಿತು ಹೊಸ ವಿಧಾನವನ್ನು ನುಸವಸಲೊಪ್ಪಿರುವುದು ಆ ವಿಧಾನವು ನಿಲ್ಲಿಸಲ್ಪಟ್ಟ ನೋಲೆ ಆ ಕುರಿತು ಹೇಳಿಕೆಯೊಂದು ಕೊರಡಿಸುವುದು. ಆದುದರಿಂದ ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳು ಪುನಹ ಪ್ರಕಟವಾಗಬಹುದೆಂದು ಪತ್ರಿಕಾ ಕರ್ತರುಗಳ ಪರಿಷತ್ತಿನ ಸ್ಟೇಂಡಿಂಗ್ ಕಮಿಟಿಯ ಅಭಿಪ್ರಾಯವಿರುತ್ತದೆ.

ದೇವದಾಸ ಗಾಂಧಿಯವರ ಬಿಡುಗಡೆ

ದಿಲ್ಲಿಯ ಹಿಂದುಸ್ಥಾನ ಟೈಮ್ಸ್ ಪತ್ರಿಕೆಯ ನೆನೇಜಿಂಗ್ ಎಡಿಟರ್‌ರಾದ ಶ್ರೀ.ದೇವದಾಸ ಗಾಂಧಿಯವರೇ ಮೊದಲಾದವರು ಕಳದ ತಿಂಗಳ ತಾ. 20ರಲ್ಲು ಬಿಡುಗಡೆ ಹೊಂದಿರುತ್ತಾರೆ. ಈಗಿನ ಚಳವಳದ ಕಾರಣ ೩ ಕಲಮು ವರ್ತಮಾನವನ್ನು ಮಾತ್ರ ಹೊತ್ತ ಕಿರೋನಾವೆಯೇನೂ ಇಲ್ಲವೆ ಪ್ರಕಟಿಸಬೇಕೆಂಬ ದಿಲ್ಲಿಯ ಚೀಫ್ ಕಮಿಶನರ ಅನುಜ್ಞೆಯ ನೋರೆಗೆ ದೇವದಾಸ ಗಾಂಧಿಯವರೇ ಮೊದಲಾದವರು ಕೈದು ಮಾಡಲ್ಪಟ್ಟು ಜೆಜಿಸ್ಟ್ರೇಟರ ಬಳಿ ಅವರ ತನ್ನಿ ನಡೆದಾಗ ಅವರ ಮೇಲಿನ ಆರೋಪಕ್ಕೆ ರುಜುವಾತಿಲ್ಲೆಂದು ಬಿಡುಗಡೆಮಾಡಲ್ಪಟ್ಟರು ಈಗ ನಡೆಯುವ ಗಲಾಟೆಯು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಚಳವಳಕ್ಕೆ ಸಂಬಂಧಪಟ್ಟದೆಂಬುದಕ್ಕೆ ರುಜುವಾತಿಲ್ಲೆಂದೇ ಮೆಜಿಸ್ಟ್ರೇಟರ ತೀರ್ಮಾನ.

ಮದ್ರಾಸ್ ಸರಕಾರದ ಪ್ರಕಟನೆ.

ಈಗ ನಡೆಯುವ ಗಲಾಟೆಗಳೆಲ್ಲಾ ಕೆಲಮಂದಿ ಪುಂಡರ ಕೆಲಸವಲ್ಲವೆ ಅದು ಕಾಂಗ್ರೆಸಿನ ಕಾರ್ಯಕ್ರಮವಲ್ಲೆಂದು ಪ್ರಕಟಿಸಲಾಗಿದೆ. ಆದರೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಗುಂಟೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯವರಿಗೆ ಕೊಟ್ಟಿರುವ ಸೂಚನೆಗಳು, ಕಾಂಗ್ರೆಸಿನ ಕಾರ್ಯಕ್ರಮವು ಏನೆಂಬುದನ್ನು ವಿವಿತಪಡಿಸುತ್ತವೆ. ಆ ಪ್ರಕಾರ, ಟೆಲಿಗ್ರಾಫ್ ಮತ್ತು ಟೆಲಿಫೋನು ತಂತಿಗಳನ್ನು ಕಡಿದು ಹಾಕುವುದು. ರೈಲು ಕಂಬಿಗಳನ್ನು ಕಿತ್ತೊಗೆಯುವುದು. ಸೇತುವೆಗಳನ್ನು ಮುರಿದುಹಾಕುವುದು. ಟ್ರೈನುಗಳ ಎಲಾರ್ಮ್ ಚೈನುಗಳನ್ನೆಳೆಯುವುದು. ಟಿಕೆಟ್ಟಿಲ್ಲದೆ ಟ್ರೈನುಗಳಲ್ಲಿ ಸಂಚರಿಸುವುದು ಸರಕಾರಿ ನೌಕರರು ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಡುವಂತೆ ಬಲಾತ್ಕರಿಸುವುದು. ಹರತಾಳ ಆಚರಿಸುವುದು ಸೇರಿ ಶಾಂತಿ ಆಂಗಡಿಗಳ ಪಿಕೆಟಿಂಕ್ ಮಾಡುವುದು ಸರಕಾರದ ಯುದ್ಧ ಪ್ರಯತ್ನಕ್ಕೆ ತಡೆ ಮಾಡುವುದು ಕಾಂಗ್ರೆಸಿನ ಕಾರ್ಯಕ್ರಮವಾಗಿರುತ್ತದೆ. ತಮಿಳು ನಾಡು ಮತ್ತು ಕೇರಳ ವ್ಯಾಪ್ತಿಕ ಕಾಂಗ್ರೆಸ್ ಕಮಿಟಿಗಳು ಕೂಡಾ ಇದೇ ರೀತಿಯ ಸೂಚನೆಗಳನ್ನಿತ್ತಿರುತ್ತವೆ. ಬೊಂಬಾಯಿಯ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ನಷ್ಟೆಯ ಪೊಲೀಸ್ ಈ ಸೂಚನೆಗಳು ಕೊಡಲ್ಪಟ್ಟಿನೆಯೆಂದು ಮದ್ರಾಸ್ ಸರಕಾರವು ನೈಕಟ್ಯವೊಂದನ್ನು ಹೊರಡಿಸಿರುವುದ.

ಎಲ್ಲೆಲ್ಲಿಯೂ ಕಾಂಗ್ರೆಸ್ ವಾದಿಗಳ ದಸ್ತಗಿರಿ.

ಪ್ರತಿ ಪ್ರಾಂತದ ಜಿಲ್ಲೆ, ತಾಲೂಕು ಮತ್ತು ಹಳ್ಳಿಗಳಲ್ಲಿ ಕೊಡಾ ಕಾಂಗ್ರೆಸ್ ವಾದಿಗಳು ದಸ್ತಗಿರಿ ಮಾಡಲ್ಪಡುತ್ತಿದ್ದಾರೆ ಬೆಂಗಳೂರು, ಮದ್ರಾಸ್, ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿ ವಿದ್ಯಾರ್ಥಿಗಳು ಇನ್ನೂ ಮುಷ್ಕರ ಹಿಡಿದಿರುತ್ತಾರೆ. ಸೆಪ್ಟಂಬರ್ ತಾ. 1ರೊಳಗೆ ಬೊಂಬಾಯಿ ವಿದ್ಯಾರ್ಥಿಗಳು ತಮ್ಮ ಶಾಲೆ ಮತ್ತು ಕೊಲೆಜುಗಳಿಗೆ ಮರಳಿದ್ದರೆ ಜವರ ಹಸರನ್ನು ಪಟ್ಟಿಯಿಂದ ತೆಗೆಯಾಕುವ ಬಗ್ಗೆ ತೀರ್ಮಾನವನ್ನು ಸರಕಾರವು ಹೊರಡಿಸಿರುವುದ.

Notice.

Notice is hereby given that in any village in which damage is caused by crowds to Government buildings, Railway buildings or telegraph lines, the Government will impose a collective fine on the village for the amount of damage done under the Collective Fines Ordinance.

All adult villagers are warned that it is their duty to assist the Government to protect the Government and Railway property in their own area by keeping special guards. Merchants should bear in mind that if they lose railway facilities they will be able neither to receive nor despatch goods hereafter

E. M. Gawne.
Chief Secretary to Government
Madras,
19th August 1942.

ವಾರದ ವಿಶೇಷ ವಾರ್ತೆ

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಧೀರ್ಘ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಜಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ —

ಇ. ಎ. ಸ್ಯಾಮ್ಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಏಗರ್‌ನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

"ಬಡವರ ಬಂಧು"

The Friend of the Poor

DAILY

MANGALORE.

The above English Daily Newspaper will be out shortly with authorised telegraphic news

WATCH DATE.

Price: 3 pies each | Monthly 8 annas.

Publishers:
The Badavara Bandhu Printing Press, Ltd,
Bolur, MANGALORE.

NOTICE.

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

S. C. 135/42.

ವಿಷಯ ಯ ಶ್ರೀಮಾನೇಜ್ಞಾವಿನ ಸಂಳೆಯ ಬಗ್ಗೆ

ಅಳ್ಳಿಪ್ಪೆ M. ಪುಟ್ಟಣ್ಣ ಗೌಡ. ವಾದಿ.

ಸುಬ್ಬಾಯ ಕೊಡಿ 3ಜನರು ಪ್ರತಿವಾದಿಯು.

2ನೆ ಪ್ರತಿವಾದಿ ಶಂಕ್ಕಿಸಾಬ್ಬಾಜಯ್ಯ. ತಿಮ್ಮಕ್ಕ ಯ್ಯನವರ ಮಗ- ಪುತ್ತೂರು ತಾಲ್ಲು ಪಂಬೆತ್ತಾಡಿ ಗ್ರಾಮದ ಜೀವಿಯು, Post Sullia

ಪ್ರತಿವಾದಿಂದ ಬಹ ದಾವಾ ವಿಷಯಂದ ಪ್ರಾಮಿಸೋರಿ ಅ್ಯನಟು ಬರವಾಡಿಕೆಯಿಳ್ಳವರೆ ವಾದಿಯು ಮೇಲಿನ ದಾವೆ ಮಾಡಿ ಇದರ ನೋಟೀಸಿನ ತಕ್ಕ ಖ್ಯಾದೆ ತಾ. 24-9-1942ಕ್ಕೆ ಇಟ್ಟರು ತ್ತದೆ. ಆದ್ರಿಂದ ಸದ್ರಿ 2ನೆ ಪ್ರತಿವಾದಿಯು ತನ್ನ ಆಕ್ಷೇಪಣೆಗಳಿದ್ದರೆ ಇದಕ್ಕೆ ಮೂಲಕ ಈ ಕೋರ್ಟಿಗೆ ಆ ಖ್ಯಾದೆ ದಿವಸ 10 ಘಂಟೆಗೆ ಶಕ್ಷದೆ ಹಾಜ್ರಾಗಿ ಹೇಳಿಕೆಯಿತ್ತಿಕ್ಕಿದ್ದು. ಇಲ್ಲೆ ಕಪ್ಪಿನರೆ ಆತನನ್ನು ಕಿಷಾಯಿ ಎಂಬ ಮಾಡಿ ಮುಂದಿನ ತನ್ನಿಯಿಂದ ನೀರ್ಮಾನಿಸಲಾಗುವುದು- ಎಂತ ಈ ಕೋರ್ಟಿನ ವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. Ramachandra Rao.
Pleader for Plaintiff.

ತಾ. 23-8-1942.
Puttur, S. K

ದೇಶದ ಅನೇಕ ಕಡೆಗಳಲ್ಲಿ ಗಲಾಟೆ

ಬಿಹಾರಿನಲ್ಲಿ ಹಲವು ಸ್ಥಳಗಳಲ್ಲಿ ಗೋಳಿಬಾರು.

ಬಿಹಾರಿನಲ್ಲಿ ಹಲವು ಕಡೆಗಳಲ್ಲಿ, ರೈಲ್ವೆ ಕಂಬಿ, ಟೆಲಿಗ್ರಾಫ್ ಮತ್ತು ಟೆಲಿಫೋನು ತಂತಿಗಳನ್ನು ಕಡಿದು ಹಾಕುವ ಘಟನೆ ಆಯಿತು, ಪೋಲೀಸ್ ಸ್ಟೇಶನ್ ಮತ್ತು ಕೆನಲ್ ಆಫೀಸುಗಳನ್ನು ನಾಶ ಮಾಡುವ ಗಲಾಟೆಗಳು ಬಹಳ ವ್ಯಾಪಕವಾಗಿ ನಡೆಯುತ್ತಿವೆ ಸರಕಾರವು ಉಗ್ರದಂಡ ನೀತಿಯನ್ನು ಜಾರಿಗೆ ತಂದು ಈ ಗಲಾಟೆಗಳನ್ನು ನಿಗ್ರಹಿಸಲೆತ್ನಿಸುತ್ತಿದೆ. ರೈಲ್ವೆ ಕಂಬಿ ಮೊದಲಾದುವನ್ನು ಕಡಿಯುವುದನ್ನು ನೋಡಿದಾಕ್ಷಣ ಗುಂಡೆಸೆಯುವ, ಕಡಿಯುತ್ತಾಕಲ್ಪಟ್ಟ ರೈಲ್ವೇ ಕಂಬಿಗಳ ಸಮೀಪವಿರುವ ಜನತೆಯ ಮೇಲೆ ಸಾಮೂಹಿಕವಾಗಿ ಶಿಕ್ಷೆಯನ್ನು ವಿಧಿಸುವ, ಆಯುಧಗಳ ಸುರಕ್ಷಿತತೆಯ ಜವಾಬ್ದಾರಿಯನ್ನು ಆಸುಪಾಸಿನ ಜನರ ಮೇಲೆ ಹಾಕುವ, ಕಂಬಿ ಕಡಿದು ಹಾಕುವವರ ಪೆಸರನ್ನು ಸರಕಾರಕ್ಕೆ ತಿಳಿಸಿದವರಿಗೆ ರೂ. 1000ದ ವರೆಗೆ ಇನಾಮು ಕೊಡುವ, ಪ್ರಾಂತದಲ್ಲೆಲ್ಲಾ ಸ್ಪೆಶ್ಯಲ್ ಮಿಲಿಟರಿ ಕೋರ್ಟುಗಳನ್ನು ಸ್ಥಾಪಿಸಿ ಸಮ್ಮರಿ ರೀತಿಯಲ್ಲಿ ವಿಚಾರಣೆ ನಡೆಸಿ ಶಿಕ್ಷೆಯನ್ನು ಕೂಡಲೆ ಜಾರಿಗೆ ತರುವ ವ್ಯವಸ್ಥೆಯನ್ನು ಮಾಡಿರುತ್ತದೆ. ಭಾಗಲ್‌ಪುರವಲ್ಲಿ ಎಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸುಟ್ಟು ಹಾಕಲ್ಪಟ್ಟಿದೆ. ಘಾಟ್ಸಾಲ ಗಂಜಿನಲ್ಲಿ ಜನರು ಗೂಡ್ಸ್ ರೈಲ್ವೆಯೊಂದಕ್ಕೆ ಬೆಂಕಿ ಕೊಡುವಾಗ ಪೋಲೀಸರು ಗುಂಡು ಹಾರಿಸಿ 6 ಮಂದಿ ಕೊಲ್ಲಲ್ಪಟ್ಟರುತ್ತಾರೆ. ಶಾಪಾ ಎಂಬಲ್ಲಿ ಸೈನಿಕರು ಗುಂಡು ಹಾರಿಸಿ ಜನರನ್ನು ಚೆದರಿಸಿರುವರು; ಒಬ್ಬನು ಕೊಲ್ಲಲ್ಪಟ್ಟರುತ್ತಾನೆ. ದೊಮ್ಮಚಾಂಚ್ ಎಂಬಲ್ಲಿ ಜನರು ಮೆಜಿಸ್ಟ್ರೇಟರ ಮೇಲೆ ಬಿದ್ದಾಗ ಪೋಲೀಸರು ಗುಂಡು ಹಾರಿಸಿ ಇಬ್ಬರು ಕೊಲ್ಲಲ್ಪಟ್ಟಿರುವರು. ಬಕ್ಸಾರಿಗೆ ಸಾಗುವ ಟ್ರೈನೊಂದನ್ನು ಜನರು ತಡೆವಾಗ ಅವರ ಮೇಲೆ ಗುಂಡು ಹಾರಿಸಲ್ಪಟ್ಟು ಹಲವರು ಮೃತರಾಗಿರುವರು. ಬೆಹಿಯ ಎಂಬಲ್ಲಿ ರೈಲ್ವೇ ಗೋದಾಮಿನ ಮೇಲೆ ಜನರು ಧಾಳಿ ಇಟ್ಟಾಗ ಆಬ್ಕಾರಿ ಸಬ್‌ಇನ್‌ಸ್ಪೆಕ್ಟರೊಬ್ಬನು ಗುಂಡು ಹಾರಿಸಿ 6 ಮಂದಿಗೆ ಜಖಮಾಗಿರುವುದು. ಬಿಹಾರ ಎಂಬಲ್ಲಿ ಜನರು ಪೋಲೀಸ್ ಸ್ಟೇಶನಿನ ಮೇಲೆ ಧಾಳಿ ಇಟ್ಟಾಗ ಪೋಲೀಸರು ಗುಂಡು ಹಾರಿಸಿ 6 ಮಂದಿ ಗಾಯಗೊಂಡಿರುತ್ತಾರೆ. ಸಮಷ್ಟಿ ಪುರದಲ್ಲಿ ಸೈನಿಕರನ್ನೊಯ್ಯುವ ಟ್ರೈನನ್ನು ಜನರು ನಿಲ್ಲಿಸಿ ಗಲಾಟೆಮಾಡಿದಾಗ ಅವರ ಮೇಲೆ ಗೋಳಿಬಾರು ಮಾಡಲ್ಪಟ್ಟು 11 ಮಂದಿ ಕೊಲ್ಲಲ್ಪಟ್ಟು ಅನೇಕರು ಗಾಯಗೊಂಡಿರುವರೆಂದು ತಿಳಿದುಬರುತ್ತದೆ. ಖುಷಾ ಪುರದಲ್ಲಿ ಜನರು ಸೈನಿಕ ಟ್ರೈನೊಂದನ್ನು ತಡೆದಾಗ ಗುಂಡುಹಾರಿಸಲ್ಪಟ್ಟು 17 ಮಂದಿ ಕೊಲ್ಲಲ್ಪಟ್ಟಿರುತ್ತಾರೆ. ಮಧ್ಯ ಪ್ರಾಂತದ ಜಿಲ್ಲೆ ಎಂಬಲ್ಲಿ ಪೋಲೀಸರಿಗೂ ಜನರಿಗೂ ಘರ್ಷಣವುಂಟಾಗಿ ಪೋಲೀಸರು ಗುಂಡು ಹಾರಿಸಿ ಇಬ್ಬರು ಕೊಲ್ಲಲ್ಪಟ್ಟು ಸುಮಾರು 12 ಮಂದಿ ಗಾಯಗೊಂಡಿರುವರು. ಪಾರ್ಡ ಎಂಬಲ್ಲಿ ಮೆರವಣಿಗೆಯೊಂದನ್ನು ಚೆದರಿಸಲು ಪೋಲೀಸರು ಲಾತಿ ಪ್ರಹಾರ ಮಾಡಿ 25 ಮಂದಿ ಗಾಯಗೊಂಡಿರುವರು. ಅನೇಕ ಮಂದಿ ಕೈದುಮಾಡಲ್ಪಟ್ಟಿರುತ್ತಾರೆ. ಬೆಟಿಲಿನಲ್ಲಿ ಜನರು ಸರಕಾರದ ಟಂಬರ್ ಡಿಪೋವಿಗೆ ಬೆಂಕಿಕೊಡಲೆತ್ನಿಸಿದಾಗ ಪೋಲೀಸರು ಗುಂಡು ಹಾರಿಸಿ ಇಬ್ಬರು ಕೊಲ್ಲಲ್ಪಟ್ಟಿರುತ್ತಾರೆ. ಪರಸಿಯೋನಿ ಎಂಬಲ್ಲಿ ಪೋಲೀಸರು ಜನರ ಮೇಲೆ ಗುಂಡು ಹಾರಿಸಿ ಒಬ್ಬನು ಕೊಲ್ಲಲ್ಪಟ್ಟಿರುತ್ತಾನೆ.

ಸಂಯುಕ್ತ ಪ್ರಾಂತದ ಅಲಿಘಾರ್ ಜಿಲ್ಲೆಯ ಅಟ್ರೋಲಿ ಎಂಬಲ್ಲಿ ಚೆದರಿಲೊಪ್ಪದ ಜನತೆಯ ಮೇಲೆ ಪೋಲೀಸರು ಗುಂಡುಹಾರಿಸಿ ಒಬ್ಬನು ಕೊಲ್ಲಲ್ಪಟ್ಟಿರುತ್ತಾನೆ. ಗೋರಕಪುರದ ಡಿಪ್ಯುಟ್ಟಿ ಮೆಜಿಸ್ಟ್ರೇಟರು ಗೋರಕ ಪುರನ ಬರ್ಡ ಮುತ್ತು ಒಟ್ಟರಾನಿ ಎಂಬ ಸ್ಥಳಗಳ ಮೇಲೆ ಅನುಕ್ರಮವಾಗಿ ರೂ. 20,000 ಮತ್ತು 75,000ಗಳಷ್ಟರ ಜುಲ್ಮಾನೆಯನ್ನು ಜನತೆಯ ಮೇಲೆ ಹೊರಿಸಿರುವರು. ಸಹಜನ್ವಾಸ್ ರೈಲ್ವೇ ಸ್ಟೇಶನಿನ ಮೇಲೆ ಧಾಳಿಯಿಟ್ಟ ಜನತೆಯ ಮೇಲೆ ಪೋಲೀಸರು ಗುಂಡು ಹಾರಿಸಿ 6 ಮಂದಿ ಕೊಲ್ಲಲ್ಪಟ್ಟು 8 ಮಂದಿಗೆ ಬಹಳ ಪೆಟ್ಟಾಗಿರುವುದು. ಕೋನ ಪುರದಲ್ಲಿ ಮೆರವಣಿಗೆ ನಡಿಸಲೆತ್ನಿಸಿದ ಜನತೆಯ ಮೇಲೆ ಗುಂಡು ಹಾರಿಸಲಾಗಿದೆ. ಗೋರಕ ಪುರದಲ್ಲಿ ಮೆರವಣಿಗೆ ನಡಿಸಲೆತ್ನಿಸುತ್ತಿದ್ದವರ ಮೇಲೆ ಪೋಲೀಸರು ಗುಂಡು ಹಾರಿಸಿ ಇಬ್ಬರು ಕೊಲ್ಲಲ್ಪಟ್ಟಿರುತ್ತಾರೆ.

ಕಳೆದ ತಿಂಗಳ ತಾ. 23ರಲ್ಲಿ ಬಿಹಾರಿನ ಬೆಟ್ಟಾಯ ಎಂಬಲ್ಲಿ ಪೋಲೀಸರು ಜನತೆಯ ಮೇಲೆ 3 ಸಲ ಗುಂಡು ಹಾರಿಸಿ 6 ಮಂದಿ ಕೊಲ್ಲಲ್ಪಟ್ಟು, 38 ಮಂದಿ ಗಾಯಗೊಂಡಿರುತ್ತಾರೆ. ಜನರ ಗಲಾಟೆ ನಿಲ್ಲಿಸಲು ಮೋತಿ ಹಾರಿ, ಸಮಷ್ಟಿಪುರ ಮತ್ತು ಸಿತಾಮರ್ಹಿಗಳಿಗೆ ಸೈನಿಕರನ್ನು ಕಳುಹಿಸಲಾಗಿದೆ. ಬಿಹಾರಿನ ಹಲವು ಹಳ್ಳಿಗಳಲ್ಲಿ ಕೂಡಾ ಗಲಾಟೆಯೆದ್ದು ಪೋಲೀಸರು ಮತ್ತು ಸೈನಿಕರು ಗುಂಡು ಹಾರಿಸಬೇಕಾಗಿರುವುದು.

ನಾಗಪುರದಲ್ಲಿ ಮೆರವಣಿಗೆ ನಡಿಸಲೆತ್ನಿಸಿದುದಕ್ಕಾಗಿ ಆಗೋಸ್ತು ತಾ. 27 ಮತ್ತು 28ರಲ್ಲಿ 14 ಮಂದಿ ಕೈದು ಮಾಡಲ್ಪಟ್ಟಿರುತ್ತಾರೆ. ನಾಗಪುರ ಪಟ್ಟಣದಲ್ಲೇ ಈ ವರೆಗೆ ಒಟ್ಟು 450 ಮಂದಿ ಕೈದುಮಾಡಲ್ಪಟ್ಟಿರುತ್ತಾರೆ. ವಾರ್ಧದ ನವಭಾರತ ವಿದ್ಯಾಲಯ ಹಾಯಸ್ಕೂಲು ಮುಚ್ಚಲ್ಪಟ್ಟಿದೆ. ಮಹಿಳಾಶ್ರಮದ ಅಧ್ಯಕ್ಷೆಯರಾದ ಶ್ರೀಮತಿ ಮಾಲತಿ ಬಸ್ತಟ್ಟೆ, ಶ್ರೀಮತಿ ರತ್ನಮ್ಮ ದೇವಿಯರ 17 ಮಂದಿ ವಿದ್ಯಾರ್ಥಿನಿಯರೊಂದಿಗೆ ಕೈದು ಮಾಡಲ್ಪಟ್ಟಿರುತ್ತಾರೆ.

(ಸಚಿತ್ರ ವರದಿ ನೋಡಿರಿ).

ನೋಟೀಸು.

ಮಂಗ್ಳೂರು ಡಿ ಮು. ಕೋರ್ಟಿನಲ್ಲಿ.

S. C ನಂಬ್ರ 373/42.

ದಿ. ಫ್ಯಾನಿಲ್ ಪ್ರೆಸ್ ಲಿಮಿಟೆಡ್, ಬಂಗ್ಳೂರು ಇವ್ರ ಮೇನೇಜಿಂಗ್ ಡೈರೆಕ್ಟರ್ ಕೆ. ಆರ್. ಗುರ್ರಾವ್.

—ವಾದಿ.

ಮತ್ತು

1. ಬಾಳೆಟ್ಟು ಕಟ್ಟುಪಿಲ್ಲೆ ಮಗ-ನಂಗಾರ್ಲು ತಲಪಾಲು ಕೆಮರೆ ಗ್ರಾಮದಲ್ಲಿರುವವನ

—1ನೇ ಪ್ರತಿವಾದಿ.

2. ಬಿ ಪರಮೇಶ್ವರ ಉಡ್ಪ್ಯಾ,

—2ನೇ ಪ್ರತಿವಾದಿ.

ನೋಟ್ಸಿಂದ 1ನೇ ಪ್ರತಿವಾದಿ ಮೊದಲ ಸೆಟ್ಗೆ-ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿ ಮೇಲೆ ದಾಕ್ಲುಗೊಂಡಿದ ಮೇಲಣ ವ್ಯಾಜ್ಯದಲ್ಲಿ 1ನೇ ಪ್ರತಿವಾದಿಗೆ ಸಮ್ಮನ್ಸ್ ಜಾರಿಯಾಗಿ ಸದ್ರಿ 1ನೇ ಪ್ರತಿವಾದಿಯು ಹಾಜರಾಗಲು ತಾರೀಕು 11ನೇ ಸಪ್ಟೆಂಬ್ರ 1942 ರಲ್ಲು ತಪ್ಪಿ ಬಗ್ಗೆ ಇಟ್ಟುರುತ್ತದೆ 1ನೇ ಪ್ರತಿವಾದಿಗೆ ಏನಾದ್ರೂ ಉದಾಹರಣೆ ಕೊಡುವರೆ ಇದ್ದಲ್ಲಿ ಆ ದಿವ್ಸ ಹಗಲು 10 ಘಂಟೆಗೆ ಸದ್ರಿ 1ನೇ ಪ್ರತಿವಾದಿಯು ಖುದ್ದಾಗಿ ಯಾ ವಕೀಲ ದ್ವಾರಾಗ್ಲಿ ಕಾಜ್ಯಾಗಿ ಹೇಳಿಕೊಳ್ಳದಿದ್ದಲ್ಲಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ತಮ್ಮಿರುವದು

G. Narayana Rao,
Vakil for plaintiff

ಮಂಗ್ಳೂರು, ತಾ 28 8 '42

The Pangal Nayak Bank Limited.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶೇತ್ತ ಮೂಲಧನ ... ... ರೂ. 1,82,100-0- 0

ಕ್ಷೇಮ ನಿಧಿಗಳು ... ... ರೂ. 1,71,898-2-11

ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಾಂಗಾಡ್ ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.

ಮಾರಾಟಕ್ಕೆ ಯುಕ್ತವಾದ ದವಸಗಳ, ಚಿನ್ನಾಭರಣಗಳ, ಸದುಪಾಕರವಾದ ಇತರ ಭದ್ರತೆಗಳ ಮೇಲೂ ಡಿಮಾಂಡ್ ಸೋಡುಗಳ, ಬೇಲು ಮುದಿಗಳ ಮೇಲೂ ಚಕ್ಕ ವಡ್ಡಿಯ ಸಾಲಗಳು ವಡ್ಡಿಯ ಓವರ್ ಡ್ರಾಫ್ಟುಗಳು ತೃಪ್ತಿಕರವಾದ ಸುಲಭ ದರ್ಜೆಗಳಲ್ಲಿ ವರ್ತಕರಿಗೂ ಇತರರಿಗೂ ಈ ಬ್ಯಾಂಕಿನ ಪ್ರತಿ ಶಾಖೆಯಲ್ಲಿಯೂ ಸಿಗಬಲ್ಲವು.

ತೇಪಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೊಟಿಸಾ ಅಥವಾ ಪತ್ರದ್ವಾರಾ ಸಂಪರ್ಕ ಶಾಖೆಯಲ್ಲಿ ವಿಚಾರಿರಿ.

UDIPI, 16th April.

ಚಿಂತಿಸುತ್ತಿರುವುದೇಕೆ?

ವಿಮಾನಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುಳಿದವರಲ್ಲಿ ವಿಮಾನಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ನುರಣವುಂಟಾಗುವ ಅವಾಯವನ್ನು ಸಂಪೂರ್ಣ ಒಳಗೊಂಡ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಸ್ವೀತಿಸುವುದೇ ಸಲಹಾಯಕವಾಗಿ

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಇದರಲ್ಲಿ ಕೂಡಲೆ ಪೋಲಿಸಿಯನ್ನು ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗಿರುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಡ ವಿಳಾಸ್ಕಕ್ಕೆ ಬರೆಕೊಳ್ಳಿರಿ.

ಕೊಚ್ಚಿನ್‌ಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳೆ ಸಮೇತ ದಕ್ಷಿಣ ಹಿಂದುಸ್ಥಾನದ
ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಆವರ ಅವರ ಈ ಕೆಳಗಡ ಆಫೀಸುಗಳಿಗೆ ಬರಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮಡ್ಡಾಳು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

The Bombay Life Insurance Company Limited.

ನೋಟೀಸು.

ಪುತ್ತೂರು ಡಿ ಮು ಕೋರ್ಟಿನಲ್ಲಿ

S. C. 167/42

ಚಿಕ್ಕೆ ಕೃಷ್ಣ — ವಾದಿ.

&

ಪ್ರತಿವಾದಿ— ಮುಂಡೋಡಿ ಕೆಂಚಪ್ಪ ಗೌಡ-ತಿಮ್ಮಪ್ಪ ಗೌಡರ ಮಗ, ನೇವ ಚೆಳ್ಳಗ್ಗಾವುದ ಮುಂಡೋಡಿಯಲ್ಲಿರುವ, ಪುತ್ತೂರು ಪುಲಾಬು ದ ಕ. ಜಿಲ್ಲಾ.

ಪ್ರತಿವಾದಿ ಪ್ರತಿವಾದಿಯಿಂದ ಬಹಾ ಅಸ್ಲು ಬ ರೂ. 80-0 0ಕ್ಕೆ ವ ಮುಂದಣ ಖರ್ಚಿಗೆ ತೀರುವಳಿಗಾಗಿ ಪ್ರತಿವಾದಿಯು ಸಾಮಿಗೆ ಹಾಜರಾಗಿ ಉತ್ತರ ಹೇಳಿದಾವನೆಯು ತಾ. 10-9-42ಕ್ಕೆ ಇಟ್ಟುರುವುದರಿಂದ ನೀತಿ ನೇಮಾವಳಿಗಳ ಅಳ್ವೇಪಣೆಗಳನ್ವಯ ನೀತಿಲ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟಿಗೆ ಮುಂಚಾಗಿ ಉದಹರಿಸಿದ್ದರೆ ನಿಮ್ಮನ್ನು ಪ್ರತಿವಾದಿಯು ತಾ. ನಿರ್ಣಾಕ್ಷೀದೇತಂತ ಈ ಮಾಹಿತಿಗೆ ತಿಳಿಸಿಯದೆ.

(Sd) **M. Pandarik Bhat,**
Pleader for Plaintiff

ಪುತ್ತೂರು 28-8-42.

The Canara Banking Corporation Limited.

(Incorporated in British India with limited liability).

ESTD: 1906.

Our rates of interest on deposits from 7-8-1942.

1.	Current	1 % p. a. from Jan. to June. ½ % p. a. from July to Dec.
2.	Savings Bank	2 % p. a.
3.	Short-term	1½ % p. a.
4.	Fixed 3 months	1½ % p. a.
	6 ,,	2 % p. a.
	9 ,,	2½ % p. a.
	12 ,,	3 % p. a.
	24 ,,	3½ % p. a.

Advances against approved securities made at very competitive rates.

ಉಡುಪಿ, ಗುರುವಾರ, ೩-೯-೧೯೪೨

ರಶ್ಯದಲ್ಲಿ
ಅಶಾಜನಕ ಪರಿಸ್ಥಿತಿ.

ಇತ್ತಲಾಗಿ ರಶ್ಯದ ಪರಿಸ್ಥಿತಿಯು ಅತ್ಯಂತ ನಿರಾಶಾಜನಕವಿದ್ದಿತು. ಉಕ್ರೈನಿನ ಗೋಧಿ, ಡೋನ್ ನದಿ ಪ್ರದೇಶದ ಇದ್ದಲು, ಕ್ರಿಮೊಯಿರೊಗಿನ ಕಬ್ಬಿಣ, ಬೈಕೊವಾ ಮತ್ತು ಗ್ರೊಜ್ನಿ ಎಣ್ಣೆ ಪ್ರದೇಶಗಳಿಂದ ಪ್ರತಿವರ್ಷ ದೊರೆಯುವ ೨ ಮಿಲ್ಯ ಟನ್ ಎಣ್ಣೆಯನ್ನು ಕಳಕೊಳ್ಳುವ ಪರಿಸ್ಥಿತಿಯು ಕೆಂಪುಸೇನೆಯ ದೀರ್ಘ ಹೋರಾಟ ರಕ್ಕಿಯನ್ನೇ ಕುಂಠಿತಗೊಳಿಸುವಂತಹ ದೆಂಬುದರಲ್ಲಿ ಸಂದೇಹವೇ ಇಲ್ಲ. ಮಾತ್ರವಲ್ಲದೆ ಓಲ್ಗಾ ನದಿಯ ಆತಿ ದೊಡ್ಡ ಉಕ್ಕಿನ ನಗರವಾದ ಸ್ಟೆಲಿನ್‌ಗ್ರಾಡಿನ ಪತನವು ಕೆಲವೇ ದಿನಗಳ ಪ್ರಶ್ನೆ ಎಂಬಂತಿದ್ದಿತು. ಸ್ಟೆಲಿನ್‌ಗ್ರಾಡು ಜರ್ಮನರ ವಶವಾಯಿತೆಂದರೆ ಆ ಮೇಲೆ ಉತ್ತರ ಮತ್ತು ಗಣ್ಣಿನ ಸಂಬಂಧವೇ ಕಡಿದು ಮಾಸ್ಕೋ ಲ್ಪಟ್ಟು ಸೋವಿಯೆಟ್ ರಶ್ಯದ ಸೊಂಟವೇ ಮುರಿದು ಹೋಗುವಂತಾಗುತ್ತಿತ್ತು. ಮತ್ತೂ ದೊಡ್ಡ ಗಂಡಾಂತರದ ಸಂಗತಿಯೆಂದರೆ, ರಶ್ಯವು ಒಂಟಿಯಾಗಿ, ಇಡೀ ಯುರೋಪಿನಿಂದ ಸೇನಾ ಸೂಯ ಪಡೆಯವ ಹಿಟ್ಲರನಷ್ಟು ಸಮಯದವರೆಗೆ ವಿರೋಧಿಸುವುದು? ಬ್ರಿಟನು ಮತ್ತು ಅಮೆರಿಕಗಳು ಸಶ್ಚಿಮದಲ್ಲಿ ಎರಡನೇ ರಣರಂಗ ತೆರೆಯುವುದಾದರೂ ಯಾವಾಗ? ಎಂಬ ಒಂದು ಬಗೆಯ ನಿರುತ್ಸಾಹವು ರಶ್ಯನ್ನಲ್ಲಿ ತಲೆದೋರಹತ್ತಿತ್ತು. ರಶ್ಯವು ಜರ್ಮನಿಯೊಂದಿಗೆ ಸ್ವತ್ಯೇಕವಾಗಿ ಸಂಧಿ ಮಾಡಿಕೊಳ್ಳುವುದೆಂಬ ಸುದ್ದಿ ಕೂಡಾ ಸುಳಿದಾಡತೊಡಗಿತ್ತು. ಇಂತಹ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿ ಚರ್ಚಿಲ್ಲರು ಮೋಸ್ಕೋ ನಗರಕ್ಕೆ ಹೋಗಿ ಸ್ಟೆಲಿನರೊಡನೆ ಮಾತಾಡಿ ರಶ್ಯನರಲ್ಲಿ ನವ ಉತ್ಸಾಹವನ್ನುಂಟುಮಾಡಿರುವರೆಂದೇ ಹೇಳಬಹುದು. ಈ ಸಂದರ್ಶನದ ಸಂದರ್ಭದಲ್ಲೇ ಎಂಬಂತೆ ನಡೆದ ಫ್ರೆಂಚ್ ಕಾವಳಿಯ ಡಯಪ್ಪೆ ಪಟ್ಟಣದ ಮೇಲೆ ಮಿತ್ರ ರಾಷ್ಟ್ರಗಳು ನಡೆಸಿದ ಅತಿದೊಡ್ಡ ನೆಲಧಾಳಿಯು ರಶ್ಯನರನ್ನು ಹುರುಪುಗೊಳಿಸಿತು. ಜರ್ಮನರು ತಲ್ಲಣಗೊಳ್ಳುವಂತಾಯಿತು.

ಇಂದಿಗೆ ರಶ್ಯದ ಯುದ್ಧದ ಪರಿಸ್ಥಿತಿಯು ಆರ್ಕಿಮಿಡಿಯನ್ನುಂಟುಮಾಡಿರುವುದೆಂದು ಖಂಡಿತವಾಗಿ ಹೇಳಬಹುದು. ಗಂಡಾಂತರವು ರಶ್ಯನರನ್ನು ಪುಟಿಕ್ಕೆ ಹಚ್ಚಿ ಮತ್ತಷ್ಟು ಧೈರ್ಯ, ಸ್ಥೈರ್ಯವು ಳ್ಳನರನ್ನಾಗಿ ಮಾಡುತ್ತಿರುವಂತಿದೆ. ಭಯಂಕರ ಗಂಡಾಂತರದೆದೆ ಪೆಟ್ಟ ವಿಜಯ ಧ್ವಜ ಹಾರಿಸುವ ರಶ್ಯನರ ಅಸಾಧಾರಣ ಶಕ್ತಿ, ಸಾಹಸ ಮತು ಧೀಸ್ಥೈರ್ಯಗಳು ಜರ್ಮನರನ್ನೂ ವಿಸ್ಮಯಗೊಳಿಸಿ ಲೋಕದಲ್ಲಿ ಸಾನಂದರ್ಭವನ್ನುಂಟುಮಾಡಿರುತ್ತದೆ. ಸ್ಟೆಲಿನ್‌ಗ್ರಾಡ್, ಮೋಸ್ಕೋಗಳಂತೆಯೇ ಸ್ಟೆಲಿನ್‌ಗ್ರಾಡಿನ ಇತಿಹಾಸವೂ ಅಗುವ ಸಂಭವ ತೋರುತ್ತದೆ. ಜರ್ಮನರಿಗೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಲೆನಿನ್‌ಗ್ರಾಡಿನಿಂದ ಜರ್ಮನರನ್ನು ಹಿಂದಕ್ಕಟ್ಟಲು ರಶ್ಯನರಿಂದು ವ್ಯಾಪಕ ಹೊಗೆ ತೊರೆದು ಭೀಕರ ಹೋರಾಟ ನಡೆಸುತ್ತಿದ್ದಾರೆ. ಜರ್ಮನರ ಪ್ರಚಂಡ ವೇಗವು ಸ್ಟೆಲಿನ್‌ಗ್ರಾಡಿನ ದ್ವಾರದಲ್ಲಿ ತಡೆಗಟ್ಟಲ್ಪಟ್ಟಿದೆ ಸ್ಟೆಲಿನ್‌ಗ್ರಾವನ್ನು ತಾವು ಇಂತಹ ಸನುಯಕ್ಕೇನೇ ಪ್ರಯೋಜಿಸುವೆವೆಂದು ತುತ್ತೂರಿ ಊದಿದ ಗೊಬ್ಬೆಲ್ಸರು ಮುಖ ಭಂಗಿತರಾಗಿ ಆಸಸ್ಯರನೆಬ್ಬಿಸಬೇಕಾಗಿ ಎಸ್ ಎಂದೂ ಎಲ್ಲಿಯೂ ನಡೆಯದ ಭೀಷಣ ಹೋರಾಟವೀಗ ಸ್ಟೆಲಿನ್‌ಗ್ರಾಡಿನ ಬಳ ನಡೆಯುತ್ತಿದೆ. ಜರ್ಮನರು ಮೋಸ್ಕೋ ತಿ ಸೋತಿರುವಂತಿದೆ ಆದರೆ ರಶ್ಯನರು ನವಉತ್ಸಾಹದಿಂದ ಇವರ ಮೇಲೆ ಪ್ರತಿ ಧಾಳಿ ನಡೆಸುತ್ತಿದ್ದಾರೆ. ಆದುದರಿಂದ ಪರಿಸ್ಥಿತಿಯು ರಶ್ಯನರಿಗೆ ಅನುಕೂಲವಾಗುತ್ತಿದೆ. ಇನ್ನಾವತೂ ಜರ್ಮನರ ಕೊಸ ಹೊಸ ಸೇನೆ ತಂದು ಭಯಂಕರ ಹೋರಾಟ ನಡೆಸುತ್ತಿವ್ವಾರೆ. ದಕ್ಷಿಣ ಮತ್ತು ಪಶ್ಚಿಮ ಕೊಕಸಸಿನಲ್ಲಿಯೂ ಜರ್ಮನರು ಕೆಲ ಪಟ್ಟುಗೆ ತಡೆಗಟ್ಟಲ್ಪಟ್ಟಿರುತ್ತಾರೆ.

ಇನ್ನೂ ಉತ್ಸಾಹಜನಕ ಸುದ್ದಿಯು ಮೋಸ್ಕೋ ರಣರಂಗದಿಂದ ಬಂದಿದೆ. ಆಲ್ಲಿಯ ವೀರ ಸೇನಾನಿ ಜನರಲ್ ಝುಕು ವ್‌ರವರು, ಮೋಸ್ಕೊ ರಣರಂಗದ ಜರ್ಮನರ ಸುಭದ್ರವ್ಯೂಹವನ್ನು ಅತ್ಯಂತ ಸಾಹಸದಿಂದ ಭೇದಿಸಿ ಅವರ ಹೃದಯ ಪ್ರದೇಶದ ಮೇಟೆಯೇಳ್ ಗಾಳಿಯಿಟ್ಟು ಜರ್ಮನರಿಗೆ ದೊಡ್ಡ ಪಾಮೊಂದು ಅಪಜಯವನ್ನುಂಟುಮಾಡಿರುವ್ವಾರೆ. ರಿಜವ್ ಪಟ್ಟಣವನ್ನು ಜರ್ಮನರು ಅತ್ಯಂತ ಭದ್ರವಡಿಸಿ ಅಲ್ಲಿಂದ ಮೋಸ್ಕೋ ನಗರವ ಮೇಲೆ ಧಾಳಿ ನಡಿಸುವುದರಲ್ಲಿದ್ದರು. ರಿಜವನ್ನು ವಶಪಡಿಸಿಕೊಳ್ಳ ಬೇಕೆಂದು ರಶ್ಯನರ್ ಕಾಣ ೨ ತಿಂಗಳುಗಳಿಂದ ಪ್ರಯತ್ನಿಸುತ್ತಿದ್ದರು. ಈಗ ಅವರು ಆ ಪ್ರಯತ್ನದಲ್ಲಿ ಜಯಶೀಲರಾಗಿರುವುದು, ಆದರೆ ಹೋರಾಟ ರಕ್ಕಿ ಮತ್ತು ಒಲವನ್ನು ಸಿದ್ಧಗೊಳಿಸುವುದು ಕೆಂಪು ಸೈನಿಕರಿಗೆ ರಿಜುವ ಪಟ್ಟಣವೊಳಕ್ಕೆ ಪ್ರವೇಶ ಆದರ ಮಧ್ಯದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ರಶ್ಯನರು ಮುಂದೊತ್ತುತ್ತಿದ್ದಾರೆ. ಇದರಿಂದ ಮೋಸ್ಕೋ ನಗರಕ್ಕಿದ್ದ ದೊಡ್ಡ ಅಪಾಯವೊಂದು ದೂರವಾದಂತಾಯಿತು. ಮಧ್ಯ ರಣರಂಗದ ಕೆಲೂಗದಲ್ಲಿಯೂ, ಲೆನಿನ್‌ಗ್ರಾಡಿನ ಒಡೋಗ ಕರೋವರ ಪ್ರದೇಶದಲ್ಲಿಯೂ ರಶ್ಯನರು ಜರ್ಮನರ ಮೇಲೀರಿ ಹೋಗಿ ಕಾದಾಡಿ ಅವರನ್ನು ಹಿಮ್ಮೆಟ್ಟಿಸಿರುತ್ತಾರೆ. ಮೋಸ್ಕೋ ಮತ್ತು ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಕೆಲಕಾಲ ತಟಸ್ಥವಿದ್ದು, ತಮ್ಮ ಸಂಪೂರ್ಣ ಸೇನಾ ಶಕ್ತಿಯನ್ನು ದಕ್ಷಿಣದಲ್ಲಿ ಕೇಂದ್ರೀಕರಿಸಿ, ಡೋನ್ ನದಿ ಪ್ರದೇಶ ಮತ್ತು ಕೊಕಸಸನ್ನು ಗೆದ್ದು ಆ ಮೇಲೆ ಎಣ್ಣೆ ಮತ್ತು ಆಹಾರ ಸಾಮಾಗ್ರಿಗಳ ಕೊರತೆಗೀಡಾಗುವ ಉತ್ತರದ ಸೋವಿಯೆಟ್ ಸೇನೆಯನ್ನು ಸದೆಬಡಿಯುವಾದೇ ಜರ್ಮನರ ಪ್ಲೇನಾಗಿತ್ತು. ಆದರೆ ಹಾಗೆ ಮಾಡಲು ರಶ್ಯನರು ಬಿಡುವ ಹಾಗಿಲ್ಲೆಂಬುದು ಜನರಲ್ ಝುಕುವ್‌ರವರ ಜಯಶೀಲ ಧಾಳಿಯು ಶ್ರುತಪಡಿಸುವುದು. ಆದರೆ ಈ ಧಾಳಿಯಿಂದಾಗಿ ಸ್ಟೆಲಿನ್‌ಗ್ರಾಡ್ ಮತ್ತು ಕೊಕಸಸಿನ ಮೇಲಿನ ಜರ್ಮನರ ಒತ್ತಾಟವು ಕಡಿಮೆಯಾಗುವಂತಾಗುವುದೇ? ರಶ್ಯನರು ತಾವೇ ಎರಡನೇ ರಣರಂಗ ತೆರೆದಿರುವರೇ ಎಂಬುದೀಗ ಮುಖ್ಯ ಪ್ರಶ್ನೆ. ರಿಯಾನಿನಿಂದ ಸ್ಟೆಲಿನ್‌ಗ್ರಾಡು 700 ಮೈಲು ದೂರವಿದೆ. ಆದುದರಿಂದ ಒಂದು ರಣರಂಗದಿಂದ ಇನ್ನೊಂದೆಡೆಗೆ ಶೀಘ್ರವಾಗಿ ಸೇನೆಯು ಕಳುಹಿಸಲ್ಪಡುವ ಸಂಭವನಿಲ್ಲ ಆದರೆ ಸ್ಟೆಲಿನ್‌ಗ್ರಾಡಿನ ಸೇಟುನಲ್ಲಿ ಜರ್ಮನರು ಜಯಶೀಲವಾಗಿ ತಡೆಗಟ್ಟಲ್ಪಟ್ಟು, ನ್ಯೂನ ಮತ್ತು ಉತ್ತರ ರಣರಂಗಗಳಲ್ಲಿ ರಶ್ಯನರು ಒತ್ತಾಟವು ಒಲವಾದರೆ ಯುದ್ಧ ಪರಿಸ್ಥಿತಿಯಲ್ಲಿ ವ್ಯಾಮುಖ್ಯವಾಗಬಹುದಾದ ಬೆಳವಣಿಗೆಗಳು ಗದಿರಲಾರವು.

ರಶ್ಯನರ ಆಡಿದ ಪ್ರತಿಜ್ಞೆಯಂತೆ ಮಾತೂ ನಿಜವೆಂಬುದೀಗ ಸಿದ್ಧವಾಗಿದೆ ಜರ್ಮನರನ್ನು ಜಯಶೀಲವಾಗಿ ಪ್ರತಿಭಟಿಸಿ, ಸಾಧ್ಯವಾದಷ್ಟೆಲ್ಲಾ ಅವರ ಮೇಲೆ ಪ್ರತಿಧಾಳಿ ನಡಿಸುವ ಸಾಹಸ ಮಾತ್ರ, ಆವರು ತಲ್ಲಣಗೊಳ್ಳುವಂತಹ ಪರಿಸ್ಥಿಯನ್ನುಂಟುಮಾಡಿ ಕೆಂಪು ಸೇನೆಯು ಇಂದು ಅವರ ಮುಖಂಡರ ಭಯವನ್ನೆ ಹುಟ್ಟಿಸಿರುವುದು. ರಶ್ಯವು ಆತಿ ಹೆಚ್ಚಿನ ರಿಸರ್ವ್ ಸೇನೆಯನ್ನು ಹಿಂದಿಟ್ಟುಕೊಂಡಿರುವುದೆಂಬುದೂ, ಸೋವಿಯೆಟ್ ಸೇನಾನಾಯಕರು ಬಲು ದಕ್ಷ ಯುತ್ತಂತ್ರಜ್ಞರಿರುವರೆಂಬುದೂ ಇಂದಿಗೆ ಸ್ಪಷ್ಟವಾಗಿರುವುದು. ಆದರೆ ರಶ್ಯವಂತೆಯೇ ಬ್ರಿಟನು ಮತ್ತು ಅಮೆರಿಕಗಳೂ ತಮ್ಮ ಮಿಲಿನ ಕರ್ತವ್ಯ ಮಾಡಿದಲ್ಲಿ ಈ ಯುದ್ಧವು ಸರ್ವಸಾಮಾನ್ಯ ನಿರೀಕ್ಷಿಸಿಗಿಂತಲೂ ಬೇಗನೆ ತೊನೆಗೊಳ್ಳಬಹುದು. ಬರುವ ಚಳಿಗಾಲವಲ್ಲೇ ಅವರೆ ಜಯವೂ ಸಿದ್ಧಿಸಿಹಾಗುವಂತಾಗಬಹುದು. ಸ್ಟೆಲಿನ್ ಸುತ್ತ ಚರ್ಚಿಲ್ಲರ ಸಾಹಸಕತೆಯ ಹಿನ್ನಾಮನಾಗಿಯಾದರೂ ಮಿತ್ರ ರಾಷ್ಟ್ರಗಳು ಜೊಗಸೆ ಸತ್ವವಂದಲ್ಲಿ ಎರಡನೇ ರಣರಂಗ ತೆರೆಯುವಂತಾದರೆ ಜರ್ಮನರು ದೊಡ್ಡ ಬುಧಯ ಸಂಕಟದಲ್ಲಿ ಬಿದ್ದು ಉತ್ಸಾಹ ಕುಂದಿ ಕಟ್ಟಕಡೆಗೆ ಹಿಟ್ಲರರ ಪತನವಾಗಬಹುದೆಂದು ಆಶಿಸಬಹುದಾಗಿದೆ.

(ಆನೇ ಪುಟದಿಂದ ಮುಂದುವರಿದುದು)

ಸಂಯುಕ್ತ ಪ್ರಾಂತದ ಹಲವು ಹೆಳ್ಳಿಗಳಲ್ಲಿ ಗಲಾಟೆಗಳು ನಡೆದು ಪೋಲೀಸರು ಗುಂಡುಹಾರಿಸಬೇಕಾಗಿ ಬಂದಿದೆ. ಗೋರಕ ಪುರ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಇನ್ನೂ ಗಲಾಟೆಗಳು ನಡೆಯುತ್ತಿವೆ.

ಬೊಂಬಾಯಿ ಪ್ರಾಂತದ ಪೂರ್ವ ಖಾಂದೇಶಿನ ಅಮೋಡ ಎಂಬ ಹಳ್ಳಿಯ ಮೇಲೆ ರೂ. 5000 ಜುಲ್ಮಾನೆ ವಿಧಿಸಲಾಗಿದೆ. ರಾಜ ಕೋಟೆಯಲ್ಲಿ 10 ಮಂದಿ ವಿದ್ಯಾರ್ಥಿಗಳು ಕೈದುಮಾಡಲ್ಪಟ್ಟಿರುತ್ತಾರೆ. ಅಹಮ್ಮದಾಬಾದಿನಲ್ಲಿ ಆಗೊಸ್ತು ತಾ. ೫ನೇಯಲ್ಲಿ ೬ ಚಿಕ್ಕ ಮೆರವಣಿಗೆಗಳು ನಡೆದಾಗ ಪೋಲೀಸರು ಲಾತಿ ಪ್ರಹರ ಮಾಡಿ ಚೆದರಿಸಿ 22 ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ. ಹುಬ್ಬಳ್ಳಿ, ಗದಗ ಮೊದಲಾದ ಪಟ್ಟಣಗಳಲ್ಲಿ ಮೆರವಣಿಗೆ ನಡಿಸಿದುದಕ್ಕಾಗಿ ಹಲವರು ಕೈದು ಮಾಡಲ್ಪಟ್ಟಿರುತ್ತಾರೆ.

ಒರಿಸ್ಸದ ಬಾಲಸೂರ್ ಜಿಲ್ಲೆಯ 12 ಹಳ್ಳಿಗಳ ಮೇಲೆ ರೂ. 6006 ಜುಲ್ಮಾನೆ ಹೊರಿಸಲಾಗಿದೆ. ಕಟ್ಟಕ್ ಜಿಲ್ಲೆಯ 1 ಹಳ್ಳಿಗಳ ಮೇಲೆ ರೂ. 5000 ಜುಲ್ಮಾನೆ ಹಾಕಲಾಗಿದೆ. ಒರಿಸ್ಸ ಎಸೆಂಬ್ಲಿಯ ಸೀಟಿಂದಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸಿನ ಪರವಾಗಿ ನಿಂತ ಹರಿಜನ ಉಮೇದ್ವಾರಿಯಾದ ಶ್ರೀ ಸಂತಾನ ಕುಮಾರ ದಾಸರಿಗೆ ೧೦೫೭ ಮತ್ತು ಮಾಜಿಪಕ್ಷದ ಹರಿಜನ ವಿರೋಧಿ ಶ್ರೀ. ರಾಮಚಂದ್ರ ನ ಪರಿಗೆ ಕೇವಲ ೬೧೬ ಓಟು. ಮೊತ್ತಿರುವುದು ಶ್ರೀ. ಸಂತಾನ ಕುಮಾರ ದಾಸರು ಜಯಪುರದಲ್ಲಿ ಪಿಕೆಟಿಂಗ್ ನಡಿಸಿದ ನಿಮಿತ್ತ ಕೈದುಮಾಡಲ್ಪಟ್ಟು ಸೆರೆಮನೆಯಲ್ಲಿರುವರು. ಈ ಚುನಾವಣೆಯಿಂದಾಗಿ ಒರಿಸ್ಸ ಎಸೆಂಬ್ಲಿಯ ೬೦ ಮಂದಿ ಸದಸ್ಯರ ಪೈಕಿ 31 ಸೀಟು ಕಾಂಗ್ರೆಸಿಗೆ ದೊರೆತು ಮಂತ್ರಿ ಪಕ್ಷಕ್ಕೆ ಬಹುಪಕ್ಷದ ಬೆಂಬಲವೇ ಇಲ್ಲವಾಗಿರುವುದು.

ಕೃತಜ್ಞತಾ ಪರ್ಣ.

'I am offering my humble thanks through the Columns of this paper to the numerous condolens letters that I and my wife recieved on behalf of our dear daughter Sarala Devi who passed away on 18 8 1942.

We are also gratful to all the numerous ladies and gentlemen and students of the different institutions who came to bless the child on her death bed.

K. U. Shetty.
Advocate Mangalore

ಕಾ. 18-8-42ರಲ್ಲಿ ನಿಧನ ಹೊಂದಿದ ನಮ್ಮ ಪ್ರೀತಿಯ ಪುತ್ರಿ ಸರಳ ದೇವಿಯ ಅಗಲಿಕೆ ನಿಮಿತ್ತ ನಮಗೂ ನಮ್ಮ ಸಹ ಧರ್ಮಿಣಿಗೂ ಹಲವು ಸಂತಾಪ ಸೂಚಕ ಪತ್ರಗಳನ್ನು ಕಳಿಸಿತ್ತಿರುವುದಕ್ಕಾಗಿ ನಾವು ಪತ್ರಿಕೆಯ ಮುಖಾಲಕ ನಮ್ಮ ಹೃದಯೋದ್ಗಾರವನ್ನು ಅರಿಕೆ ಮಾಡುತ್ತೇವೆ. ಪ್ರಸಕ್ತ ಸಂದರ್ಭದಲ್ಲಿ ಪತ್ರಗಳನ್ನು ಬರೆಯಲಾಗದಿದ್ದಾಗ ಆವರೆಲ್ಲ ಆಕಸ್ಮಿಕವಿಲ್ಲವೆಂದು ಸಕಲ ಸಜ್ಜನ ಮಹಿಳೆಯರಿಗೂ ಆಸೇಷ ವಿದ್ಯಾರ್ಥಿಗಳಿಗೂ ನಾವು ಋಣಕೃತಜ್ಞರಾಗಿದ್ದೇವೆ

ಕೆ. ಉಗ್ಗಪ್ಪ ಶೆಟ್ಟಿ.
ಎಣ್ಣೆಕಲ್ಲು.

ಸ್ಟೆಲಿನ್‌ಗ್ರಾಡಿನ ದ್ವಾರದಲ್ಲಿ ಘೋರ ಯುದ್ಧ.

ಸ್ಟೆಲಿನ್‌ಗ್ರಾಡಿನ ಯುದ್ಧ.

ಸ್ಟೆಲಿನ್ ಗ್ರಾಡಿನ ಯುದ್ಧವು ಯಥಾ ಪ್ರಕಾರ ಪ್ರಚಂಡ ಪ್ರಾಣ ಘೋರವಾಗಿ ನಡೆಯುತ್ತಿರುವುದು. ಅದರ ಉತ್ತರ ಪಟ್ಟಣದಲ್ಲಿ ಕೈಟ್ಸ್ಲ್ ಕಾಯದಲ್ಲಿ, ಜರ್ಮನರು ತಮಗುಂಟಾಗುವ ಹಾನಿಯನ್ನು ಲೇಶಮಾತ್ರವೂ ಗಣಿಸದೆ ಹೆಚ್ಚಿಚ್ಚಾಗಿ ಸೇನೆ, ಟೇಂಕ್ ಮತ್ತು ಡೈವ್ ಬೋಂಬರುಗಳನ್ನು ಪಠೋಸಿ ಮುಂದೊತ್ತುತ್ತಿದ್ದಾರೆ ಆದರೆ ರಷ್ಯನರು ವಿಸ್ಮಯಕರ ಸಾಹಸದಿಂದ ಅವರನ್ನು ತಡೆಗಟ್ಟುತ್ತಿದ್ದಾರೆ. ರಷಗಳ ರಾತಿ ರಾತಿಯೇ ರಣರಂಗದಲ್ಲಿ ಬಿದ್ದು ಕೊಳೆಯುತ್ತಿವೆ. ಜರ್ಮನರ ರಷಗಳನ್ನು ತೆಗೆಯುವ ಗೊಡವೆಗೇನೇ ಅವರು ಹೋಗುವುದಿಲ್ಲ. ಮಧ್ಯದಲ್ಲಿ ಡೋನ್ ನದಿ ಬಾಗಿಲ್ಲ ಕೆಂಪು ಸೇನೆಯು ಇಟಲಿಯಾನ ಸೇನೆಯನ್ನು ಕಿಂದ ಕ್ಕಟ್ಟಿ ೩ ಹಳ್ಳಿಗಳನ್ನು ಗೆದ್ದಿರುತ್ತದೆ. ಸ್ಟೆಲಿನ್ ಗ್ರಾಡಿನ ದಕ್ಷಿಣ ಪಶ್ಚಿಮದ ಕೊಟ್ಟಿಲ್ಲಿಕೋವೊ ರಣರಂಗದ ಸದ್ಯಸ್ಥಿತಿಯೇನೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ ಇಲ್ಲಿ ಜರ್ಮನರು ರಷ್ಯನರ ಒಳ ಸೇನಾ ವ್ಯೂಹವನ್ನು ಭೇದಿಸಿ ಸ್ಟೆಲಿನ್ ಗ್ರಾಡಿಗೆ ಪ್ರವೇಶಿಸುವರೆಂದು ಬರ್ಲಿನ್ ರೇಡಿಯೋವು ಪ್ರಕಟಿಸಿರುತ್ತದೆ. ಆದರೆ ಮೋಸ್ಕೋ ರೇಡಿಯೋವು ಯಾವ ಸುದ್ದಿಯನ್ನೂ ಹೇಳುವುದಿಲ್ಲ ಸ್ಟೆಲಿನ್ ಗ್ರಾಡಿನ ಮೇಲೆ ಜರ್ಮನರು ಭಯಂಕರ ಸಿಮಾನ ಧಾಳಿ ನಡಿಸಿ ಜನವಸತಿ ಪ್ರದೇಶಗಳನ್ನೆಲ್ಲಾ ನಾಶಮಾಡಿರುತ್ತಾರೆ. ಸೋವಿಯೆಟ್ ಕೆಲಸಗಾರರೆಲ್ಲರೂ ರಣರಂಗದಲ್ಲಿ ಹೋರಾಡಲು ಮುಂದೆ ಬಂದಿರುತ್ತಾರೆ. ಜರ್ಮನರಿಗೆ ಸಹಾಯ ಬರಲು ತೊಂದರೆಯಾಗಿರುವಂತಿದೆ. ಪಶ್ಚಿಮ ಕೋಕಸಸಿನಲ್ಲಿ ಕ್ರಸ್ನೊದೋರಿನ ದಕ್ಷಿಣದಲ್ಲಿ ರಷ್ಯನ ಅಶ್ವಾರೋಹಿ ಸೇನೆಯು ಜರ್ಮನರ ಮೇಲೆ ಬಿದ್ದು ಅವರನ್ನು ಸ್ವಲ್ಪ ಹಿಂದಕ್ಕಟ್ಟಿದೆ. ಪೂರ್ವ ಕೋಕಸಸಿನಲ್ಲಿಯೂ ಜರ್ಮನರು ತಡೆಗಟ್ಟಿಲ್ಪಟ್ಟಿರುತ್ತಾರೆ. ಜರ್ಮನ್ ಸೈನಿಕರು ಕೆಲವರು ಕಪ್ಪು ಸಮುದ್ರ ತೀರಕ್ಕೆ ಮುಟ್ಟಿರುವರೆಂದು ಸುದ್ದಿ ಬಂದಿದೆ. ವರೊನೆಜಿನಲ್ಲಿ ರಷ್ಯನ ಟೇಂಕ್ ದಳವೊಂದು ವೈರಿಯ ಮೇಲೆ ಬಿದ್ದು ಹಾವಳಿ ಮಾಡಿದೆ. ಲೆನಿನ್ ಗ್ರಾಡಿನಲ್ಲಿ ಕೆಂಪು ಸೇನೆಯು ಜಯಶೀಲ ಹೋರಾಟ ನಡಿಸುತ್ತಿದೆ. ರಿಝುವಿನಲ್ಲಿಯೂ ಯುದ್ಧ ನಡಿಯುತ್ತಿದೆ.

ಜಾಪಾನರ ಅಪಜಯ.

ನ್ಯೂಗಿನಿಯ ವಿಲ್ಲ್ಯೂ ಕೊಲ್ಲಿಯಲ್ಲಿ ನೂನ್ ಡೇ ಎಂಬಲ್ಲಿ ಜಾಪಾನರು ದೊಡ್ಡ ಸೇನೆಯೊಂದನ್ನಿಳಿಸಿದಾಗ ಅಮೆರಿಕಾನ ಮತ್ತು ಆಸ್ಟ್ರೇಲಿಯಾನ ಸೈನಿಕರು ಅವರನ್ನು ಮುಂದೆ ಬರಬಿಟ್ಟು ಆ ಮೇಲೆ ಘಕ್ಕನೆ ಮೇರೆ ಬಿದ್ದು ಅವರನ್ನೆಲ್ಲಾ ಹೊಡೆದೋಡಿಸಿರುವರು. ಜಾಪಾನರು ಸಾಧ್ಯವಾದಷ್ಟು ಸೈನಿಕರನ್ನು ಹಡಗಗಳ ಮೂಲಕ ಹಿಂತೆಗೆದು ಪಲಾಯನ ಮಾಡಿರುವಂತಿದೆ. ಆದರೆ ಹಲವು ಜಾಪಾನ ಸೈನಿಕರು ಹಿಂದೆ ಹೋಗಲಾಗದೆ ಅಲ್ಲಲ್ಲಿ ಸಿಕ್ಕಿ ಬಿದ್ದು ಈಗ ಆಸ್ಟ್ರೇಲಿಯಾನ ಸೈನಿಕರವರನ್ನು ನಾಶಮಾಡುತ್ತಿದ್ದಾರೆ. ಕೊಕೋಡ ಮತ್ತು ಸಲಿಮಾವೋದಲ್ಲಿ ಜಾಪಾನರು ದೊಡ್ಡ ಹೋರಾಟ ಆರಂಭಿಸಿ ಸ್ವಲ್ಪ ಮುಂದುವರಿದಿರುತ್ತಾರೆ. ಮಿತ್ರ ರಾಷ್ಟ್ರೀಯ ವಿಮಾನಗಳು ಲೇಬೂನ ಮೊದಲಾದ ಜಾಪಾನ ಸೇನಾ ನಿಲಯಗಳ ಮೇಲೆ ಎಡೆಬಿಡದೆ ವಿಮಾನ ಧಾಳಿ ನಡಿಸುತ್ತಿವೆ. ಸೊಲಮನ್ ದ್ವೀಪದಲ್ಲಿ ಜಾಪಾನರು ದೊಡ್ಡ ಅಪಜಯ ಪಡೆದು ಹಿಂದೆ ಸರಿದಿರುತ್ತಾರೆ. ಅವರ 14 ಹಡಗಗಳಿಗೆ ಜಖಮ್ ಆಗಿದೆ. 6 ಚಿಕ್ಕ ದ್ವೀಪಗಳನ್ನು ಅಮೆರಿಕಾನರು ಗೆದ್ದಿರುತ್ತಾರೆ. ಪೂರ್ವ ಚೈನದ ಚಿಕಿಯಂಗ್ ಮತ್ತು ಕಿಯಂಗ್ಸಿ ಪ್ರಾಂತಗಳಲ್ಲಿ ಜಾಪಾನರು ಹೆಲವು ಕಡೆಗಳಲ್ಲಿ ಅಪಜಯ ಹೊಂದಿ ಹಿಂದೆ ಸರಿಯುತ್ತಿದ್ದಾರೆ. ಪೂರ್ವ ಚೈನದ 2 ಪ್ರಾಮುಖ್ಯ ವಿಮಾನ ನಿಲಯಗಳಿರುವ ಚುಸಿಯೆನ್ ಮತ್ತು ವಿಶೂಯಿ ಪಟ್ಟಣಗಳನ್ನು ಜಾಪಾನರು ಕೆದ್ದಿರುತ್ತಾರೆ. ಲಿರೂಯಿಯಿಂದ ಜಾಪಾನಿನ ಮೇಲೆ ವಿಮಾನ ಧಾಳಿ ನಡಿಸಬಹುದಾಗಿದೆ. ಚೀನೀಯರು ಹೇಂಕೋಕ್ಯಾಂಟನ್ ರೈಲ್ವೆಯನ್ನು ಕಡಿದು ಕ್ಯಾಂಟನ್ ಪಟ್ಟಣ ಸವಿಾಪಿಸುತ್ತಿದ್ದಾರೆ. ಜಾಪಾನರು ಚಿಕಿಯಂಗ್ ಮತ್ತು ಕಿಯಂಗ್ಸಿ ಪ್ರಾಂತಗಳಿಂದಲೇ ಹಿಂತೆಗೆವಂತೆ ತೋರುತ್ತದೆ ಜಾಪಾನ ವಿದೇಶ ಮಂತ್ರಿ ಜನರಲ್ ಟೋಗೋರವರು ರಾಜಿನಾಮೆ ಕೊಟ್ಟಿರುತ್ತಾರೆ. ಈಗ ಪ್ರಧಾನ ಮಂತ್ರಿ ಜನರಲ್ ಟೋಜೋರವರೇ ವಿದೇಶ ಮಂತ್ರಿ ಕೂಡಾ ಆಗಿರುತ್ತಾರೆ.

ಚಂದಾದಾರರಲ್ಲಿ ವಿನಂತಿ

ಈ ತಿಂಗಳಿಂದ 'ನವಯುಗ'ದ ೮ನೇ ಹೊಸ ವರ್ಷಾರಂಭವಾಗಿರುವುದು. ಹೊಸ ವರ್ಷದ ಚಂದಾ ಹಣವನ್ನು ಎಲ್ಲರೂ ಎಂದಿನಂತೆ ದಯಮಾಡಿ ಮುಂದಾಗಿ ಕಳಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಚಂದಾ ಹಣ ಬಾಕಿ ಇರುವವರು ಇನ್ನು ವಿಳಂಬಮಾಡದೆ ಬಾಕಿ ಇರುವ ಮತ್ತು ಹೊಸ ವರ್ಷದ ಚಂದಾ ಹಣವನ್ನು ತೀವ್ರ ಪಾವತಿ ಮಾಡುವಂತೆ ವಿನಂತಿ.

ಪತ್ರಿಕೆಯ ಚಂದಾದಾರಿಕೆಯನ್ನು ಬದಲಾಯಿಸಬೇಕೆಂದಿದ್ದರೆ, ವಿಳಾಸದಲ್ಲಿ ಬದಲಾವಣೆಯಾಗಿದ್ದರೆ ದಯಮಾಡಿ ಸಕಾಲದಲ್ಲಿ ತಿಳಿಸುವಂತೆಯೂ ಅಪೇಕ್ಷಿಸುತ್ತೇವೆ.

ಹೊಸತಾಗಿ ಚಂದಾದಾರರಾಗುವವರಿಗೆ ಇದೀಗ ಸುಸಂದರ್ಭ

ಮೆನೇಜರ್, ನವಯುಗ, ಉಡುಪಿ

ಸೊಲಮನ್ ದ್ವೀಪ, ನ್ಯೂಗಿನಿ ಮತ್ತು ಚೈನಗಳಲ್ಲಿ ಜಾಪಾನರಿಗೆ ಅಪಜಯ

ತಾ. 6-9-42 ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ

ಫಿಲ್ಮ್ ಕಾರ್ಪರೇಶನ್‌ನವರ

ಶ್ರೀ ಪಿಲಾದ್

ಖಜಾಂಚಿ ಚಿತ್ರದಲ್ಲಿ ಹೆಸರಾಂತ ರನೋಲಾ ದೇವಿಯು ನಟಿಸಿರುವ ಅಚ್ಚಳಿಯದ ಚಿತ್ರ-

ನಡಿಯುವ ಚಿತ್ರ:-ಕಾಂಚನಮಾಲಾ ನಟಿಸಿರುವ **ಮಾಲಪಿಲ್ಲ.**

ಬರುವುದು:-ಬಾಲಾಜಿ ಅಥವಾ ವೆಂಕಟೇಶ್ವರ ಮಹಾತ್ಮೆ, ದಿ ವಿಲ್, ಸಂತಸಮು ಇತ್ಯಾದಿ.

ಪತ್ರಿಕೆ— ಶ್ರೀ. ಬಡಗಬೆಟ್ಟು ಹೀನಪ್ಪ ಹೆಗ್ಡೆಯವರು ತಾ. 30-8-42ರಂದು ತನ್ನ 50ನೇ ವರ್ಷದಲ್ಲಿ ಅಕಾಲ ನಿಧನ ಹೊಂದಿದುವರು. ಮೃತರು 7—8 ವರ್ಷಗಳಿಂದ ವ್ಯತರು ಭೋಜನ ತ್ಯಾಗವನ್ನಿ ಬರೇ ಹಣ್ಣು ಹಂಪಲು ತಿಂದು ಜೀವಿಸುತ್ತಿದ್ದರು. ಇವರು ಉತ್ತಮ ಕೃಷಿಕಾರರೂ, ಕಾಂಗ್ರೆಸ್ ಭಕ್ತರೂ ಆಗಿದ್ದರು.

The Canara Industrial & Banking Syndicate, Ltd.,

(INCORPORATED IN BRITISH INDIA LIABILITY OF SHARE-HOLDERS LIMITED.)

STATEMENT OF AFFAIRS AS ON 31ST JULY, 1942.

LIABILITIES	Rs.	As.	Ps.	ASSETS.	Rs	As	Ps.
Paid up Capital	6,94,140	0	0	Cash in hand & with Bankers at call	10,93,039	5	0
Reserves	2,11,000	0	0	Investments on Govt. Securities	14,50,097	15	6
Deposits	46,01,171	2	8	„ on Shares of other Companies....	1,71,181	10	0
Due to Banks etc.	2,15,639	3	0	Fully Secured advances	16,54,572	3	5
Bills for collection	4,16,628	8	1	Other advances, Bills discounted etc.	9,87,759	0	4
Sundries including revenue items ...	4,04,918	2	11	Landed Properties, Office premises, Furniture, Safes, Fittings etc.....	4,81,009	3	7
				Bills for collection	4,16,628	8	1
				Sundries including revenue items	2,89,209	2	9
Total Rs.	65,43,497	0	8	Total Rs.	65,43,497	0	8

"MUKUND NIVAS"
UDIPI.
25th August, 1942.

ತ M. ಪೈ
Managing Director.

ದಕ್ಷಿಣ ಕನ್ನಡದ ಸುದ್ದಿಗಳು.

ಮುಖ್ಯರ ನೇಮಕ:- ಮಂಗಳೂರಿನ ಡ್ಯಾಫೋ, ವಿದ್ಯಾರ್ಥಿನಿಯರು ಆರಂಭಿಸಿದ ಮಕ್ಕಳ ಡಿ ಗೆ, ವಿದ್ಯಾಲ ಕಿಟ್ಟರ ಮಕ್ಕಳಿಗೆ ಉಚಿತವಾಗಿ ಕಲಿಸಿಕೊಟ್ಟಿದೆ. ಈಗ ತಾ. 23ರಿಂದ ಅದ್ಯಾಯದ ಸಂಘಟಕರು ವಿದ್ಯಾರ್ಥಿಗಳನ್ನು ಮುಖ್ಯರ ನೆಲಿಸಲು ಕೇಳಿಕೊಳ್ಳುವೆಂದು ನಿರ್ಧರಿಸಿದ್ದಾರೆ ಪತ್ರಿಕೆಯ.

ನಗರ ಸಭೆಯಲ್ಲಿ ಸ್ವತಂತ್ರರಾಗಿ ನಿಂತು ಮುಗಿಲಂಗಿನ್ನ ಶ್ರೀಗ ರಂಗರಾವ್ ತಲುಚೇರಿ ಯು ಈಗಿನ ರಾಜಕೀಯ ರಂಗದಲ್ಲಿ ಪರಿಣಾಮ ಪ್ರೀಕರಣಗಳಲ್ಲಿ ಅಸಮ್ಮತಿಯನ್ನು ಸೂಚಿಸುವರೆ, ನಗರ ಸಭೆಯ ಸಹಸ್ಯಸ್ಥಾನಕ್ಕೆ ರಾಜೀನಾಮೆಯನ್ನು ಇತ್ತಿದ್ದಾರೆ.

ನಗರ ಸಭಾಧ್ಯಕ್ಷರು- ಮಂಗಳೂರು ನಗರ ಸಭೆಯ ಇಂಗ್ಲೆಸ್ ಪಕ್ಷದ ಚೀಫ್ ಮೇನ ಇಂ ಶ್ರೀ ಬಿ. ಶ್ಯಾಂಗಣು ವಿದ್ಯಾರ್ಥಿಗಳ ಪ್ರತಿ ನಿಧಿಗಳು ಅವರನ್ನು ಭೇಟಿಯಾದಾಗ, ವಿದ್ಯಾರ್ಥಿ ಗಳು ಅನ್ಯಾಕ್ಷ ಮುಖ್ಯರ ವರ್ತನೆಯಾದುದಾಗಿ ಹೇಳಿಕೊಂಡರು. ಮತ್ತು ರಾಜಾಜಿಯವರು ಅನೆ ಕರಿಸುತ್ತಿರುವ ರೀತಿಯು ಈಗಿನ ಸ್ಥಿತಿಯಲ್ಲಿ ಯೋ ಗ್ಯವಾಗಿ ತೆಯನ್ನು ತೋರುವುದೆಂದು ಹೇಳಿದರು.

ಮಂಗಳೂರು ನಗರ ಸಭೆ:- ಈದಿ ತಾ. ೨೪ರಲ್ಲಿ ಸೇರಿದ ನಗರ ಸಭೆಯಲ್ಲಿ ಶ್ರೀ ಮುಖ ಸೇವ ದೇಸಾಯರ ನಧನದ ಕುರಿತು ಸಂತಾಪ ಸೂಚಿಸುವ ಠರಾವು ಮಂಜೂರಾಯಿತು.

ಪ್ರಕಟಣೆ.

ಉಡುಪಿ ತಾಲ್ಲೂ ಮಟಪಾಡಿ ಗ್ರಾಮದ ಬಿಕ್ರಿ ಗುತ್ತು ಅಂಡಿಯ್ಯ ಶೆಟ್ರಿ ಅಳಿಯ ಬೆಮ್ಮಾ ಶೆಟ್ರಿ ಯವರ ತಾಸು ಈ ಮಜ್ಜಿ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ,-

ಎಲ್ಲಿರುಗುತ್ತು ತೀಣ ಶೆಟ್ರಿ ಅಳಿಯ ಅಚ್ಚಣ್ಣ ಶೆಟ್ರಿ ಹೇಗೆ 6½ ಸಲೆ ಬಡ್ಡಿಯ ಮೇಲೆ ಸ್ವೀಂ ದ ತಾ 11-7-1939ರಲ್ಲಿ ರೂಪಾ 400 0 0 ಸಾಲವಾಗಿ ಪಡೆದು ಅದಕ್ಕೆ ಅದೇ ತಾರೀಖಿನಲ್ಲಿ ಅವರು ತನಗೆ ಬರಲಿಪ್ಪ ದಿವಾಂಡು ನೋಟನ ಅಸಲು ಬಡ್ಡಿ ಪೈಕಿ ಅವರು ನನಗೆ ತಾ. 10-7-1942ರಲ್ಲಿ ರೂಪ್ಯ 10-0 0 ಹಾಗೂ ವಸೂಲು ಕೊಟ್ಟು ಸದ್ರಿ ನೋಟನ ಹಿಂಬದಿಯಲ್ಲಿ ತಾರಾ ಬರದು ಕೊಟ್ಟಿರುತ್ತಾರೆ. ಇಂತಿ ಎಷ್ಟನ್ನಾ ದರೂ ಅವರಿಂದ ನನಗೆ ವಸೂಲು ಆಗಲಿಲ್ಲ. ಆದ ಕ್ಕೆ ನಾನು ಬೇರೆ ಯಾರಿಗೂ ಟ್ರಾನ್ಸ್‌ಫರ್ ಮಾಡಿ ಕೊಟ್ಟಿದ್ದಿಲ್ಲ. ಈಗ ನೋಡುವಾಗ್ಗೆ ಸದ್ರಿ ನೋಟು ನ ಪತ್ರ ಗ್ರಾಮದ ಷಾಂತಿ ಶೆಟ್ರಿ ಮನೆ ಕೀನ ಶೆಟ್ರಿ ನನಗೆ ರೂ. 58-0-0ಕ್ಕೆ ಬರಕೊಟ್ಟ ನೋ ಟೆಂದಾ ನನ್ನಿಂದ ಳೆದು ಹೋಗಿರುವುದೆ. ಆವ ಗಲು ಯಾರಾದರೂ ಸಿಕ್ಕಿ ಅವುಗಳನ್ನು ಟ್ರಾನ್ಸ್ ಫರ್ ಮಾಡಿ ತಕಾಯತಿಗಳನ್ನು ಕೊಟ್ಟಿಸಿಕೊಂಡರೆ ಅವರಿಂದ ಏನೂ ಪ್ರಯೋಜನ ಸಿಕ್ಕಲಾರದು. ಅತಿ ಗೆಳನ್ನು ಸಿಕ್ಕಿದವರು ನನಗೆ ತಂದುಕೊಟ್ಟರೆ ಆ ಬಗ್ಗೆ ರೂ. 5-0-0 ಇನಾಮು ಕೊಡಲಾಗುವುದು. ಹೀಂತಿ ಬಿಕ್ರಿಗುತ್ತು ಬೆಮ್ಮಾ ಶೆಟ್ರಿ. ತಾ. 31-8-1942.

ಅಮೃತಾಂಜನ

REGD.

ತಲೆನೋವು, ಶಿರೋ ವೇದನೆ, ಉಗುಳು, ಕೆಮ್ಮಿಗೆ, ಭುಜ, ತಲ್ಲು ನೋವಿಗೆ, ಗೂ ಎದಿನೋತಿ, ಭಾಯಿಗಲು ಬಾತು ಕೊಳ್ಳುವುದು, ಚೇ ಳು ವಿಷಮುಂತಾದ ಬೇನೆ, ಪಕ್ಷಾತ, ಮೊಡಿ, ಮೆಜ ಡಾ ಎಲ್ಲಾ ರೋಗ ಗಳಿಗೂ ಸಿದ್ಧೌಷ.

ಮುಲುಕಿ ಮುದ್ರೆ ಸಹ ಪೆಮ್ಮಿಗೆ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಕೋಚಾಮು, ಮಲ್ಯಾಳ, ಕೊಚ್ಚಿನ್.

ಶಿಲ್ಲಾ ಕಾಂಗ್ರೆಸ್ ಕಮಿಟಿ- ಇದು ಅಧ್ಯಕ್ಷರು ಶ್ರೀಗ ಎಂ. ಪಿ. ಅಧಿಕಾರಿಗಳು ಪತ್ರ ಬಿಡ್ಡಿ, ಮುಖ್ಯ, ಖಾರ್ಯಗಳ ನಿರ್ವಹಣೆಗೆ ಸಂಬಂಧಿಸಿ ಸದ್ಯದ ರಾಜ್ಯೀಯ ಹೋರಾಟದಲ್ಲಿ ಗ್ರಾಮ ಸಮಿತಿಗಳ ಧಾಗ ಇತ್ಯಾದಿಗಳ ವೇಳೆ ಭಾಷಣಗಳನ್ನಿತ್ತರು.

ಉಡುಪಿ.

ವಿದ್ಯಾರ್ಥಿ ಯೂನಿಯನ್- ಸ್ಥಳ ಯ ಎಂಜು ಹೈಸ್ಕೂಲು, ಸಂಸ್ಕೃತ ಶಾಲೆಯು ಮೊದಲಾದವುಗಳ ವಿದ್ಯಾರ್ಥಿಗಳ ಸಭೆಯೊಂದು ಳೆದ ತಾ. 25ರಲ್ಲಿ ಶ್ರೀಗ ಕೆ. ಕೆ. ಸಭ್ಬರ ಅಧ್ಯಕ್ಷ ತೆಯಲ್ಲಿ ಸೇರಿ 'ವಿದ್ಯಾರ್ಥಿ ಯೂನಿಯನ್' ಸ್ಥಾಪಿ ಸಲ್ಪಟ್ಟಿದೆ. ಅದರ ಕಾರ್ಯಕಾರಿ ಸಮಿತಿಯು ಸಭೆ ಯು ತಾ. 29ಕ್ಕೆ ಸೇರಿತು. ಇದೇ ತಾ. 6ರಲ್ಲಿ ಯೂನಿಯನ್ನಿನ ಮುಖ್ಯ ಸಭೆ ಸೇರಲಿದೆ.

ಜೈಲುರು-ಳಿದ ತಾ.18ರಿಂದ20ರ ವರೆ ಗೆ ಪೂರ್ಣ ಪಡಾಣವಿತ್ತು. ತಾ.20ರಲ್ಲಿ ಮೊದಲಿ ಗೆ ಸಭೆ ನಡೆಯು ಶ್ರೀಗ ಎಂ.ವಿ. ಹೆಗ್ಡೆಯವರು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣಿಸಿತ್ತರು. ಅಧ್ಯಕ್ಷತೆ ವಹಿಸಿದ್ದ ಶ್ರೀಗ ಜೆ. ನಾಗಪ್ಪ ಹೆಗ್ಡೆಯವರು ಭಾಷಣಗಾರರ ಅಭಿಪ್ರಾಯವನ್ನು ಸಮರ್ಥಿ ಸಿದರು. ತಾ. 21ರಲ್ಲಿ ಸ್ಥಳೀಯ ಶಾಲೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವದ ಶ್ರೀಗ ಜೆ. ನಾಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಿಗಿತು. ಪರಿ ಮಿತ್ತ ವಿವಿಧ ಏರ್ಪಾಡಗಳಿಗಾಗಿ ಶ್ರೀಗ ಎಸ್. ಎಸ್. ಶೆಟ್ಟಿಯವರ ಭಾಷಣವಾಯಿ ತು ಅಧ್ಯಕ್ಷರ ಭಾಷಣ, ಧನ್ಯವಾದಗಳಿಂದ ಮುಗಿಯಿತು.

ಮಿಡ್ಡೇರು-ಶ್ರೀಗ ಮಾಡಾಳುಕಟ್ಟರ ಎಸ್. ಇ. ಸ್ಕೂಲಿನ ರಕ್ಷಕ ಸಭೆಯೊಂದು ತಾ. 28-8-42ರಲ್ಲಿ ಶ್ರೀಗ ಎಸ್. ಎಸ್. ಸಪ್ಪ ಅಧ್ಯಕ್ಷ ತೆಯಲ್ಲಿ ಜರಗಿ ಶ್ರೀಗ ಎಸ್. ಸಂಜೀವ ಶೆಟ್ಟಿ ಮೊದ ಲಾದವರ ಭಾಷಣ. ಶ್ರೀ. ಶೆ. ಇವರಿಂದ 'ಪರಿಣಾಮಕಾರಿ ಪರೀಕ್ಷೆ' ಉಪಾಯ.

ಹಿರಿಯಡ್ಕ- ಶ್ರೀಗ ಕೆ ಬಿರಮಣ್ಣ ಆಚಾರ್ಯ ಹೆಗ್ಗಡೆಯವರ ಶ್ರೀಮತಿ ಆಳ್ಳು ಯಾನೆ ಪಿಂಗಳ್ತಿಯರ ಅಕ್ಕಿ, ಕೃಷಿಯೇತರ್ಪಡೆಂದ ಬಡಜನರ ಕಷ್ಟಪರಿಹಾರಾರ್ಥವಾಗಿ ತಾ- 2-9-42ನೇ ಬುಧವಾರ ಕೃಷ್ಣಾಷ್ಟಮಿಯ ದಿವಸ ಬೆಳಿಗ್ಗೆ 8ನೇ ಬೆಯಿಂದ ಮಧ್ಯಾಹ್ನ 12ರ ತನಕ ಜರ ಒಬರ ಅರ್ಧ ಸೇರಿಕಂತೆ ದರ್ಶಾರ್ಥ ಅಕ್ಕಿ ಹಂಚುವರೆಂದು ಆಸ್ಥಾನಿ ವ್ಯಕ್ತಿಯಾಗಿ ಶ್ರೀಗ ವೆಂಕಿಕ್ಕ ಶೆಟ್ಟಿ ತಿಳಿಸಿರುತ್ತಾರೆ.

ಪ ಕ. ಜಿಲ್ಲಾ ತಿಯೆಸ ಶಕ್ತಿ ಸಂ ಘದ ಮಾಣಿಯ ಶಕೆ ತಾ. 16ರಲ್ಲಿ ಬಿ. ಆರ್. ಶರ್ಮರವರಿಂದ ಸೇವಾ ಕಾರ್ಯವು ಕೊಟ್ಟು ಸನ್ಮಾನಿಸಿದರು. ಹುಲಿವ ಭಾಷಣಗಳಾದ ಮೇಲೆ ಶ್ರೀಗ ಶರ್ಮರವರು ಸಂಘಕ್ಕೆ 10/ ರೂ. ಕೊಟ್ಟುದಲ್ಲದೆ ಬಲ್ಲವ ವಿದ್ಯಾರ್ಥಿಗಳಿಗೆ ವರ್ಷಂ ಪ್ರತಿ ರೂ. 45/-ರ ವಿದ್ಯಾರ್ಥಿ ವೇತನವನ್ನು ಕೊಡು ವುದಾಗಿಯೂ ಪ್ರಕಟಿಸಿರುವರು, ಉಪಹಾರ, ಧನ್ಯವಾದಗಳಾಗಿ ಸಭೆಯು ಕೊನೆಗೊಂಡಿತು.

ಉಡುಪಿ-ಹಿಂದುಸ್ತಾನ್ ಸ್ಕೌಟ್ ಎಸೋಸಿ ಯೇಶನ್ ರೋವರ್ಸ್ ಸ್ಕೌಟ್ಸು ಅಸ್ಸಿಸ್ಟೆಂಟ್ ಕಮಿ ಷನರ್‌ರಾಮ ಸ್ಕೌ ಮತ್ತು ಕಾರ್ಯದರ್ಶಿ ಶ್ರೀಗ ಗೋವಿಂದರಾಯ ಕಾಮತರ ನೇತೃತ್ವದಲ್ಲಿ ಉಡುಪಿ ಯಲ್ಲಿ ರಾತ್ರಿಗಾಲು ಸಭೆಯೊಂದನ್ನು ಕರೆಯಲಾಗಿದೆಯೆಂದು ತಿಳಿದು ಬಂದಿದೆ.

ವಿಚಾರಣೆ-ಉಡುಪಿ ಕುಂದಾಪುರಗಳಲ್ಲಿ ದಕ್ಷಿಣ ಕನ್ನಡಜಿಲ್ಲಾ ರಾಜಕೀಯ ಕೈದಿಗಳ ವಿಚಾ ರಣಾ ತಾರೀಖುಗಳನ್ನು ತಾ. 5-9-42ನ್ನು ಉಡುಪಿ ಜಿಲ್ಲಾ ಸೂ ಪರಿಂಟೆಂಡೆಂಟರ್ ಆಫೀಸರಿಂದ ಆಗಲಿ ಲಿ.

The Canara Industrial & Banking Syndicate Limited.

ESTD.] Head Office, **UDIPI**. [1925.

NOTICE.

Is hereby given that 60 Five per cent Cumulative Preference Shares Nos. PC 5810 to PC 5859 and PC 55069 to PC 55078, each Re. 1/- paid, and 1 Ordinary Share No. 3506, Rs. 40/- paid. in the Syndicate, will be sold by Public Auction at the Registered Office of the Syndicate ("Mukund Nivas", Udipi) on Friday the 17th September, 1942 at 2-30 P. M. in order to recover the debts due to the Syndicate by the respective Share holders.

Intending bidders are requested to be present at the time of auction.

"Mukund Nivas", Udipi, 29th Aug. 1942. } **K. V. Shenoy.** *Ag. Secretary*

The Canara Banking Corporation Ltd.

(Incorporated in British India)

ESTD: 1906.

ನೋಟೀಸ್.

(Under Articles 41 & 42 of the Articles of Association of the Bank.)

The registered notices issued to the undermentioned partly paid-up Ordinary shareholders of the Bank, demanding payment of the calls in arrears in respect of the shares held by them as per particulars furnished below, having been returned undelivered, the said shares are liable to be forfeited on or after 20—9—1942 without any further notice unless all monies due thereunder are remitted to our Udipi Office by the afore said date by them or by persons claiming through them.

Name of shareholder.	No. of Shares	Calls in arrears Capital	Calls in arrears Premium	Interest upto 31—12—41	Remarks
		Rs.	Rs.	Rs. As Ps	
1. Frank Martin Suldhana Esq. Someshwarkan Estate, Balchonnoor P. O Mysore State.	1	15/-	12/	8 5 2	Further interest from 1-1-42 to date of payment on the amount of Capital & premium @ 12½%
2. Shroff Sri Vallabha Shet. Jeweller, Car St., Mangalore.	1	15 -	12 -	8 5 2	

Office of the Corporation, Udipi, 31st August, 1942. } *V. R. Kamath*, B A., H L B MANAGER.

ನೀವು ಪ್ರೀತಿಸುತ್ತಿರುವ ಹೆಸರುಗಳು ಬದಲಾಯಿಸಲ್ಪಡುತ್ತವೆ.

ಜಪಾನಿಯರು ಸಿಂಗಪೂರನ್ನು ಜಯಿಸಿದ ತಕ್ಷಣ, ಪ್ರಸಿದ್ಧವಾದ ಆ ನಗರಕ್ಕೆ ಜಪಾನೀಯ ಹೆಸರನ್ನು ಕೊಟ್ಟರು ಜಪಾನಿಯರು ನಮ್ಮ ಪಟ್ಟಣಗಳನ್ನೂ ಪವಿತ್ರ ಜಾಗಗಳನ್ನೂ ಪಿಡಿಯುವುದರಲ್ಲಿ ಜಯ ಶೀಲರಾದಕೆ ಇಲ್ಲಿಯೂ ಹಾಗೆಯೇ ಮಾಡುವರು. ವಿಶೇಷವಿಕ ಮತ್ತು ಧರ್ಮ

ಸಂಬಂಧಗಳಂದ ಕೂಡಿದ ಜಾಗಗಳನ್ನು ಅಪವಿತ್ರ ಮಾಡಿ. ತಮ್ಮ ಕಾನೂನಿನ ಪ್ರಕಾರ- ಜಪಾನಿಯ ಕೆಸರುಗಳನ್ನಿಡುವರು. ಜಪಾನಿಯರು ಇಂಡಿಯಾ ದೇಶವನ್ನು ಆಕ್ರಮಿಸಿಕೊಳ್ಳಲಿಕ್ಕೆ ಲಕ್ಷ್ಯವಿಡುವುದಿಲ್ಲ ಈ ಪ್ರಸಿದ್ಧ ದೇಶವನ್ನಾವು, ಬದಲಾಯಿಸಿ ಕೊಡುವೆ ಹೀಗಾಗುವುದಕ್ಕೆ ಬಿಡುತ್ತೀರೆಯೋ? ಎಂದಿಗೂ ಬಿಲ್ಲ! ಈ ವಿಚಾರವನ್ನು ನೆನ್ನು ಸಂಯೋಜಿತ ಬಲದಿಂದ ಎದುರಿಸೋಣ! ಜಪಾನಿಯ ರಕ್ತವನ್ನು ಎದುರಿಸುವುದಕ್ಕೆ ರಾಷ್ಟ್ರೀಯ ಯುದ್ಧ ಸುಖವನ್ನು ರಜಿಸಿ.

ಸಿಹಿ-ಕಹಿ

ಇದೀಗ 'ನವಯುಗ'ದ ನವ ವರ್ಷಾರಂಭವಂತೆ! ಈ ಹೊಸ ವರ್ಷದ ಹೊಸ ಉತ್ಸಾಹದ ಸುಸಂದರ್ಭದಲ್ಲಿ ನನ್ನ ಹೊಸ ಲೇಖನಿಯ 'ಸಿಹಿ-ಕಹಿ'ಗೊಂದಿಷ್ಟು ಆಶ್ರಯ ದೊರೆಯ ಬಹುದೇ?

೦೦ ೦೦ ೦೦

ಹೊಸ ವರ್ಷದಲ್ಲೀಗ ನನಗೂ ಒಂದಿಷ್ಟು ಉತ್ಸಾಹ ಬಂದಿದೆಯೆನ್ನಿ. ಈ ಉತ್ಸಾಹ ಕಡೆತನಕ ಇದ್ದೀತೆನ್ನಲಾಗದು. ಹಾಗೆ ಪ್ರಾರಂಭದ ಉತ್ಸಾಹ ಕೊನೆತನಕ- ಸಾಯಲಿ, ಸ್ವಲ್ಪ ಕಾಲವಾದರೂ ಜನರಲ್ಲಿ ಕಂಡುಬಂದರೆ ಈಗಿನ ಸ್ಥಿತಿಯೇ ಅಡಿಮೇಲಾಗುತ್ತಿತ್ತಲ್ಲ!

೦೦ ೦೦ ೦೦

ನೋಡಿ-ಮೊನ್ನೆಯ ಘಟನೆಯನ್ನೇ ನೋಡಿ. ಮಿ. ಗಾಂಧಿ ಮೊದಲಾದ ರಾ. ಧುರೀಣರ 'ಎರೆಸ್ಟ್' ಆಗುವುದೇ ತಡ, ತಗೊಳ್ಳಿ ನಮ್ಮಲ್ಲಿಯೂ ಸುರುವಾಯಿತು ನವೋತ್ಸಾಹ! ಚಳವಳ!

೦೦ ೦೦ ೦೦

ಯಾವುದರಲ್ಲೂ ಕಡಿಮೆಯಿಲ್ಲ. ಸಭೆಗಳೇನು? ಭಾಷಣಗಳೇನು? ಕರಪತ್ರಗಳ ಓಡಾಟವೇನು? ಹರತಾಳಗಳೇನು! ವಿದ್ಯಾರ್ಥಿಗಳ 'ಸ್ಟ್ರೈಕ್'ನ ಯೋಜನೆಗಳೇನು?

೦೦ ೦೦ ೦೦

ಆದರೆ ಇವೆಲ್ಲಾ ಎಷ್ಟು ದಿವಸ ಎನ್ನುತ್ತೀರಿ? ಎಲ್ಲಾ ನೋಡಾ ಗ್ಯಾಸಿನಂತೆ ಎಂದರೆ ಸಾಲದೆ?

೦೦ ೦೦ ೦೦

ಮಂಗಳೂರಿನ ಮುಷ್ಕರದ ಪಾಡೂ ಅಷ್ಟೆ! ಆ ನಾಟಕದ ಮಂಗಲ ಹಾಡನ್ನು ಡಾ। ವಿತಲ ಶೆಟ್ಟರು ಸುಮಧುರವಾಗಿ ಹಾಡಿದರಂತೆ. ಮುಷ್ಕರ ಮುಗಿಯಿತಂತೆ!

೦೦ ೦೦ ೦೦

ಆದರೆ ಇದೀಗ ಉಡುಪಿಯ ವಿದ್ಯಾರ್ಥಿಗಳು ಸ್ಟೈಕೆನ ಸ್ಕೀಮಿನಲ್ಲೇ ಇದ್ದಾರಂತೆ.

೦೦ ೦೦ ೦೦

ಉಡುಪಿಯಲ್ಲಿ ವಯರ್ ಕಟ್ ಮಾಡಿದ ಕೆಲವರಿಗೆ ಕೈದೀಪ ದೊರೆತನೆ ನಮ್ಮ ಮುಖಂಡರು ತಾವು ಹಾಗೆ ಕಟ್ ಮಾಡಲು ಹೇಳಲಿಲ್ಲವೆಂದು ಅಂತರ್ಜಾಗ ಹೊಡೆದರೆಂದೂ ಸುದ್ದಿ.

೦೦ ೦೦ ೦೦

ಬೀದಿಗೆ ಇಳಿಯುವಾಗ, ಪ್ಲಾಟ್ ಫಾರ್ಮ್‌ಗೆ ಏರುವಾಗ, ಆದರ್ಶ, ತತ್ವ, ಎಲ್ಲಾ ಪ್ರದರ್ಶನಗೊಳ್ಳುತ್ತವೆ. ಪರೋಪ ದೇಶ ಪಾಂಡಿತ್ಯದ ನಿದರ್ಶನವಾಗುತ್ತದೆ.

೦೦ ೦೦ ೦೦

ಕೆಲವರಿಗೆ ಅಸ್ಸರೆಲ್ಲರೂ ಠಕ್ಕು ಕಾಂಗ್ರೆಸ್--ಸಂದರ್ಭ ಸಾಧಕರೆಂದೆಲ್ಲಾ ತೋರುವುದದಿದೆಯಂತೆ. ಅವರೇಕೆ ಚಳವಳಕ್ಕೆ ಸೇರುವುದಿಲ್ಲ! ಇವರೇಕೆ ಜೈಲಿಗೆ ಹೋಗುವುದಿಲ್ಲ? ಎಂಬಿತ್ಯಾದಿಯಾಗಿ ಪೃಶ್ನಿಸುತ್ತಲೇ ಇದ್ದಾರೆನ್ನಿ ಅವರು. ಮಿಕ್ಕ ವಿಚಾರ ಬರುವ ವಾರ ನೋಡೋಣ.

—ಉಂಡಾಡಿ.

ಆಗ-?

ಕಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ಮಡಿತವು ಮುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಪವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಿರಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯ ಸಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

THE CANARA MUTUAL ASSURANCE COMPANY, LIMITED.

UDIPI : : : : S. India

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ತ್ರೀವಾಸ್ಥ್ಯ, ಶರೀರದ ಉಷ್ಣತೆ, ಧಾತು ಮೂತ್ರದೋಷದ ಹೆರಿಗೆ ಜೋಗುಳಿಕೆ, ಸೋಲಸೋಪು, ಕೈ ಕಾಲು ಉಷ್ಣತೆಯು, ಮೂಲವ್ಯಾಧಿತ್ವ, ಒಳ ಜ್ವರ, ಆಕಸ್ಮಿಕ, ಇವುಗಳನ್ನೆಲ್ಲಾ ಹೋಗಲಾಡಿಸಿ ಸುಖವನ್ನು, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ 1ರ ಪರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಕಕ್ಕೆ ಅತೀಪ್ರಶಸ್ತ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೋಷಗಳಿಗೆ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ಕುಂಬಿಸುವುದು. ರಕ್ತಧಾತು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದಿವರ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಭಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಕಂಬ್ರ, 10 ಮಂಗಳೂರು.

ಪ್ರಸಿದ್ಧಿ ಸಿಕ್ಕುವ ಸ್ಥಳ— (1)ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ.ಪಿರಾಬಾಗ್ ರೋಡ್, ಶಿರೇಲ, ಪಶಂಬಯ, ತಂಬ್ರ 12 (2) ಜನರಲ್ ಸ್ಟೋರ್ಸ್, ಜೆ. ಐ. ಪಿ, ಮಾಟುಂಗಾ. (3) ಮುಲ್ಲರ್ ಪೆರ್ಸ್ ಬ್ರದರ್ಸ್, 91 ಚಿಕ್ಕಪೇಟೆ. ಬೆಂಗಳೂರು ಸಿಟಿ. (4) ಧನ್ವಂತರಿ ಫೈರ್ಮಸಿ, ಪೆನ್ಷನ್ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ.(7)ಡಾ। ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಾಸ್ತವ ಕನ್ನಿ, ಭಿಕ್ಷಂಗಡಿ, (9) ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪೊ, ಕೋಳದ ಪೇಟೆ, ಉಡುಪಿ (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾರಂಗೋಡು ಶ್ರೀ ರಾಮಾ ಸ್ಟೋರ್ಸ್ ಹೌಸ್, ಶ್ರೀ ರಾಮ ಪೇಟೆ (13)ಕೆ.ಶ್ರೀನಿವಾಸಹೆಗ್ಡೆ, ತೀರ್ಥಹಳ್ಳಿ (14)ಬಿ.ಯಸ್.ನರಸಿಂಗರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು

DOMINATE THE AIR and WIN!

Give to the

GOVERNOR'S WAR FUND

and provide

MORE PLANES!

ಗನೋರಿಯೊ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೇವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಭಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಷುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸಂಯೋಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇಹುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ಕೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಪಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಗೆ ೪ ರೂ. ಪೋಸ್ಟೇಜ್ ಜಾರ್ಜ ೬ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:—ಡಾವಣಗೇರಿ ಪ್ರೇಸ್.

ಮೂಲಕರ ಏಕಾಕ್ಷಿ ತಕ್ಕವ್ಯತರ ಮಾಡಬೇಕೆಂದು ವಿನಂತಿ.

ಮೂಲಕರ ನಿಲಾಸ: **ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ನಿಮ್ಮ ನಿಕಟ ಮಿತ್ರ

ನವಿನ್ಯಾ ಸಂಸಾರ ಪ್ರಪಂಚದಲ್ಲಿ ಸದಾ ಕಾಲವೂ ಬೆಲೆ ಬಾಳುವ ವಸ್ತು ವೆಂದರೆ ಚಿನ್ನವೇ ಸರಿ. ಅದರಲ್ಲೂ ಇಂದು ನಡಿಯುತ್ತಲಿರುವ ಪ್ರಚಂಡ ಯುದ್ಧದ ದೆಸೆಯಿಂದಾಗಿ ಚಿನ್ನದ ಬೆಲೆಯಿಂದರೋ ಮತ್ತಷ್ಟು ಹೆಚ್ಚಿರುತ್ತದೆ. ಅಲ್ಲದೆ ಇನ್ನಷ್ಟು ಮೇಲೇರಲೂ ಬಹುದು. ಪರಿಸ್ಥಿತಿ ಹೀಗಿರುವಲ್ಲಿ ನಿಮ್ಮಲ್ಲಿರುವ ಚಿನ್ನವನ್ನು ಬೆಲೆಯಾಸೆಯಿಂದ ವಿಕ್ರಯಿಸುವುದೆಂದರೆ ನಿಮ್ಮೊಬ್ಬ ಆತ್ಮೀಯನಾದ ಬಂಧುವಿನಿಂದ ಅಗಲುವಂತೆನೆ. ಅದುದೆಂದ ನಿಮ್ಮಲ್ಲಿರುವ ಅತೀ ಅಮೂಲ್ಯವಾದ ಸೊತ್ತಾದ ಚಿನ್ನವನ್ನು ಬಹು ಚೆನ್ನಾಗಿ ಕಾಪಾಡಿರಿ. ಅಗತ್ಯ ವಿದ್ದರೆ ಈ ಒಡವೆಯ ಈಡಿನ ಸೆಲೆ ಅತೀ ಸುಲಭ ದರದಲ್ಲಿ ನಮ್ಮಿಂದ ಪಡೆಯಬಹುದು.

ಕೆನರಾ ಬ್ಯಾಂಕ್ ಲಿಮಿಟೆಡ್.

ಸ್ಥಾಪನೆ: 1906.

CANARA BANK LIMITED.

ಸ್ವದೇಶಿ ಔಷಧ ಭಂಡಾರ(ರಿಜಿಸ್ಟರ್ಡ್) ಕುಂಜಾಲು

—ಪ್ರಭೂಸ್—ಬಾಲಾಮೃತ—

ನಾನಾ ರೋಗ ರುಜೆಗಳಿಂದ ದೇಹದಲ್ಲಿ ಕೃಶವಾಗಿ ಸದಾ ಅಳುತ್ತಾ ಕಳೆಗುಂದಿರುವ ಬಾಲಕರು ದಷ್ಟಪುಷ್ಟರಾಗಿ ಸದಾ ನಗುತ್ತಿರುವಂತೆ ಮಾಡುವ ಅಮೋಘ ಗುಣಗಳುಳ್ಳ ಈ ಮಹೌಷಧದ 1 ಬಾಟ್ಲಿಯನ್ನು ಉಪಯೋಗಿಸಿಯೇ ಇದರ ಮಹತ್ವವನ್ನು ಪ್ರತಿ ಮಕ್ಕಳ ತಾಯ್ತಂದೆಗಳು ತಿಳಿದುಕೊಳ್ಳಬೇಕಾಗಿದೆ. ಬಾಟ್ಲಿ 1ಕ್ಕೆ 0-12-0

ನಮ್ಮ ಔಷಧಿ ಸಿಕ್ಕುವ ಸ್ಥಳಗಳು:—ಪ್ರಿಮಾಂಟ್ ಟ್ರೇಡಿಂಗ್ ಕಾರ್ಪರೆಶನ್ ಹುಬ್ಳಿ, ನವಭಾರತ ಬುಕ್‌ಡಿಪೋ, ಮೆಜೆಸ್ಟಿಕ್ ಸ್ಟೋರ್ಸ್, ವೊಡರ್ನ್ ನ್ಯೂಸ್ ಏಜನ್ಸಿ, ಉಡುಪಿ. T. ಗೋಪಾಲಕೃಷ್ಣ ಪೈ ಬ್ರದ್ಧಾವರ, H. ಗಣಪಯ್ಯ ಕಾಮತ್, C, B, Agency ಹಾಲಾಡಿ, ಗಣಪಯ್ಯ ಲಕ್ಷ್ಮಣ ನಾಯಕ್ ಅಂಡ್ ಬ್ರದರ್ಸ್ ಕೊಲ್ಲೂರು, ನರಸಿಂಹ ನಾಯಕ್ ಶಿಂಕಾರ ನಾರಾಯಣ, ವೆಂಕಟೇಶ ಶ್ರೀನಿವಾಸ ಭಟ್ಟ, ಕೋಟೇಶ್ವರ.

ಎಚ್ಚರಿಕೆ.

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿ ಮಾಂದ್ಯ, ಸುಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು, ಉತ್ಸಾಹ ಬೆಳೆಸುತ್ತದೆ. ಬೆಲೆ ರೂ. ೨—೮—೦

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦.

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ. ೧—೪—೦.

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

21-ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಉಡುಪಿ ಸ್ಟೋಕಿಸ್ಟರು: **ಸವಭಾರತ ಪುಸ್ತಕ ಭಂಡಾರ, ಉಡುಪಿ.**

ವಾರ ಭವಿಷ್ಯ

ತಾ. ೩—೯—೧೯೫೩ರಿಂದ ತಾ. ೧೦—೯—೧೯೫೩ರ ವರೆಗೆ.

ಮೇಷ— ಸ್ವಯಂ ಸಮರ್ಥರಾದ ನೀವು ಇತರರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ನಿಮ್ಮ ಕಾರ್ಯವನ್ನು ಸಾಧಿಸಿ ವಿಜಯಿಗಳಾಗುವಿರಿ. ಹಣದ ಮುಗ್ಗಟ್ಟು ನಿವೃತ್ತಿಯಾಗುವುದು. ಆರೋಗ್ಯದ ಮಟ್ಟಿಗೆ ಜಾಗರೂಕರಾಗಿರಿ. ತಾ. 4. 5 ಮಾತ್ರ ಅನುಕೂಲ.

ವೃಷಭ— ಕೊಂಚ ಹಣದ ಅಡಚಣೆ ನಿವೃತ್ತಿಯಾಗಿ ದೇಹ ಮನಸ್ಸುಗಳಿಗೆ ಸುಖ ಶಾಂತಿ ದೊರೆತೀತು. ಅದರೆ ಗೃಹ ಕಲಹ, ಹೆಂಡತಿ ಮಕ್ಕಳ ದೇಯಾಸಲ್ಯ ಗಳಿಂದ ನಿಶ್ಚಿಂತೆಯಿಂದಿರಲು ಸಾಧ್ಯ ವಿಲ್ಲವು. ತಾ. 3. 6. 7. 8 ಅನುಕೂಲ.

ಮಿಥುನ—ದುರ್ಜನರ ಮೈತ್ರಿಯಿಂ ದ ಧನಮಾನಗಳಿಗಪಾಯವಿವೆ. ಮನ ಸ್ಸು ಸ್ಥಿಮಿತದಲ್ಲಿ ನಿಲ್ಲದು. ಅನಿರೀಕ್ಷಿತ ಅನರ್ಥ. ತಾ. 4. 5. 9. 10 ಈ ದಿನ ಗಳಲ್ಲಿ ಬಂಧು ಮಿತ್ರರ ಸಹಾಯದಿಂದ ಶತ್ರು ನಾಶ, ಧನ, ಸ್ವಾಸಮಾನಗಳನ್ನು ಪಡೆಯಿರಿ.

ಕರ್ಕಾಟಕ— ತಗಾದೆಯು ಬಹು ಮಟ್ಟಿಗೆ ಕಡಿಮೆಯಾಗಲಿದೆ. ಮತ್ತು ವಿಶ್ವಮಿತ್ರಕಾರಕನಾದ ಅಂಗಾರಕನು ವಿಕ್ರಮಸ್ಥಾನಕ್ಕೆ ಪ್ರವೇಶಿಸುವುದರಿಂದ ಮಹತ್ಕಾರ್ಯವೂ ಅಲ್ಪಾಯಾಸದಿಂದ ಸಾಧ್ಯವಾಗಲಿದೆ. ತಾ. 4. 5. 9. 10 ಮಾತ್ರ ಪ್ರತಿಕೂಲವಿವೆ.

ಸಿಂಹ—ಶತ್ರುಗಳು ನಾಶವಾಗುವರು. ನಿಮ್ಮ ಆಗಭೋಗಗಳಿಗೇನೂ ಕಡಿಮೆಯಾಗದು. ಕೈಯಲ್ಲಿ ಸಾಕಷ್ಟು ಧನವನ್ನು ಸಂಗ್ರಹಿಸಿದುವಿರಿ. ಪ್ರವಾಸ, ಪಿತೃಷ್ಟಾನ ಸಂಬಂಧ ಕಾಹಿಲೆ, ಹೊಟ್ಟಿನೋವು ಇವುಗಳು ಕಾಣಬಹುದು. ತಾ. 6. 7. 8 ಅತಿವ್ಯಯ ಅಲಸ್ಯಕಾರಿಗಳವೆ.

ಕನ್ಯಾ—ಹೈದ್ರೋಗ, ಶತ್ರು ಭೀತಿ, ಪ್ರಾಣಸಂಕಲ್ಪಿನ ಕಷ್ಟ ನಷ್ಟ, ಅನಾಯಾಸ ಮತ್ತು ವೃಥಾ ಕಲಹಗಳು ಇವು ಗಳಿಂದ ಕೆಂಚಿತ್ತೂ ಸುಖವಿರದು. ತಾ. 3. 9. 10 ವಿಶೇಷತಃ ಪ್ರತಿಕೂಲವಿವೆ.

ತುಲಾ—ನಿಮ್ಮ ಆದಾಯವು ಕಡಿಮೆಯಾಗುವುದಲ್ಲದೆ ಖರ್ಚು ವೃದ್ಧಿಯೊಂದುತ್ತಾ ಹೋಗುವುದು. ಆಕಸ್ಮಿಕ ಅನರ್ಥ ಘಟನೆಗಳುಂಟಾಗಿ ನೀರಿನಂತೆ ಹಣ ವ್ಯಯವಾಗುವ ಸಂಭವವಿದೆ. ಪರಾಭವವನ್ನೂ ಹೊಂದುವಿರೆನ್ನಬಹುದು. ತಾ. 3. 4. 5 ಹಾನಿಕರ.

ವೃಶ್ಚಿಕ— ಅನಿಷ್ಟಕ್ಕಿಂತಲೂ ಇಷ್ಟ ವಧಿಕವಿದೆ. ನಾನಾ ತೆರನಾದ ಉದ್ಯೋಗಗಳಿಂದ ಧನವನ್ನು ಹುಡಿಯುವಿರಿ. ಖರ್ಚು ಲಬ್ಧವಿದುವುದರಿಂದ ಪೂರ್ವದಲ್ಲಿ ಮಾಡಿದ ಸಾಲಕಡಗಳನ್ನು ತೀರಿಸಲು ಸಾಕಷ್ಟು ಧನ ಲಭಿಸೀತು. ತಾ. 4ರಿಂದ 8ರ ವರೆಗೆ ನಿಮಗನುಕೂಲವಿಲ್ಲ.

ಧನು—ನಿಮ್ಮ ಆರೋಗ್ಯವು ಬಹು ತೇಕ ಸುಧಾರಿಸುವುದು. ಲೇವಾದೇವಿ ನಿಮಿತ್ತ ಕಲಹವಿದ್ದರೂ ನಿಮ್ಮ ಇಷ್ಟ ದಂತೆಯು ನೆರವೇರುವದು. ಕಾರ್ಯ ಜಯ. ವಾರಾಂತ್ಯದ 5 ದಿನಗಳನ್ನು ಬಿಟ್ಟು ಉಳಿದ ದಿನಗಳು ಅನುಕೂಲ ವಿವೆ.

ಮಕರ—ದೇಹ ದೌರ್ಬಲ್ಯ, ಸದಾ ಚಿಂತಾಕುಲರಾಗಿದ್ದ ನಿಮ್ಮ ಮನಸ್ಸಿಗೆ ಈಗಸ್ತೂ ಸುಖ ನೆಮ್ಮದಿಗಳು ಸೊರೆಯವು. ಆರ್ಥಿಕ ಮುಗ್ಗಟ್ಟು ವಿಶೇಷ ವಾಗಲಿದೆ. ತಾ. 3 9. 10 ಬಹಳ ಪ್ರತಿಕೂಲ.

ಕುಂಭ—ವಿಜಯ. ಆದರೆ ಚಂಚಲವಾದ ನಿಮ್ಮ ಮನಸ್ಸು ವಿಷಯಾದಿಗಳಲ್ಲಿ ಸಿಲುಕಿ ನಷ್ಟ ಕಷ್ಟ ಮತ್ತು ಅನಿಷ್ಟಗಳಿಗೆ ನಿಮ್ಮನ್ನು ಗುರಿಮಾಡುವ ಸಂಭವವಿವೆ. ತಾ. 3. 4. 5ರಲ್ಲಿ ಜಾಗ್ರತರಾಗಿರಿ.

ಮೀನ—ಇಷ್ಟಕ್ಕಿಂತ ದ್ವಿಗುಣ ಅನಿಷ್ಟ ಕಾಣಬಹುದು. ಕೈಗಾರಿಕೆ ವ್ಯಾಪಾರ ನೌಕರಿ ಲೇಖನ ಮುಂತಾದ ಕಾರ್ಯಗಳಲ್ಲಿ ಯಶಸ್ಸು ದೊರೆಯಲಾರದು. ತಂದೆ ಮಕ್ಕಳಿಗಿನ ವೈಷಮ್ಯವು ಪರಿಹಾರವಾಗಲಿದೆ. ಶ್ರಮ ಪಟ್ಟು ಹುಡಿಯುವವರಿಗೆ ಹಣದ ಕೊರತೆಯಿರದು. ತಾ. 3. 9. 10 ಅನುಕೂಲ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಜಾದಿ ಮತ್ತು ಖುಲ್ ಬಟ್ಟೆಗಳೂ ಸಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

BHUVANENDRA PRODUCTS Ltd,

Head Office and Factory:

Katapadi, S. Kanara

Depots:

1 Mahratha Galli, Hubli

2. 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಗಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕೆಮಿಸ್ಟ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ಕಡಿಯಾಳಿ. (3) ಡಾಕ್ಟರ್ ಪಿ. ಜಿ. ಅಜಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಕೇಶಗಿರಿ ಪೈ L. I. M. ಡಾಕ್ಟರ್ ನಿಂಕಟಿ ರಾವ್, ಕೊರಡ್ಡಲ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಆರೆ ಬಿಟ್ಟರುವ ನಿಮ್ಮ ಮಕ್ಕಳು ತಿರುಗಿ
ನಿಮ್ಮ ಕೈ ಸೇರುವುದು
ಸೀಸೆ ೧ಕ್ಕೆ ೦೨ ಆಣೆ; ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು.—
ನವಭಾರತ ಬುಕ್ ಡಿಪೋ,
ಉಡುಪಿ

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕತಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರೆ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,
President & Manager ಪ್ರಸಿಡೆಂಟ್ ಮತ್ತು ಮೇನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯ-ವಿದೆ.
ಉಡುಪಿ. : : : ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು—

ಆರಕ್ಕ ಸ್ತ್ರೀಯರಿಗೆ **ಜರ್ಭ ಕಂಟ್ರೋಲ** ತೀರಾಗರ್ಭಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂಮೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಪಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಪರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ, ಮೆದ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ನೊದಲು ತಕ್ಕೊಳ್ಳ ಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಹತ್ಯೆ.—ಪರಮಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦ ನೋಪ್ಪ ಜಾರ್ಜು ೮ ಆಣೆ.

ಮೂಲಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಶಾಮ.ಸಿ.—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡದ. ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್, ಬಳ್ಳಾರಿ:—ಎಚ್. ವಿರುಪಾಕ್ಷಪ್ಪ ವರ್ಚಂಟ್, ಬಳ್ಳಾರಿ, ಗೋಕಾಕ-—ಸಂಗಪ್ಪ ಶಿವಲಿಂಗಪ್ಪ ಆಂಡಾನಿ.

ಶಾಂತಿ ಪೈನ್ ಆಯಿಲ್

ಹಳೆ ನೋವು, ಗಾಯ ಮತ್ತು ಬಾವುಗಳಿಗೆ ಇದಕ್ಕಿಂತ ಉತ್ತಮ ಎಣ್ಣೆ ಬೇರೊಂದಿಲ್ಲ ಪರೀಕ್ಷಿಸಿರಿ!

ಇತರ ಔಷಧಗಳೂ ನಮ್ಮಲ್ಲಿ ಮಾರಾಟಕ್ಕಿವೆ.

WANTED STOCKISTS
Shanthi Products (Regd.)
Kurady (S. Kanara)

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾವೇಕ್ಷತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನಮ್ಮಲ್ಲಿ ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ನೆಚ್ಚಿನೆಯ ನ್ನಲಂಕರಿಸಿವೆ; ಮನವನ್ನು ಸೆಳೆದಿವೆ.

ಹಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೪ ೦	ಭಯಂಕರ ಸೇಡು	ಬೆಲೆ ೧ ೪ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೪ ೦
ಕರಿನೀರು	ಬೆಲೆ ೨ ೦ ೦	ಅಮಾತ್ಯಸಂದಿನಿ	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦

ಕೆಟಲಾಗಿಗೆ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಪಾವೇರಿ
ಬರೆಯರಿ — ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

DIAMONDS! ವಜ್ರಗಳು! DIAMONDS!

K. R. K. SHET.

Opposite Govt. College, Hampankatta MANGALORE.

ಮಹಾತ್ಮಾಜೀಯವರ 74ನೇ ಜನ್ಮದಿನವಾದ ಇದೇ ತಾ.2ರಲ್ಲಿ ಭಾರತದ ಸರ್ವ ಕಡೆಗಳಲ್ಲಿಯೂ ಸಭೆ, ಮೆರವಣಿಗೆ, ಬಡವರಿಗೆ ಅನ್ನದಾನ ಹರತಾಳ ನೊದಲಾದ ಕಾರ್ಯಕ್ರಮಗಳು ಜರಗಿ ಹಲವರ ದಸ್ತಗಿರಿಯಾಗಿದೆ ಕರಾಚಿಯಲ್ಲಿ 200ಕ್ಕೆ ಮಿಕ್ಕಿದ ಕಾಂಗ್ರೆಸ್ ಕೆಲಸಗಾರರು ಬಂಧನಕ್ಕೊಳಗಾದರು. ಮದ್ರಾಸ್ ಪಟ್ಟಣದಲ್ಲಿ 12, ಕರ್ನಾಟಕದಲ್ಲಿ 30 ಮಂದಿ ದಸ್ತಗಿರಿಯಾದರು. ಮದ್ರಾಸ್ ಮೆಡಿಕಲ್ ಕಾಲೇಜ್ ಮತ್ತು ಮದ್ರಾಸಿನ ಸ್ಯಾನ್ಫೆಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳು ಆ ದಿನ ಬಹಿಷ್ಕಾರ ಹಾಕಿದ್ದರು. ಕಾಲೇಜುಗಳ ವಠಾರದಲ್ಲಿ ಸಶಸ್ತ್ರ ಪೋಲಿಸ್ ಪಹರೆಯಿತ್ತು. ಬೊಂಬಾಯಿಯಲ್ಲೆಲ್ಲಾ ಧ್ವಜಾರೋಹಣ ಪಹರೆ, ಹರತಾಳ ಇತ್ಯಾದಿಗಳಿಂದ ಗಾಂಧೀ ದಿನವಾಚರಿಸಲ್ಪಟ್ಟಿದೆ. ಹಲವು ಪಟ್ಟಣಗಳಲ್ಲಿ ಕೋರ್ಟು ಪಹರೆ ಹಿಡಿಯುತ್ತಿದೆ. ಬೊಂಬಾಯಿ, ಅಹಮ್ಮದಾಬಾದ್, ಕಲ್ಕತ್ತ, ಮೊರದಾಬಾದ್, ಡಕ್ಕಾ ಶಿಲ್ಲಿ, ಲಕ್ನೋ, ನಾಗಪುರ, ಲಾಹೋರು ನೊದಲಾದ ಎಲ್ಲಾ ನಗರಗಳಲ್ಲಿಯೂ ಗಲಭೆ, ದಸ್ತಗಿರಿಗಳು ನಡೆದಿವೆ.

ಗೋಳೇಬಾರು.

ಶಿಲ್ಲಿಯಲ್ಲಿ ತಾ. 2ರಲ್ಲಿ ಎರಡು ಬಾರಿ ಗೋಳೇಬಾರು ಮತ್ತು ಲಾಠೀ ಚಾರ್ಜು ನಡೆದು ಒಬ್ಬನು ಸತ್ತು ಕೆಲವರು ಘಾಯಗೊಂಡರು. ಮೆರವಣಿಗೆಗೆ ಸನ್ನದ್ಧರಾದ ಜನರು ಅಧಿಕಾರಿಗಳ ಆಜ್ಞೆಯನ್ನು ಮೀರಿ ಕಲ್ಲು ಇಟ್ಟಿಗೆ ಬಿಸಾಡಿ ಗಲಭೆಮಾಡಿದರೆಂದು ಸರಕಾರೀ ಪ್ರಕಟಣೆಯಿದೆ. ಬಿರಿಸ್ನಾದ ಬಾಸುದೇವಪುರ ಪೋಲೀಸ್ ಸ್ಟೇಶನಿನ ಪೇರೆ ಧಾಳಿಯಿಟ್ಟ ಜನತಂಡದ ಮೇಲೆ ಗುಂಡೆಸೆತ ನಡೆದು ಇಪ್ಪತ್ತೈದು ಮಂದಿ ಪುಡಿಮಬಿಬ್ಬರು. ಹಲವರು ಜಖಮಿಗೊಂತರು. ಕೈದಲ್ಲಿ ಎರಡು ಬಾರಿ ಗೋಳೇಬಾರಿನಿಂದ ಇಬ್ಬರು ಮಡಿದರು. ಬಲಸೋರಿನಲ್ಲಿ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟಿಗೆ 17 ಜನರು ಸುಗ್ಗಿ ಮೆಜಸ್ಟ್ರೇಟರಿಗೆ ಹೂಮಾಲೆ ಹಾಕಿ ರಾಜೀನಾಮೆ ಕೊಡುವಂತೆ ಕೇಳಿಕೊಂಡು, ರಿಕಾರ್ಡುಗಳನ್ನೂ ತದೆಯಲು ಬಂದು ಪೋಲಿಸರವನ್ನು ಪಗ್ಗಿಯನ್ನೂ ಹರಿದು ಹಾಕಿದರು. ಅವರೆಲ್ಲರನ್ನೂ ದಸ್ತಗಿರಿಮಾಡಲಾಯಿತು. ಬಂಗಾಳದ ಮಿಡ್ನಾಪುರದಲ್ಲಿ ಒಂದೇ ದಿನ ಮೂರು ಕಡೆಗಳಲ್ಲಿ ಗೋಳೇಬಾರು ನಡೆದು 6 ಮಂದಿ ಸತ್ತು ಹಲವರು ಘಾಯಗೊಂಡರು.

WANTED.

Candidates who know to read and write Kannada are wanted for jobs of Rs. 22/- per month and failed S. S. L. C's are wanted for jobs of Rs. 60/- and over. For further details etc., please interview.

P. S. Thimmappa Shetty, B. A.,
Ambalapady,
UDIPI, P. O.

ಬೇಕಾಗಿದೆ

ತಿಂಗಳೊಂದಕ್ಕೆ ರೂ. 22/- ಸಂಬಳದ ಕೆಲಸಕ್ಕೆ ಕನ್ನಡ ಓದುಬರಹವಿಲ್ಲ ಮತ್ತು ರೂ. 60/- ಮೇ ಹೆಚ್ಚು ಸಂಬಳದ ಕೆಲಸಕ್ಕೆ ಎಸ್. ಎಸ್. ಯಲ್. ಸಿ. ವೈಲಾದ ಉಮೇದ್ವಾರರು ಬೇಕಾಗಿದೆ. ಹೆಚ್ಚಿನ ವಿವರಗಳಿಗೆ ಜಯಮಾಡಿ ಭೇಟಿಯಾಗುವುದು.

ಕೆ. ಎಚ್. ತಿಮ್ಮಪ್ಪ ಶೆಟ್ಟಿ, ಬಿ. ಎ.,
ಅಂಬಲಪಾಡಿ, ಉಡುಪಿ.

CORRECTION.

Register of members and Transfer Books of **Sri Ramakrishn Theatre Ltd. Udipi,** will remain closed from Wednesday the 7th October 1942 to Friday the 30th October 1942, and not from Thursday the 1st October as notified in our previous issue. The error is regretted.

EDITOR.

ತಾರೀಖು 7—10—1942ರಿಂದ

ಜೆಮಿನಿಯವರ ಸೇವಾಸದನ

ಲಭಿಸುವರು: ಅಜ್-ತಿ-ದುನಿಯಾ. ಬರುತ್ತವೆ: ಮಧುಸೂದನ್, ಪರ್ವತ

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.,

ಮಂಗಳೂರು.

ಚಂದಾ ಎತ್ತಿದ (Issued Shares) ಬ್ಯಾಂಕಿನ ಪಾಲುಗಳನ್ನೆಲ್ಲಾ ಮಹಾಜನರು ಪಡೆಕೊಂಡು ಮುಗಿದಿರುವದೆಂದು ತಿಳಿಸಲು ನಾವು ತುಂಬಾ ಸಂತೋಷಿಸುತ್ತೇವೆ.

THE VIJAYA BANK LIMITED. MANGALORE.

GET MEDICAL DEGREES BY HOME

Examination—Ayurvedic, Homeopathic, Unani etc.; Prospectus Free.

Dr. Mansingh, Kotgarh (Simla.)

ಜಮ್ಮೂ ಕಾಶ್ಮೀರ.

ಇದು ಪರಾತನ ಆಯುರ್ವೇದ ಪದ್ಧತಿಯಂತೆ ತಯಾರಿಸಲ್ಪಟ್ಟಿದೆ. ಅಮೂಲ್ಯವಾದ ಕೈಮಿನಾಕಶಕ್ತಿಯನ್ನು ಹೊತ್ತಿರುವ ಗುಳಿಗೆಗಳು ಇದರಲ್ಲಡಗಿವೆ. ಸಳಲು ಆರ್ಥ ರೋಗಗಳಿಗೆ ಇದೊಂದು ಸುಖಚಿಕಿತ್ಸೆ. ಹಂಟು ತರವಾಗಿಯೂ, ಕೈಮಿನಾಕಶಕ್ತಿಯಾಗಿಯೂ, ಇದೆ. ನಿತ್ಯ ಶಾಯು, ಶುಜ್ಜ, ಶಕ್ತಿ, ಸಳಿವಳಿಕೆ, ಹಾಲುಬಿಯಿಸು, ಒಡಕು, ಬೆಂಕಿತಾಗಿದ್ದು, ಉರಿ, ಹುಳಮೇಯುವುದು ಮುಂತಾದ ಚರ್ಮರೋಗಿಗಳಿಗೆ ಅತ್ಯಂತ ಗುಣಕಾರಿ.

ಪ್ರತಿಯೊಂದು ಔಷಧದ ಸಜಾವು ಸ್ಪಷ್ಟವಾಗಿ ಸೆಂದರೆ ತಪ್ಪಾಗದು. ಒಮ್ಮೆ ಪರೀಕ್ಷಿಸಿರಿ.

ಕೈಯ ತಬ್ಬಲು 1ರ 0—2—0.

ವ್ಯವಸ್ಥೆಯವರು ಕೃಪಾಭಿಲಾಷಿಗಳು:-

ಅಂಕೆಯರು ಬಿಡರ್ಸ್,

ಬರ್ಮಾ ಕೋಡ್, ಉಡುಪಿ, ಪೆ. ಕ.

ಏಜೆನ್ಸಿಯನ್ನಕ್ಕೆ ಕೂಡಲೆ ಕಾಗದ ಬರೆಯಿರಿ.

The Canara Banking Corporation Limited.
(Incorporated in British India with limited liability).
ESTD: 1906.
Our rates of interest on deposits from 7-8-1942.

1.	Current	1 % p. a. from Jan. to June ½ % p. a. from July to Dec
2.	Savings Bank	2 % p. a.
3.	Short-term	1½% p. a.
4.	Fixed 3 months	1½% p. a.
	6 ,,	2 % p. a.
	9 ,,	2½% p. a.
	12 ,,	3 % p. a.
	24 ,,	3½% p. a.

Advances against approved securities made at very competitive rates.

ಉಡುಪಿ, ಗುರುವಾರ, ೪-೧೦-೧೯೪೨

ಹೊಣೆ ಯಾರು?

ಗಾಂಧೀಜಿಯವರು ಹೋರಾಟ ಹೂಡುವ ಮೊದಲೇ ಅವರನ್ನೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರನ್ನೂ ದಸ್ತಗಿರಿ ಮಾಡಿದುದಕ್ಕೆ ಕಾರಣವನ್ನು ಸರಕಾರೀ ಪ್ರಕಟಣೆ ತಿಳಿಸಿದೆ. ಮಿ. ಅಮೆರಿಯವರ ಹಾಗೂ ವೈಸರಾಯ ಕೌನ್ಸಿಲಿನ ಕೆಲಮಂದಿ ಹಿಂದೀ ಸದಸ್ಯರ ಬಾಯಿಯಿಂದ ಇವರ ಕಾರಣವನ್ನು ಮಾತ್ರವಲ್ಲ– ಅದರಿಂದುಂಟಾದ ಸತ್ಪರಿಣಾಮವನ್ನೂ ಕೇಳಿದ್ದೇವೆ. ದೇಶದಲ್ಲೀಗ ನಡೆಯುತ್ತಿರುವ ಗೊಂದಲಗಳೆಲ್ಲಾ ಕಾಂಗ್ರೆಸು ಹೊಣೆ– ಗಾಂಧಿಯವರು ಬಾಯಿಬಿಡುವ ಮೊದಲೇ ಬಂಧಿಸಿಟ್ಟು ಈ ಹಿಂಸಾತ್ಮಕ ಚಳವಳಿಯ ರಭಸ ತುಗ್ಗಿಸಿದೆವು ಎಂದು ಅಧಿಕಾರಿಗಳ ಸಮಾಧಾನ. ಆ ತುರಿತು ನಮ್ಮ ಪ್ರಶ್ನೆಯಿಲ್ಲ. ಆದರೆ 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಯ ಸಂಪಾದಕರೇ ಮೊದಲಾದವರೆ ವಿಚಾರಣೆ ನಡೆಸಿದ ನ್ಯಾಯಾಧೀಶರು ಈ ಗೊಂದಲಕ್ಕೂ ಕಾಂಗ್ರೆಸಿಗೂ ಇರುವ ಸಂಬಂಧದ ತುರಿತು ಭಿನ್ನಾಭಿಪ್ರಾಯ ಸೂಚಿಸಿದ್ದಾರೆ 'ಇಂತಹ ಕೃತ್ಯಗಳು ಗಾಂಧಿಜಿ' ಹೆಸರಿಗೆ ಕಳಂಕ' ಎಂದು ಗಾಂಧೀ ಗುಟ್ಟನ್ನರಿತಿದ್ದ ಧುರೀಣರಾತಿದುದನ್ನೂ ನಾವು ಕೇಳಿದ್ದೇವೆ. ಈ ಚಳವಳದಲ್ಲಿ ಗಾಂಧಿಯವರದೆಷ್ಟು- ಅವರದಲ್ಲವಾಗಿರುವ ಅಂಶವೆಷ್ಟು ಎಂಬುದನ್ನು ತಿಳಿಯದೆಂತಾಗಿರುವದು ನಿಜ. ಅದನ್ನು ತಿಳಿಸುವ ಹೊಣೆಹೊತ್ತವರಿಗೆ ಸಂದರ್ಭ ದೊರೆಯಲಿಲ್ಲ; ಆ ಸಂದರ್ಭ ಮಿ. ಅಮೆರಿಯವರ ಪಾಲಿಗೆ ಬಂತು!

ಇದು ಕಾಂಗ್ರೆಸಿನ ಮೇಲೆ ಹೊರಿಸಲ್ಪಟ್ಟ ಆರೋಪವಲ್ಲ-ಸತ್ಯ ದಾಖಲೆಯೆಂದೊಪ್ಪಿಕೊಳ್ಳೋಣ. ಕಾಂಗ್ರೆಸು ಹೋರಾಟದ ಸಿದ್ಧತೆಯಲ್ಲಿತ್ತು. ಹೋರಾಟ ಬೇರೇನನ್ನೂ ಹಾರೈಸುತ್ತಿರಲಿಲ್ಲವೆನ್ನಲು ಮಿ. ಅಮೆರಿಯವರಿಂದಲೂ ಸಾಧ್ಯವಿಲ್ಲ. ತನ್ನ ಸಂಧಾನದ ಕರ್ತವ್ಯಗಳು ಪೂರೈಸದ್ದಾರೆ ಮಾತ್ರ ಸಂಗ್ರಾಮವೆಂದು ರಾಷ್ಟ್ರಸಭೆ ಸ್ಪಷ್ಟಪಡಿಸಿತ್ತು. ಸದ್ಯ ಸ್ಥಿತಿಯಲ್ಲಿ ಕಾಂಗ್ರೆಸಿನ ಕರ್ತವ್ಯಗಳು ಕೇವಲ ಅವ್ಯವಹಾರ್ಯವೆಂದು ನಮಗೆ ಮಂದಟ್ಟಾಯಿದುದರಿಂದಲೇ ಮಿತ್ರ ರಾಷ್ಟ್ರೀಯರಿಗಾಗುವ ಯುದ್ಧಹಾನಿ ತಪ್ಪಿಸುವದಕ್ಕಾಗಿ ನಾವು ಮಂಡನೀತಿ ಕೈಕೊಂಡೆವು ಎಂದು ಹಿಂದೀ ಸರಕಾರದ ಹೇಳಿಕೆಯಿದೆ. ಭಾರತದ ಬೆಂಬಲ ತನಗೆ ಬೇಕಾಗಿರುವಾಗ ಭಾರತವು ಇಂತಹ ಕರಿಣ ಶರ್ತಗಳನ್ನೆಷ್ಟು ಮುಂದೆ ಮಾಡಿದು ದಕ್ಕಾಗಿ ಸರಕಾರವು ವ್ಯಸನಪೂರ್ವಕ ಧೋರಣೀಕ್ಕೆ ಕೈಯೊಡ್ಡಿತೆಂದು ಹೇಳಲಾಗಿದೆ. ಇನ್ನೆಲ್ಲವೂ ಸಿದ್ಧವಾಗಬಹುದು. ಧುರೀಣ್ಯ ನೀಡುವಾಗ ಕಾಂಗ್ರೆಸಿಗೂ ಅಪ ವ್ಯಸನಕ್ಕೆ ಭಾರೀ ದಾಖಲೆಗಳಿವೆ. ಅಮೇರಿಕದ ಪ್ರಸಿದ್ಧ ಲೇಖಕ ಲೂಯಿ ಫಿಶರರ ಕೈಯಲ್ಲೊಂದು ಪತ್ರವನ್ನು ಅಧ್ಯಕ್ಷ ರುಸವೆಲ್ಟರಿಗೆ ಮುಟ್ಟಿಸಲು ಗಾಂಧಿಜೀ ಕೊಟ್ಟದ್ದು, ಆದರಲ್ಲಿ ಅಧ್ಯಕ್ಷರೇ ಹಿಂದೀ ಸ್ಪಷ್ಟೀಯ ತೀರ್ಮಾನ ಕೊಡಬೇಕೆಂದು ಕೇಳಿಕೊಂಡಿದ್ದರು. ಇದು ಅಂತಹ ವೈಷ್ಟಾಂತಗಳಲ್ಲೊಂದು. ಭಾರತದ ಗೊಂದಲಕ್ಕಾಗಿ ಅಮೇರಿಕವೂ ವ್ಯಸನ ಪಡುತ್ತದೆ; ಬ್ರಿಟಿಷ್ ಅಧಿಕಾರಿಗಳು ಅಮೇರಿಕಕ್ಕಾಗಿಯೂ ತಮಗಾಗಿಯೂ ವ್ಯಸನಪಡುತ್ತಾರೆ; ಗಾಂಧೀಜೀಯವರು ವ್ಯಸನಪಟ್ಟು ಆಕ್ಸಿಸ್ ರಾಷ್ಟ್ರಗಳ ಕಡೆಗೆ ಶತ್ರುನೀಡೆದೆ, ಆದೇ ಅಮೇರಿಕಾಧ್ಯಕ್ಷರೊಡನೆ ಮಧ್ಯಸ್ಥಿಕೆಗಾಗಿ ಯಾಚಿಸಿದ್ದಾರೆ. ಅಂದ ಮೇಲೆ ಹಿಂದೀ ಸಮಸ್ಯೆಯು ಕುರಿತು ಅಧ್ಯಕ್ಷ ರುಸವೆಲ್ಟರು ಕೈಹಾಕಿ ಎಲ್ಲರ ವ್ಯಸನಗಳನ್ನೂ ನಿವಾರಿಸಿಬಿಡುಬಹುದಿತ್ತು! ಈ ರೀತಿ ಕಾಂಗ್ರೆಸಿನ ಸಂಧಾನಾತುರವು ಸಂಗ್ರಾಮಾತುರತೆಗಿಂತ ಬಲವಾಗಿರುವಾಗ –ಬ್ರಿಟಿಷರಿಗೂ ಸತ್ಯವಾಗಿ ಅದು ಬೇಕಾಗಿದ್ದರೆ–ಸರಕಾರವು ಅಧ್ಯಕ್ಷ ರುಸವೆಲ್ಟರ ಸಂಧಿ ಯತ್ನದ ಪರಿಣಾಮವನ್ನು ನೋಡಿಕೊಂಡು ಆ ಮೇಲೆ ಕಾರ್ಯಕ್ಕೆ ಕೊಳ್ಳಬೇಕಾಗಿತ್ತು. ಹಾಗಾಗಲಿಲ್ಲ. ಹಿಂದುಸ್ಥಾನದ ಮಟ್ಟಿಗೂ ಬ್ರಿಟಿಷ್ ಘೋಷಣೆಯೇ ತನ್ನ ಧೋರಣೆಯೆಂಬ ಅಧ್ಯಕ್ಷ ರುಸವೆಲ್ಟರು ಸಾರಿದುದೂ ಇಲ್ಲ ಅತ್ತ ಮಿಂಚು ವೇಗದಿಂದ ಧುರೀಣರೆಲ್ಲರ ದಸ್ತಗಿರಿ ನಡೆಯಿತು; ಆಗ ಬಾರದುದೆಲ್ಲಾ ಆಗಿ ಹೋಯಿತು!ಆ ಮೇಲಾದರೂ ಸಂಧಾನ ಮಾತುಕತೆಗಾಗಿ ಕಾಂಗ್ರೆಸ್ ಪ್ರಮುಖರೊಡನೆ ಭೇಟಿ ಯಾಚಿಸಿದ ಹಿಂದೂ ಮಹಾ ಸಭಾ ಪ್ರತಿನಿಧಿಗಳಿಗೆ ಒಪ್ಪಿಗೆ ದೊರೆಯಲಿಲ್ಲ. ಭಾರತೀಯ ಪಕ್ಷಗಳೆಲ್ಲಾ ಒಟ್ಟಾಗಿದ ಮೇಲೆ ದೃಢೀಕರಣಕ್ಕಾಗಿ ಆಗಾಗ ಕರೆಪಡೆಯುತ್ತಿರುವ ಮಿ. ಅಮೆರಿಯವರು ಇದಕ್ಕೆಲ್ಲಾ ಕಾರಣ ಕೊಟ್ಟಿದ್ದಾರೆ. ಸದ್ಯಸ್ಥಿತಿಯಲ್ಲಿ ಕಾಂಗ್ರೆಸ್ ಪ್ರಮುಖರೊಡನೆ ಸಂಧಾನ ಹೇಗೆ ಬಿಡುವದರಿಂದ ಫಲ ದೊರೆತೀತೆಂಬ ಭರವಸೆ ಅವರಿಗಿಲ್ಲವಂತೆ! ಭಾರತದ ಪಕ್ಷ ಸಂಗಡಗಳು ಪರಸ್ಪರ ಭರವಸೆಯಿಟ್ಟು ಕೊಳ್ಳುವ ಕೆಲವು ಮಾರ್ಗಗಳಾದರೂ ಉಳಿದಿವೆ. ಆದರೆ ನೊದಲಾಗಿ ಮಿ. ಅಮೆರಿಯವರಲ್ಲಿ ಭರವಸೆ ನಿರ್ಮಿಸದೆ ಯಾವುದೂ ಕೈಗೂಡಲೆಡೆಯಿಲ್ಲವೆಂಬುದು ಮೇರಿನ ಘಟನೆಯಿಂದ ಖಚಿತವಾಗುತ್ತದೆ. 'ಬ್ರಿಟಿಷರಿಗೆ ನನ್ನಲ್ಲಿ ವಿಶ್ವಾಸವಿಲ್ಲ; ಅಧಿಕಾರ ಬಿಟ್ಟು ಕೊಡುವ ಮನಸ್ಸಿಲ್ಲ' ಎಂಬ ಭಾರತದ ಸರ್ವ ಪಕ್ಷಗಳ ಜೀರಿಕೆಯನ್ನು ನಿ. ಅಮೆರಿಯವರು ಆಕುದನ್ನಿಸಿದ್ದಾರೆ. ಈ ರೀತಿ ಕಾಂಗ್ರೆಸಿನ ಸಂಧಾನ ಕರೆಯ ಕಂಠ ಹಿಸುಕಲ್ಪಟ್ಟಿತು; ಕಾಂಗ್ರೆಸೇತರರ ಶಾಂತಿ ಪ್ರಯತ್ನಕ್ಕೆ ಜಡೆ ಬಿತ್ತು. ತಮ್ಮಲ್ಲಿ ಹೋರಾಡುವ ಶಕ್ತಿಯೂ ಇದೆ ಎಂದು ಹೆಮ್ಮೆಪಟ್ಟ ಕಾಂಗ್ರೆಸನ್ನು ಸಂಪೂರ್ಣ ಸೋಲಿಸದೆ ಮಿತ್ರ ಕೆಲಸವಿಲ್ಲ, ಎಂದು ಸರಕಾರದ ಪ್ರತಿನಿಧಿಗಳನ್ನಿತ್ತಿದ್ದರೆ ಸಂದೇಹ ಕೈಡೆಯರಲಿಲ್ಲ. ಬಾಯಲ್ಲಿ, ನಮಗೆ ಭಾರತದ ಬೆಂಬಲಬೇಕು; ಶಾಂತಿ ಸೌಹಾರ್ದ ಬೇಕು; ಭಾರತೀಯರೊಟ್ಟಾಗುವದನ್ನು ಕಾಣಬೇಕು; ಎಂಬ ಮಂತ್ರ-ಕಾರ್ಯದಲ್ಲಿ ಇಂತಹ ಅಡ್ಡಗಾಲು, ಇದು ಮಾತ್ರ ಖಂಡನೀಯ ವಿಷಯ.

ನಿಜರೂಪ ಪ್ರದರ್ಶನ!

ಮಿ. ಅಮೆರಿಯವರು ತನ್ನ ಇತ್ತೀಚಿಗಿನ ಭಾಷಣವೊಂದರಲ್ಲಿ ಭವಿಷದ್ಭಾರತದ ಭವ್ಯರೂಪವನ್ನು ಚಿತ್ರಿಸಿದ್ದಾರೆ. ಆದರ ಮುಖ್ಯ ಭಾಗವೆಂದರೆ ಭಾವೀ ಭಾರತಕ್ಕೆ ಆಸ್ಟ್ರಾಡೊಡನೆ ಸಂಬಂಧ ಕಲ್ಪಿಸು; ಬ್ರಿಟಿಷ್ ಕಾಮನ್‌ವೆಲ್ತ್‌ನೊಡನೆ ಕೂಡಿ ಕೊಂಡಿರಲು ಅದು ಬದ್ಧವಿದೆ ಎಂಬುದೇ. ಭಾರತ ಸಚಿವರ ಇಂತಹ ಹೊಚ್ಚ ಈ ದ್ಗಾರವು ಆಸ್ಟ್ರಾನರಿಗೆ ತಿಳಿಸುಳಿಯನ್ನುಂಟುಮಾಡಿರಬಹುದು! ಭವಿಷತ್ಕಾಲದಲ್ಲೂ ಬ್ರಿಟಿಷ್ ರಾಷ್ಟ್ರಸಮೂಹದ ಪಶ್ಚಿಮ ಗುಂಪಾಗಿ ಯುರೋಪು, ಪೂರ್ವ ಗುಂಪಿನಲ್ಲಿ ಭಾರತವು ಸ್ಥಾನ ಪಡೆದು ನಿಲ್ಲುವ ಕನಸನ್ನು ಇಂಡಿಯಾ ಸೆಕ್ರೆಟರಿಗಳು ಕಾಣುತ್ತಿದ್ದಾರೆ. ಹಿಂದುಸ್ಥಾನವು ತೋರು ವಿಕೆಯಂತೆ ಅಸ್ಯಾಖಂಡಸ್ಥ ಒಂದು ಭಾಗವೇ ಅಲ್ಲ; ಹಿಂದೀ ಸಮುದ್ರಮೊಡನೆ ಬೆರೆತಿರುವ ಸಮುದ್ರ ಬದಿಯ ರಾಷ್ಟ್ರಗಳ ಗುಂಪಿಗೇನೇ ಅದು ಸೇರುತ್ತದೆ- ಎಂದು ಅಮೆರಿಯವರ ಕೋಧ. ಹಿಂದೀ ಸಮುದ್ರಕ್ಕೆ ಹೊಂದಿಕೊಂಡಿರುವದು ಭೂಮಧ್ಯ ಸಮುದ್ರ. ಹಾಗಾದರೆ ಭಾರತವು ಇಟೆಲಿಯನ್ನು ಸೇರಬೇಕಾದ ರಾಷ್ಟ್ರವೇ! ಇದನ್ನು ಅಮೆರಿಯನರೊಪ್ಪಲಾರರು. ಬ್ರಿಟಿಷ್ ಸಾಮ್ರಾಜ್ಯದೊಡನೆಯೇ ಹಿಂದುಸ್ಥಾನದ ಸಂಬಂಧವೆಂದೊಪ್ಪಿದರೆ ನಾತ್ರ ಅಮೆರಿಯವರಿಗೆ ಸಮಾಧಾನ. ಭಾರತದ ವಿವಿಧ ಪಕ್ಷಗಳಲ್ಲಿ ಬುದ್ಧಿಪ್ರಾಮಾಣ್ಯವನ್ನೆಂದಿಗೂ ಕಾಣದ ಅಮೆರಿಯವರಿಗೆ, ಪ್ರಕೃತಿಯಿಂದ ಸಂಸ್ಕೃತಿಯಿಂದ ತೀರಾ ಭಿನ್ನವಾಗಿರುವ ಯುರೋಪು ಮತ್ತು ಭಾರತಕ್ಕೂ ತದೇಕಾತ್ಮತೆಯಿರುವದು ಸ್ಪಷ್ಟವಾಗಿ ಕಾಣುತ್ತಿದೆ! ಭಾರತದಲ್ಲಿ ಇಂದಿನಂತಹ ಕಾಲಾವನ್ತರವನ್ನು ನಾವು ಪ್ರದರ್ಶಿಸುತ್ತಿರುವಾಗಲೂ ಭಾವೀ ಸಂಬಂಧಕ್ಕಾಗಿ ಹುಂಗಡಚಿಡಿಸುವ ಧೈರ್ಯ ಮಿ. ಅಮೆರಿಯವರಲ್ಲಾಯಿತೆಂದು ಅಶ್ಚರ್ಯವೆನ್ನಬೇಕೆ! ಬಿಳಿ ಜನರ ವ್ಯಾಪಾರೀ ಹಿತಕ್ಕಾಗಿ ತೂಲಕ ಸಾಗಿಬಂದ ಕೃತಕ ಸಂಬಂಧದ ಸರಿಯಾದ ಪರಿಚಯವು ಅಸ್ಯಾವರಿಗಾಗಿದೆ; ಅಮೆರಿ ಖಾಣಿಜಂತಹ ವ್ಯಾಪಾರೀ ಭಾಷೆಯು ಅರ್ಥವನ್ಯಂತೂ ಅಷ್ಟು ಹೊಸಲೇ ತಿಳಿದಿದ್ದಾರೆ. ಅಂದ ಮೇಲೆ ಯುದ್ಧ ಮುಗಿದ ಹೇಲೆ ಭಾರತ ವಿಚ್ಛೇಶಾಂತಕ ಪೂರ್ಣ ಸ್ವಾತಂತ್ರ್ಯ' ಎಂಬ ಪರಡೆಯೊಳಗಿನ ಕೈಯನ್ನು ಕೆಲವ ರಾದರೂ ಕುಲುಕಬಹುದು-ಅಮೆರಿಯವರಂತೆ ತಿಜವೇಷ ಪ್ರದರ್ಶನಕ್ಕೆ ಮುಂದಾದರೆ ಎಲ್ಲರೂ ಮುಖ ತಿರುಗಿಸುವದು ಖಂಡಿತ!

ಹಾರ್ದಿಕ ವಿಜಯೋತ್ಸವ.

ಇತ್ತೀಚೆಗೆ ಬಂದ ಜಿಲ್ಲಾ ಮೆಜಿಸ್ಟ್ರೇಟರ ಆಜ್ಞೆಯಂತೆ ಕಾಯಿದೇಭಂಗ ಚಳವಳೆಗೆ ಸಂಬಂಧಪಟ್ಟು ನಡೆದ ಘಟನೆ, ಸರಕಾರೀ ವರ್ತನೆ, ವಿಚಾರಣೆ ಮೊದಲಾದವುಗಳ ವಾರ್ತೆಯನ್ನು ಪ್ರಕಟಿಸುವ ಮೊದಲು ಅದನ್ನು ನಾವು ಸಬ್ ಡಿವಿಜನಲ್ ಮೆಜಿಸ್ಟ್ರೇಟರಿಗೆ ತೋರಿಸಿಕೊಳ್ಳಬೇಕು! ಹಾಗೆ ಶುದ್ಧೀಕರಣ ಹೊಂದಿ ಬರುವ ವಾರ್ತೆಗಳಲ್ಲಿ ನಮ್ಮ ಪಾಲಿನ ಭಾಗ್ಯವಾಗಿ ನಾವು ಹೋಡಿಸಿ ಕಳುಹಿಸಿದ ಶಬ್ದಗಳುಳಿಯಬಹುದು-ವಾರ್ತೆಯ ಒಳರೂಪ ಕೆಡಬಹುದು. ಅಥವಾ ಸರಕಾರೀ ಮನೋವೃತ್ತಿಯ ಪರಿಚಯ ಬಲದಿಂದ-ಅನುಭವವುಳ್ಳ ಆಫೀಸು ಕ್ಲಾರ್ಕನಂತೆ-ನಾವು ಮಂಜಾಗ್ರತೆವಹಿಸಿ ಕಳುಹಿಸಿದರೆ ವಾರ್ತೆಗಳು ರೂಪುಗೆಡದೆ ಹಿಂದೆಬರಲೂ ಬಹುದು. ಅಂತೂ ನಮ್ಮ ಸ್ಥಾನವಾವುದೆಂದರೆ ಇಂತಹ ವಾರ್ತೆಗಳ ಮಟ್ಟಿಗೆ ನಾವು ಅಧಿಕಾರಿಗಳ ಗುಮಾಸ್ತರು! ಇಷ್ಟು ಸ್ವತಂತ್ರವಾದ ಮೇಲೆ ನಾವು ಸ್ವಾಭಿಮಾನ ಪ್ರದರ್ಶನ ಬೇಕೋ ಕರ್ತವ್ಯ ಪಾಲಿಸಬೇಕೋ ಎಂಬ ಪ್ರಶ್ನೆಯುಳಿಯುತ್ತದೆ. ಅನಿರ್ದಾಹೇವಾಗಿ ಅಭಿಮಾನವನ್ನು ಹಿಸುಕಿಕೊಂಡು ಕಾರ್ಯ ಮಾಡೋಣವೆಂದರೆ, ಇಲ್ಲಿ ಕೆಲಸವೇ ಕೆಡುತ್ತದೆ! ಪತ್ರಿಕಾವಾರ್ತೆಗಳಿಂದ ಸಂಗ್ರಹಿಸಿದಲಾಗುವ ದಾಖಲೆಗಳಲ್ಲ. ಇಂದು ನಡೆದ ಘಟನೆಯನ್ನು ಇಂದು ನಾಳೆಯೇ ನಾವು ತಿಳಿಸಬೇಕು; ವಾಚಕರ ದೃಷ್ಟಿಯಲ್ಲಿ ವಾರ್ತೆಗಳಿಗೆ ವಾರಾವಧಿ ಆಯುಷ್ಯವಿಲ್ಲ. ಅಂದವೇ ಲೆಕ್ಕ ಸಂಬಂಧಪಟ್ಟ ಅಧಿಕಾರಿಗಳ ಮಂಜೂರಾತಿ ಪಡೆದು ಬರುವಾಗ ವಾರ್ತೆಯ ಜೀವಶಕ್ತಿಯೇ ಮಾಗುತ್ತದೆ; ಅವಧಿ ಬಾಧೆ ತಪ್ಪುತ್ತದೆ. ಒಂದು ವಾರ್ತೆಯು ಬಿಸಿಸುದ್ದಿಯಾಗಿ ನಮ್ಮ ಸಾವಿರಾರು ವಾಚಕರ ಕೈಸೇರಬೇಕಾದ ಜೊತ್ತಿನಲ್ಲಿ ಪರೀಕ್ಷಾ ಕಲ್ಪಿಬ್ಬರ ಕೈಯಲ್ಲಿ ಪರೀಕ್ಷಾ ಪತ್ರವನ್ನಾಗಿ ಸೇರುವ ಕಾಲವುಂಟಾದೆ! ಅಧಿಕಾರಿಗಳದನ್ನು ಗಮನಿಸುವದು ದೋಷವೆ? ಕಾಯಿದೇಭಂಗದ ಸುದ್ದಿಗೆ ಪ್ರಕಟಣೆ ಅಷ್ಟೂಲಾಸ್ಯ ತಡೆ ಬೀಳುತ್ತಿದ್ದರೆ ಅದು ವಾರ್ತೆಯ ವೀರಮರಣ ವಾಗುತ್ತಿತ್ತು; ಇಂದಿನ ನಿರ್ಬಂಧದಿಂದ ಅದರ ಚೈತನ್ಯಹಿಂಸೆಯಾಗುವದೆಂದು ನಮ್ಮ ಸಂದೇಹ. ಕಾಯಿದೇಭಂಗ ಘಟನೆಗಳ ವಾರ್ತೆಗಳನ್ನು ಅಲ್ಲಲ್ಲಿಂದ, ಆಗಾಗಲೇ ಸ್ವತಃ ಸರಕಾರದ ಕಡೆಯಿಂದಲೇ ಪತ್ರಿಕೆಗಳಿಗೆ ಕಳುಹಿಸುವ ವ್ಯವಸ್ಥೆಯಾಗಿದ್ದಿತೇ ಹೇಗೆ ಮಾತುಬಾರದೇಳಿ?

✤ ಸ್ಟಾಲಿನ್‌ಗ್ರಾಡ್ ಸಹಿಸಿ ನಿಂತಿದೆ! ✤

ಕೆಲವೆಡೆ ಸ್ವದೇಶೀ ಬೋಂಬು ಸ್ಫೋಟ!

ಪತ್ರಿಕಾ ವಿಚಾರಣೆ.

ಬೊಂಬಾಯಿಯಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕರ ದ್ವಿತೀಯ ಪರಿಷತ್ತು ಆರಂಭವಾಗಿದೆ. ಅಧ್ಯಕ್ಷ ಶ್ರೀ. ಕೆ. ಶ್ರೀನಿವಾಸನರು ತನ್ನ ಭಾಷಣದಲ್ಲಿ ಜವಾಬ್ದಾರೀ ಪತ್ರಿಕಾ ಕರ್ತರಾಗಿ ಕೆಲಸ ಮಾಡದಂತೆ ನಮ್ಮನ್ನು ತಡೆಯುವ ಹಾಗೂ ನಮ್ಮ ಉದ್ಯೋಗದ ಗೌರವ ಕುಗ್ಗಿಸುವ ಯಾವ ಸೂಚನೆಗಳಿಗೂ ನಾವು ಬಗ್ಗುವ ಪ್ರಸ್ನೆಯಿಲ್ಲ" ಎಂದರು.

ವಿಲ್ಲಿಯವರ ಚೀನಾ ಪ್ರವಾಸ.

ಅಧ್ಯಕ್ಷ ರುಸವೆಲ್ಟರ ಖಾಸಗೀ ಪ್ರತಿನಿಧಿ ಮಿ. ವಿಲ್ಕಿಯವರು ಚೀನದಲ್ಲಿ ಸಂಚರಿಸುತ್ತಿದ್ದಾರೆ. ಚುಂಕಿಂಗಿನಲ್ಲಿ ಮಾರ್ಶಲ್ ಚಿಯಾಂಗರು ಅವರನ್ನು ಚೀನದ ಬಹು ದೊಡ್ಡ ಮಿತ್ರನೆಂಬ ಗೌರವದೊಡನೆ ಸ್ವಾಗತಿಸಿರುವರು.

ಪ್ರೀತಿಕ್ರಮಣ.

ಅಮೇರಿಕದ ಸೇನೆಗಳು ಎಂಡ್ರಿಯೀನ್ ದ್ವೀಪ ಗುಂಪುಗಳೊಳಗೆ ಪ್ರವೇಶಿಸಿವೆ. ವಿರೋಧವಿರಲಿಲ್ಲ.

ರಾಬೂಲಿನ ಧಾಳಿ.

ಜಪಾನರ ರಾಬೂಲ್ ಬಂದರದ ಮೇಲೆ ಮಿತ್ರ ರಾಷ್ಟ್ರೀಯರು ವಿಮಾನ ಧಾಳಿ ನಡಿಸಿದರು. ಎರಡು ಸಂಚಾರಕ ಹಡಗುಗಳಿಗೂ ಒಂದು ಕ್ರೂಸರ್ ಹಡಗಕ್ಕೂ ಬೆಂಕಿ ಹಿಡಿದಿದೆ. ವಿಮಾನ ನಿಲ್ದಾಣದ ನೇಲೂ ಬೋಂಬು ಬಿತ್ತು. ನ್ಯೂ ಗಿನಿಯಲ್ಲಿ ಆಸ್ಟ್ರೇಲಿಯನ್ ಸೇನೆಗಳು ಮುಂದೊತ್ತುತ್ತಿವೆ.

ಕೈಲ್ಕೇ ಅವಘಡ.

ಬೊಂಬಾಯಿಯಿಂದ ಹೊರಟಿದ್ದ ಪೇಶಾವರ್ ಎಕ್ಸ್‌ಪ್ರೆಸ್ ತಾ. 3ರಲ್ಲಿ ಚಾಲಿ ಸ್ಟೋನ್ ಎಂಬಲ್ಲಿ ಅವಘಡಕ್ಕೆ ಗುರಿಯಾಗಿ 12 ಮಂದಿ ಸತ್ತು 30ಮಂದಿ ಜಖಂಗೊಂಡರು.

ಕಾಗದಕ್ಕೆ ಬೆಂಬಲ.

ಭಾರತದ ಬಕ್ಕಟ್ಟು ಅಪಾಯಕರವೆಂದೂ, ವಿಶಾದದೊಂದು ತೀರ್ಮಾನ ಮಾಡಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದೂ ಬ್ರಿಟಿಷ್ ಡೆಮೊಕ್ರೆಟಿಕ್ ಪಕ್ಷೀಯರು ಶ್ರೀ. ರಾಜಗೋಪಾಲಾಚಾರ್ಯರ ಸೂಚನೆಯನ್ನು ಸಮರ್ಥಿಸಿರುವರು.

ಸೊಲೊಮನ್ ಧಾಳಿ

ಮಿತ್ರ ರಾಷ್ಟ್ರೀಯರ ಫೋರ್ಟ್ರೋ ವಿಮಾನಗಳು ಅಕಸ್ಮಿಕ ಧಾಳಿ ನಡಿಸಿ ಮೂರು ಜಪಾನೀ ಕ್ರೂಸರುಗಳನ್ನು ಮುಳುಗಿಸಿದವು.

ಬೋಂಬು ಸ್ಫೋಟ.

ಲಕ್ನೋವಿನ ಬಳಿಯ ಕುಶಲ್‌ಗಂಜ್ ಎಂಬಲ್ಲಿಯ ಮನೆಯೊಂದನ್ನು ಪೋಲೀಸರು ಝಾಡ್ತಿ ನಡಿಸಿ ಅಲ್ಲಿದ್ದ ಸ್ವದೇಶೀ ಬೋಂಬೊಂದನ್ನು ಕಂಡು ಹಿಡಿದು ಇಬ್ಬರನ್ನು ದಸ್ತಗಿರಿ ಮಾಡಿದ್ದಾರೆ. ಬೊಂಬಾಯಿಯ ಮಾಡಿ ಬಂದರಿನಲ್ಲಿ ಬೋಂಬು ಸ್ಫೋಟವಾಗಿ ಒಬ್ಬ ಯುವಕನು ಜಖಂಗೊಂಡು ಆಸ್ಪತ್ರೆಯಲ್ಲಿ ಮಡಿದನು. ದರ್ಭಾಂಗದ ಹಳ್ಳಿಗಳ ಮೇಲೆ 25000 ಪುಂಡುಗಂದಾಯ ಬಿದ್ದಿದೆ

ಇಂಡೋ-ಚೀನಾ ಸಂಬಂಧ.

ಭಾರತದಲ್ಲಿರುವ ಇಬ್ಬರು ಪ್ರಮುಖ ಚೀನೀ ಆಫೀಸರರು, ನ್ಯೂಢಿಲ್ಲಿಯಲ್ಲಿ ವೀರ ಸಾವರ್ಕರರ ಭೇಟಿ ಪಡೆದರು. ಚೀನೀ ಮುಸ್ಲಿಮ್ ಮಿಶ್ಯನಿನವರ ಭಾರತದ ಚಟುವಟಿಕೆಯನ್ನೂ, ಅದರ ನಾಯಕ ಡಾ। ಪೂ ಇವರು, ಚೀನೀ ಮುಸಲ್ಮಾನರೂ ಪ್ರತ್ಯೇಕತೆಯನ್ನು ಕೇಳಿಕೊಂಡಿದ್ದಾರೆ, ಮುಸಲ್ಮಾನ್ ರಾಷ್ಟ್ರೀಯತ್ವದ ಕುರಿತು ಹಿಂದೀ ಮುಸಲ್ಮಾನನೊಬ್ಬನೇ ಜಾಗ್ರತರಿದ್ದಾರೆ ಎಂದು ನಿವೇದಿಸಿದುದನ್ನೂ ಸಾವರ್ಕರರು ಚೀನೀ ಅಧಿಕಾರಿಗಳ ಅವಗಾಹನೆಗೆ ತಂದು, ಇಸ್ಲಾಮ್ ಪರ ಚಳವಳಕ್ಕೆ ಪ್ರೇರಣೆ ಕೊಟ್ಟುದನ್ನು ವಿವರಿಸಿದಾಗ ಚೀನೀ ಅಧಿಕಾರಿಗಳು ಕೌತುಕ ಗೊಂಡರೆಂದು ತಿಳಿದುಬರುತ್ತದೆ. ಮಹಾಸಭಾ ಪ್ರತಿನಿಧಿಗಳನ್ನು ಅವರು ಚೀನ ಕ್ಕಾಮಂತ್ರಿಸಿರುವರು

ಬೋಂಬು ಪತ್ತೆ.

ಮಾಡಿ ಬಂದರಿನ ಬೋಂಬು ಸ್ಫೋಟಕ್ಕೆ ಗುರಿಯಾದವನ ಕೋಣೆಯನ್ನು ಪೋಲೀಸರು ಜಪ್ತಿ ನಡಿಸಿದಾಗ ಅಲ್ಲಿ ಗೆರಟೆ ಮತ್ತು ಇತರ ಸಾಮಾಗ್ರಿಗಳಿಂದ ತಯಾರಿಟ್ಟಿದ್ದ ಇಪ್ಪತ್ತೊಂದು ಬೋಂಬುಗಳು ಅವರಿಗೆ ದೊರೆತಿವೆ. ಮಿಲ್ಲೊಂದರ ವಕಾಲದಲ್ಲಿ ಪರಕೀಯನೊಬ್ಬನು ಬೋಂಬು ಸ್ಫೋಟಕ್ಕೆ ಬಲಿಬಿದ್ದು ಆಸ್ಪತ್ರೆ ಸೇರಿದ್ದಾನೆ. ಅವನು ಬೋಂಬೊಂದನ್ನು ಅಡಗಿಸಿಟ್ಟುಕೊಂಡು ಮಿಲ್ ವರಾಂಡ ಪ್ರವೇಶಿಸಿದಾಗ ಅದು ಸಿಡಿಯಿತೆಂದು ಊಹಿಸಲಾಗಿದೆ.

ನೋಟೀಸು.

ಕುಂದಾಪುರ ಡಿ. ಮುನ್ಸಿಫ ಕೋರ್ಟ್‌ನಲ್ಲಿ.

O. S. 260/1941.
R. E. P. 506/1942

ಎ ದಿನು. ಪಲೇಲ ಚರ್ಚಯ್ಯ ಛತ್ರಿ ಕಿಡಾ. ಪ್ರತಿವಾದಿಗು. ಗೋವಿಂದಯ್ಯರ್ ಕಿಡಾ.

2. ಲಕ್ಷ್ಮಿ ರಾವ್, 3 ದಕ್ಷಾತ್ರಿಯ ರಾವ್, ಕೃಷ್ಣಯ್ಯನವರ ಮಗಂದಿರ್ರು.

4. ಕೃಷ್ಣ ರಾಜ್, ರಾಮಪಾಯಿ ಮಗ.

ಕುಂದಾಪುರ ಕಾಲಚಿಳು ಬಿಂಬದ ಕೆ. ಗಣಗ್ರಾಮ. ಇವರಿಗೆ.

ವಾದಿಯ ಸದ್ದಿ O S, 260/41ನೇ ಹಿತ್ರಿಯಲ್ಲಿ ಮಾಡಬೇಕಿಗೆ ಏಪ್ರಿ ಇರುವ ಸ್ಪಿರಾಪ್ತಯನ್ನು ಸದ್ದಿ R E. P. 506/1942ನೇ ಅನ್ವಯಾರಿ ವಜಿಲ್ಲಾ ಯೋಲಂಮಿಗೆ ಅಪೇಕ್ಷಿಸಿ ಆ ಕುರಿತು ಹಾಜರ್ಪಡಿಸಿದ ಯೋಲಂ ಇಸ್ತಿಹಾರಿನ ನಕಲನ್ನು ನಡಾಯಿಸುವರೆ ತಾ. 19-10-1942ಕ್ಕೆ ಇಟ್ಟಿರುತ್ತದೆ. ಆ ದಾಖಿಲಿನಲ್ಲಿ ನಿಮ್ಮಾದೇನ ವ್ಯಕ್ಷೇಪ ಇದ್ದಲ್ಲಿ ಸದ್ದಿ ಕಾರಂತಕಿನಲ್ಲಿ ಹಗಲು 10 ಗಂಟೆಗೆ ಸದ್ದಿ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾಗುವುದು ಮೆಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

K. Narayana Kamath.

Coondapoor. 30-9-1942. } Advocate for Decree holders.

NOTICE

ಪುತ್ತೂರು ಡಿ. ಮುನ್ಸಿಫ ಕೋರ್ಟ್‌ನಲ್ಲಿ.

R. I. A. 633/1942.
In O S. 356/38

ಅರ್ಜಿದಾರಳು.— ಪೆಂಚಮ್ಮಿ
ಎದ್ರಿರು.— ಕೃಷ್ಣ ಪ್ಯಾಲಿ ಕಿಡಾ.

10. ಈಶ್ವರ ಯಾಜಿ ಜಯಂತ್ತಿ. ಅಕ್ಕಯ್ಯ ಪ್ಯಾಲ್ ವೈನಸ ಮಗ ಈಶ್ವ ಗಾಣಿಗಯಾಜ್ ಎಕ್ಷಳೆಯ್ದು ಶ್ರೀ. ಬ ಗೋವಾಲಕೃಷ್ಣ ರಾವ್. ಮಂಗಳೂರು: 12. ರಾಮಕೃಷ್ಣ ಪ್ಯಾಲ್. ರಂಗಪ್ಪ ಪ್ಯಾಲ್ ಮಗ. ಹಾಲಿ ಬಲಿಪಾಡು ಗ್ರಾಮಸ್ಥಿ.

ಸದ್ರೀ 10ನೆ 12ನೇ ಎದ್ರಿರಿಗೆ ಈ ಕೋರ್ಟಿನ ಮಕಾಲಿ ತಿಳಿಯಗಡಿಸುವಿಕೆಯಿದೆ.

ಮೇಲ್ಕಂಡ ಪ್ಯಾಲ್ಯರ್ಥಾದ ಶ್ರೀಲಿಮಿತರ ಕಿಸ್ತಿಯನ್ನು ಪ್ಯಾನಲ್ ಕಿಸ್ತಿ ವಾಜಬೀಗಾಗಿ ಅರ್ಜಿದಾರಳು ಬಲಪೆಂಡ ಸದ್ರೀ ಅರ್ಜಿಯಲ್ಲಿ ತಾ. 13-10-42ಕ್ಕೆ ಹೇಳ್ಕಂಡ ಕೋರ್ಟಿನಲ್ಲಿ ಕೈಗೆ ಇತ್ತಿದೆ. ಆಕ್ಷೇಪ. ಯಿದ್ದಲ್ಲಿ ಆ ದಿನ ಮಧ್ಯಾಹ್ನ 11ಗಂಟೆಗೆ ಕೆಳ್ಕದ ಸದ್ರೀ ಕೋರ್ಟಿಗೆ ಮುಂದೆ ಸೀತಿ ಹಾಜ್ರು ಆ ಪಕ್ಷದ ಪ್ಲಾರ್ ಹಾಜ್ರಾಗಿ ನ್ಯಾಯವಿಚಾರಿಸಿಕೊಳ್ಳಕ್ಕಾಕ್ಕು. ಕಿಸ್ತಿಕ್ಕೆ ಯೇಕ ಪಕ್ಷವಾಗಿ ತೀರ್ಮಾನಿಸಲಾಗುವುದು ಎಂಬ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಲಾಗಿದೆ.

B. Achyuta Beliga.

Puttur, S. K. 2-10-42. } Pleader for Petitioner

The Pangal Nayak Bank Limited.
ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.
(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.)
ಮುಖ್ಯ ಕಾರ್ಯಾಲಯ:—ಕೋಟ್ಟೂರ ರಸ್ತೆ, ಉಡುಪಿ. ದಕ್ಷಿಣ ಕನ್ನಡ.
ಶೇತ್ರ ಮೂಲಧನ ... ... ರೂ. 1,82,100-0-0
ಕ್ಷೇಮ ನಿಧಿಗಳು ... ... ರೂ. 1,71,898-2-11
ಶಾಖೆಗಳು:— ಉಡುಪಿ, ಮಂಗಳೂರು, ಕುಮಟಾ, ಶಿವಾಜಿಂಗರ್ ಹುಮ್ಮು, ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.
ಮಾಡಾಬಳ್ಳಿ ಯುಕ್ತವಾದ ದೇವಸ್ಥಗಳು, ಮಿಷ್ಠಾಭೋಜಗಳು, ಕವಿಯಾಳಿಕರವಾದ ಇತರ ಧರ್ಮಕಾರ್ಯಗಳಿಗೆ ಸೇಲಂ ತಿರುಮಂಡ್ ನೋಮುಗಳ. ಬೀಲು ಹುಂಡಿಗಳ ಮೇಲೂ ಚಿಕ್ಕ ಪ ದೊಡ್ಡ ಸಾಲಗಳು ವ ಓವರ್ ಡ್ರಾಫ್ಟ್ ಗಳು ಕೃಷಿಕರಿಗೂ ವ್ಯಾಪಾರಿಗಳಿಗೂ ಕುಲಭ ದರಗಳಲ್ಲಿ ವರ್ಷಕಾಲವೂ ಇತರರಿಗೂ ಈ ಬೇಂಕಿನ ಕೃಷಿ ಖಾತೆಯಲ್ಲಿಯೂ ಹಣ ಠೇವಣಿ ಇಡಲಾಗುತ್ತದೆ. **ಶೇವಣಾತಿಗಳು ಅಂಗೀಕರಿಸಲ್ಪಡುತ್ತವೆ.**
ಹೆಚ್ಚಿನ ವಿವರಗಳಿಗೆ ಮೇಲಿನ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕೆಂದು ಪ್ರಾರ್ಥನೆ.
UDIPI, 1st April

ಶಾಂತಿ ಪ್ರೈಜ್ ದಂತ ಮಂಜನ
(ಪಾಶ್ಚಾತ್ಯ ರೀತಿಯ ತಯಾರಿ.)
ಸಿಂದೂ ದೇಶದಲ್ಲೇ ಆದ ಎಲ್ಲಾ ದಂತಚೂರ್ಣಗಳಿಗಿಂತಲೂ ಉತ್ತಮವೆಂಬುದನ್ನು ಉಪಯೋಗದಿಂದಲೇ ತಿಳಿದುಕೊಳ್ಳಿರಿ. **Shanthi Products** (Regd.) Kurady S. K.

ಗೀತೆಯ ಕೃಷ್ಣನದಿ
ಹೊಸಕಳೆ ಚದಂಬಕಲ್ಲು ಸಹಿತಂ ವಿರಚಿತವಾದುದು.

ಸಾದುಪ್ರತಿ	ಮುಗಿದಿದೆ.
ಸುಂದರ ಪ್ರತಿ	0—6—0
ಲೆದರ್ ಬೈಂಡ್	0—8—0
ಪಿಲ್ಕ್ ಆಧವಾ ಲೆದರ್ ಬೈಂಡ್	1—0—0
ಟಪ್ಪಾಲು ಖರ್ಚು	0—2—0 ಪ್ರತ್ಯೇಕ

ಜನಧಾರಕ ಪುಸ್ತಕ ಭಂಡಾರ, ಉಡುಪಿ.

ದಕ್ಷಿಣ ಕನ್ನಡ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ನಗರಸಭೆಯು— (ರಾಜನಾಮೆ ಕೊಡ್ಡ ನಗರ ಸಭಾಧ್ಯಕ್ಷರ ಸ್ಥಾನಕ್ಕೆ) ನಗರ ಸಭಾಧ್ಯಕ್ಷರನ್ನು ಆರಿಸುವ ಬಗ್ಗೆ ತಾ. 1ರಲ್ಲಿ ನಗರಸಭಾ ಭವನದಲ್ಲಿ, ಮುನಿಸಿಪಲ್ ಆಫೀಸರರಾದ ವಿ. ಬಿ. ಜೋಗ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಒಂದೆ ಕಾಂಗ್ರೆಸ್ ಪಕ್ಷದ ಬ್ಯಾಪ್ ಆಗಿದ್ದ ಮಿ| ಸಿ. ಎಲ್ ಲೋಬರು ಸಭೆಗೆ ಸಂಬಂಧವಿಲ್ಲದಲ್ಲಿ ಬಂದಿದ್ದರು. ಇನ್ನಿ ರಾವ್ ಬಾವರೋ ಎಂದು ಅರ್ಧತಾಸಿನ ವರೆಗೆ ಕಾಯುತ್ತಿದ್ದೆಂದು ಅಧ್ಯಕ್ಷರೂ ಮಿ| ಲೋಬೊ ಒಪ್ಪಿದರು ಏಮುಮುಖ್ಯಾಲು ಫೋಟಿಗೆ ಮಿ| ಯಂ ಎಸ್. ಶ್ರೇಷ್ಠರು ಬಂದರು. ಸಭೆಯ ಸದಸ್ಯ ಸ್ಥಾನಕ್ಕೆ ರಾಜನಾಮೆ ಕೊಡದೆ ಇರುವ ಬಾಕಿ ಮೂರು ಮಂದಿಯ ಬರವನ್ನು ಸರಿಕ್ಕಿಸಿ ಮತ್ತೆ ಸ್ವಲ್ಪ ಕಾಯಲಾಯಿತು. ಯಾರೂ ಬರುವ ಸಂಭವ ಕೋರದ ಕಾರಣ ಸಭೆಯು ಮುಂದಿನಲಾಯಿತು. ವಿ| ಶ್ರೀಪ್ರಕಾಶ್ ಜೋಗಸ್ವಾಮಿಯವರೂ ಕಮಿಶನರೂ ಆಗಿರುವ ಕೌನ್ಸಿಲಿನ ಭವಿಷ್ಯದ ಹಿರಿತನ ಮಾತಾಡಿದರು ಲೋಕಲ್ ಬೋರ್ಡುಗಳ ಅಳಿವು ನೋಡಿದರು ಕೌನ್ಸಿಲಿನ ಕಾರ್ಯಭಾವವನ್ನು ನಡಿಸಲು ಕನಿಷ್ಠ ಆರು ಮಂದಿ ಹಾಜರಿರಬೇಕೆಂದೂ ಒಂದು ವೇಳೆ ಈಗ ಇರುವ ಏಳು ಮಂದಿಯಲ್ಲಿ ಹಾಜರಿಯಾರೆ ಮತ್ತೂ ಕನಿಷ್ಠ ಸಂಖ್ಯೆ ಇರುವದಿಲ್ಲ ವಾದ್ದರಿಂದ ಈಗಿರುವ ನಿಯಮದಂತೆ ನಗರ ಸಭೆಯ ಅಡಳಿತವನ್ನು ಸರಕಾರವೇ ವಹಿಸಬೇಕಾಗುವದೆಂದೂ ಅಭಿಪ್ರಾಯವು ಸೂಚಿಸಲಾಯಿತು. ಅಲ್ಲಿಗೆ ಸಭಾಕಾರ್ಯವು ಪೂರ್ಣವಾಯಿತು

ಉಡುಪಿ.

ವರ್ಗಾವರ್ಗಿ—ಸ್ಥಳೀಯ ಮುನ್ಸಿಫರಾಗಿದ್ದ ಶ್ರೀ ಬಿ.ಶೇಷಗಪ್ಪನವರಿಗೆ ತರುಣಾಪಲ್ಲಿಗೆ ವರ್ಗವಾಗಿದೆ ಅವರ ಸ್ಥಾನಕ್ಕೆ ರಟಿಯ ಮೇಲಿದ್ದ ಶ್ರೀ. ಬಿ ಎಲ್. ಎನ್. ರೈಗಳು ಬಂದಿರುವರು

ವಿವಿಧ ವಿನೋದಾವಳಿ— ಸ್ಥಳೀಯ ವೆಂಕಟ್ರಮಣ ದೇವಸ್ಥಾನದಲ್ಲಿ ತಾ. 3ನೇ ರಾತ್ರಿ ಕೆಲ ಉತ್ಸಾಹಿ ಯುವಕರು ಶ್ರೀ| ಸುಳ್ಯತೀಂದ್ರ ತೀರ್ಥರ ಸನ್ನಿಧಿಯಲ್ಲಿ ವಿವಿಧ ವಿನೋದಾವಳಿಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು

ಬಡಗಬೆಟ್ಟು ಹೊಸಮನೆ ಅಪ್ಪಣ್ಣ ಹೆಗ್ಡೆರ ನಿಧನ— ತಾ 1 10 42ರಲ್ಲಿ ತೆಸ್ಸ ಮಗ ಪಕ್ಷೆಟ್ಟು ಶ್ರೀ ಬಿ ನಾರಾಯಣ ಹಾಗೂ ಕಾಸರ್ಗೋಡು ಬಿದಾರದಲ್ಲಿ ಹೃದಯಸ್ತಂಭನದಿಂದ 73ನೇ ವಯಸ್ಸಿನಲ್ಲಿ ಮೃತರಾಗಿರುವರೆನ್ನಲು ವಿಷಾದಿಸುತ್ತೇವೆ ಶ್ರೀಯುತರು ಸತತ ಮುದಿ ಧರಿಗಳೂ ದೇಶಪ್ರೇಮಿಗಳೂ ಆಗಿದ್ದರು. ಮೃತರ ದುಃಖಿ ಬಂಧುಬಳಗದವರೊಡನೆ ನಾವೂ ಸಹಾನುಭಾವಪಡುತ್ತೇವೆ

ಪಡುಬಿದ್ರಿ—ತಾ. 2 10-42 ರಲ್ಲಿ ವಾರದ ಬೆಳ್ಳಿ ಮಹಾತ್ಮಾ ಗಾಂಧಿಯವರ 74ನೇ ಜನ್ಮ ಜಯಂತಿಯನ್ನು ಚಿರಸ್ಮರಣೆಯ ಸಲುವಾಗಿ ಪಡುಬಿದ್ರಿ ಮತ್ತು ಆಸಪಾಸಿನ ಬಡಜನರಿಗೆ ಧರ್ಮಾರ್ಥವಾಗಿ ಇಷ್ಟಿಯ ಪ್ರಮುಖ ಶ್ರೀಮಾನ್ ಗಿಂಗು ವ್ಯಾಸಾಚಾರ್ಯ ಮತ್ತು ಮಾವಿನ ಅನಂತಯ್ಯ ಇವರ ಸಹಕಾರದಿಂದ ಅಕ್ಕಿ ಹಂಚುವ ವ್ಯವಸ್ಥೆ ಮಾಡಲಾಗಿತ್ತು. ಊರಿನಲ್ಲಿ ಸರ್ವತ್ರ ಹರತಾಳವೂ ಆಚರಿಸಲ್ಪಟ್ಟಿತ್ತು.

ಶಿವಳ್ಳಿ—4½ ವರ್ಷಗಳಿಂದಲೂ ಇತ್ತಿಂದಿತ್ತ ವಾಗಿದ್ದ ಇಲ್ಲಿಯ ಟೌನ್ಸ್ ಸಂಘಗಳು ಮಂಗಳೂರು ರೇಂಜ್ ಕಾಲಿಗೆ G. D. I. ರವರಾದ ಶ್ರೀ T. L. Rao, B. A., L. T, ರವರು ಹಿಕ ಸೂಚನೆಯಂತೆ ತಾ. 26 9-42ನೇ ದಿವಸ ಡೆನ್ಸ್‌ಸ್ಕೂಲ್ ಹೈಯರ್ ಎಲಿವೆಂಟರಿ ಶಾಲೆಯಲ್ಲಿ ಸದ್ಯಾಯರ ಅಧ್ಯಕ್ಷತೆಯಲ್ಲಿ ಒಟ್ಟಾಗಿ ಸಭೆ ಗೂಡಿಸಿ ಕಾರ್ಯಕ್ರಮಗಳು ಸಾಂಗವಾಗಿ ನಡೆದುವು.

ಕುಳ್ಳಂಡರು—ಇಲ್ಲಿಯ ಹಿಂದೂಸ್ಥಾನ ಬಾಲವೀರ ದಳದ ಜನ್ಮವಿನೋದ್ಯವನ್ನು ಶ್ರೀ ದುರ್ಗಾ ಹೈಯರ್ ಎಲಿವೆಂಟರಿ ಶಾಲೆಯಲ್ಲಿ ಇದೇ ತಿಂಗಳ 1ನೇ ತಾರೀಕಿನ ದಿನ ವಿದ್ಯುಕ್ತವಾಗಿ ನೆರವೇರಿತು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ. ಯು. ಕೃಷ್ಣರಾವ್, ಬಿ. ಎ. ಎಲ್ ಟಿ. ಇವರು ಅಧ್ಯಕ್ಷತೆಯನ್ನು ವಹಿಸಿದ್ದರು ಶಾಲಾ ವಿನೋದರ ಸಂಬಂಧೀಚಿತ ಭಾಷಣವು ವಿಷಯ ಗರ್ಭಿತವಾಗಿತ್ತು.

M. Kushi Raman, MANAGER
Parassini Madappura Temple.
P. O. Parassinikkatavu,
(Via) Pappinisseri

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುತ್ತೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಯೂ ಮೂಲಿಕ ಮಾಡುವ ಬಿಸ್ಕತ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಕೆ ವಗೈರೆ ತಲಸಿಸುವದಕ್ಕೆ ಆನಾನುಕೂಲವಾದಲ್ಲಿ ನಿಮ್ಮ ಹರಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ತಲಸಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಮುಲಯಾಳ ಬರಹದಲ್ಲಿ ಪಿ. ಯೆಂ. **ಕುಞ್ಞಿರಾಮನ್**, ಮೆನೇಜರ್,
ಇವರ ಸಹಿ.

ಕೊಳ್ಳಿ ಡಿಫನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು

★ ಇಂಡಿಯಾ ಸರ್ಕಾರದ ಭರವಸೆ ಇದೆ.
★ ಯಾವಾಗ ಬೇಕಾದರೂ ಹಣ ಪಡೆಯಬಹುದು.
★ ಪ್ರತಿ ೧೦ ರೂ ಗೆ ರೂ. ೫/೯ ಲಾಭ.

ನಿಮ್ಮ ನಿಕಟ ಮಿತ್ರ

ನಮ್ಮಾ ಸಂಸಾರ ಪ್ರಪಂಚದಲ್ಲಿ ಸದಾ ಕಾಲವೂ ಬೆಲೆ ಬಾಳುವ ವಸ್ತು ವೆಂದರೆ ಚಿನ್ನವೇ ಸರಿ. ಆದರಲ್ಲೂ ಇಂದು ನಡಿಯುತ್ತಲಿರುವ ಪ್ರಚಂಡ ಯುದ್ಧದ ದೆಸೆಯಿಂದಾಗಿ ಚಿನ್ನದ ಬೆಲೆಯಿಂದರೋ ಮತ್ತಷ್ಟು ಹೆಚ್ಚಿರುತ್ತದೆ. ಅಲ್ಲದೆ ಇನ್ನಷ್ಟು ಮೇಲೇರಲೂ ಬಹುದು. ಪರಿಸ್ಥಿತಿ ಹೀಗಿರುವಲ್ಲಿ ನಿಮ್ಮಲ್ಲಿರುವ ಚಿನ್ನವನ್ನು ಬೆಲೆಯಾಸೆಯಿಂದ ವಿಕ್ರಯಿಸುವುದೆಂದರೆ ನಿಮ್ಮೊಬ್ಬ ಆತ್ಮೀಯನಾದ ಬಂಧುವಿನಿಂದ ಅಗಲುವಂತೇನೆ. ಆದುದರಿಂದ ನಿಮ್ಮ ಪ್ರೀತಿಯ ಅತೀ ಅಮೂಲ್ಯವಾದ ಸೊತ್ತಾದ ಚಿನ್ನವನ್ನು ಬಹು ಚನ್ನಾಗಿ ಕಾಪಾಡಿರಿ ಅಗತ್ಯ ವಿದ್ದರೆ ಈ ಒಡವೆಯ ಊರಿನ ಮೇಲೆ ಅತೀ ಸುಲಭ ದರದಲ್ಲಿ ಸಾಲ ಪಡೆಯಬಹುದು.

ಕೆನರಾ ಬ್ಯಾಂಕ್ ಲಿಮಿಟೆಡ್.

ಸ್ಥಾಪನೆ. 1906.

CANARA BANK LIMITED.

ಸ್ವದೇಶಿ ಔಷಧ ಭಂಡಾರ(ರಿಜಿಸ್ಟರ್ಡ್) ಕುಂಜಾಲು

–ಪ್ರಭೂಸ್–ಬಾಲಾಮೃತ–

ನಾನಾ ರೋಗ ರುಜೆಗಳಿಂದ ದೇಹದಲ್ಲಿ ಕೃಶನಾಗಿ ಸದಾ ಅಳುತ್ತಾ, ಕಳೆಗುಂದುವ ಬಾಲಕರು ದಷ್ಟಪುಷ್ಟರಾಗಿ ಸದಾ ನಗುತ್ತಿರುವಂತೆ ಮಾಡುವ ಅಮೋಘ ಗುಣಗಳುಳ್ಳ ಈ ಮಹೌಷಧದ 1 ಬಾಟ್ಲಿಯನ್ನು ಉಪಯೋಗಿಸಿಯೇ ಇದರ ಮಹತ್ವವನ್ನು ಪ್ರತಿ ಮಕ್ಕಳ ತಾಯ್ತಂದೆಗಳು ತಿಳಿದುಕೊಳ್ಳಬೇಕಾಗಿದೆ. ಬಾಟ್ಲಿ 1ಕ್ಕೆ 0-12-0

ನಮ್ಮ ಔಷಧಿ ಸಿಗುವ ಸ್ಥಳಗಳು:—ಶ್ರೀ ಗಣೇಶ್ ಪ್ರೊವಿಷನ್ ಸ್ಟೋರ್ಸ್, ನವಭಾರತ ಬುಕ್‌ಡಿಪೋ, ಮೆಜೆಸ್ಟಿಕ್ ಸರ್ಕಲ್, ಪಿಡರ್ಸ್ ಸ್ಟೋರ್ಸ್ ಏಜನ್ಸಿ, ಉಡುಪಿ ಗೋಪಾಲಕೃಷ್ಣ ಸ್ಟೋರ್ಸ್, ಬ್ರಹ್ಮಾವರ, H. ಗಣಪಯ್ಯ ಕಾಮತ್, C.B. Agency ಹಾಲಾಡಿ. ಪ್ರಭು ಲಕ್ಷ್ಮೀ ಸಾಯಿಕ್ ಅಂಡ್ ಬ್ರದರ್ಸ್ ಕೋಟ, ನರಸಿಂಹ ನಾಯಕ್ ಕುಳರನಾರಾಯಣ, ವೆಂಕಟೇಶ ಶ್ರೀನಿವಾಸ ಭಟ್ಟ, ಕೋಟೇಶ್ವರ. L. N. ಸರ್ವಾ ಮರ್ಚಂಟ್ಸ್ ಮಂಗಳೂರು

ಎಚ್ಚರಿಕೆ.

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿ ಮಾಂದ್ಯ, ಮಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲಾ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦.

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ ೧—೪—೦.

ವಿಳಾಸ: **'ಬಿಕ್ರಂ ಡಿಸ್ಪಿಬ್ಯೂಟರ್ಸ್'**

24–ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

ಉಡುಪಿ ಸ್ಟೋಕಿಸ್ಟರು: **ಸವಭಾರತ ಪುಸ್ತಕ ಭಂಡಾರ, ಉಡುಪಿ.**

ವಾರ ಭವಿಷ್ಯ

ತಾ. ೮—೧೦—೧೯೪೨ರಿಂದ
ತಾ. ೧೫—೧೦—೧೯೪೨ ವರೆಗೆ.

ಮೇಷ—ನಿಮ್ಮ ಸಾಹಸವು ಉದ್ವಿಗ್ನತೆಯನ್ನುಂಟು ಮಾಡಿ ಕೊನೆಗೆ ಶತ್ರುಗಳ ಸೋಲಿಗೆ ಕಾರಣವಾಗುವುದು. ಹಣಕಾಸಿನ ವಿಷಯದಲ್ಲಿ ಸ್ವಲ್ಪ ಜಾಗ್ರತೆ ವಹಿಸಿರಿ. ತಾ. 8. 9. 10. 11. 12. 13. 14 ಈ ದಿನಗಳಲ್ಲಿ ಸಂಚಾರದಲ್ಲಿ ಎಚ್ಚರಿಕೆ ಅವಶ್ಯ.

ವೃಷಭ—ಕೆಲಸ ಕಾರ್ಯಗಳಲ್ಲಿ ಅಭಿವೃದ್ಧಿ ಕಂಡು ಬರುವುದು. ಹಣಕಾಸಿನ ವಿಷಯದಲ್ಲಿ ಸ್ವಲ್ಪ ಜಾಗ್ರತೆ ವಹಿಸಿರಿ. ತಾ. 8. 9. 10. 11. 12. 13. 14 ಈ ದಿನಗಳಲ್ಲಿ ಸಂಚಾರದಲ್ಲಿ ಎಚ್ಚರಿಕೆ ಅವಶ್ಯ.

ಮಿಥುನ—ಆಕಸ್ಮಿಕ ಅನರ್ಥ ಗಂಡಾಂತರಗಳು ಒದಗುವವು. ವಿನಾ ಕಾರಣ ಅಪವಾದಗಳಿಗೆ ಸಿಲುಕುವಿರಿ. ಆದರೂ ಗೃಹಸುಖ, ದೇಹಾರೋಗ್ಯಗಳಿಗೆ ಹಾನಿಯಿಲ್ಲವು. ತಾ. 8. 13. 14. 15 ಇದ್ದು ದರಲ್ಲಿ ಶ್ರೇಯಸ್ಕರಗಳು.

ಕರ್ಕಾಟಕ—ಮನದ ಸಂಕಲ್ಪಗಳು ಅನಾಯಾಸದಿಂದ ನೆರವೇರುವವು. ರಾಜಕೀಯ ರಂಗದಲ್ಲೂ ವ್ಯಾಪಾರ ವ್ಯವಹಾರಗಳಲ್ಲೂ ಇಷ್ಟದಂತೆ ಫಲಲಭಿಸುವದು. ತಾ. 8. 11. 12. 13. 14 ಈ ದಿನಗಳಲ್ಲಿ ಮನೋದಾರ್ಢ್ಯದಿಂದ ಕಾರ್ಯಹಾನಿಯಾದೀತು.

ಸಿಂಹ—ಋತ್ವ ಶ್ರಿಗಿಂತ ಇಮ್ಮಡಿ ಖರ್ಚು ವ್ಯಾಪ್ತವಾಗುವದರಿಂದ ಹಣವ ತನಾದಿಗೆ ಸಿಲುಕುವಿರಿ. ರಾಜಕೀಯಾಧಿಕಾರಿಗಳ ಸೀಡೆಯಿಂದ ವಿಶೇಷ ನಷ್ಟಕ್ಕೆ ಗುರಿಯಾಗುವ ಸ್ಪಸಂಗವಿದೆ. ತಾ. 8. 11. 12. ಈ 3 ದಿನಗಳು ಕೊಂಚ ಉತ್ಸವವಿವೆ.

ಕನ್ಯಾ—ಶತ್ರುಗಳ ಸೀಡೆ ಹೆಚ್ಚಲಿದೆ. ಧನಧಾನ್ಯಗಳಿಗೆ ಕೊರತೆಯಾಗದು. ತಾ. 9. 10. 13. 14 ಅನುಕೂಲ.

ತುಲಾ—ಎಷ್ಟೇ ವಿತವ್ಯಯಿಗಳಿಗೂ ಕೂಡ ನಿಲುಕದಷ್ಟು ಸಲುವಾಗಿ ಸಾಲಕಡ ಮಾಡಬೇಕಾಗುವದು. ಕೆಂಚಿತ್ತೂ ಸುಖ ವಿಲ್ಲದಿದ್ದರೂ ತಾ. 8. 11. 12. 15 ಈ ದಿನಗಳಲ್ಲಿ ಸ್ವಲ್ಪ ಸಂತೋಷ, ವಿಜಯ ಲಾಭಗಳಿವೆ.

ವೃಶ್ಚಿಕ—ಸರ್ವತೋಮುಖದಿಂದ ವನವು ನಿಮ್ಮ ಕೈಸೇರಲಿದೆ. ಮಹತ್ವಾಕಾಂಕ್ಷೆಯ ಕಲ್ಪವೂ ಆಚರಣೆಗೆ ಬರುವದು. ತಾ. 8. 9. 10. 13. 14 ಅತ್ಯುತ್ತಮ.

ಧನು—ದೇಹ ಮನಸ್ಸುಗಳಿಗೆ ಸುಖವಿಲ್ಲ. ಮಾತನಾಡಿದವರೊಡನೆ ಕಲಹ, ಅನಿರೀಕ್ಷಿತ ಆಪತ್ತು. ಖರ್ಚೂ ವಿಶೇಷ. ಆದರೂ ತಾ. 9. 10. 11. 12. 15 ಈ ದಿನಗಳಲ್ಲಿ ಇಷ್ಟ ಸಿದ್ಧಿ, ಸುಖ, ವಿಜಯ, ಲಾಭಗಳಿವೆ.

ಮಕರ—ನಿಮಗೆ ಹೆಚ್ಚಾಗಿ ಹಲವೆಡೆಗಳಲ್ಲಿ ಗೌರವಾದರಗಳು ದೊರೆಯುತ್ತಿರುವವು. ಆದರೆ ನಿಮಗೆ ದೇಹಾಲಸ್ಯ, ಗೃಹ ಕಲಹ, ಮನೋರೋಗ ಇತ್ಯಾದಿಗಳಿಂದ ಸುಖವಿರದು. ತಾ. 11. 12. 13. 14. ಇದ್ದುದರಲ್ಲಿ ಉತ್ತಮ.

ಕುಂಭ—ಸಟ್ಟಾ ಲಾಟರಿಗಳಲ್ಲಿ ಧನ ಲಭಿಸುವದು. ಹಣದ ತಾಪತ್ರಯವೇನೂ ಇಂದು. ಆದರೆ ಶತ್ರುಪೀಡೆಯಿಂದಲೂ ಮಾನಸಿಕ ಚಿಂತೆ ಮತ್ತು ಅನಾರೋಗ್ಯದಿಂದಲೂ ಸುಖವಿಲ್ಲವು ಪಾರಾಂತ್ಯದ 5 ದಿನಗಳು ಕೆಂಚಿದತ್ತಿವೆ.

ಮೀನ—ಸ್ತ್ರೀ ಸಂಬಂಧೆ ಕಲಹ, ವ್ಯರ್ಥ ಪರ್ಯಟನ. ಆಪತ್ತುಗಳನ್ನು ಅನಾಯಾಸದಿಂದ ನೀಗುವಿರಿ. ತಾ. 8. 9. 10. 15ರಲ್ಲಿ ಸುಖೇಷ್ಟವ್ಯಾಪ್ತಿಯಿದೆ.

Degrees: Books: Medicines

Free H. L M S M. B H. M. D, etc Free Homeo Ayur- Unani Nature degree by post also—Practitioner also get soon Homeo Materiamedica, Rs. 5 Hmeo Practice book Rs. 4. Insanity Cure Pills Rs. 10 Enclose 2 annas stamp—

Principal Indian Homeopathic Institute & Society (Govt. Regd)
P.O. Mahuva. (Kathiawar Dt. India)

Sidha-Kalpa Kavach (Regd.)

No 3 Rs 2, No 2 Rs. 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by return post Life reas. Rs phle No. V P. P. Send M O. Fred P. O ts Prof. Dr N H Chhatbar 2 annam Mahuva (Kathiawar India)

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಜಪಿಯಬೆಗೆ ಒಪ್ಪುವ ಎಲ್ಲಾತರದ ಸೀರೆಗಳು ಬಗೆ ಬಗೆಯ ಬಣ್ಣದ ಬಿ ನಲ್ಲಿ ಸಮೂಹವೆಲ್ಲ ಯುಕ್ತಿ ರುವ್ಯವಾದ ಮತ್ತು ಸುಲ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಬಳಿ, **ಉಡುಪಿ.**

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli
2- 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕೆಮಿಸ್ಟ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಕಿಣಿ ರಥಬೀದಿ. (3) ಡಾಕ್ಟರ್ ಪಿ. ಜಿ. ಅಜಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಕೇಷಗಿರಿ ಪೈ L. L. M. ಡಾಕ್ಟರ್ ವೆಂಕಟ ರಾವ್, ಕೊರಡ್ಕಲ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಆತಿ ಬಯಸುವ ನಮ್ಮ ಮುಕ್ಕಳು ತಿರುಗಿ ನಮ್ಮ ಕೈ ಸೇರುವುದು

ಸೀಸೆ ೧ಕ್ಕೆ ೧೨ ಆಣೆ; ೪ ಪು. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು.—

ನವಭಾರತ ಬುಕ್ ಡಿಪೋ

ಉಡುಪಿ

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾವೇಕ್ಷತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕುಟುಂಬಗಳು, ಸಾಧಕಗಳ ಚರಿತ್ರೆಗಳು, ಸಾರವತ್ತಾದ, ಕ ಮತ್ತು ಧಾರ್ಮಿಕ ಗ್ರಂಥಗಳು ಸರಣಿಯು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ವೆಲ್ಲನೆಯ ಸ್ನೇಹಂಕರಿಸಿ, ಮನವನ್ನು ಸೆಳೆದಿವೆ

ಹನ್ನು ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿವೀರು	ಬೆಲೆ ೨ ೦ ೦	ಅನಾಥಸಂದಿನಿ	ಬೆಲೆ ೧ ೮ ೦
ಅನಿವಾಹಿತರ ಸಮಸ್ಯೆ	೧ ೦ ೦	ಸ್ಕೂಲ ಮಿಸ್ಟೆಸ್	ಬೆಲೆ ೧ ೪ ೦

ಕೆಲವಾಗಿ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಬರೆಯಿರಿ — ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ಸಹಾಯ **1929**ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು

M. R. Punja, ಯಂ. ಆರ್. ಪೂಂಜ,

President & Manager ಪ್ರೆಸಿಡೆಂಟ್ ಮತ್ತು ಮನೇಜರ್

DIAMONDS! ವಜ್ರಗಳು! DIAMONDS!

K. R. K. SHET.

Opposite Govt College, Hampankatta MANGALORE.

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್ಸ್ಟ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡು ಕೊಳ್ಳುವವರಿಗೆ ಒಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆ ಯೊಂದನ್ನು ಗವರ್ನಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಉಡುಪಿಗೆ ಬಂದಾಗ ನಿಮಗೆ ಸುಖವಾಪ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಉಡುಪಿ. ಮಂಗಳೂರು

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ಸಿದ್ಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ವಿಠಲವೀಡಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಒಳ್ಳೆಪ್ಪ ಸಾಮಾನುಗಳನ್ನೆ.

ಸ್ಥಾಪನೆ [illegible] 1926

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಹೊಡೆದು ಸೈನ್ ಬೋರ್ಡ್ ತೈಸ್ತಿತರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt Mysore

Certified by the Agent of the Govt of India in Ceylon

— ಮಕ್ಕಳನ್ನು ಹಡೆಯುವದು ಸಾಕು—

ಅತಿಕ್ಕ ಸ್ತ್ರೀಯರಿಗ **ಬರ್ಥ ಕಂಟ್ರೋಲ** ಕೋಗಸ್ಥಹಪ್ಪ ಹಣ್ಣು ಮುಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ವಚ್ಚಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಕೆರಸು, ಪ್ರದರದೋಗ ಹೊರಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಲ್ಲಿ ಸೇವಿಸಬೇಕು

ಪತ್ಯ—ಹಡವೀಪಲ್ಲ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦ ಪೋಸ್ಟ ಚಾರ್ಜು ೮ ಆಣೆ

ಮಾಲಕರು —**ಹಾಲಪ್ಪಾ ಫಕೀರಪ್ಪಾ ಹಾನಗೇರಿ**

ಆಯುರ್ವೇದ ಔಷಧಾಲಯ, ಗದಗ-ಪಿಟಿ

ನಮ್ಮ ನಿಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಭಾರತಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಭಾರವಾಡದ ವಿಜಾಪುರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ ದಾನಪ್ಪ ಗೇರಿ —ದಾನಪ್ಪಗೇರಿ ಸ್ಟೋರ್ಸ ಬಳ್ಳಾರಿ —ಎಚ್ ವಿಶ್ವನಾಥಪ್ಪ ಮರ್ಚಂಟ್, ಬಳ್ಳಾರಿ, ಗೋಕಾಕ —ಸಂಗಪ್ಪ ತಿವಶಿಂಗಪ್ಪ ಅಂದಾನಿ

ವಿನು ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ ಎ ಫ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ ಕ

ರೀ ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದಿ. ಕ

ರೀ ಕೆ ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ನವಜೀವಾತು ಎಂಬ ಸೂತಿಕಾ ಸಾರಸಾಯನ



(ಇದು ವಿಜಯರು ಮೂದಲ್ಲು ಬ್ರಿದ)

ಬಾಣಂತಿಯರ ಕಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸಿರ್ಸೈ ಆಯುರ್ವೇದವ ಆಧಾರದಿಂದ ತಯಾರಿಸಲ್ಪಟ್ಟ **ಅನೋಭಹಾರ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೦ ದಿನ್ನಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ಆರುದಿವಸಗಳಿಗೆ ಬರುವವು. ಆದರೆ ಕೇವಲ ಆರೂವ್ಯಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ನಿಶಕ್ತ ವಪಹಿತ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಸಂ.೨ **ಕೊಡಿಯಾಲಬೈಲು, ಮಂಗಳೂರು.**

EDITED PRINTED & PUBLISHED BY K. H. SHETTY AT THE NAVAYUGA PRESS, UDIPI S. INDIA.

Regd. No. M. 3618. Estd. 1921 ಸ್ಥಾಪನೆ.

For Expert Workmanship & Prompt Execution
NAVAYUGA PRESS
UDIPI
ಯುಕ್ತವಾದ ಪತ್ರಿಕೆಯಿಂದ ಬೇಕಾದಂತೆ ಕಾಗದ ಮೊದಲಾದುವುಗಳು ದುರ್ಲಭವಾದುದರಿಂದ ನಮಗೆ ಬೇಕಾದ ವರ್ಗ-ಊರಿಗ ಸೊದಲಾದ ಲೆಳ್ಳ ಪುಸ್ತಕಗಳಿಗೆ ಕಾಲಾವಧಿಯಲ್ಲಿ ಆರ್ಡರು ಕೊಡುವುದು ಲೇಸಲ್ಲವೇ?
ನವಯುಗ ಪ್ರೆಸ್
. ಉಡುಪಿ. :

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ
ಸಂಪುಟ ೨೩ ಸಂಖ್ಯೆ ೬
FOUNDER
Sri. A. B. Shetty, M. L. A.
Vol. 23 No. 6
NAVAYUGA— Kannada Weekly —UDIPI, S. I.
ಉಡುಪಿ • 15—10—1942 • ಮಂಗಳೂರು.

Read & Advertise in
ANTARANGA
HUMOROUS WEEKLY
UDIPI - - - S. India
ಕೊಂದ ಮನವನ್ನು ತಣಿಸಲು
ಅಂತರಂಗ
ಸಚಿತ್ರ ವಾರಪತ್ರಿಕೆಯನ್ನೋದಿರಿ.

ಆಗ-?

ಕಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊದೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿ ನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾಶಂಕವಾಗಿ ನಡೆಯಬೇಕಾದರೆ,ಮನೆಯಲ್ಲಿ ನಗೆಯ ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ : . : ದ. ಭಾರತ.

THE CANARA MUTUAL ASSURANCE COMPANY, LIMITED.
UDIPI : : : : S. India

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಉಚ್ಚುವಿದು, ಮಲಬದ್ಧತೆ, ಒಳ ಜ್ವರ, ಆಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಕಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ಕ್ಕೆ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಕ್ಕೆ ಅತೀವೋತ್ತಮವಾದ ಶಕ್ತಿವರ್ಧಕ. ಪ್ರಸವಾವಸ್ಥೆಯನ್ನು ಹೋಗಲಾಡಿಸಿ, ಉದರಜೋಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವಿ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ಕ್ಕೆ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಟಿಸಿಯನ್ಸ್, ರಥಬೀದಿ ಹಂಬ್ರಿ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1)ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ.ಪಾರಿಬಾಗ್ ರೋಡ್, ಪರೇಲ್, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಡಂಗಾ. (3) ಮಿಲ್ಲರ್ ಪೆರ್ಸ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ ಲೆನ್ಸಡೌನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಕೆಟ್ಟಿ ಎಂಡ್ ಸಂಸ್, ಸೋಮವಾರ ಪೇಟೆ.(7)ಡಾ| ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಾಸುದೇವ ಕಮ್ತಿ, ವೆಲ್ಲಂಗಡಿ, (9) ಮುಲ್ಕಿ ಮಿಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪೊ, ಕೋಟೆಯ ಪೇಟೆ, ಉಡುಪಿ. (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಶೀಮೋಹನ ಶ್ರೀ ರಾಮಾ ಸ್ಟೋರ್ಸ್ ಹೌಸ್, ಶ್ರೀ ರಾಮ ಪೇಟೆ (13) ಕೆ.ಶ್ರೀನಿವಾಸಶೆಟ್ಟಿ,ತೀರ್ಥಹಳ್ಳಿ (14) ಬಿ.ಯಸ್,ನರಸಿಂಗರಾವ್.ಪಾರ್ಟಿಂಟ್,ಚಿಕ್ಕಮಂಗ್ಳೂರು

IF YOU CAN'T SIGN
YOUR NAME ON
A BOMB,
You Can At Least Help
To Pay For Plane
That Drops It!
So
Give to the
GOVERNOR'S
WAR FUND

ಗನೋರಿಯಾ ಪರಮಾರೋಗ ಈ [illegible] ಮೇಲೆ
—ಔಷಧ—
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಹೊರತರಕ್ಕೆ ಹಳದೀ ಬಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾರಮೊಯಿದ್ದರೆ. ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ನಮ್ಮ. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಸ್ವರ್ಣಾ ಔಷಧ ಅರ್ಧತೊಲಿ ತುಪ್ಪ ದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಧ್ಯಾಹ್ನ ಮತ್ತು ರಾತ್ರಿ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆರಡು ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಚೇಷ್ಟಿಗೆಯಲ್ಲಿ ತುಪ್ಪವಲ್ಲಿ, ಧಂತಿ ಮಳೆಗಾಲದಲ್ಲಿ ಹೀನು ತುಪ್ಪವಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹೆಸರುಬೇಳೆ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿಗೆ ಒಕ್ಕೆ ಐದೂ. ಪೋಸ್ಟೆ ಚಾರ್ಜ ೦ ಆಣೆ.

ವಿಳಾಸ:—ಗದಗ-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್.

ಮೂಲಕರ ವಿಳಾಸ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮೂಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವಿಂಡೆಲ್ ವಿಲ್ಕಿಯವರ ಸ್ವಪ್ನೋಕ್ತಿ.

ಈಗ ಚೀನದಲ್ಲಿರುವ ಅಮೆರಿಕಾಧ್ಯಕ್ಷರ ಖಾಸಗೀ ರಾಯಭಾರಿ ಮಿ ವಿಂಡೆಲ್ ವಿಲ್ಕಿಯವರು ತಾನು 13 ರಾಷ್ಟ್ರಗಳನ್ನು ಸಂಚರಿಸಿ ಪಡೆದ ಅನುಭವವನ್ನು ಸ್ಪಷ್ಟ ವಾಣಿಯಲ್ಲಿ ಪ್ರಕಟಿಸಿರುವರು. "ಎಲ್ಲಾ ಜಗತ್ತೂ ಮಿತ್ರ ರಾಷ್ಟ್ರೀಯರ ಯುದ್ಧ ವಿಜಯವನ್ನು ಹಾರೈಸುತ್ತಾರೆ; ಮತ್ತು ಈಗಲೇ ಧಾಳಿಯಾರಂಭವಾಗ ಬೇಕೆಂದು ಬಯಸುತ್ತಾರೆ. ಆದರೆ ಯು ದ್ಧಾನಂತರ ಪ್ರಮುಖ ಪ್ರಜಾಸತ್ತಾರಾ ಷ್ಟ್ರಗಳು ಅನ್ಯರಿಗೂ ಸ್ವಾತಂತ್ರ್ಯ ಕೊಡು ತ್ತವೆಂಬ ವಿಷಯದಲ್ಲಿ ಮಾತ್ರ ಅವರಿಗೆ ಬಹಳ ಅನುಮಾನವಿದೆ. ನಮ್ಮ ಕದನೆಯಿಂ ದ ಯುದ್ಧಕ್ಕೊದಗುವ ಆವರ ಸ್ಫೂರ್ತಿ ಯನ್ನು ಈ ಅನುಮಾನವು ಕೊಲ್ಲುತ್ತಿದೆ."

ಮಿತ್ರ ರಾಷ್ಟ್ರೀಯರ ಕರ್ತವ್ಯ.

ವಿಲ್ಕಿಯವರು ಈ ಪರಿಸ್ಥಿತಿಗೊಂದು ಪರಿಹಾರವನ್ನೂ ಸೂಚಿಸಿದ್ದಾರೆ. "ಸಾ ಮಾನ್ಯ ಜನರ ಯಥಾರ್ಥ ಬೆಂಬಲವಿಲ್ಲದೆ ಯುದ್ಧ ಗೆಲ್ಲುವದೆಂದರೆ ಬಹಳ ಕಷ್ಟ, ಶಾಂತಿ ಸಾಧಿಸುವದಂತೂ ಅಸಾಧ್ಯವೇ ಸರಿ ನಮ್ಮೊಡನೆ ಮಾತಾಡಿದ ವಿಚಾ ರವಂತ ಸ್ತ್ರೀಪುರುಷರಿಗೆ 'ಅಟ್ಲಾಂಟಿಕ್ ಘೋಷಣೆ'ಯ ಹೆಸರು ಕೂಡಾ ಸಂ ಕಟವಾಯಿಯಾಗಿದೆ ಅವಕ್ಕೆ ಸಹ ಮಾನವಿದ ಜನರು ಇದು ಶಾಂತಿ ಸಾಗ ರಕ್ಕೆ ಆಸ್ಪದವಿಸುವದೆಂದು ಒಪ್ಪು ತ್ತಾರೆಯೆ? ಎಂದನರು ಕೇಳುತ್ತಿದ್ದಾರೆ ನಮ್ಮ ಸ್ಥಾನವಾವುದೆಂಬುದನ್ನ ಸ್ಪಷ್ಟ ವಾದ ಸರಳ ಹೇಳಿಕೆಯಿಂದ ಸಮೂಹದಿಸಿ, ಈ ಪ್ರಶ್ನೆಗ ಈಗಲೇ ಉತ್ತರ ಕೊಡಬೇ ಕು ಚೀನಾ ದೇಶದ ಪ್ರತಿಯೊಂದು ಹೆಜ್ಜೆ ಭೂಮಿಯೂ ಅದರಲ್ಲಿ ವಾಸಿಸುವನೆ ದ ಹೊರತು ಅನ್ಯರಿಂದ ಆಳಲ್ಪಡಲಾರ ದು-ಆಳಲ್ಪಡಕೂಡದು ಎಂಬುದನ್ನು ಈಗಲೇ ಸಾರಬೇಕು; ಯುದ್ಧಾನಂತರ ವಲ್ಲ. ಯುದ್ಧಾನಂತರದ ಬದಲು ಇಣಿ ಗಳು ಅಲ್ಪವಾಗಬಹುದು ಮತ್ತು ತಡ ವಾಗಬಹುದು"- ಎಂದು ವಿಲ್ಕಿಯವರ ಅನಂಧಿಗ್ಧ ಮಾತು

ಭಾರತ ಸಮಸ್ಯೆಯಲ್ಲಿ ಕೈಹಾಕಿರಿ

ಹಿಂದೆ ಪ ಹಾಸಭೆಯು ಏನೇನ ನಿರ್ಣ ತಿಯ ಪರವಾಗಿ ಡಾ। ಶ್ಯಾಮ ಪ್ರಸ ದ ಮುಖರ್ಜಿಯ ಮತ್ತು ತಜ್ಞೆಸ್ಟ್ ದಾಸನೆಲ್ಬ ರಿಗೂ ನಾರ್ಮಲ್ ಚಿಯಾಂಗ್ ಕೈಶೇಕ ರಿಗೂ ಬಿಟ್ಟು ಕೇಬ್‌ಲ್‌ನಲ್ಲಿ 'ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗುತ್ತ ಸ್ವಾ ತಂತ್ರ್ಯ ಘೋಷಣೆಗಾಗಿ ಕೂಡಲೇ ಮಧ್ಯ ಸ್ಥಿಕೆಯ ಕೈಹಾಕಿರಿ' ಎಂಬ ಒಕ್ಕೊಕೆಯೊಂದು ಪಮಾನವಲ್ಲ. ಭಾರತದ ಪರಿಸ್ಥಿತಿಯನ್ನು ಪತ್ರೋಟಿಗೆ ತರಲು ಸರಕಾರವು ಕೈಗೊಂದ ವಿಧಾನವು ಕೆಂಭಾವನೆ ಮತ್ತು ಗೊಂದ ಲಪನ್ನು ನಿರ್ಮಿಸಿದೆ ಆದ್ದರಿಂದ ಕೂಡ ಲೇ ನ್ಯಾಯವಾದ ಕಾರ್ಯ ಕೈಕೊಳ್ಳಬಿದ್ದಲ್ಲಿ ಬ್ರಿಟನ್-ಭಾರತ ಸಂಬಂಧ ತೀರ್ಮಾ

GET MEDICAL DEGREES BY HOME
Examination—Ayurvedic, Homeopathic, Unani etc, Prospectus Free.
Dr Mansingh, Kotgarh (Simla)

★ ವಾರದ ವಾದ— ವಿಲ್ಕಿಯವರ ಬೋಧನೆ. ಅಮೆರಿಯವರ ಘರ್ಜನೆ. ★

ನಕ್ಕೆ ಕಾಲ ಮೀರಿ ಹೋಗಬಹುದು. ಹಿಂ ದೂ ದೇಶವೀಗ ಪ್ರಾಮುಖ್ಯ ಯುದ್ಧನೆಲೆ ಯಾಗಿ ಪರಿಣಮಿಸಿರುವದರಿಂದ ಅದೀಗ ಬ್ರಿಟಿಷರ ಗೃಹಸಮಸ್ಯೆಯಾಗಿರದೆ ಮಿತ್ರ ರಾಷ್ಟ್ರೀಯರ ಪೂರ್ಣ ಲಕ್ಷ್ಯವನ್ನೆಳೆಯುವ ವಿಷಯವಾಗಿದೆ ಆದ್ದರಿಂದ ನೀವು ಕೈಹಾಕಬೇಕೆಂದು ಒತ್ತಾಯಿಸುತ್ತೇನೆ' ಎಂದು ಕೇಳಿಕೊಂಡಿರುವರು.

ಗವರ್ನರರ ಉಪದೇಶ.

ಮದ್ರಾಸಿನ ಚಿಂಗಲೆಪೆಟ್ ಲೇಬರ್ ಪರಿಷತ್ತಿನ ಅಧ್ಯಕ್ಷತೆ ವಹಿಸಿ ಮದ್ರಾಸ್ ಗವರ್ನರರು ಭಾಷಣಮಾಡುತ್ತಾ ಸದ್ಯದ ನಿಸಹಾಯಾತ್ಮಕ ಆಂದೋಲನವನ್ನು ಖಂಡಿಸಿ ದರು: "ಕಳೆದ ಎರಡು ತಿಂಗಳುಗಳಿಂದ ನಡೆಯುತ್ತಿರುವ ಗೊಂದಲ, ಅನಾಯ ಕತ್ತ, ಕೊಲೆ, ಕಿರುಕುಳಗಳು ಯಾರಿಗೆ ಹಾನಿಯೊಡ್ಡಿದವು? ಬ್ರಿಟಿಷ್ ಸರಕಾರ ಕ್ಕೋ? ಭಾರತ ಸರಕಾರಕ್ಕೋ, ಮದ್ರಾ ಸ್ ಸರಕಾರಕ್ಕೋ? ಕೆಲವಷ್ಟಿಗೆ ಇವುಗಳಿ ಗೂ ಹೌದು ಆದರೆ ಎಲ್ಲಕ್ಕಿಂತ ಹೆಚ್ಚಾ ಗಿ ಸ್ವದೇಶಕ್ಕೇನೇ ಹಾನಿಮಾಡಿದವು ಇಲೆಕ್ಟ್ರಿಕ್ ಟ್ರೈಮುಗಳ ಮೇಲೆ ಕಲ್ಲು ಬಿಸುವಿ ಅವರಾನ್ನು ಜಖಂಗೊಳಿಸಿ ದವು? ನೈಸರಾಯರನ್ನಲ್ಲ; ನನ್ನನ್ನೂ ಅಲ್ಲ; ಅಮೆರಿಯವರನ್ನಲ್ಲ; ಚರ್ಚಿಲ್ಲರನ್ನೂ ಅಲ್ಲ. ತಮ್ಮ ಸ್ವಂತ ಸಹೋದರ ಸಹೋ ದರಿಯರನ್ನು! ತಮ್ಮ ಸದೆಬ್ಬಿಗಳಿಂದ, ತಪ್ಪಿಗಂತ ಹೆಚ್ಚಿನ ವಿಪ್ಪಾಂಸರಿಂದೂ ಕಲಿ ತಿರದವರಿಗೆ, ಕೆಲಸಗಾರರೊಂದು ಮಾದರಿ ಯಾಗಿದ್ದಾರೆ!"- ಎಂದು ಗವರ್ನರರು ತಿಲ್ಲಿಯ ಕೂಲಿಗಾರರನ್ನು ಪ್ರಶಂಸಿಸಿರು ವರು

ಅಮೆರಿಯವರ ಅಬ್ಬರ!

"ಕಾಂಗ್ರೆಸ್ ಪ್ರಮುಖರೇ ಜನಾಬ್ದಾರಿ ಯಾಗಿರುವ ಗಲಭೆ ತೊಂದರೆಗಳ ಅಪಾ ಯವಿರುವನಕ, ಅಥವಾ ಅವರು, ಕಾಯಿ ದೇ ವಿರುದ್ಧ ಮತ್ತು ಕ್ರಾಂತಿಕಾರೀ ರೀತಿ ಯಿಂದ ಭಾರತವನ್ನು ಹತೋಟಿಗಿಟ್ಟು ಕೊಳ್ಳುವ ತಮ್ಮ ಇಡೀ ಘೋರಣೆಯನ್ನು ಬಿಟ್ಟುಕೊಟ್ಟು ನನ್ನೊಡನೆ ಮತ್ತು ಅವರ ದೇಶೀಯರೊಡನೆ ಸಂಧಾನಕ್ಕೆ ಬರುವ ಇಚ್ಛೆಯನ್ನು ಅಧಿಕಾರಿಗಳೊಡನೆ ಸ್ಪಷ್ಟ ಗೊಳಿಸದ ನರೆಗೆ, ಭಾರತ ಸರಕಾರವು ಕಾಂಗ್ರೆಸ್ ಮುಖಂಡರೊಡನೆ ಸಂಧಾನ ಕ್ಕಿಳಿಯುವ, ಅಥವಾ ಅನ್ಯರನ್ನು ಹಾಗೆ ಮಾಡಲು ಬಿಡುವ ಪ್ರಶ್ನೆಯೇ ಇಲ್ಲ"- ಎಂದು ಭಾರತ ಸಚಿವ ಮಿ ಆಮೇರಿಯವ ರು ಪಾರ್ಲಿಮೆಂಟಿನ ಕಾಮನ್ಸ್ ಸಭೆ ಯಲ್ಲಿ ಖಂಡತುಂಡವಾಗಿ ಹೇಳಿರುವರು ಭಾರತದ ಪ್ರಾಂತ್ಯಗಳ ಗವರ್ನರಾಡಳಿತ ವನ್ನು ಯುದ್ಧಾನಂತರ ಒಂದು ವರುಷ ದ ವರೆಗೆ ಮುಂದುವರಿಸುವ ಸೂಚನೆ ತಂದು ಮಿ. ಆಮೆರಿಯವರಾಡಿದ ಮಾತಿ ದು. ಅದನ್ನು ತಿರಸ್ಕರಿಸಲು ಸ್ವತಂತ್ರ ಕೂಲಿಗಾರ ಪಕ್ಷದ ಸದಸ್ಯರು ತಂದ ಉಪ ಸೂಚನೆಯು 17 ಅನುಕೂಲ 360 ಪ್ರತಿಕೂಲ ಮತಗಳಿಂದ ಬಿದ್ದುಹೋಗಿ ಆಮೆರಿ ಯೋಜನೆ ಪಾಸಾಯಿತು.

ಅನ್ಯರಾಜ್ಞೆಯಿಂದ ಹೊರಬರುವವರಲ್ಲ!

ತಮೆರಿಯವರ ಭಾಷಣದ ಪ್ರಾಪ ಯ್ಯಾಂಶವಿದು: "ನಾವು ಭಾರತಕ್ಕೆ ಸಹಾ ಯವನ್ನು ನಮ್ಮನ್ನಲ್ಲಿ ಕಾರ್ಪಣಕೊಳಿಸಬೇ ಕೆಂಬ ದೃಷ್ಟಿಯಿಂದ ಎಂದೂ ಮಾಡಿಲ್ಲ. ತದ್ವಿರುದ್ಧವಾಗಿ ಇಂಡಿಯವು ತನ್ನ ಭವಿ ಷ್ಯವನ್ನು ತಾನೇ ನಿರ್ಮಿಸಿಕೊಳ್ಳಬೇಕೆಂಬ ಇಚ್ಛೆ ನಮ್ಮದು. ನಾವು ಯೂರೋಪ್ಯರ ಆಜ್ಞೆಯಿಂದಲೂ ಭಾರತವನ್ನು ಬಿಟ್ಟು ಬರುವಂತಿಲ್ಲ! ನಮ್ಮ ಸೌಹಾರ್ದ್ರದಿಂದ, ತನ್ನ ನಾಯಕತ್ವದಲ್ಲಿ ತನ್ನ ಭವಿಷ್ಯ ವನ್ನು ಭಾರತವು ನಿರ್ಮಿಸಿಕೊಳ್ಳಲು ಮುಂದೊತ್ತಬೇಕೆಂದು ಇಚ್ಛಿಸುವವರು ನಾವು. ಮುಂದುವರಿಯಬೇಕು ಹೊರ ತು ಮುರಿದುಹಾಕಬಾರದು; ಕಟ್ಟುತ್ತಾ ಹೋಗಬೇಕು ಹೊರತು ಕಡಿದುಕೊಳ್ಳ ಬಾರದು- ಇದೇ ನಮ್ಮ ಘೋರಣೆ. 95 ಮಿಲ್ಯನಿರುವ ಮುಸ್ಲಿಂ ಸಮಾಜವನ್ನು, ಅರ್ಧ ಭಾರತವನ್ನಾಳುತ್ತಿರುವ ಅಶ್ರಿತ ರಾಜರನ್ನೂ, 60 ಮಿಲ್ಯ ದಲಿತ ವರ್ಗ ವನ್ನು ನಾವು ಮರೆಯಲಾಗುವದಿಲ್ಲ. ಗಾಂಧಿಯೆಂದರೆ, ಒಂದು ಸಂಸ್ಥೆಯನ್ನು ತನ್ನ ವಿನಾಶಾತ್ಮಕ ಹಾದಿಗೆಳೆಯುವ, ತನ್ನ ಆಸೆಯಾಯಿಗಳ ಆಲೋಚನೆಗೆ ವಿರುದ್ಧವಾಗಿ ತನ್ನದನ್ನೇ ಹೊರಿಸುವ ಕ್ರಾಂತಿಕಾರ ಸರ್ವಾಧಿಕಾರಿ. ವರ್ಗಭೇದ ವಿದ್ದರೂ ಜರ್ಮನಿಯ ಸರ್ವಾಧಿಕಾರ ದಸ್ಸೇ ಹಿಂದೂ ಸರ್ವಾಧಿಕಾರವೂ ಅಪಾ ಯಕರವಾದುದು." ಎಂದೇ ಅಮೆರಿಯವ ರ ಆಪ್ರಬುದ್ಧ ಪ್ರಲಾಪ.

ಮುಸಲ್ಮಾನರ ತರಗತಿ.

ಮಿ. ಆಮೆರಿ ಭಾಷಣದ ಅತ್ಯಂತ ಕಲ್ಪ ಪಯುಕ್ತ ಭಾಗವಿದು: "ಕಾಂಗ್ರೆಸ್ಸೆಂದರೆ ಹಿಂದೂ ಸಂಸ್ಥೆ. ಅದರಲ್ಲೂ ಮುಖ್ಯ ವಾಗಿ ಆವಿದ್ಯಾವಂತ ಹಿಂದೂಗಳ ಮೇಲೇ ನೇ ಗಾಂಧಿಯವರ ವರ್ಚಸ್ಸಿದೆ. ಹಳ್ಳಿ, ಪಟ್ಟಣ ಮತ್ತು ವಿಶ್ವ ವಿದ್ಯಾಲಯಗಳ ಮುಸಲ್ಮಾನರು ಅತ್ಯಂತ ನಿಷ್ಠೆಯಿಂದ ಗೊಂದಲಗಳಿಂದ ದೂರವಿರುವದು ಮಾ ತ್ರವಲ್ಲ. ಅಧಿಕಾರಿಗಳಿಗೆ ಸಹಾಯವನ್ನಾ ಡುತ್ತಿದ್ದಾರೆ. ಕಾಂಗ್ರೆಸ್ ಧಾಳಿಯ ಗುರಿ ಯು ಬ್ರಿಟಿಷ್ ಸರಕಾರವೆಂದು ಸೂಚಿಸಿ ದ್ದರೂ, ಅದು ಕಾರ್ಯತಃ ಭಾರತದ ಇತರ ಭಾಗಗಳ ಮೇಲೆ ಮತ್ತು ಮುಸ್ಲಿಂ ಭಾರತದ ಮೇಲೆ ಬಿದ್ದ ಪ್ರತ್ಯಕ್ಷ ಧಾಳಿ ಯೆಂಬುದನ್ನು ಮನಗಂಡ ಮಿ ಜಿನ್ನರು ಈ ಮಟ್ಟಿಗೆ ಮುಸಲ್ಮಾನರಿಗೆ ಅತ್ಯಂತ ಸರಳವಾದ ಮಾರ್ಗ ತೋರಿಸಿದ್ದಾರೆ. ಕಾಂಗ್ರೆಸಿನ ಸದ್ಯದ ಭಾವನೆ ಮತ್ತು ವರ್ತನೆಯಿರುವ ತನಕ ಆದನ್ನು ಸಮಜಾ ಯಿಸಲು ನೋಡುವದರಿಂದ ಪರಿಸ್ಥಿತಿ ಸು ಧಾರಿಸುವ ಆಶೆಯಿಲ್ಲ. ಹಾಗೆ ಮಾಡಿದರೆ ಮುಸಲ್ಮಾನರಿಗೂ ಬೇರೆ ಪಕ್ಷಗಳಿಗೂ ದ್ರೋಹಮಾಡಿದಂತೆಯೇ ಸರಿ ಎಲ್ಲಕ್ಕಿಂ ತ ಹೆಚ್ಚಾಗಿ, ಈ ಗೊಂದಲಕ್ಕಿದಿರಾಗಿ ಯಾರು ಅತ್ಯಂತ ದೃಢತೆಯನ್ನು ತೋರಿ ಸುತ್ತಿರುವರೋ, ಯಾರನ್ನಾಧರಿಸಿಕೊಂಡು ಭಾರತದ ರಕ್ಷಣೆ, ಮತ್ತು ಮಿತ್ರ ರಾಷ್ಟ್ರಗಳ ತತ್ವದ ಉದ್ದೇಶವಿದೆಯೋ ಆ ಸೈನಿಕರಿಗೆ. ಪೋಲಿಸರಿಗೆ ಸಿವಿಲ್ ಸರ್ವಿ ಸಿನವರಿಗೆ ನಾವು ಪ್ರತ್ಯಕ್ಷ ದ್ರೋಹಮಾ ಡಿದಂತಾಗುವದು".

ಚಿಂತಿಸುತ್ತಿರುವುದೇಕೆ?

ವಿಮಾಸಥಾಳಿ ಅಧಿಕಾರಿ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾ ಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾಸಥಾಳಿ ಸಂರಕ್ಷಣಾ ಕೆಲಸವನ್ನು ಕೂಡಾ ನಿರ್ವಹಣಪುಂಟುಗುವ ಆಪಾಯವನ್ನು ಸಂಪೂರ್ಣ ಒಳಗೊಂದ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುನರಿಂದ ಈ ಗಂಡಾಂತರವೆ ಸಂಭರ್ಭದಲ್ಲಿ ನೀವು ಸ್ರೀತಿಸುಸರ್ಕ ಫಲುವಾಗಿ

ದಿ ಬೊಂಬೇ ಲೈಫ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಇದರಲ್ಲಿ ಕೂಡುವರೆ ಪೋಲಿಸಿಯನ್ನು ತೆಗೆದುಕೂಳ್ಳುವ ಮುಂಜಾಗ್ರತೆಯುಳ್ಳ ವರಾಗುವುದುನಿಮ್ಮ ಕರ್ತವ್ಯ.

ಒಳ್ಳೆ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೆಳ್ಳಿರಿ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಬಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ
ಮುಖ್ಯ ಏಜಂಟರು

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.
ಅಥವಾ ಅವರ ಈ ಕೆಳಗಿನ ಆಫೀಸುಗಳಿಗೆ ಬರಕೆಳ್ಳಬಹುದು.
ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ,
ತಿರುವಾಂಕೂರು ಮತ್ತು ಬೊಂಬಾಯಿ.

The Bombay Life Insurance Company Limited.

ದೇಶ ವಾರದ ವಾರ್ತೆ ವಿದೇಶ

● **ಬಿಜಾಪುರಿನಲ್ಲಿ ಗೊಂದಲ.**

ಕಳದ ತಿಂಗಳ ಕೊನೆಯ ಮತ್ತು ಈ ತಿಂಗಳ ಮೊದಲ ವಾರಗಳಲ್ಲಿ ಬಿಜಾಪುರಿನಲ್ಲಿ ನಡೆದ ಗೊಂದಲದ ವಿವರವನ್ನು ಸರಕಾರವು ಪ್ರಕಟಿಸಿದೆ. ಬಾರೋ ಮತ್ತು ಡಾಕಾದ ಹೆಂಡದಂಗಡಿಗಳು ಸುಡಲ್ಪಟ್ಟವು. ಈದುರದ ಚೌಕೀದಾರೀ ಆಫೀಸು, ಹುರದಲ್ಲಿದ್ದ ಸೈನಿಕ ಪೀರೀಕ್ಷಕ ನಿಲ್ದಾಣ; ಆಲಪುರ್ ಮತ್ತು ಲಾದುರ್ಕಗಳಲ್ಲಿಯ ನಿರಾಶ್ರಿತ ಶಿಬಿರಗಳಿಗೆ ಬೆಂಕಿಕೊಡಲ್ಪಟ್ಟಿತು. ಮುಧೋಳ ಮತ್ತು ಜಾಂಡ್ಯಾಲ್ ಪೋಲೀಸ್ ಸ್ಟೇಶನ್‌ಗಳ ಮೇಲೆಯೂ ಅಂತೆಯೇ ಧಾಳೆ ನಡೆಯಿತಲ್ಲದೆ ಜಿಲ್ಲೆಯ ಪೋಸ್ಟಾಫೀಸುಗಳನ್ನೂ ದರೋಡೆ ಮಾಡಲಾಯಿತು. ಬಾರಾ ಬಝಾರಿನಲ್ಲಿ ಸಬ್ ಇನ್ಸ್ಪೆಕ್ಟರುಗಳ ಸಮಕ್ಷಮದಲ್ಲೇ ಸ್ಫೋಟನು ಲುರಾಯಿಸಲ್ಪಟ್ಟಿತು. ಬಂದ್ಯಾನಿಹಳ್ಳಿ ನಾಲ್ಕೇ ಮಂದಿಯಿದ್ದ ಪೋಲಿಸರ ಮೇಲೆ ಜನರ ತಂಡವು ಬಿದ್ದು ಇಡೀ ಕಟ್ಟೋಣವನ್ನೇ ನೆಲಸಮಮಾಡಿರುವದು. ಅಲ್ಲಿ ಗೋಳೀ ಬಾಲು ನಡಿಸಲಾಗಿದೆ. ಭಾಗಲ್ಪುರದಲ್ಲಿ ದರ್ಭಾಂಗ ಮತ್ತು ಬನಾಯಲಿ ಮತ್ತು ಇತರ ಹದಿನಾರು ರಾಜ ಕೀಯ ಸರ್ಕಲ್ ಆಫೀಸುಗಳು ರಿಕಾರ್ಡುಗಳೊಂದಿಗೆಸುಡಲ್ಪಟ್ಟವೆ.

● **ಸಿಡಿಮದ್ದಿನ ಹಾಟು.**

ಜೋಬಾಯಿಯ ಥಿಯೇಟರೊಂದರಲ್ಲಿ ತಾ. 8ನೇ ಆಸರಂಹ್ನ ಸಿನೆಮಾಶ್ಯವಾಗುವಾಗ ದೊಂಬೊಂದು ಸಿಡಿಯಿತು. ಜನರು ಕಕ್ಕಾಬಿಕ್ಕಿಯಾದರು; ಅಪಾಯವಾಗಲಿಲ್ಲ. ರಾತ್ರಿ ಹೊತ್ತು ಸಿಡಿಮದ್ದಿನಿಂದ ಬೆಂಕಿ ಹಚ್ಚಲು ಹಾಕಿಟ್ಟ ಉಪಕರಣಗಳು ಬೊಂಬಾಯಿಯ ಹಲವು ಕಡೆಗಳಲ್ಲಿ ದೊರಕಿವೆ. ನ್ಯೂಢಿಲ್ಲಿಯ ಟಪ್ಪಾಲಾಫೀಸೊಂದು ಸಂಪೂರ್ಣ ಸುಟ್ಟುಹೋಗಿದೆ. ಧುಬ್ರಿಯ ಅಗಿಯೂ ಮತ್ತು ಕೃಷ್ಣಾಯಿಯಲ್ಲಿ ಎರಡು ಇನ್ಸ್ಪೆಕ್ಷನ್ ಬಂಗಲೆಗಳು ಬೆಂಕಿಗಾಹುತಿಯಾದವು. ಮೂಡಬಿದ್ರೆ ಬಳಿಯಲ್ಲಿ ಸಂಕ ಹಾಳು ಮಾಡಿದ ಆರೋಪದಿಂದ ನಾಲ್ವರಿಗೆ ಒಂದೊಂದು ವರುಷ ಕಠಿಣ ಸಜೆ, ಹನ್ನೆರಡರಂತೆ ಭಡೀ ಹೊಡೆತ ವಿಧಿಸಲ್ಪಟ್ಟಿದೆ. ಮಸಲಿಸಟ್ಟಣಮಿನಲ್ಲಿ ಲಾತೀ ಚಾರ್ಜು ನಡೆಯಿತು ಮೈಸೂರಿನ ಶ್ರವಣ ಬೆಳಗುಳದಲ್ಲಿ ಜನಗುಂಪಿನ ಮೇಲೆ ಪೋಲಿಸರು ಗುಂಡು ಹಾರಿಸಿ ಮೂವರು ಮಡಿದುಬಿದ್ದರು; ಹಲವರು ಜಖಂಗೊಂಡರು. ಬಿಜಾಪುರದ ಬಳಿಯ ರೈಲ್ವೇ ಸ್ಟೇಶನು ಸುಟ್ಟು ಹೋಗಿದೆ. ವೇಶಾವರದಲ್ಲಿ ಪೋಸ್ಟು ಆಫೀಸಿನ ಮೇಲೆ ಧಾಳೆ ನಡೆಯಿತು.

● **ಕಳ್ಳ ಸಬ್ ಇನ್ಸ್ಪೆಕ್ಟರ್!**

ಬಾರ್ಡೋಲಿಯ ಹಳ್ಳಿ ಮನೆಯೊಂದರಲ್ಲಿ ಬೋಂಬು ಸಿಡಿದು ಇಬ್ಬರು ಜಖಂಗೊಂಡರು ಬೋಂಬಾಯಿಯ ಸ್ಪೇಡಿಯಂ ಒಂದರಲ್ಲಿ ಬೋಂಬೊಂದು ಸಿಕ್ಕಿದೆ. ಬೊಂಬಾಯಿಯಲ್ಲಿ ಕಾಂಗ್ರೆಸ್ ಪ್ರದರ್ಶನದ ಮೇಳೆ ಓರ್ವನ ಕಿಸೆಯಿಂದ ಹಣ ಜಾರಿಸಿದ ಯುರೋಪಿಯನ್ ಸಬ್ ಇನ್ಸ್ಪೆಕ್ಟರನೊಬ್ಬನನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಕೆಲವು ದಿನಗಳ ಹಿಂದೆ ಕಾಂಗ್ರೆಸ್ ಮೆರವಣಿಗೆಯಲ್ಲಿದ್ದವನೊಬ್ಬನು, ತನ್ನ ಹಣದ ಚೀಲವನ್ನು ಓರ್ವ ಆಫೀಸರನು ಕಳವುಮಾಡಿದನೆಂದು ಅಲ್ಲಿಯೇ ಇದ್ದ ಡಿಪ್ಯುಟಿ ಕಮಿಶನರರೊಡನೆ ದೂರಿದಾಗ, ಅವರು ಆಫೀಸರನ ಗುರುತು ಕೇಳಿದರು. ಅಂತೆಯೇ ಈ ಸಬ್ ಇನ್ಸ್ಪೆಕ್ಟರನ್ನು ಜಡ್ತಿ ಮಾಡಿದಾಗ ಹಣದ ಚೀಲವನ್ನಿ ದೊರೆಯತೆಂದೂ ಮರುದಿನ ಅವನನ್ನು ಅಮಾನತ್ ಪಡಿಸಿ, ಕೊನೆಗೆ ಕೆಲಸದಿಂದ ಡಿಸ್‌ಮಿಸ್ ಮಾಡಲಾಯಿತೆಂದೂ ತಿಳಿದುಬರುತ್ತದೆ. ಶೋಲಾಪುರದಲ್ಲಿ ಒಂದು ಬೋಂಬು ಸಿಡಿಯಿತು; ಮತ್ತೊಂದು ಸಿಡಿಯುವ ಮೊದಲೇ ಕಂಡುಹಿಡಿಯಲ್ಪಟ್ಟಿತು. ದೇಶ ಸರ್ವತ್ರ ದಸ್ತಗಿರಿ ನಡೆದಿದೆ.

● **ಅಲ್ಲಾ ಭಕ್ಷ್ಯರನ್ನು ತಳ್ಳಿಹಾಕಿದರು.**

ಸರಕಾರದ ಘೋಷಣೆಯನ್ನು ಖಂಡಿಸಿ ತನ್ನ ಬಿರುದು ಬಾವಲಿಗಳನ್ನು ತ್ಯಜಿಸಿದ ಸಿಂಧಿನ ಪ್ರಧಾನಿ ಮಿ. ಅಲ್ಲಾಭಕ್ಷ್ಯರನ್ನು "ಅವರು ಗವರ್ನರರ ವಿಶ್ವಾಸಪಾತ್ರರಲ್ಲ" ಎಂಬ ಕಾರಣ ಕೊಟ್ಟು ಸಿಂಧ್ ಗವರ್ನರರು ಮುಖ್ಯ ಮಂತ್ರಿಸ್ಥಾನದಿಂದ ತೆಗೆದು ಹಾಕಿರುವರು. ರಾಜೀನಾಮೆ ಕೊಡಲು ಮಿ. ಅಲ್ಲಾಭಕ್ಷ್ಯರು ಒಪ್ಪಲಿಲ್ಲ ಈಗ ಸರ್. ಗುಲಾಮ್ ಹುಸೇನ್ ಹಿದಾಯತುಲ್ಲಾರವರು ಗವರ್ನರರ ಆಮಂತ್ರಣದಂತೆ ಮಂತ್ರಿ ಮಂಡಲ ರಚಿಸಿರುವರು.

● **ಜಾಪಾನೀ ಸೆಲೆಗೆ ಜೋಂಬು.**

ಭಾರತದ ವಿಮಾನ ನಿಲ್ದಾಣದಿಂದ ಹೊರಟ ಅಮೆರಿಕನ್ ವಿಮಾನಗಳು, ಜಾಪಾನಿನ ಮೊಂಗಾಂಗ್ ಬಳಿಯ ರೈಲ್ವೇ ಸಂಕವನ್ನು ನಾಶಮಾಡಿದವು. ಲೊಯಿಎಂಗ್, ಟೌಂಕಾ ಮೊದಲಾದ ಜಾಪಾನೀಯ ದ್ವಾಪಶ್ಯಕ ಸ್ಥಳಗಳ ಮೇಲೂ ವಿಮಾನ ಧಾಳೆ ಜರಿಯಿತು.

● **ಸ್ಟಾಲಿನ್‌ಗ್ರಾಡ್ ಪತನ.**

ಸ್ಟಲಯ ತೆರೆಗಳಂತೆ ಮೇಲಿಂದ ಮೇಲೆ ಏರಿ ಬರುತ್ತಿದ್ದ ಜರ್ಮನ್ ಸೇನೆ ಮತ್ತು ವಿಮಾನಗಳ ಧಾಳೆಯು ಒತ್ತಾಟದಿಂದ ಕೆಂಪು ಸೇನೆಯು ಸ್ಟಾಲಿನ್‌ಗ್ರಾಡಿನ ಉತ್ತರ ಭಾಗದಲ್ಲಿ ಪುನಃ ಹಿಮ್ಮೆಟ್ಟಬೇಕಾಯಿತು. ಅಲ್ಲಿಯ ಎರಡು ರಸ್ತೆ ಸ್ವಾಧೀನತೆಗೆ ೪೦೦೦ ಸೇನೆ ಮತ್ತು ೬೦ ಟ್ಯಾಂಕುಗಳನ್ನು ಜರ್ಮನರು ಆಹುತಿಕೊಟ್ಟರು. ಜರ್ಮನ್ ಸೇನಾನಿ ಪ್ರಸಿದ್ಧ ಜನರಲ್ ಪೌಲ್ ಜೋಸೆಫ್ ಗೋಬೆಲಿಗೆ ಪೌಲ್ ಲಿಪ್ಪ್ ಇವರು ನೇಮಿಸಲ್ಪಟ್ಟಿರೆಂದು ಅಧಿಕೃತ ವಾರ್ತೆಯಿದೆ. ಸ್ಟಾಲಿನ್‌ಗ್ರಾಡಿನ ದಕ್ಷಿಣ ಭಾಗದಿಂದ ಜರ್ಮನರ ಆಕ್ರಮಣ ತಪ್ಪಿಸಲಾಯಿತೆಂದು ಮೋಸ್ಕೋವಿನ ವಾರ್ತೆ. ಪೊಲ್ಟಾಕ್ಕೆ ಸಮೀಪ ಸಾರಿದ್ದ ಜರ್ಮನ್ ಸೇನೆಗಳನ್ನು ಹೊಡೆದು ಹಿಂದಟ್ಟಲಾಗಿದೆ.

● **ಟಗೊರೆಂಕೋ ವಿಜಯ.**

ಸ್ಟಾಲಿನ್‌ಗ್ರಾಡಿನ ವಾಯವ್ಯ ಗಡೆಯಿಂದ ಧಾಳೆಯನ್ನಾರಂಭಿಸಿ ಕಳೆದ 10 ದಿನಗಳಿಂದ ಅತುಲ ಸಾಹಸ ಪ್ರದರ್ಶಿಸುತ್ತಾ ಜರ್ಮನ್ ವ್ಯೂಹವನ್ನು ಭೇದಿಸಲು ಮುಂದೊತ್ತುತ್ತಿದ್ದ ಮಾರ್ಶಲ್ ಟಿಮೊಶೆಂಕೋರ ಸೇನೆಯು ನಾಜೀ ಸೇನೆಯನ್ನೊಡೆದುಕೊಂಡು ಮುನ್ನುಗ್ಗಿ ಹಲವು ಕಡೆಗಳಲ್ಲಿ ಡೋನ್ ನದಿಯನ್ನು ದಾಟಿರುವದೆಂದು ತಿಳಿದು ಬರುತ್ತದೆ. ಇಂತಹ ಧಾಳೆಯನ್ನು ಜರ್ಮನರು ನಿರೀಕ್ಷಿಸಿರಲಿಲ್ಲವಾದ್ದರಿಂದ ಡೋನಿನ ಪೂರ್ವ ತೀರದಲ್ಲಿನ್ದಂತೆ ಪಶ್ಚಿಮ ತೀರದಲ್ಲಿ ಬಲವಾದ ರಕ್ಷಣಾ ವ್ಯವಸ್ಥೆಯಿರಲಿಲ್ಲ. ಹೀಗಾಗಿ ಇಲ್ಲಿ ರಶ್ಯನ್ ಸೇನೆಯು ಸ್ಟಾಲಿನ್ ಗ್ರಾಡಿನ ನಾಜೀ ಸರಬರಾಯಿ ಹಾದಿಯನ್ನು ಕಡಿಯುತ್ತಾ ದಕ್ಷಿಣಕ್ಕೆ ಮುಂದೊತ್ತುತ್ತಿದೆ. ಟಗೊರೆಂಕೋರವರು ಅಪಿಸ್ಪ್ರಿಂವೆಂಬಲ್ಲಿ ಧಾಳೆ ನಡಿಸುತ್ತಿದ್ದಾರೆ.

● **ಪೀರೀಕ್ಷೆ ಹುಸಿಯಾಯಿತೆ?**

ಸ್ಟಾಲಿನ್ ಗ್ರಾಡನ್ನು ಳಳಿಗಾಲದೊಳಗೆ ಸ್ವಾಧೀನಪಡಿಸಿಕೊಳ್ಳುವ ಇಚ್ಛೆಯಿಲ್ಲವಾದರೂ ಅದನ್ನು ಪೂರ್ಣ ಧ್ವಂಸಮಾಡುವೆವೆಂದು ಜರ್ಮನ್ ಸೇನಾವಾಗ್ಮಿಯೊಬ್ಬನ ಹೇಳಿಕೆಯಿದೆ. ಇತ್ತೀಚೆಗೆ ಸ್ಟಾಲಿನ್‌ಗ್ರಾಡಿನೊಳಗೆ ನಾಜಿಗಳು ಮುಂದೊತ್ತು ತ್ತಿಪ್ಪಿ. ಮಾತ್ರವಲ್ಲದೆ ಕೆಂಪು ಸೇನೆಯು ಸಚೇತನಗೊಳ್ಳುತ್ತದೆ. ಅಲ್ಲಿ ಆಕ್ಸ್ಮಿಕ ರಾತ್ರಿ ಧಾಳೆಯಿಂದ ಮುಂದೊತ್ತಿದ್ದ ಜರ್ಮನ್ ಸೇನೆಯನ್ನು ಹಿಂದಟ್ಟಲಾಯಿತು.

● **ಇತರ ರಂಗಗಳಲ್ಲಿ.**

ರಶ್ಯದ ಇತರ ರಣರಂಗಗಳಲ್ಲಿಯೂ ನಾಜಿಗಳ ಕೈಮೇಲಾಗಿಲ್ಲ. ಕಾಕಸಸಿನ ಮೊಜ್ಡೋಕಿನಲ್ಲಿಯೂ ಮೋಸ್ಕೋದ ಪಶ್ಚಿಮ ರಿಜೆವ್‌ನಲ್ಲಿಯೂ ಕೈಕೈ ಹೋರಾಟ ನಡೆಯುತ್ತಿದೆ. ಕೆಸಪಿಯನ್ ಸಮುದ್ರದ ಪಶ್ಚಿಮ ಎಲ್ಲೆಯ ಕಾಲ್ಮಿಕ್ ಸರಹದ್ದಿನಲ್ಲಿ ನಾಜೀ ಸೇನೆ ಜಮೆಯಾಗಿದೆ ಎಂದು ತಿಳಿದುಬರುತ್ತದೆ. ರ್‍ಝೋವಿನಲ್ಲಿ ಸ್ಫೋಟನೆಯೊಂದು ಮನೆಯೂ ಜರ್ಮನರ ಪ್ರಬಲ ವಿಮಾನ ಧಾಳೆಯಿಂದ ಉರಿಯುತ್ತಿದೆ. ಲೆನಿನ್ ಗ್ರಾಡ್ ರಂಗದಲ್ಲಿಯೂ ವಿಮಾನ ಚಟುವಟಿಕೆ ಬಲಗೊಂಡಿದೆ.

● **ಮುಂದೇನು?**

ಸ್ಟಾಲಿನ್‌ಗ್ರಾಡ್ ಪತನವಾಗುವಂತಿಲ್ಲವೆಂಬ ಸಂದೇಶ ಬಲಗೊಳ್ಳುತ್ತಾ ಬರುತ್ತಿದೆ. ವಿರೋಧಿಯ ಕೈ ಪೂರ್ತಿ ಮೇಲಾಯಿತು- ತಮಗೆ ಸೋಲು ಸಿದ್ಧವೆಂದು ಉಚಿತವಾದಾಗ ಉಪಯೋಗಿಸಲ್ಪಡಲಿಟ್ಟಿರುವ 'ರಿಜರ್ವ್' ರಶ್ಯದ ಸೇನಾನಾಯಕರಲ್ಲಿದೆ. ಕಳದ ವರ್ಷ ಮೋಸ್ಕೋ ಧಾಳೆಯನ್ನು ಅವರು ಹಿಮ್ಮೆಟ್ಟಿಸಿದುದು ಈ ಕೊನೆಯ ಸಾಹಸದಿಂದಲೇ ಸ್ಟಾಲಿನ್‌ಗ್ರಾಡಿನಲ್ಲಿಯೂ ಮಾರ್ಶಲ್ ಟಿಮೊಶೆಂಕೋರವರು ಈ ತಿಂಗಳಾತ್ಯದೊಳಗೆ ಅಂತಹ ಅದ್ಭುತವೊಂದನ್ನು ಸಾಧಿಸಲಿರುವರೆಂಬ ಪೀರೀಕ್ಷೆಯಿದೆ. 1942ರ ಯುದ್ಧವನ್ನು ಜರ್ಮನಿ ಕಳಕೊಂಡಿತೆಂದು ಟರ್ಕಿಯ ಸೇನಾನಿಗಳು ಅಭಿಪ್ರಾಯಪಡಹತ್ತಿರುತ್ತಾರೆ. ಕಪ್ಪು ಸಮುದ್ರದ ಬಂದರುಗಳನ್ನು ಕಳಕೊಂಡ ಸಂದರ್ಭವೂನಗ ರಶ್ಯನ್ ನಾವೆಗಳು ಪಲಾಯನ ಮಾಡುವಾಗ ಟರ್ಕಿಯು ಅಪಾಯಕ್ಕೆ ಸಿಲುಕಿಕೊಳ್ಳುವಂತೆ ಪ್ರೇರೇಪಿಸಲು ಹೋಗದೆ ವೋನ್ ಪೇಪೆನ್ ಸಮಿತಿಯ ವಿನಂತಿಗೆ ಟರ್ಕಿ ಸರಕಾರವು ಬೆಲೆಕೊಟ್ಟಿಲ್ಲ.

ಅಮೃತಾಂಜನ

REGD.

ತಲೆನೋವನ್ನು ಶಿರೋವೇದನೆ, ಉಳುಕು, ಉತ್ತರಿಗೆ, ಭುಜ, ಹುಬ್ಬು ನೋವುಗಳಿಗೂ ಎಲೆಕೋಷ್ಠಿ, ಧಾಯಗಳು ಬಾತು ಕೊಳ್ಳುವಿಕೆ, ಚೇಳು ವಿಷಮುಂತಾದ ಭೀಸ್ಸಿ, ಪಕ್ಷವಾತ, ಮೊಡಿಸಿತು, ಮೊಣ ಉದ ಎಲ್ಲಾ ರೋಗಗಳಿಗೂ ಉಪಯೋಗಿಸಿ ಪ್ರಯೋಜನ ಪಡೆಯಿರಿ.

ಹುರುಳಿದ್ದು ಮನ್ನಣೆ ಪಡೆದ ಹೆಸರಿಗೆ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.,

ಮಂಗಳೂರು.

ಚಂದಾ ಎತ್ತಿದ (Issued Shares) ಬ್ಯಾಂಕಿನ ಪಾಲುಗಳನ್ನೆಲ್ಲಾ ಮಹಾಜನರು ಪಡೆಕೊಂಡು ಮುಗಿದಿರುವದೆಂದು ತಿಳಿಸಲು ನಾವು ತುಂಬಾ ಸಂತೋಷಿಸುತ್ತೇವೆ.

THE VIJAYA BANK LIMITED, MANGALORE.

ಜರ್ಮ್‌ಕ್ಯೂರ್.

ಇದು ಪರಾತಸ ಆಯುರ್ವೇದ ಪದ್ಧತಿಯಂತೆ ತಯಾರಿಸಲ್ಪಟ್ಟಿದೆ. ಅನೇಕಾನೇಕ ಕ್ರಿಮಿನಾಶಕ ವನಸ್ಪತಿಗಳು ಧಾರಿಗಳು ಇದರಲ್ಲಡಗಿವೆ. ಕಳಲು ಆಮಾ ರೋಗಗಳಿಗೆ ಇದೊಂದು ಸುಖಚಿತ್ಸೆ. ನಂಜು ಹಾವಾಗಿಯೂ, ಕ್ರಿಮಿನಾಶಕವಾಗಿಯೂ, ಇದೆ ಕತ್ತಿಯ ಧಾಳಿ, ಹುಣ್ಣು, ಕೆಸರಿಹೊಳೆ, ಉಲಬರುಳಿ, ಒಡಕು, ಪೆಂಕಿಹಾಗಿದ್ದು, ಕಳೆ, ಹುಳುಕೀಯಲ್ಲಿರುವ ಮಾಂಜಾ ಮೊದಲಾದವುಗಳಿಗೆ ಅತ್ಯಂತ ಗುಣಕಾರಿ.

ಪ್ರತಿಯೊಂದು ಕುಟುಂಬ ಸದಾ ಇದ್ದ ಸ್ನೇಹಿತ ಸಿಂದರೆ ತಪ್ಪಾಗದು. ಒಮ್ಮೆ ಪರೀಕ್ಷಿಸಿರಿ.

ಕೈಯ ಪಟ್ಟಿ ರೂ 0—2—0.

ಸ್ವಾವಣಿಯ ಪ್ರಚಾರಕೆಯಲ್ಲಿ:-

ಅಂಳಿದುರು ಬದರ್ಸ್,

ಜರ್ಮ್‌ಕೇರ್. ಉಡುಪಿ, ಪಿ. ಕೆ.

ಆ್ಯಪಾರ್ಟ್‌ಗಳಿಗೆ ಕಂಪನಿಯ ಕಡೆ ಕೊಹಿಸಲಾಗುತ್ತೆ

The Canara Banking Corporation Limited.

(Incorporated in British India with limited liability)

ESTD: 1906.

Our rates of interest on deposits from 7-8-1942.

1.	Current	½ % p. a. from Jan. to June 1 % p. a. from July to Dec.
2.	Savings Bank	2 % p. a.
3	Short-term	1½ p. a.
1.	Fixed 3 months	1½ % p. a
	6 ,,	2 % p. a.
	9 ,,	2½ % p. a
	12 ,,	3 % p. a
	24 ,,	3½ % p. a.

Advances against approved securities made at very competitive rates.

ಉಡುಪಿ, ಗುರುವಾರ, ೧೫–೧೦–೧೯೪೨

ಸಂಧಾನದಾಶೆಯಿಲ್ಲ.

ಇದೇ ತಾ. 8ರಲ್ಲಿ ಪಾರ್ಲಿಮೆಂಟಿನ ಕಾಮನ್ಸ್ ಸಭೆಯ ಮುಂದೆ ಮಿ ಅಮೆರಿಯವರಿತ್ತ ಜವಾಬಿನಿಂದ ವಿಮರ್ಶಕರ ಕೆಲಸ ಕಡಿಮೆಯಾಗಿದೆ. ಬ್ರಿಟಿಷ್ ರಾಜತಂತ್ರದಲ್ಲಿ ವಿರೋಧಿಗಳಿಗೆ ತಲೆತೂಲೆಯು ನ್ನುಂಟುಮಾಡುವ ಅಂಶ ಕಡಿಮೆ; ವಿಮರ್ಶಕರು ಗಾಢಾಲೋಚನೆಯಿಂದ ತಲೆ ತುರಿಸಿಕೊಂಡೇ ಪತ್ತೆಹಚ್ಚಲಾಗುವಂತಹ ಗೂಢ ಹಿಂಚಿಕೆಗಳು ಯಾವಾಗಲೂ ಹೆಚ್ಚಿಗೆ! ಇಮ ಬ್ರಿಟಿಷ್ ಸಂಪ್ರದಾಯ. ಮಿ. ಅಮೆರಿಯವರು ಈ ಆರೋಪದಿಂದ ತಪ್ಪಿಸಿಕೊಂಡಿದ್ದಾರೆ ಅವರು ಮುಷ್ಟಿ ಮುಚ್ಚಿಕೊಂಡು ಕೈಸೀಡಿಲ್ಲ, ಮುಷ್ಟಿ ಜಡವೇ ಸಂತಿದ್ದಾರ ಬ್ರಿಟಿಷರ ಕರಿಣ ಧೋರಣೆಯಲ್ಲಿ ಮೃದು ಭಾಗ ನಿದೆಯೋ ಎಂದು ಹುಡುಕುತ್ತಿದ್ದವರು ತಮ್ಮ ಪ್ರಯತ್ನವನ್ನು ಸಾಕುಮಾಡಬಹುದು- ಅಮೆರಿಯವರು ಸ್ಪಷ್ಟ ನಿರೂಪಣೆಯಿಂದ ಹಾಗೆ ತಿಳಿಸಿದ್ದಾರೆ ಭಾರತದ ಪರಿಸ್ಥಿತಿಯಿಂದ ಒಳಗಿಂದೊಳಗಾದರೂ ಬ್ರಿಟಿಷರು ದಿಗಿಲುಗೊಂಡಿರಬಹುದು ಎಂದು ಇಣುಕುತ್ತಿದ್ದವರಿಗೆ ಫಲಂಗಿರುವ ಅಧಾರಗಳನ್ನು ತೋರಿಸಿ ಭ್ರಮನಿರಸನ ಮಾಡಿದ್ದಾರೆ. "ಭಾರತದ ರಕ್ಷಣೆ ಮತ್ತು ಮಿತ್ರ ರಾಷ್ಟ್ರಗಳ ಧೋರಣೆಯ ಪಾಲನೆ- ಈ ಹೊಣೆ ಹೊತ್ತು ಅಚಲವಾಗಿ ನಿಂತಿರುವ ಪೋಲಿಸ್, ಸೈನ್ಯ, ಸಿವಿಲ್ ಸರ್ವಿಸ್ ನವರು ನಮಗಿದ್ದಾರೆ-" ಅಂದಿದ್ದಾರೆ. ಭಾರತದಲ್ಲಿ ಬ್ರಿಟಿಷರು ಆಧಾರದ ಅಭಾವದಲ್ಲಿದ್ದಾರೆ, ಸಹಾಯದ ಕೊಂತೆಯಲ್ಲಿದ್ದಾರೆ, ಎಂದೂಹಿಸಿಕೊಂಡು ಅದನ್ನು ಬೆಲೆ ತೆತ್ತು ಸ್ವಾತಂತ್ರ್ಯ ಪಡೆಯಬಹುದೆಂದು ಮುಂದೆ ಒಂದು ನಿರಾಕರಿಗಳು ಇನ್ನು ಬಾಯಿ ಮುಚ್ಚಿಕೊಳ್ಳಬಹುದು ಸೈನ್ಯ ಬಲವಿರುವ ಅಮೆರಿಯವರಿಗೆ ವಿಶ್ವದ ಸಹಾಯ ಬೇಕಾಗಿಲ್ಲ!

ಕಾಂಗ್ರೆಸು ಶರಣುಬಾರದ ತಾವಾಗಿ ಸಂಧಾನಕ್ಕೆಳೆಯಲಾರೆನ್ನು ಆನ್ಯರಿಗೆ ಆ ಸಂದರ್ಭ ದೊರಕಿಸಿಕೊಡಲಾರೆವು ಎಂದು ಭಾರತ ಸಚಿವರು ಸ್ಪಷ್ಟೀಕರಿಸಿದ್ದಾರೆ. ಇನ್ನೆಲೆ ಮುಖ್ಯ ನಿರೀಕ್ಷೆಗಳೆರಡು. ನಿವಾರಣೆಗೊಂದವು. ಯುದ್ಧಪ್ರಯತ್ನಕ್ಕೆ ಧಕ್ಕೆಯೊದಗದಂತೆ ಮಾಡಲು ಭಾರತ ಜನತೆಯ ಸಹಾಯಪಡಕೊಳ್ಳುವ ಅವಶ್ಯಕತೆ ಸರಕಾರಕ್ಕಿಲ್ಲ, ಕಾರಣ, ಅಂತಹ ಆತಂಕವನ್ನು ನಿವಾರಿಸುವ ಪೋಲಿಸ್, ಸೇನೆ, ಸಿವಿಲ್ ಸರ್ವಿಸ್ ಅದಕೊಡನಿದೆ ಅಂದಮೇಲೆ ಕಾಂಗ್ರೆಸಿನೊಡನೆ ರಾಜಿಗಳಿಯಬೇಕಾದರೆ ಕಾಂಗ್ರೆಸಿನ ನರ್ತನೆಯ ಕುರಿತು ಕನಿಕರ ಹುಟ್ಟಬೇಕು 'ಉದ್ದೇಶಪೂರ್ವಕ ಸರಕಾರವನ್ನೂ ಇತರ ಪಕ್ಷಗಳನ್ನೂ ತನ್ನ ಅಂಕೆಗೆ ತಂದು ತನ್ನಿಚ್ಛೆಯ ಅಧಿಕಾರ ಪದೆಯಲು ಬಂಡಾಯ ಹೂಡಿರುವ ಕಾಂಗ್ರೆಸು ಮತ್ತು ಗಾಂಧಿಯವರ ದುರ್ನರ್ತನೆಯು ದಯೆಗೆ ಅರ್ಹವಿದೆಯೆ? ಇಲ್ಲ. ಆದ್ದರಿಂದ ಕಾಂಗ್ರೆಸು ಮುಂದಾಗಿ ತರಣೆನ್ನಬೇಕು ಇದೀಗ ಅಮೆರಿ ಬಾಯಿಯಿಂದ ಹೊರಬಿದ್ದ ಸರಕಾರೀ ಧೋರಣೆ 'ತಿದ್ದಿಕೊಳ್ಳಿ" ಎಂದು ಸರಕಾರಕ್ಕೆ ಜೋಪನೆಯೋಯುವ ಅಭಿಪ್ರಾಯವಿಟ್ಟುಕೊಂಡವರು ಹೇಳಲಿರಿದ್ದಾರೆ ಅವರ ಜೋಪೆಯ ಬಾಯಿ ಈಗಲೂ ಮುಚ್ಚಿಲ್ಲ; ಅದು ಇನ್ನೆಷ್ಟು ಆಗಲವಾಗಿದೆ. "ಅಮೆರಿಯವರ ಭಾಷಣವು ಬಹಳ ಅಪಾಯಕರ ಸ್ವಮಾದ; ಆ ತಪ್ಪನ್ನು ತಿದ್ದಲೇಬೇಕು" ಎನ್ನುವವರ ಸಂಖ್ಯೆ ಬೆಳೆದಿದೆ ಇನ್ನೂ ಇಂತಹ ಕೂಗಿಗೆ ಬೆಲೆಯಿದೆಯೆ? ತಪ್ಪುಗಾರರನ್ನು ಮಿ ಅಮೆರಿಯವರು ತೋರಿಸಿಕೊಟ್ಟಿದ್ದಾರೆ. ತಪ್ಪನ್ನು ತಿದ್ದುವ ಇಚ್ಛೆಯಿದ್ದವರು ಅವರು ಕೈತೋರಿಸಿದತ್ತ ಸಾಗಬೇಕು- ಗಾಂಧಿಯವರನ್ನೇ ತಿದ್ದಬೇಕು ಎನ್ನೇ ಸಹಿಸಿಕೊಂಡರೂ ಆ ತಪ್ಪು ತಿದ್ದಲ್ಪಡದೆ ಮುಂದೆ ಬಂದ ನಂತರವೇ ಮಿ. ಅಮೆರಿಯವರು ಶಿಕ್ಷಿಸಲು ಮುಂದಾದುದು! ಈಗ ತಿದ್ದುವ ಕಾಲ ಮೀರಿದೆ ಎಂಬುದರಿಂದಲೇ ಗಾಂಧಿಯವರೇ ಮೊದಲಾದವರೊಡನೆ ಭೇಟಿಯಾಗಿಸಿದವರಿಗೆ ಅನುಮತಿ ದೊರೆಯಲಿಲ್ಲ. ಇನ್ನು ಕಾಂಗ್ರೆಸು ಜೊಗ್ಗಾಲೂರುವದೊಂದೇ ವಿಧಿ ಹೊರತು ಅನ್ಯಥಾ ನಿಪಾಯವಿಲ್ಲ ಇಷ್ಟನ್ನು ಸ್ಪಷ್ಟಪಡಿಸಿದ ಮೇಲೂ ಮಿ ಅಮೆರಿಯವರನ್ನು ಯಾರೇಕೆ ಪೀಡಿಸಬೇಕು?

ಬ್ರಿಟಿಷರಿಗೆ ತಮ್ಮ ಭಾರತ ಧೋರಣೆಯ ಕುರಿತು ಇನ್ನೂ ಅಚಲ ನಿಶ್ಚಯವಿಲ್ಲವಾಗಿ ರಾಷ್ಟ್ರಾಭಿಮಾನಿ ಭಾರತೀಯನಾರೂ ಆ ಕುರಿತು ವಾದಕ್ಕೆಳೆಯಲಾರನು. ಯುದ್ಧ ವಿಜಯಕ್ಕೆ ಸೈನ್ಯ ಬಲವೊಂದೇ ಸಾಲದು, ಜನತಾ ಬೆಂಬಲವು ಅತ್ಯಗತ್ಯ; ಇದು ಬರ್ಮಾ ನುಲಯಗಳಿಂದ ಕಲಿತ ಪಾಠ; ಆದ್ದರಿಂದ ಜನತಾ ಬೆಂಬಲವೊದಗಿಸಲು ಸ್ವಾತಂತ್ರ್ಯದಾನ ನೂಡಿರಿ ಎಂದು ಕಾಂಗ್ರೆಸು ಕೇಳಿತು. ಜನತಾ ಬೆಂಬಲವಿಲ್ಲದೆ ಯುದ್ಧ ಸಾಗದು—ಎಂಬುದನ್ನು ಇಂಗ್ಲೆಂಡು ಅಮೆರಿಕಗಳ ಮುತ್ಸದ್ದಿಗಳ ಬಾಯಿಯಿಂದ ಈಗಲೂ ಕೇಳುತ್ತಿದ್ದೇವೆ. ಭಾರತದ ಮಟ್ಟಿಗೆ ಅದು ಬೇಕಾಗಿಲ್ಲ-ಎಂದು ಹೊಣೆ ಹೊತ್ತ ಅಮೆರಿಯವರೇ ಸೂಚಿಸಿದ ಮೇಲೆ ಈ ವಾದ ಸೂತ್ರವು ಮಧ್ಯದಲ್ಲೇ ಕಡಿಯಲ್ಪಟ್ಟತು; 'ನಿಮ್ಮ ಕಾರ್ಯಸಾಧನೆಗಾಗಿ ತವರಿಗೆ ಸ್ವಾತಂತ್ರ್ಯದಾನ ಮಾಡಿರಿ' ಎಂದು ಬ್ರಿಟಿಷರನ್ನು ಕೂಗುವ ಕೆಲಸ ತಪ್ಪಿತು ಈಗ ಸ್ಪಷ್ಟವಾಗುವದಿಷ್ಟೆ: ಅಮೆರಿಯವರಂತಹ ಕಿರಿಮನಸ್ಸಿನವರ ಕೈಯಿಂದ ಭಾರತ ಸೂತ್ರವು ತಪ್ಪದೆ ನಿರ್ವಹಿಸಲ್ಪಡಲಿಲ್ಲ, ಆದ್ದರಿಂದ 'ನಮಗಾಗಿಯೇ ನಮ್ಮ ಸ್ವಾತಂತ್ರ್ಯಬೇಕು' ಎಂದು ಭಾರತೀಯರು ಛಲ ಒಡಿಯುವಂತಾಗಿದೆ. ಇದು ಮಿ. ಅಮೆರಿ ಭಾಷಣದ ಸತ್ಪರಿಣಾಮ.

ಒಂದು ನಿದರ್ಶನ.

ಸಿಂಧ್ ಪ್ರಾಂತ್ಯದ ಪ್ರಥಮ ನಾಗರಿಕ ಮಿ. ಅಲ್ಲಾಭಕ್ಷರನ್ನು ಗವರ್ನರರು ಪದವಿಯಿಂದ ನಿವೃತ್ತಿಪಡಿಸಿದರು "ಮಿ. ಅಲ್ಲಾಭಕ್ಷರು ತನ್ನ ಬಿರುದುಬಾವಲಿಗಳನ್ನು ತ್ಯಜಿಸಿ, ಆ ಸಂಬಂಧವಾಗಿ ಪ್ರಕಟಿಸಿದ ಹೇಳಿಕೆಯ ಕುರಿತು ಮಾನ್ಯ ಗವರ್ನರರು ಅವರೊಡನೆ ಚರ್ಚಿಸಿದುದರ ಪರಿಣಾಮವಾಗಿ ಮಿ ಅಲ್ಲಾಭಕ್ಷರು ತನ್ನ ವಿಶ್ವಾಸಕ್ಕರ್ಹರಲ್ಲ ಎಂಬ ತಿಳಿಸುವ ಹೊರತು ಗವರ್ನರರಿಗೆ ಬೇರೆ ಮಾರ್ಗವುಳಿಯಲಿಲ್ಲ ತತ್ಪರಿಣಾಮವಾಗಿ ಮಿ ಅಲ್ಲಾಭಕ್ಷರು ಇನ್ನು ನುಂದೆ ಮಂತ್ರಿಯಾಗಿರುವದಸಾಧ್ಯ" ಎಂದು ಸಿಂಧ್ ಸರಕಾರದ ಪ್ರಕಟಣೆ ಹೊರಟಿದೆ. ತನ್ನ ಪಕ್ಷದ ಮಂತ್ರಿಗಳನ್ನು ಪದವಿ ಬಿಡಿಸಿ ಕಾಂಗ್ರೆಸು ಮಾಡಿದ ಮಹಾಪರಾಧವನ್ನು ಅತ್ತ ಅಮೆರಿಯವರು ವರ್ಣಿಸುವ ಹೊತ್ತಿನಲ್ಲೇ, ಪೆರ್ಥ ಗವರ್ನರರು ಕಾಂಗ್ರೆಸು ಮಾಡಿದ ತಪ್ಪನ್ನು ಸ್ವತಃ ಮಾಡಿದುದು ಜಲವರನ್ನು ಆಶ್ಚರ್ಯಕ್ಕೀಡುಮಾಡಬಹುದು. ಯಾರಿಗೆ ತಾನೇ ಆಶ್ಚರ್ಯವಾಗದು? "ಈಗಲೂ ಭಾರತದಲ್ಲಿ ಪ್ರಜಾ ಪ್ರಭುತ್ವವಿದೆ; ವೈಸರಾಯ್ ಕೌನ್ಸಿಲಿನಲ್ಲಿ ೧೧ ಮಂದಿ ಹಿಂದೀ ಸದಸ್ಯರೇ ಇದ್ದಾರೆ" ಎಂಬ ಪ್ರಚಾರದಿಂದ ಕಿವಿ ತುಂಬಿಸಿಕೊಂಡ ಅಮೆರಿಕಾನರಿಗಾ ಶ್ಚರ್ಯವಾಗದೆ? ಆದರೆ ಭಾರತದ ಪ್ರಜಾ ಪ್ರಭುತ್ವ ಪದ್ಧತಿಯ ಗುಟ್ಟರಿತವರು ಇದರಿಂದ ವಿಸ್ಮಯಗೊಳ್ಳುವಂತಿಲ್ಲ 1935ರ ಭಾರತ ಸಾಸೂದೆಯ 51ನೇ ಸೆಕ್ಷನ್ನಿನಲ್ಲಿ ಹೀಗಿದೆ.. "ಗವರ್ನರರ ಮಂತ್ರಿಗಳು ಗವರ್ನರರಿಂದ ಲೇ ಆಯಲ್ಪಟ್ಟು, ಕರೆಯಲ್ಪಟ್ಟು, ಪ್ರಮಾಣಬದ್ಧರಾಗಿ, ಅವರ ಅನುಮತಿಯಂತೆ ವರ್ತಿಸುವರಿರತಕ್ಕದ್ದು" ವೈಸರಾಯ್ ಕೌನ್ಸಿಲ್ ಸದಸ್ಯರು "ಗವರ್ನರ್ ಜನರಲರಿಗೂ ನಮಗೂ ಎಲ್ಲಿಂದಿಸ್ಯಯ" ಎಂದು ಹರ್ಷೋದ್ಗಾರವೆತ್ತಬಹುದು. "ಮಂತ್ರಿ ಮಂಡಲವು ನನ್ನೊಡನೆ ಯಾವ ಯುದ್ಧ ಗುಟ್ಟನ್ನೂ ಮುರೆಮಾಡುವದಿಲ್ಲವೆಂಬ ದನ್ನು ಖಾತರಿ ತಿಳಿದಿರಲಿ"ಎಂದು ಲಂಡನ್ನಲ್ಲಿ ಶ್ರೀ ಎ. ರಾಮಸ್ವಾಮಿ ಮುದಲಿಯಾರ್ ಅವರು ಹೆಗ್ಗಳಿಕೆ ಪಡಬಹುದು ಭಾರತೀಯರು ಇದಕ್ಕಾಗಿ ಹೆಮ್ಮೆಪಡುವಂತಿಲ್ಲ. ಪತ್ರವರ್ತಕರೆ ಅಂಥವರು, ಇವರಾರಿಗೂ ಮಿ. ಅಲ್ಲಾಭಕ್ಷರ ಬುದ್ಧಿ ಬಾರದುದಕ್ಕಾಗಿ ಹಹಗೊಳ್ಳಿರಿ; ಭಾರತೀಯರಿಗೆ ದೊರೆತ ಭಾಗ್ಯಕ್ಕಾಗಿ ಸಂತೋಷಗೊಳ್ಳುವ ಅಂತವಿಲ್ಲ!

ಇದೂ ಸಾಧ್ಯವಿದೆ!

ಒಲಿವ್ ಬ್ರೇಂಪಿಯನ್ ಹರ್ಬರ್ಟ್ ಮಾರ್ಷ್ಸ್ ಮತ್ತು ಇತರರು ನಟಿಸಿರುವರು.

ಬರುವುದು:— ಭೀಷ್ಮ ಪ್ರತಿಜ್ಞೆ.

ನೂದನ ರತಿಕಾಮ ಶಾಸ್ತ್ರ ಎಂಬ ರಹಸ್ಯಗಳು ರೂ. ೧—೪—೦



ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳಿಂದಿನೆ ಮುದ್ರಿಸಿದ್ದೆ. ಇದರಲ್ಲಿ ಎಲ್ಲ ದೇಶದ ನೀತಿಯರ ಕನ್ಯೆಗಳು ನೋಡಿಸುವ ರಹಸ್ಯಗಳು, ಸಾಸಿಗೆಯ ಶುಷ ವಿಲಾಸಗಳು, ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಕ್ರಕಾಂಚದಲ್ಲಿ ಇರುವ ಎಲ್ಲಾ ವೇದಗಳಲ್ಲಿ ವೈಭವಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕಣ್ಣಿಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ ಕಿಂಗ ಪುಟಗಳು ಇವ ಪುಸ್ತಕ.

ಕ್ರಯ ಪುಸ್ತಕ ಒಂದಕ್ಕೆ ರೂ. ೧—೪—೦

B. S. ಟ್ರೇಡಿಂಗ್ ಕಂಪೆನಿ. ನಂ. 241, ಮುತ್ತಾನಮ್ಮಗುಡಿಬೀದಿ.

ಕಳಹಸ್ತಿ ಪೋಸ್ಟು, (ಚಿತ್ತೂರು ಜಿಲ್ಲಾ)

HOW BUDGETS ARE BALANCED.

With the present high cost of living Balancing the family budgets is a problem. And yet how important it is that YOUR BUDGET SHOULD BE BALANCED. If earning Rs 100/- you spend Rs. 101/- per month in a short time your affairs will be involved On the other hand if you bank a sum of even Rupee one every month your prosperity is assured.

Probably you have succeeded better than anyone else in ingeniously fitting you budget to present conditions.

Please tell us how you did it.

CANARA BANK LIMITED.

(Estd: 1906)

ಸ್ವದೇಶಿ ಔಷಧ ಭಂಡಾರ(ರಿಜಿಸ್ಟರ್ಡ್) ಕುಂಜಿಲು

–ಪ್ರಭೂಸ್–ಬಾಲಾಮೃತ–

ನಾನಾ ರೋಗ ರುಜೆಗಳಿಂದ ದೇಹದಲ್ಲಿ ಕೃಶವಾಗಿ ಸದಾ ತಲೆತಿರುಗುತ್ತಾ ಕಳೆಗುಂದಿರುವ ಬಾಲಕರು ದಷ್ಟಪುಷ್ಟರಾಗಿ ಸದಾ ನಗುತ್ತಿರುವಂತೆ ಮಾಡುವ ಅನೋಘ ಗುಣಗಳುಳ್ಳ ಈ ಮಹೌಷಧದ 1 ಬಾಟ್ಲಿಯನ್ನು ಉಪಯೋಗಿಸಿಯೇ ಇದರ ಮಹತ್ವವನ್ನು ಪ್ರತಿ ಮಕ್ಕಳ ತಾಯ್ತಂದೆಗಳು ತಿಳಿದುಕೊಳ್ಳಬೇಕಾಗಿದೆ. ಬಾಟ್ಲಿ 1ಕ್ಕೆ 0-12.0

ಪಮ್ಮ ಔಷಧಿ ಸಿಕ್ಕುವ ಸ್ಥಳಗಳು.—ಪೆರುಮಾಂಟ್ ಟ್ರೇಡಿಂಗ್ ಕಾರ್ಪೊರೇಶನ್, ನವಭಾರತ ಬಿಲ್ಡಿಂಗ್ಸ್, ಮುಹಮ್ಮದ್ ಸ್ಟ್ರೀಟ್, ಮದ್ರಾಸ್ ನಂ. ೨ ಜನರಲ್ ಏಜೆನ್ಸಿ, ಉಡುಪಿ T. ಗೋಪಾಲಕೃಷ್ಣ ಪೈ ಬ್ರಹ್ಮಾವರ, H ಗಣಪಯ್ಯ ಶಿವತ್, C.B, Agency ಹಾಲಾಡಿ, ಗಣಪಯ್ಯ ಲಕ್ಷ್ಮಣನಾಯಕ್ ಅಂಡ್ ಬ್ರದರ್ಸ್ ಕೋಟೆ, ನರಸಿಂಹ ನಾಯಕ್ ಕುಕ್ಕರನಾರಾಯಣ, ವೆಂಕಟೇಶ ಶ್ರೀನಿವಾಸ ಭಟ್ಟ, ಕೋಟೇಶ್ವರ. L N. ಕರ್ಕಿ ಮಠ ಎಂಬಿಯಂಗಳಿಂದು.

ಎಚ್ಚರಿಕೆ.

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿ ಮಾಂದ್ಯ, ಮಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦.

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ. ೧—೪—೦.

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

೭೬-ಕಾನಕಾನಹಳ್ಳಿ ರೋಡ್, ಬನಶಂಕರಿ, **ಬೆಂಗಳೂರು**

ಉಡುಪಿ ಸ್ಟೋಕಿಸ್ಟರು: **ಸರಭಾರತ ಪುಸ್ತಕ ಭಂಡಾರ, ಉಡುಪಿ.**

NOTICE

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟ್ ನಲ್ಲಿ

Original Petition No 68/1942

1 ವರಿಯಂಬಳ 2 ಜಾನಪ್ಪಿ 3 ಬಂಕು ನಾಬಿ, 4. ಮ್ಯಾಥಿರ ಜಾನ್, 5. ಸಾಧಾರ್ಸ್ ಜಾನ್, 6, ಹನಫಾಬಿ, 7. ಪಾಪಣಂಬಿ– ಮ್ಯಾನೇಜ್ಮೆಂಟ್-ಆರ್ಜಿದಾರರು

ಕ್ಷೇಮ ಚಿಂತಕಳು 1ನೆ ಅರ್ಜಿದಾರರು, ಉಡುಪಿ ತಾಲೂಕು ಬಡಾ ಗ್ರಾಮದ ಯಿವರ್ಗಳ

ಯಿ ಮೂಲಕ ಸರ್ವ ಜನರಿಗೆ ತಿಳಿಸ ವದೇನೆಂದರೆ-

ಮೇಲ್ಕಂತ ಅರ್ಜಿಯ 1ನೆ ಅರ್ಜಿದಾರ ಗಂ ದ. 2 to 7ನೆ ಅರ್ಜಿದಾರರ ತಂದೆ-ನಂತ್ರಸ್ಥರ ಸ್ವತಾದ ಮಹಂಮದ ಖಾನ್ ಸಾಹೇಬರಿಗೆ ಕಿರಿಯರು ಸರ್ ಪೂರ್ತಿ ಗುತ್ತಿ ಪೂರಿ ಜಾಗ ಪುತ್ತಾರ ಕೊಡು 3ವರ್ಷ ತಾ 21-8 39ರ ಳಿ ಒಪ್ಪಿ ಕೊಟ್ಟ ದಿವಸಂದು ನೋಟಿನ ಆಳು ಬಡ್ಡಿ ರೂ. 189/ ನ್ನು ಸಹಿತ ವಾಪಸು ಮಾಡುವರೆ ತಾ ವೆ ವ್ಯತಿನ ಗುಮ್ಮಿ ಮಾಡಿದ್ದಾರೆಂತ್ಕೂ, ಹಿಕ್ಕ ದಾರೆಂತ್ಕೂ, ಈ ಕೆಳಗಿತ್ತು. 1ನೆ ಅರ್ಜಿದಾರರಿಗೆ ನಿಕ್ಷ್ಪರಿಂದ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕ್ಷ ಮಾಡಿದ ಮೇಲ್ಕಂತ ಅರ್ಜಿಯು-ತಾ 3 12 1942ಕ್ಕೆ ಯಿಟ್ಟಿಗ್ತಿದ ಆಕ್ಷೇಪಣೆ ಪೂರ್ವಕತ್ವದ ಆದೆನ್ನೊಳಂಡ ಕೋರ್ಟ್ ಮುಂದೆ ಹಗ್ಗ 10ಗಂಟೆಗೆ ಹಾಜ್ರಾಗಿ ಯಾ ವಕೀಲರ ಮೂಲಕ ಹಾಜ್ರಾ ಇಟ್ಟು ಸಾಕ್ಷಿ ಹೇಳಿಕೊಳ್ಳಬೇಕೆಂದು ಪ್ರಕಟಿಸಲಾಗಿದೆ.

(By order of the Court)

Narashim Vittal Kamath

ತಾರೀಕು 9 11-42 } B. A B L

ಉಡುಪಿ } Counsel for Petitioners

ಜವ್ ರ್ ಕ್ಯೂರ್.

ಇದು ಪುರಾತನ ಆಯುರ್ವೇದ ಪದ್ಧತಿಯಿಂದ ತಯಾರಿಕ್ಕಲ್ಪಟ್ಟಿದೆ. ಆಮಶೂಲಾದಿ ಕ್ರಿಮಿಜ್ವರಕ ವನಸ್ಪತಿಗಳು ದಾತುಗಳು ಇದರಲ್ಲಡಗಿದೆ. ಸಕಲ ಜ್ವರ ರೋಗಗಳಿಗೆ ಇದೊಂದು ಸುಖಚಿಕಿತ್ಸೆ ನೆಂದು ಹೇಳಾಗಿಯೂ, ಕ್ರಿಮಿ ನಾಶಕವಾಗಿಯೂ, ಇನ್ನೇಕತ್ತಿಯ ಹಾಗ್ಯೂ ಹುಷ್ಣಾಳಕ್ತಿ, ನೆಗೆಬೆಕ್ಕೆ, ಜಂಲಾಗಿ ಕ, ಒತ್ತಳು, ಬೆಂಕಿತಾಗಿದ್ದು, ಕುಂ, ಹುಳಗಳೆಯಿಷ್ಟಾಲು ಮುಂತಾದ ವಿವಿಧ ವ್ಯಾಧಿಗಳಿಗೆ ಅತ್ಯಂತ ಗುಣಕಾರಿ.

ಪ್ರತಿಯೊಂದು ಕುಟುಂಬದ ಸಮಾಜ ಸ್ನೇಹಿತ ನೆಂದರೆ ತಪ್ಪಾಗದು. ಒಮ್ಮೆ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 0—2—0.

ವ್ಯಾಪಾರಿಗಳಿಗೆ ಕಮೀಶನ್.

ಅಂಕುದುರು ಬದರ್ಸ್,

ಚರ್ಚ್ ರೋಡ್, **ಉಡುಪಿ**, ದ. ಕ.

ವ್ಯಾಪಾರಸ್ಥರಿಗೆ ಕರಪತ್ರಗಳನ್ನು ಕೊಡಲಾಗುತ್ತದೆ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟ್ ನಲ್ಲಿ.

O P. No 71/1942

ಮ್ಯಾನೇರ ಕೇಶವ ಸೇಟ್, ಕ್ಷೇಮ ಚಿಂತಕಳು ತಾಯಿ ಗುಲಾಬಿ ಬಾಯಿ-ಅರ್ಜಿದಾರಳು.

1 ಕೃಷ್ಣ ಸೇಟ್, 2 ವಾಸುದೇವ ಸೇಟ್ ಎದ್ರಿಳು.

ಮ್ಯಾನೇರ ಅರ್ಜಿದಾರನ ತಂದೆ ಮೃತ ಪಟ್ಟ ಶೆಂಕಟೇರ ಸೇಟಿನ ಬಾಬ್ತು ಮದ್ರಾಸ ಯುನೈಟೆಡ್ ಇಂಡಿಯಾ ಲೈಫ್ ಇನ್ಶೂರೆನ್ಸ ಕಂಪೆನಿಯ ನಂಬ್ರ 26559 ನೇ ಪಾಲಿಸಿಯು ದಾಖ್ಲೆ ಬರಬೇಕಾದರೆ 541-3 0ನ್ನು ಸಹಿಯುನರೆ ಮ್ಯಾನೆರನ ಕ್ಷೇಮಚಿಂತಕರಾದ ಗುಲಾಬಿ ಬಾಯಿಯು ತನ್ನ ಹೆಸರಲ್ಲಿ ಇದರಿ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಕಲು ಮಾಡಿದ ಅರ್ಜಿಯು ಸೋಂ ತಾರೀಕಿದ ಕೋರ್ಟಿನಲ್ಲು ದಿ 10-11-1942ಕ್ಕೆ ತಪ್ಪಿಗೆ ಇಪ್ಪರಿತ್ತಿದೆ ಆ ಬಾಬ್ತಿಗೆ ಆಕ್ಷೇಪಣೆ ಕೇಪಾದರೂ ಇದ್ದ ಸದ್ದಕ್ಕೆ ಸದ್ರಿ ತಾರೀಕಿನ ದಿವ್ಸ ಸದ್ರಿ ಕೋರ್ಟು ಮುಂದೆ ಜಾಹೀರುನಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸಲಾಗಿರುತ್ತದೆ.

Y. Manjaya Shetty

ತಾರೀಕು 29-10-42 } ಅರ್ಜಿದಾರ ಪರ ವಕೀಲ.

GET MEDICAL DEGREES BY HOME

Examination—Ayurvedic, Homeopathic, Unani etc,. Prospectus Free.

Dr. Mansingh, Kotgarh (Simla)

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ಮಾಡಲ್ಪಟ್ಟ ಈಗಿನ ಅವಶ್ಯಕತೆಗೆ ಬೇಕಾಗುವ ಎಲ್ಲ ತರಹದ ಬಣ್ಣಗಳಲ್ಲಿ ಬೆಲೆಯಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ಮಾರಲ್ಪಡುತ್ತವೆ. ರುಪ್ಪಯಿನ ಮತ್ತು ರಿಲ್ ಬಟ್ಟೆಗಳನ್ನು ಮಾರಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್,

ಅಪ್ಪೆಪೈ ಬಿಲ್ಡಿಂಗ್, ಉಡುಪಿ

BHUVANENDRA PRODUCTS Ltd.,

Head Office and Factory:

Katapadi, S. Kanara

Depots:

1 Mahratha Galli, Hubli

2- 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವ್ನ, ಹಲ್ಲುಗಳಿಂದ ರಕ್ತ ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ಮುಖರೋಗವನ್ನು ನಿವಾರಿಸುವುದು.

ಭುವನೇಂದ್ರ ಪ್ರೊಪ್ರೈಟರ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— 1, ಡಾಕ್ಟರ್ ನಾಯಕ್ಸ್ ಕೆಮಿಕಲ್ಸ್ ಟ್ರೇಡಿಂಗ್ ಕಂಪೆನಿ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಜಿ. ಅಜಾರ್ಸ್ ಫಾರ್ಮಸಿ, ಡಾಕ್ಟರ್ ಕೆ ಶೇಷಗಿರಿ ಪೈ L. I. M. ಡಾಕ್ಟರ್ ವೆಂಕಟ ರಾವ್, ಕೊರತ್ತಲ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಆರಿ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ
ನಿಮ್ಮ ಕೈ ಸೇರುವುವು.

ಸೀಸೆ ೦ಕ್ಕೆ ೧೨ ಆಣೆ; ಟಿ. ಪಿ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು:—
ನವಭಾರತ ಬುಕ್ ಡಿಪೋ
ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಆವರ ನಡುವೆ
1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತಪ್ಪಿ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ,
ವಿದ್ಯುದ್ದೀಪಾಲಂಕೃತ ಕೋಣೆ ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

—ಮಕ್ಕಳನ್ನು ಹಡೆಯುವದು ಸಾಕು—

ಅಕಕ್ಕ ಸ್ತ್ರೀಯರಿಗೆ **ಬರ್ಧ ಕಂಟ್ರೋಲ** ರೋಗಗ್ರಹಕ್ಕ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಸುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿಸಿರಿನಲ್ಲಿ ಸೇವಿಸಬೇಕು.

ಪತ್ಯೆ:—ಪರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—೦—೦ ಪೋಸ್ಟ ಚಾರ್ಜು ೮ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಧಾರವಾಡ:—ಕುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಡಾನಪ್ಪ ಸಿದ್ದಲಿಂಗಪ್ಪ ಧಾರವಾಡದ, ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ, ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್, ಬಳ್ಳಾರಿ:—ಎಚ್. ವಿರುಪಾಕ್ಷಪ್ಪ ವರ್ತೆಂಟ್, ಬಳ್ಳಾರಿ, ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ನಿಮ್ಮ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಸ್ವಾಮಿ, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾವೀಕ್ಷಕೆಯಿಂದೊಡಗೂಡಿ
ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾರಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಸಾರಸಮುದ್ರಿಕೆ ಮತ್ತು ಭೂಮಿಕೆ ಗ್ರಂಥಗಳು ಸರಕಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯ ನ್ಯೂನತೆಯ ನ್ಯೂನತೆಯನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೇಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅಮಾತ್ಯಸಂದಿನಿ	ಬೆಲೆ ೧ ೮ ೦
ಅನಿವಾಹಿತರ ಸಮಸ್ಯೆ	೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦

ಕೆಟಲಾಗಿಗೆ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಪಾವೇರಿ
ಬರೆಯರಿ:— ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.

DIAMONDS! ವಜ್ರಗಳು! DIAMONDS!

K. R. K. SHET.

Opposite Govt. College, Hampankatta MANGALORE.

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್ಮೆಸ್ಟ್ ಡಮ್ಮಿನಿಂದ ಬಡುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಕಾಪಿ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು.
ಹಂಪನಕಟ್ಟೆ, ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೀವಲೂ ಕೊಳ್ಳಲೂ ಬೇಕಷ್ಟು ಸಾವಾನುಗಳಿವೆ.

ಸ್ಥಾಪನೆ [redacted] 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಹಸ್ಯರು ಮಾಡಲ್ಪಟ್ಟ ಮೈದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘಶಾಸ್ತ್ರ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೆ ಸುಲಭವಾಗಿರುವುದು.

೮ ಔನ್ಸಿನ ೭ ಬಾಟ್ಲಿಗಳು ಹೆಚ್ಚು ಕಡಿಮೆ ಆಯಿವಸರಗಳಿಗೆ ಬರುವವು. ಅಂದರೆ ಕೇವಲ ಆರಾಣ್ಯಾಗೆ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರಕ್ಕೆ ಬಗ್ಗೆಯೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಕಾಶ್ಯಪ, ಆಯುರ್ವೇದ ಭೂಷಣ, ನಂ.೯ ಕೊಡಿಯಾಲಬೈಲು, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No M 3618. Estd. 1921 ಸ್ಥಾಪನೆ.

1943ನೇ ಇಸವಿಯ
ನವಭಾರತ
ಡೈರಿಗಳು
ನವಭಾರತ ಪುಸ್ತಕ ಭಂಡಾರ
. ಉಡುಪಿ. :



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೧೦

FOUNDER
Sri. A. B. Shetty, M. L. A

Vol. 23 No 10

NAVAYUGA— Kannada Weekly —UDIPI, S. I.

ಉಡುಪಿ • 19—11—1942 • ಮಂಗಳೂರು.

Read & Advertise in
ANTARANGA
HUMOROUS WEEKLY
UDIPI - - - S. India
ನೊಂದ ಮನಸನ್ನು ತಣಿಸಲು
ಅಂತರಂಗ
ಸಚಿತ್ರ ವಾರಪತ್ರಿಕೆಯನ್ನೋದಿರಿ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,- ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಜೊಗೋಲಿ ನಂತಿರುವ ವಿಮೆಯ ಸೌಭಾಗ್ಯವನ್ನು ವೈದ್ಯಾಪ್ಯದಲ್ಲಿ ಅನುಭವಿಸಲು ತಿಪದವರು ಜಗತ್ತಿನಲ್ಲಿರುವರೆ?

ವೈದ್ಯಾಪ್ಯವು ಸುಖಮಯವಾಗಬೇಕಾದರೆ, ಮತ್ತಳಿದ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ,ಮನೆಯಲ್ಲಿ ನಗೆಯ ನಾಟ್ಯನಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ : . : ದ ಭಾರತ.

THE CANARA MUTUAL ASSURANCE COMPANY, LIMITED.
UDIPI : : . : : S. India

ಧಾತುಪುಷ್ಟಿಲೇಪ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನವಸ್ಥೆ, ಶರೀರದ ಉಷ್ಣತೆ, ಧಾತು ನೀರ್ತದೆಂಡಸೆ ಹೊರಗೆ ಕೊಡಗುವಿಕೆ, ಕೆಲ ಬಿಸಿಲು, ಕೈಕಾಲು ಬಚ್ಚುವಿಯು, ಮಲಬದ್ಧತೆ, ಒಳ ಜ್ವರ, ಆರಕ್ತಿ, ಇವಿಗಳೆಲ್ಲ ಹೋಗಲಾಡಿಸಿ ಸುಂದರ, ಜೀರ್ಣ ಶಕ್ತಿಯನ್ನು ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಕೊಡಗಲಾಡಿಸಿ ವೀರ್ಯ ವೃದ್ಧಿಯನ್ನು ಉಂಟುಮಾಡುವದು ಬಾಟ್ಲಿ 1ಕ್ಕೆ ರೂ. 2-8 0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅತೀಷ್ಟವಾದ ಶಕ್ತಿವರ್ಧಕ. ಶ್ರಮದಿಂದಾಗಿರುವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಒಳಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದೆ, ರಕ್ತಧಾತುವಾ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ಕ್ಕೆ ರೂ 1-8 0

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.
ಔಷಧಿ ಸಿಕ್ಕುವ ಸ್ಥಳ— (1 ಹೈಕ್ಲಾರ್ ಸ್ಟೋರ್ಸ್, ಕೆವಿಸ್ಸ್ ಅಂಡ್ ಜನರಲ್ ಮರ್ಚೆಂಡ್ಸ್, 183 ಸಪಾರಿಂಗ್ ರೋಡ್, ಪರೇಲ್ ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜ ಐ ಸಿ ನಾಡಿಂಗಾ (3) ತಲ್ಲರ್ ಪೆಟ್ಟಿಗೆ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ (4) ವನ್ಲಂತರಿ ವೈದ್ಯಾಶ್ರಮ ಪೆ, ಲೆಕ್ಕಪ್ಪಾನಬಜಾರ್, ವೈಜಾಗ (5) ಮಂಗಳೂರು ಸರ್ವೀಸ್ ಸ್ಟಾಂಪಿಕೇರಿ (6) ಎ ವೆಂಕಟ್ಟಯ್ಯ ಕೆಟ್ಟಿ ಎಂಡ್ ಸನ್ಸ್, ಸೋವ ಪಾರ ಪೇಟೆ (7)ಡಾ! ಶ್ರೀನಿವಾಸ ಪೈ, ಪುತ್ತೂರು (8) ಕೆ ತಿಮ್ಮಪ್ಪ ನಾಯ್ಕ ಕವಿನ್, ಬೆಳ್ತಂಗಡಿ (9) ಮುಳಿ ಮುಡಿ ಕೆಲ್ ಸೆಲ್ಲರ್ಸ್, ಮುಲ್ಕಿ, (10) ನವಭಾರತ ಬುಕ್ ಡಿಪೋ, ಕೆಳಗಿನ ಪೇಟೆ, ಉಡುಪಿ (1 ಫಾರ್ಮಸಿ, ಕಂದಾವರ. (12) ಕಾರಂತರೋಡು ಲಕ್ಷ್ಮಣ ಸ್ಟೋರ್ಸ್ ಪೆ ಮಂ (13)ಕೆ ಶ್ರೀನಿವಾಸಶೆಟ್ಟಿ ಕಾರ್ಕಳ್ಳ (ಗ್ರೀಯರ್ಸ್,ಸಹಿಂಗಣ್ಣಾರ್ ಮರ್ಚೆಂಟ್ಸ್,ಚಿಕ್ಕಮಗಳೂರು

IF YOU CAN'T SIGN
YOUR NAME ON
A BOMB,
You Can At Least Help
To Pay For Plane
That Drops It!
So
Give to the
GOVERNOR'S
WAR FUND

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಲ್ಲಿ ಹೆಚ್ಚಾಗಿ ಉರಿ ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲಬ್ಯಾಧಿ, ಬೇನೇಂದ್ರು, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೆಂಚಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇಧಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ನೆದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಸ್ವಮಾಣ ಔಷಧ ಅರ್ಧತೊಲೆ ತುಪ್ಪ ಪಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಯಿಸಿಯಲ್ಲಿ ತುಪ್ಪದಲ್ಲಿ, ಧಂತಿ ಸುಳಿಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.
ಪಥ್ಯ: ಗೆಸಿಮಾರ, ಕುಂಬಳಕಾಯಿ, ಬಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ಹರೂ ಪೋಸ್ಟ ಚಾರ್ಜ ೮ ಆಣೆ
ಏಜೆಂಟರು —ಗವಗ -ಗವಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ,ಬಾಗಲ ಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ಡಾವಣಗೆರೆ—ಡಾವಣಗೆರೆ ಕೇಸ್
ಮೂಲಕರ ವಿಳಾಸಕ್ಕೆ ಸದ ವ್ಯತ್ಯಾಸ ವಾಗಬೇಕೆಂದು ವಿನಂತಿ.
ಮೂಲಕರ ವಿಳಾಸ: ಶ್ರೀವಿನಿಸಿವ್ಹಪ್ಪ ಹಾಲಪ್ಪ ಡಾನಗೇಗೌ
ಆಯುರ್ವೇದ ಔಷಧಾಲಯ ಗವಗ

ವಾರದ ವಾದ– ಸಾಮ್ರಾಜ್ಯ ಹೋಗಲು ಚರ್ಚಿಲ್ ಬಿಡುವಂತಿಲ್ಲ! ಗಾಂಧೀ ಭೇಟಿಗೆ ವೈಸರಾಯ್ ಒಪ್ಪುವಂತಿಲ್ಲ!

'ನನ್ನುದಿಸ್ಸು ನಾವು ಬಿಡುನಂತಿಲ್ಲ'!

ಮಿ. ಚರ್ಚಿಲ್ಲರು ಇತ್ತೇಚೆಗಿನ ತನ್ನ ಲಂಡನ್ ಭಾಷಣದಲ್ಲಿ ಬ್ರಿಟಿಷರ ಯುದ್ಧೋದ್ದೇಶದ ಕುರಿತು ಹೀಗಂದಿರುವರು. "ಉತ್ತರಾಫ್ರಿಕ ಧಾಳಿಯು ಈ ಪ್ರಬಲ ಕಾರ್ಯದ ಮೂಲ ನಿರ್ಮಾಣ ಕರ್ತನೆಂದೆನಿಸಿ ಅಧ್ಯಕ್ಷ ರುಸವೆಲ್ಟ್; ನಾನವರ ಲೆಫ್ಟಿನೆಂಟ್. ಉತ್ತರಾಫ್ರಿಕದಲ್ಲಾಗಲೀ ಜಗತ್ತಿನ ಯಾವ ಭಾಗದಲ್ಲಾಗಲೀ ಬ್ರಿಟಿಷರಿಗೆ ಸ್ವಲಾ ಸಂಪಾದಿಸುವ ಇಚ್ಛೆಯಿಲ್ಲ. ನಮ್ಮ ಸ್ವಂತದ್ದನ್ನು ಬಿಗಿಯಾಗಿ ಹಿಡಿದುಕೊಳ್ಳ ವದೇ ನಮ್ಮ ಪಂಥ ನಾನು ರಾಜರ ಪ್ರಧಾನನಾಗಿ ಬಂದುದು, ಬ್ರಿಟಿಷ್ ಸಾಮ್ರಾಜ್ಯವನ್ನು ಬರಪಾಸ್ತು ಪಡಿಸುವ ಕಾರ್ಯ ಮಹೋತ್ಸವನನ್ನು ಜರಗಿಸಲಿಕ್ಕಲ್ಲ!" ಅಮೇರಿಕದ 'ಲೈಫ್' ಪತ್ರಿಕೆಯ ಸಂಪಾದಕರು, ಬ್ರಿಟಿಷ್ ಜನತೆಗೊಂದು ಬಹಿರಂಗ ಪತ್ರಬರೆದು, ಹಿಂದಿನ ಯುದ್ಧ ಸಾಲಬಾಕಿ, ಹಿಂದೀ ಸಮಸ್ಯೆಯ ಅನಿತ್ಯರ್ಧ, ಇತ್ಯಾದಿ ಬ್ರಿಟಿಷರ ಸ್ವಾರ್ಥ ಬುದ್ಧಿಯನ್ನು ನಮೂದಿಸಿ, ತಾವು ಬ್ರಿಟಿಷ್ ಸಾಮ್ರಾಜ್ಯವುಳಿಸಿಕೊಡಲು ಯುದ್ಧ ಮಾಡುವಂತಿಲ್ಲವೆಂದೂ ಬ್ರಿಟಿಷ್ ಧೋರಣೆಯು ಉದಾರಗೊಳ್ಳಬೇಕೆಂದೂ ತಿಳಿಸಿರುವರು.

ಚಕ್ರವರ್ತಿಗಳ ಭಾಷಣ.

ಪಾರ್ಲಿಮೆಂಟಿನಲ್ಲಿ ಈ ಬಾರಿ ಚಕ್ರವರ್ತಿಗಳತ್ತ ಭಾಷಣವು ಪದ್ಧತಿಗೆ ವಿರುದ್ಧವಾಗಿ ಭಾರತ ರಾಜಕೀಯ ಸಂಬಂಧವುಳ್ಳದಾಗಿತ್ತು. "ಗೊಂದಲವು ಮುಗಿದೊಡನೆ, ಭಾರತೀಯರು ತಮ್ಮೊಳಗೆ ತಯಾರಿಸಿಕೊಳ್ಳುವ ರಾಜ್ಯ ರಚನಾ ಯೋಜನೆಗನುಸಾರವಾಗಿ ಬ್ರಿಟಿಷ್ ಕಾಮನ್‌ವೆಲ್ತಿನೊಳಗೆ ಹಿಂದೂದೇಶಕ್ಕೆ ಪೂರ್ಣ ಸ್ವಾತಂತ್ರ್ಯ ದಾನಮಾಡುವ ತನ್ನ ಇಚ್ಛೆಯನ್ನು ನನ್ನ ಸರಕಾರವು ಅಲ್ಲಿಯ ಆತ್ಮಿತ ರಾಜರು ಮತ್ತು ಪ್ರಜೆಗಳಿಗೆ ಸಾರಿದೆ. ಈ ನಡುವೆ, ತಮ್ಮ ದೇಶದ ಸರಕಾರ ನಡಿಸುವ ಮತ್ತು ಯುದ್ಧ ನಡಿಸುವ ಕಾರ್ಯದಲ್ಲಿ ಸಹಕರಿಸಲು ಭಾರತೀಯ ರಾಜಕೀಯ ಪ್ರತಿನಿಧಿಗಳಿಗಾವಮಂತ್ರಣವಿಯಲಾಗಿತ್ತು. ಈ ತನಕ ಅವರು ಇದನ್ನೆಂಗೀಕರಿಸದುದಕ್ಕಾಗಿ ನಾನು ಬಹಳ ವ್ಯಸನಪಡುತ್ತೇನೆ ಇನ್ನಾದರೂ ನ್ಯಾಯವೇ ನೋಲಾಗಿ, ಭಾರತೀಯರು ತಮ್ಮೊಳಗೇನೇ ಒಪ್ಪಂದಕ್ಕೆ ಬರುವ ಉದಾತ್ತ ಹಂಬಿಕೆಯು ಮೂಲಕ, ಇಂದಿನ ಸಂಕಷ್ಟಗಳ ಅಂತ್ಯವು ತ್ವರ್ಯವಾಗಿ ಮತ್ತು ಜಯತೀಲವಾಗಿ ಆಗಲಿದೆ ಎಂದು ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ" ಚಕ್ರವರ್ತಿಗಳು ತನ್ನಾಡಳಿತದ ದೇಶವೊಂದರ ಒಳಗೊಂದಲದ ಕುರಿತು ಹೀಗೆ ಪ್ರತ್ಯಕ್ಷ ಸಂಬಂಧವಿಟ್ಟು ಭಾಷಣವಿತ್ತುದು ಇದೇ ಮೊದಲೆನ್ನಬಹುದು.

'ಗಾಂಧಿ- ಮಹಾನುಭಾವ'

ಲಂಡನಿನಲ್ಲಿರುವ ಸುಪ್ರಸಿದ್ಧ ಜನರಲ್ ಸ್ಮಟ್ಸ್‌ರು ಭಾರತೀಯ ಪತ್ರಿಕಾ ಪ್ರತಿನಿಧಿಗಳೊಡನೆ ಅಭಿಪ್ರಾಯ ವ್ಯಕ್ತಮಾಡುತ್ತಾ ಹೀಗಂದಿರುವರು. "ಇಲ್ಲ, ನಾನು ಭಾರತಕ್ಕೆ ಹೋಗುವಂತೆಯೂ ಇಲ್ಲ; ಭಾರತೀಯ ಇತ್ಯರ್ಥದ ಯಾವ ಪಾಲನ್ನೂ ಪಡಕೊಳ್ಳುವಂತೆಯೂ ಇಲ್ಲ. ನನ್ನ ಬುದ್ಧಿಗೆ ಅದು ಭಾರತದ ಪ್ರಶ್ನೆಯಾಗಿದೆ; ಅದು ಭಾರತದ ಪ್ರಶ್ನೆಯಾಗಿಯೇ ಉಳಿಯಬೇಕು. ಸಭ್ಯದ ತೊಂದರೆಯೆಂದರೆ ಜನರು ಈ ಪ್ರಶ್ನೆಯನ್ನು ಭಾರತೀಯರ ಮೇಲೆ ಹೊರಿಸುವ ಬದಲಿಗೆ ಅದರ ಎಲ್ಲಾ ಜವಾಬ್ದಾರಿಯನ್ನೂ ಈ ದೇಶದ ಮೇಲೆ ಹೊರಿಸಲು ನೋಡುತ್ತಿದ್ದಾರೆ. ಅದು ಭಾರತದ ಗೃಹ ಸಮಸ್ಯೆಯಾಗಿದೆ. ಭಾರತೀಯರು ತಮ್ಮೊಳಗೇನೇ ಶಾಂತಿ ಸ್ಥಾಪಿಸಿಕೊಳ್ಳಬೇಕು ತಮ್ಮ ರಾಜ್ಯ ರಚನಾ ಯೋಜನೆ ತಯಾರಿಸಿಕೊಳ್ಳಬೇಕು. ನಾನು ಅದರ ಹೊರಗಿರಲಿಚ್ಛಿಸುತ್ತೇನೆ ಗಾಂಧಿಯವರನ್ನು ಪಂಚಮದಳದವನೆನ್ನುವದು ಶಿಷ್ಟ ಮಾರ್ಗತನ. ಅವರೊಬ್ಬ ದೊಡ್ಡ ಮನುಷ್ಯ. ಅವರು ಪ್ರಪಂಚದ ಮಹಾ ವ್ಯಕ್ತಿಗಳಲ್ಲೊಬ್ಬರು. ಮತ್ತು ಸಂಚುಗಾರಿಕೆಯಲ್ಲಿ ಎಲ್ಲರಿಗಿಂತ ಕೊನೆಯವರು. ಅವರು ಮಾನವ ಕುಟುಂಬಕ್ಕೇನೇ ಸಂಬಂಧಿಸಿದ ಮಹಾ ಧ್ಯೇಯಗಳನ್ನಿಟ್ಟುಕೊಂಡವರು. ಇಂದಿನ ಕಷ್ಟಮಯ ಪ್ರಪಂಚದಲ್ಲಿ ಗಾಂಧೀ ತತ್ವಗಳು ವ್ಯವಹಾರ್ಯವೇ ಎಂಬ ಪ್ರಶ್ನೆಯಿರಬಹುದು. ಆದರೆ ಗಾಂಧಿಯವರೊಬ್ಬ ದೊಡ್ಡ ದೇಶಭಕ್ತ, ಮಹಾ ಪುರುಷ, ಮತ್ತು ದೊಡ್ಡ ತಾತ್ವಿಕ ಮುಖಂಡ-ಯಾರಿಗೆ ತಾನೇ ಸಂದೇಹ ವಿದೆ?"

ಮಹಾತ್ಮರ ಭೇಟಿ ನಿರಾಕರಣೆ.

ಶ್ರೀ. ಸಿ. ರಾಜಗೋಪಾಲಾಚಾರ್ಯರು ನವ ದಿಲ್ಲಿಗಾಗಮಿಸಿ ಮಿ ಜಿನ್ನಾರೊಡನೆ ದೀರ್ಘ ಸಂಭಾಷಣೆ ನಡಿಸಿ ವೈಸರಾಯರ ಸಂದರ್ಶನ ಪಡೆದು ಮಹಾತ್ಮರೊಡನೆ ಮಾತಾಡಲವಕಾಶ ಯಾಚಿಸಿದರು. ವೈಸರಾಯರು ಅದನ್ನು ನಿರಾಕರಿಸಿಬಿಟ್ಟರು ವರು. "ಮಿ. ಜಿನ್ನಾರೊಡನೆ ಸಂಭಾಷಿಸಿದುದರ ಪರಿಣಾಮವಾಗಿ ಸಂಧಾನ ಸಾಧ್ಯತೆಯಲ್ಲಿ ತುಸು ಮಾತ್ರ ಬಿರುಕು ಉಳಿದಿತ್ತು. ಮಾತ್ಮಾರೊಡನೆ ಮಾತಾಡಿ ಅದನ್ನು ಪೂರ್ತಿ ಮುಚ್ಚಬಹುದೆಂಬ ಭರವಸೆಯಿಂದಲೇ ನಾನು ಭೇಟಿಗಾಗಿ ವೈಸರಾಯರನ್ನು ಯಾಚಿಸಿದೆ. ವೈಸರಾಯರದನ್ನು ನಿರಾಕರಿಸಿ ಬಹುದೊಡ್ಡ ಪ್ರಮಾದವನ್ನು ಮಾಡಿದ್ದಾರೆ. ಅದು ತಿದ್ದಲ್ಪಡಲೇಬೇಕೆಂಬುದು ದೊಡ್ಡ ತಪ್ಪು ವೈಸರಾಯರದು. ಪ್ರಸ್ತುತ ಗಾಂಧೀ ಭೇಟಿಗಾಗಿ ನನ್ನೆತ್ತು ಅರ್ಹತೆಯುಳ್ಳವರು ಬೇರೊಬ್ಬರಿಲ್ಲ. ನನಗೆ ಸಂಭಾಷಣೆಗವಕಾಶ ದೊರೆಯುತ್ತಿದ್ದರೆ ಮಿತ್ರ ರಾಷ್ಟ್ರೀಯರ ಯುದ್ಧ ಕಾರ್ಯಕ್ಕೆ, ಮುಖ್ಯವಾಗಿ ಭೂರೀಣರ ದಸ್ಯಗಿರಿಯಿಂದಾರಂಭವಾದ ಸಂಚು, ದರೋಡೆ ಮೊದಲಾದ ಬಂಡಾಯಗಳ ನಿವಾರಣೆಗೆ ಅಸುಕೂಲವಾಗುತ್ತಿತ್ತು" ಎಂದು ಶ್ರೀ. ಆಚಾರ್ಯರು ಪತ್ರಿಕಾಪ್ರ. ಸರಕಾರಕ್ಕೆ ಶಾಂತಿಸ್ಥಾಪನೆಯ ಇಚ್ಛೆಯೇ ಇಲ್ಲವೆಂದೂ, ಅದು ಉದ್ದೇಶ ಪೂರ್ವಕ ಕೆದ ಮುಚ್ಚಿ ಕುಳಿತಿದೆಯೆಂದೂ ದೇಶ ವಿದೇಶಗಳಲ್ಲೀಗ ನಿರಾಕರಿಸಿದ್ದಾರೆ.

ಮಿತ್ರ ರಾಷ್ಟ್ರೀಯರ ಜೊತ ಜೆಟ್ಟಿ.

ಉತ್ತರಾಫ್ರಿಕದ ಅಮೇರಿಕಾಕ್ರಮಣ ಮತ್ತು ಇಜಿಪ್ಟಿನ ವಿಜಯದಿಂದ ಮಿತ್ರ ರಾಷ್ಟ್ರೀಯ ಪಕ್ಷ ಪಾತಿಗಳಲ್ಲಿ ನವ ಆಶೋದಯ ತುಂಟಾಗಿದೆ. "ಆಫ್ರಿಕದ ಕೃತ್ಯವು ಯುರೋಪಿನಲ್ಲಿ ಸೈನಿಕ ಮತ್ತು ರಾಜಕೀಯ ವಿಭಾಗಗಳೆರಡರಲ್ಲಿಯೂ ಮಿತ್ರ ರಾಷ್ಟ್ರೀಯರಿಗೆ ಕ್ಷಿಪ್ರಾನುಕೂಲತೆಯನ್ನೊದಗಿಸಿಕೊಟ್ಟಿದೆ; ಜರ್ಮನಿ- ಇಟೆಲಿ ರಾಷ್ಟ್ರಗಳ ಪತನದ ಪಥ ತೆರೆದಿದೆ. ಆಫ್ರಿಕದ ಯುದ್ಧಾರಂಭದಿಂದ, ಮೊದಲು ಹೊಡೆಯುವ ಮೇಲ್ಕೈ ಸ್ಥಾನಕ್ಕೀಗ ಮಿತ್ರ ರಾಷ್ಟ್ರಗಳು ಬಂದಂತಾಯಿತು" ಎಂದು ಸ್ಟಾಲಿನರು ಅಭಿಪ್ರಾಯ ವ್ಯಕ್ತಮಾಡಿ, ಆಂಗ್ಲೋ- ಅಮೆರಿಕಾನ ಧುರೀಣರನ್ನು ಮೊದಲ ವರ್ಗದ ಸಂಘಟನಾಚತುರರೆಂದು ಪ್ರಶಂಸಿಸಿ, ಇದರಿಂದ ಪೂರ್ವ ರಣರಂಗದ ಒತ್ತಡವು ತಗ್ಗಬಹುದೆಂಬ ಆಶೆ ವ್ಯಕ್ತಮಾಡಿರುವರು. ಉತ್ತರಾಫ್ರಿಕೆಯ ಧಾಳಿಯು ಕೆಲವು ತಿಂಗಳುಗಳಿಗೆ ಮೊದಲೇ ಗಾಢ ಯೋಚನೆಯಿಂದ ತಯಾರಿಸಿ ಟ್ಟಿದ್ದ ಹಂಚಿಕೆಯೆಂದೂ 1943ರೊಳಗೆ ಯುರೋಪಿನಲ್ಲಿ ದ್ವಿತೀಯ ರಂಗ ತೆರೆಯುವದಸಾಧ್ಯವೆಂದೂ ಅಧ್ಯಕ್ಷ ರುಸವೆಲ್ಟರು ತಿಳಿಸಿರುವರು. ಸ್ಪೈನಿಗೆ ಭದವಸೆ ಕೊಟ್ಟವ್ಯಕ್ತಿಗಾಗಿ ಜನರಲ್ ಫ್ರೆಂಕೋ ಇವರು ರುಸೆಲ್ಟರನ್ನು ಅಭಿನಂದಿಸಿರುವರು. ಪೋರ್ಚುಗೀಸ್ ಅವ್ಯಕ್ತಯ ಅಮೇರಿಕೆಯ ಭರವಸೆಗಾಗಿ ಸಮಾಧಾನ ವ್ಯಕ್ತ ಮಾಡಿರುವರು.

ಚಿಂತಿಸುತ್ತಿರುವುದೇಕೆ?

ವಿಮಾನಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನಧಾಳಿ ಸಂರಕ್ಷಣಾ ಕೆಲಸವಲ್ಲಿ ಕೂಡಾ ಪುರಣವುಂಟಾಗುವ ಅಪಾಯವನ್ನು ಸಂಪೂರ್ಣ ಒಳಗೊಂಡ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಇದರಲ್ಲಿ ಕೂಡಲೆ ಪೋಲಿಸಿಯನ್ನು ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ವಿಜಸ್ಸಿಗಾಗಿ ಆರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಯಿಕ್ಕಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಡಾಯಿ.

The Bombay Life Insurance Company Limited.

ಜಮ್ರ್ ಕ್ಯೂರ್.

ಇದು ಪರಾತನ ಆಯುರ್ವೇದ ಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಅಮೂಲ್ಯವಾದ ಕ್ರಿಮಿನಾಶಕ ವನಸ್ಪತಿಗಳು ಧಾತುಗಳು ಇದರಲ್ಲಡಗಿವೆ. ಸಕಲ ಚರ್ಮ ರೋಗಗಳಿಗೆ ಇದೊಂದು ಸುಖಚಿಕ್ಕೆ. ನಂಜು ಹರವಾಗಿಯೂ, ಕ್ರಿಮಿ ನಾಶಕವಾಗಿಯೂ, ಇದೆ. ಕಿತ್ತಿಯ ಗಾಯ, ಹುಣ್ಣು, ಕಿತ್ತ, ಸೆಳಿಚಿಕ್ಕೆ, ತಾಲಬರುಕ್ಕು, ಒಡಕು, ಬೆಂಕಿತಾಗಿದ್ದು, ಕೀಲು, ಹುಳುಕುಯುವುದು ಮುಂತಾದ ಚರ್ಮವ್ಯಾಧಿಗಳಿಗೆ ಅತ್ಯಂತ ಗುಣಕಾರಿ.

ಪ್ರತಿಬಾಟಲಿಯಲ್ಲಿ ಕನ್ನಡಿಯಲ್ಲಿ ಸಹಿತ ಸೆಂಪರೆ ತಪ್ಪಾಗದು. ಒಮ್ಮೆ ಪರೀಕ್ಷಿಸಿರಿ.

ಕೈಯ ತಪ್ಪಿ 1ರ 0—2—0.

ಸ್ವಾಮ್ಯಕ್ಕೆ ಪ್ರಚಾರಕರು:-

ಅಂಚೆಮನೆ ಬದರ್ಸ್,

ಚರ್ಚ್‌ರೋಡ್, ಉಡುಪಿ, ದ. ಕ.

ವ್ಯಾಪಾರಕ್ಕಾಗಿ ಹುಬ್ಬಾಳಿ ಶಾಖೆಯಲ್ಲಿಂಗಿತ್ತಿ

GET MEDICAL DEGREES BY HOME

Examination—Ayurvedic, Homeopathic, Unani etc.,; Prospectus Free.

Dr. Mansingh, Kotgarh (Simla.)

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಉಗಿನ ಅಭರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಜ್ಞೆ ಬ್ರದರ್ಸ್,

ಅಪ್ಪಶ್ರೀ ಬಳಿ, ಉಡುಪಿ.

ದೇಶ ವಾರದ ವಾರ್ತೆ ವಿದೇಶ

● ಮರಣ ಶಿಕ್ಷೆ ಕೊಟ್ಟು, ಗೋಳೇ ಬಾರು.

ಮಧ್ಯ ಪ್ರಾಂತ್ಯದ ಚಿಮೂರ್ ಹಳ್ಳಿಯಲ್ಲಿ ನಡೆದ ಸಬ್ ತಿನಿಜನಲ್ ಮೆಜಿಸ್ಟ್ರೇಟ್ ರೇ ಮೊದಲಾದ ಅಧಿಕಾರಿಗಳ ಕೊಲೆಯ ಆರೋಪಗಳಲ್ಲಿ 20ಜನರಿಗೆ ಮರಣ ಶಿಕ್ಷೆ, 26 ಜನರಿಗೆ ಜೀವಾವಧಿ ಸಜೆ ದೊರೆತಿದೆ. ಅಹಮ್ಮದ ಬಾದಿನಲ್ಲಿ ಇನ್ನೂ ತಾ 13ರಲ್ಲಿ ಸ್ವಯಂಪ್ರೇರಕನ್ನು ತಂಕಿಸಲು ಬಂದ ಪೋಲೀಸರ ಮೇಲೆ ಜನರು ಬಿದ್ದರೆಂದು ಗೋಳೀಬಾರು ನಡೆಯಿತು ಸತಾರಾದಲ್ಲಿ ಸಬ್ ಜಜ್ ಕೋರ್ಟಿಗೆ ಬೆಂಕಿ ಕೊಡಲಾಗಿದೆ. ಧಾರವಾಡದ ಕರ್ನಾಟಕ ಕೋಲೇಜಿನಲ್ಲಿ ತಾ. 12ರಲ್ಲಿ ಭಯಂಕರ ಬೋಂಬು ಸ್ಫೋಟವಾಯಿತು. ಕಟಕನಲ್ಲಿ ಪೋಲಿಸ್ ಸ್ಟೇಶನ್ನೊಂದಕ್ಕೆ ಬೆಂಕಿ ಕೊಟ್ಟರೆಂಬ ಆರೋಪದಿಂದ ಮೂವರು ಮರಣ ಶಿಕ್ಷೆ ಗೊಳಗಾದರು. ಕರಾಚಿಯಲ್ಲೊಂದೇ ದಿನ ಎರಡು ಕಡೆ ಬೋಂಬು ಸಿಡಿದಿದೆ. ಅಸ್ಸಾಮಿನ ಟಟಾಬಾರ್ ಇನ್ಸ್ಪೆಕ್ಷನ್ ಬಂಗಲೆ ಮತ್ತು ರೈಲು ಕಛೇರಿಕ್ಕೆ ಬೆಂಕಿ ಕೊಡಲಾಗಿದೆ. ಪೂನಾ ರೈಲ್ವೇ ಸ್ಟೇಶನಿನಲ್ಲಿ ಬೋಂಬು ಸ್ಫೋಟವಾಯಿತು. ಅಹಮ್ಮದಾಬಾದಿನ ಪೋಲಿಸ್ ಚೌಕಿಯ ಬಳಿ ಬೋಂಬು ಸಿಡಿದು ಒಬ್ಬನ ಮರಣವಾಯಿತು.

● ಗೊಂದಲ, ಹೊಡುಗಡಾಯ.

ಬೊಂಬಾಯಿಯ ಮಹಾನ್ ನಗರದ ಮೇಲೆ 20000ಮತ್ತು ಕೊಲಬಾ ಜಿಲ್ಲೆಯ 12 ಹಳ್ಳಿಗಳ ಮೇಲೆ 12950 ಸಾಮೂಹಿಕ ತೆರಿಗೆ ಬಿದ್ದಿದೆ. ಸತಾರ ಜಿಲ್ಲೆಯ ಭೋಸ್ ಗ್ರಾಮದ ಮೇಲೆ 4000. ಮೈಸೂರಿನ ತಿವಮೊಗ್ಗ ಜಿಲ್ಲೆಯ ಮೂರು ಹಳ್ಳಿಗಳ ಮೇಲೆ ರೂ. 5000ಂತೆ ಪುಂಡು ಗಂದಾಯ ಬಿದ್ದಿದೆ. ದರ್ಭಾಂಗಾ ಜಿಲ್ಲೆಯ 44 ಹಳ್ಳಿಗಳ ಮೇಲೆ ರೂ. 3,43,500 ಸಾಮೂಹಿಕ ತೆರಿಗೆ ವಿಧಿಸಲ್ಪಟ್ಟಿದೆ. ಕರಾಯ ಉಡಿಯು ಮೇಲೆ 50 ಸಾವಿರ ಸಾಮೂಹಿಕ ತೆರಿಗೆ ಬಿದ್ದಿದ್ದು 40ಸಾವಿರ ಸಸೂಲಾಗಿದೆ. ಆಂಧ್ರ ದೇಶದ ಭೀಮಾವರ ಮಿನ ಕೆಲವು ಗ್ರಾಮಗಳ ಮೇಲೆ ರೂ. 30000, ಪಂಡಾರ ಪುರದ ಮೇಲೆ ರೂ. 30 ಸಾವಿರ ಪುಂಡುಗಂದಾಯ ಹೇರಲ್ಪಟ್ಟಿದೆ. ಸಿಲ್ಹಟ್ಟಿನ ಪೋಸ್ಟ್ ಆಫೀಸು ಎಲ್ಲ ಕಾಗದ ಪತ್ರಗಳೊತನೆ ಬೆಂಕಿಗೆ ಬಲಿಯಾಯಿತು. ಗಡಿನಾಡಿನಲ್ಲಿ ದಿನಂಪ್ರತಿ ಕೆಂಪಂಗೀ ದಳವು ಕೋರ್ಟ್ ಗಳಿಗೆ ಧಾಳಿ ನಡಿಸಿ ವಸ್ತುಗಳಿಯಾಗುತ್ತಿದೆ. ಸುಪ್ರಸಿದ್ಧ ಸನುತಾವಾದಿ ಮುಖಂಡ ಶ್ರೀ ಜೈ ಪ್ರಕಾಶ ನಾರಾಯಣರು ಇತರ ಕೆಲವು ಕಾಂಗ್ರೆಸ್ ಕಾರ್ಯಕರ್ತರೊಡನೆ ಜೈಲಿನಿಂದ ತಪ್ಪಿಸಿಕೊಂಡಿರುವರು. ಅವರನ್ನು ತೋರಿಸಿಕೊಟ್ಟವರಿಗೆ ಸರಕಾರವು ಬಹುಮಾನದ ಆಶ್ವಾಸನೆ ಪ್ರಕಟಿಸಿದೆ. ದೇಶ ಸರ್ವತ್ರ ಗೊಂದಲಗಳು ನಡೆದಿವೆ.

● ಆಫ್ರಿಕದಲ್ಲಿ ನಾಜಿಗಳ ಮೇಲೆ ಕಟ್ಟರೀ ಧಾಳಿ.

ಇಜಿಪ್ಟಿನಲ್ಲಿ ವಿಜಯದೊಡನೆ ಮುಂದೊತ್ತಿದ ಬ್ರಿಟಿಷ್ 8ನೇ ದಲವು ಟೋಬ್ರಕನ್ನು ವಾಯುವೇಗದಿಂದ ವಶಪಡಿಸಿಕೊಂಡು ಅಲ್ಲಿಂದ 80 ಮೈಲು ಮುಂದೊತ್ತಿರುವೆಂದು ತಿಳಿದು ಬರುತ್ತದೆ. ಟೋಬ್ರಕನಲ್ಲಿ ಸೆರೆಯಾಗಿದ್ದ ದಕ್ಷಿಣಾಫ್ರಿಕದ ಸ್ಥಳೀಯ ಸೈನಿಕರನ್ನು ಈ ವಿಜಯೀ ಸೇನೆಯು ಸೆರೆಬಿಡಿಸಿದೆ. ಅಚ್ಚಿನ ರಾಷ್ಟ್ರಗಳ ಸೇನೆಗಳು ಇನ್ನೂ ಪಶ್ಚಿಮಕ್ಕೆ ಹಿಂಜರಿಯುತ್ತಿವೆಯೆಂದೂ ಟ್ಯುನಿಸಿಯು ಮೇಲೆ ಬ್ರಿಟಿಷರ ವಿಮಾನ ಧಾಳಿ ನಡೆಯಿತು, ಬ್ರಿಟಿಷ್ ಸೇನೆ ಹೊಕ್ಕಿತು ಎಂದೂ ವರ್ತೆ ಬರುತ್ತಿದೆ. ಉತ್ತರಾಫ್ರಿಕದಲ್ಲಿ ಆಮೇರಿಕನ ಸೇನೆಗಳು ಆಪ್ರತಿಬಂಧ ಧಾಳಿಯನ್ನು ನಡಿಸುತ್ತಿವೆ. ಟ್ಯುನಿಸಿಯಾ ಗಡಿಯಿಂದ 180 ಮೈಲು ದೂರದ ಬೋಗೀ ಬಂದರನ್ನು ನಿರಾತಂಕವಾಗಿ ಪ್ರವೇಶಿಸಿದ ಅಮೆರಿಕಾನರಿಗೆ ಈಗ ಹೊಸ ಸಹಾಯವು ಭರವಿಂದ ಒದಗಿ ಅವರು ಮುಂದೊತ್ತಲಾರಂಭಿಸಿವ್ವಾರೆ. ಮಿತ್ರ ರಾಷ್ಟ್ರೀಯರು ಆಕಾಶ ಸೇನೆಯನ್ನೂ ಪಶ್ಚಿಮ ಟ್ಯುನಿಸಿಯು ವಿಮಾನದಲ್ಲಿಳಿಸ ಶಕ್ತಿರುವರೆಂದು ತಿಳಿದುಬರುತ್ತದೆ. ಉತ್ತರಾಫ್ರಿಕದ ಧಾಳಿಯಲ್ಲಿ ಜರ್ಮನರ ಪ್ರವೇಶವಾಗಲೀ, ಫ್ರೆಂಚರ ಪ್ರತಿಭಟನೆಯಾಗಲೀ ಈ ತನಕವಿಲ್ಲವ ವೆಯಿಂದ ಮಿತ್ರ ರಾಷ್ಟ್ರೀಯರ ಧಾಳಿ ಸರಾಗವಾಗಿದೆ.

● ಪ್ರತಿಭಟನೆಯ ಸಿದ್ಧತೆ.

ಅದರೆ ಟ್ಯುನಿಸಿಯಲ್ಲಿ ಮಿತ್ರ ರಾಷ್ಟ್ರೀಯ ಸೇನೆಗಳನ್ನು ದಿಟಿಸಲು ಜರ್ಮನಿ- ಇಟೆಲಿಗಳು ಅದ್ಭುತ ಸಿದ್ಧತೆ ನಡಿಸಿವೆ ನಿವಾಸಗಳ ಮೂಲಕ ಸೇನೆ ಮತ್ತು ಟೇಂಕುಗಳನ್ನು ಟ್ಯೂನಿಸಿಯದಲ್ಲಿಳಿಸಿ ನಾಜಿಗಳವನ್ನು ಕೊನೆತನಕ ಉಳಿಸಿಕೊಳ್ಳಬೇಕೆಂಬ ಶಪಥದಿಂದಿರುವರು. ಇತ್ತ ಅಲ್ಜೀರಿಯದಿಂದ ಮುಂದೊತ್ತಿದ ಬ್ರಿಟಿಷ್ ಸೇನಾ ಭಾಗವೊಂದು ಟ್ಯೂನಿಸಿಯಕ್ಕೆ ಸುಗ್ಗಿರುವುದೆಂಬ ವಾರ್ತೆಯಿದೆ. ಟ್ಯೂನಿಸಿಯು ಮೇಲೆ ಬಲಶಾಡಿದ ವಿಮಾನಧಾಳಿಯನ್ನು ಮಿತ್ರ ರಾಷ್ಟ್ರೀಯರು ಎಡೆಬಿಡದೆ ನಡಿಸುತ್ತಿರುವರು. ಪಶ್ಚಿಮ ಟ್ಯೂನಿಸಿಯದಲ್ಲಿ ಗಾಳಿ ಕೊಡೆಯವರನ್ನು ಅಮೇರಿಕಾನರೂ ಇಳಿಸಿವರು. ಲಿಬ್ಯದಲ್ಲಿ ತೋಬ್ರಕ್ ಮಾತ್ರವಲ್ಲ, ಬೆಂಘಾಜಿಯನ್ನೂ ಕೂಡ ಬಾಲಿ ಪಡಿಸಿ ಜನರಲ್ ಕೋನೆಲಿಯರ ಸೇನೆಯು ಹಿಂಜರಿಯುತ್ತಲೇ ಇದೆ. ಸಾವಿರಾರು ಇಟೆಲಿ,ಜರ್ಮನಿ ಸೇನೆಗಳೂ ಹಲವು ಇಟೆಲಿ ಸೇನಾನಿಗಳೂ ಮಿತ್ರ ರಾಷ್ಟ್ರೀಯ ಸೆರೆಗಳಲಿ ಸೆರೆಸಿಕ್ಕಿದ್ದಾರೆ. ಸೇನೆಸಾಗಿಸುತ್ತಿದ್ದ ಆರು ಇಟೆಲಿಯಾನ ಹಡಗುಗಳನ್ನೂ ಬ್ರಿಟಿಷರು ಮುಳುಗಿಸಿರುವರು. ಟುನಿಸ್ ಇಜಿಪ್ಟ್ ಮತ್ತು ಲಿಬ್ಯದಲ್ಲಿ ಪೂರ್ಣ ಸಾಮಾಜಯನ್ನು ಜನರಲ್ ಕೋನೆಲಿಯರು ಪಡಿಸಿದಂತಿದೆ. ಇನ್ನೊಂದೆಡೆಯಿಂದ ಉತ್ತರಾಫ್ರಿಕದಲ್ಲಿ ಅಮೇರಿಕನರ ಆಪ್ರತಿಹತ ಧಾಳಿ ನಡೆದಿದೆ. ಇನೆರಡು ಧಾಳಿಗಳ ಗುರಿಯಾಗಿರುವ ಟ್ಯುನಿಸಿಯಲ್ಲಿ ಸುಸಂಘಟಿತವಾಗಿರುವ ನಾಜಿಗಳನ್ನು ಗೆಲ್ಲುವವರಲ್ಲೇ ಈ ಹೋರಾಟದ ಭವಿತವ್ಯವಿದೆ. ಆಲ್ಜೀರಿಯದಲ್ಲಿ ಇತ್ತಂಡದವರೊಳಗೆ ಜತೆ ಪ್ರಬಲ ನೌಕಾ ಯುದ್ಧವೊಂದು ಸಾಗಿದೆ. ಪರಿಣಾಮವೇನೆಂಬುದು ಪ್ರಕಟವಾಗಿಲ್ಲ.

THE INDO-UNION

ದಿ ಇಂಡೋ-ಯೂನಿಯನ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: — ತಂಜಾವೂರು

'ಪೊಲಿಸಿದಾರರ ಟ್ರಸ್ಟ್ ಫಂಡು'

ಇದರ ಅದ್ವಿತೀಯ ವಿಶಿಷ್ಟತೆ.

ಕೆಲ ವಾಸ್ತವಿಕ ವಿಷಯಗಳು

1. ಕಡಿಮೆ ಖರ್ಚು.
2. ಎಲ್ಲರಿಗೂ ಅನುಕೂಲವಾದ ಆಕರ್ಷಕ ಮತ್ತು ಭದ್ರವಾದ ಯೋಜನೆಗಳು.
3. ಸಕಾಲದಲ್ಲಿ 'ಕ್ಲೈಮು' ಹಣದ ಸಂದಾಯ.
4. ತನ್ನಿಂದ ತಾನೆ ದಂಡವಾಗಿ ಹೋಗದಿರೋಣ.
5. ಪುನರುಜ್ಜೀವನದ ಸುಲಭ ರೀತಿಗಳು.
6. ಪೊಲಿಸಿದಾರರ ಟ್ರಸ್ಟ್ಫಂಡ್ ನಿಯಮಾನುಸಾರ ಎರಡನೆಯ ವರ್ಷದ ಪ್ರೀಮಿಯಂನ 50 , ಮತ್ತು ಮೂರನೆಯ ವರ್ಷದ ಆಗಾಯ್ತು ರಿನ್ಯುವಲ್ ಪ್ರೀಮಿಯಂನ 8% ಉತ್ತಮ ಭದ್ರತೆಯ ಮೇಲೆ ನಿನಿಯೋಗಿಸಲ್ಪಟ್ಟಿದೆ.
7. ಪ್ರತಿನಿಧಿಗಳಿಗೆ ಕಾಯಂ ಸಂಬಂಧಗಳು.

ನಮ್ಮ ವ್ಯವಹಾರವು ಮಿತವ್ಯಯದ ತಳಹದಿಯ ಮೇಲೆ ನಿರ್ಮಾಣವಾಗಿದೆ.

ಇದು ಪ್ರಾತಿನಿಧ್ಯ ನಹಿಸಲಿಕ್ಕೂ ಹಿಮ ಮಾಡಲಿಕ್ಕೂ ಲಾಭದಾಯಕವಾಗಿದೆ.

ಏಜನ್ಸಿಗಳಿಗೆ ಬರೆಯಿರಿ: ಎ. ಕಟುಷಾತರ ಹೆಗ್ಡೆ, ಒಗ್ಗನೈದರ್, ಜೋಳಾರ, ಮಂಗಳೂರು. ಕೆ. ಜಗನ್ನಾಥ ಶೆಟ್ಟಿ, ಒಗ್ಗನೈಜರ್, ಉಡುಪಿ. ಕೆ. ಸಂಜೀವ ಹೆಗ್ಡೆ, ಒಗ್ಗನೈಜರ್, ಕುಂದಾಪುರ.

ಬೊಂಬಾಯಿ ಪೊಸ್ಟಾನ ಮತ್ತು ದಕ್ಷಿಣ ಕನ್ನಡದ ರಾಜಾ ಕಛೇರಿ:

ಬೊಂಬಾಯಿ ಶಾಖೆಯ ಮೆನೇಜರು — ಎಂ. ಸುಂದರರಾಮು ಶೆಟ್ಟಿ.

ಬೆಹ್ರಾಮ್ಜಿ ಮೆನ್ಷನ್,
ಸರ್ ಫಿರೋಜ್‌ಷಾ ಮೆಹತಾ ರೋಡು,
ಫೋರ್ಟ್, ಬೊಂಬಾಯಿ.

ಜನರಲ್ ಮೆನೇಜರು — ಕೆ. ಎಸ್ ರಾಮಮೂರ್ತಿ, ಎಂ ಎ.

INDO-UNION ASSURANCE CO., LTD.

Money to Lend.

Advances against gold, silver, Insurance Policies, Government Securities, Goods and such other valuable and approved securities made at favourable rates of interest.

Bills are purchased or collected at cheap rates of commission.

Banking business of every description transacted.

The Canara Banking Corporation Limited.

(INCORPORATED IN BRITISH INDIA)

ESTD: 1906.

Head Office: **UDIPI.**

ಉಡುಪಿ, ಗುರುವಾರ, ೧೯–೧೧–೧೯೪೨

ಚಿಲ್ಲರೇ ನಾಣ್ಯಗಳ ಅಂತರ್ಧಾನ!

ಈ ಕಾಲದ 'ಅಭಾವ'ಗಳಲ್ಲಿ ಚಿಲ್ಲರೆಯ ಅಭಾವವು ದೊಡ್ಡದು– ಆ ದೆಸೆಯಿಂದ ಜನರ ನಿತ್ಯಜೀವನದಲ್ಲಿ ಉಂಟಾಗಿರುವ ತೊಡಕುಗಳನ್ನು ಬಹುಮುಖದಿಂದ ಕಾಣುತ್ತಿದ್ದೇವೆ. 'ಚಿಲ್ಲರೆ ಇಲ್ಲ' 'No change' ಬೋರ್ಡುಗಳು ಉಪಹಾರ ಗೃಹ, ವ್ಯಾಪಾರದಂಗಡಿಗಳ ಮುಂಭಾಗದಲ್ಲಿ ನೇತಾಡುತ್ತಿವೆ; ಬಂಪರ್ ಗಿರಾಕಿಗೂ ಅವುಗಳನ್ನು ಕಂಡಮೇಲೆ ಅಂತಹ ಜೇ ಸ್ಥಾನ– ಫ್ರಿಂಕು ನೆಲೆ! ಬದವರಿಗಂತೂ ತೊಟ್ಟಿಬಟ್ಟೆಗಾಗಿ ದುಡಿದು ಸಂಪಾದಿಸಿದ ಮೇಲೆ, ಚಿಲ್ಲರೆಗಾಗಿ ದುಡಿಯಬೇಕಾಗಿ ಬಂದಿರುವ ಪ್ರತ್ಯೇಕ ಪರಿಶ್ರಮದಿಂದ ಜೀವನದ ಸಂಕಷ್ಟವಿಮ್ಮಡಿಯಾಗಿದೆ. ಆಶ್ಚರ್ಯ! ಕಾಗದದ ರೂಪಾಯಿ ನೋಟುಗಳನ್ನು ಕಾಣುತ್ತೇನೆ, ಪಡೆಯುತ್ತೇವೆ; ತಾವ್ರದ ಪಾಣಾಣಿಗಳ ಬೇಟೆಯಿಲ್ಲ; ಸಂಪಾದಿಸಲಾಗುವದಿಲ್ಲ! ಚಿಲ್ಲರೆಯ ಈ ಒಡಗಾಲದ ಆರಂಭ ಉತ್ತರ ಹಿಂದುಸ್ಥಾನದಲ್ಲಿ. ಎರಡು ಮೂರು ತಿಂಗಳುಗಳ ಹಿಂದೆಲೇ ಬಂಗಾಳದಲ್ಲೆದ್ದಿದ್ದ 'ಚಿಲ್ಲರೆಯಿಲ್ಲ' ಬೊಬ್ಬೆಯು ಕ್ರಮೇಣ ಬೊಂಬಾಯಿಯ ವರೆಗೆ ಹಬ್ಬಿತು ಕಲ್ಕತ್ತದ 'ಪ್ರೈಮ್ ಮಿನಿಸ್ಟರ್' ಕಂಪನಿಯು ಅನ್ಯೋಪಾಯವಿಲ್ಲದೆ ಸ್ವಯಾನಿಕರಿಗಾಗಿ ಕಾಲು ಸೈಜಿನ ಕಾಗದದ 'ಕೂಪನ್'ಗಳನ್ನು ತಯಾರಿಸಿದುದು, ಬಂಗಾಳದ ಕೆಲವು ಸಂಸ್ಥೆಗಳು ಚಿಲ್ಲರೇ ನಾಣ್ಯದ ಬದಲು ಅಂಚೇ ಬಿಲ್ಲೆಗಳನ್ನು ಸಯೋಗಿಸಹತ್ತಿದುದು– ಆಗ ವಿಕ್ಕ ಕಡೆಯವರಿಗೊಂದು ಸೋಜಿಗವಾಗಿ ಕಂಡಿದ್ದಿತು. ಈಗ ಚೀಟು, ಕೂಪನುಗಳ ರಾಜ್ಯಭಾರವು ದೇಶದ ಹೆಚ್ಚಿನ ಕಡೆಗಳಲ್ಲಾರಂಭವಾಗಿದೆ. ಇತ್ತೀಚೆಗೆ ದಕ್ಷಿಣ ಹಿಂದುಸ್ಥಾನದ ಕೆಲವೆಡೆಗಳಲ್ಲಿ ಈ 'ನಾಣ್ಯ ಬರಗಾಲ'ದ ಉಪದ್ರವವು ಸಹಿಸಲಸಾಧ್ಯವಾಗುವನ್ನು ಬೆಳೆದುಹೋಗಿದೆ. ನಾಣ್ಯಗಳೇ ಜನರೊಡನೆ ಕಣ್ಣುಮುಚ್ಚಾಲೆಯಾಟವಾಡಿಕೊಳ್ಳಲಿದರೆ ಹೇಗೆ? ರಾಜಕೀಯ ಮುಖಂಡರು ಹಲವರು ಕಾಣೆಯಾಗಿದ್ದಾರೆ. ಅವರನ್ನು ಕಂಡುಹಿಡಿಯಲು ಸರಕಾರದ ಪ್ರಯತ್ನ ವಿದೆ. ನಾಣ್ಯಗಳು ಕಾಣೆಯಾಗಿವೆ– ಅವುಗಳೇನಾದುವು, ಎಂಬುದನ್ನು ಗೊತ್ತುಹಚ್ಚುವದು ಬೇಡವೆ? ಚಿಲ್ಲರೆಯ ಅಭಾವಕ್ಕೇನು ಕಾರಣ?

ಇದು ಅರ್ಥಶಾಸ್ತ್ರಜ್ಞರು ಸೂಕ್ಷ್ಮ ಪರೀಕ್ಷಣೆಯಿಂದ ಗೊತ್ತುಹಚ್ಚಬೇಕಾದ ವಿಷಯ. ವ್ಯವಹಾರಕ್ಕೆ ಬೇಳುವ ನಾಣ್ಯ ರೂಪೀ ಮತ್ತು ಕಾಗದ ರೂಪೀ ಮೊತ್ತಗಳೊಳಗೆ ಪ್ರಬಲ ವ್ಯತ್ಯಾಸವಿದೆಯೆ? ಇದ್ದರೆ, ಸಂಚು ವಂಚನೆಯ ಮಹತ್ತಾದ ಅನಾಹುತ ನಡೆದಿದೆಯೆನ್ನಬೇಕಾ. ಸರಕಾರವದನ್ನು ಸಹಿಸಿ ಸುಮ್ಮಗಿರುತ್ತಿರಲಿಲ್ಲ. ಅಂಸಮೇಲೆ ಪುಡಿ ನಾಣ್ಯಗಳನ್ನೆಳೆಯುವ ಸುರಂಗವಾವುದಿದೆ? 'ಹೀಗಾಗಿರಬಹುದು' ಎಂದು ಸಂಭವಿಸಿಹುದಾದ ಒಂದೇ ಒಂದು ಕಾರಣವೆಂದರೆ ತಾಮ್ರದ ನಾಣ್ಯಗಳು ಎಲ್ಲಯಾದರೂ ಬಂಧಿಸಿಡಲ್ಪಟ್ಟಿರಬೇಕು; ಅಥವಾ ಕರಗಿಸಲ್ಪಟ್ಟಿರಬೇಕು. ಈ ಬಾರಿ, ಯುದ್ಧಾರಂಭವಾದಂದಿನಿಂದ ಕಳೆದ ಮಾರ್ಚಿಯ ತನಕ ಸಕೋಟಿ ರೂ.ಗಳ ಚಿಲ್ಲರೇ ನಾಣ್ಯಗಳನ್ನು ಸಹಿವಾಟಿಗೆ ಹಾಕಲಾಗಿದೆ; ಕಳೆದ ಮಹಾ ಯುದ್ಧದ ಆದಿಯಿಂದ ಅಂತ್ಯದ ವರೆಗೆ ಸಕೋಟಿಯಷ್ಟನ್ನು ಮಾತ್ರ ಹೊರ ಹಾಕಲಾಗಿತ್ತು. ಇತ್ತೀಚೆಗಿನ ತಲೆನೆಯಿಂದ ಈ ಪೈಕಿ ಲಕ್ಷವೆಸ್ಟರ ಚಿಲ್ಲರೇ ನಾಣ್ಯಗಳು ಮಾಯವಾಗಿವೆ ಎಂದು ತಿಳಿದು ಬರುತ್ತದೆ ಆಮೇಲಾದುವು? ಹೆಣಕ್ಯಾಗಿ ಆಸ್ತಿ ಬದುಕುಗಳು ಮಾಯವಾಗುವದಿದೆ; ಹಣವೇ ಮಾಯವಾಗುವದು ಯಾಕಾಗಿ? ಕಾರಣ ವಿಷ್ಟೆ: ಈ ನಾಣ್ಯಗಳು ಹಣದ ರೂಪದಿಂದ ಪಡೆಯುವ ಬೆಲೆಗಿಂತ ಮಿಕ್ಕೆ ಲೋಹ ರೂಪದಿಂದ ಮೌಲ್ಯ ಪಡೆಯಬಲ್ಲುವು. ಸರ್ವ ಸಾಧಾರಣವಾಗಿ ರೂ. 135ರ ತಾಮ್ರದ ನಾಣ್ಯಗಳನ್ನೊಟ್ಟಿಸು ಸಂಗ್ರಹಿಸಿ ಅದನ್ನು ಲೋಹ ರೂಪದಲ್ಲಿ ವಿಕ್ರಯಿಸಿ, ರೂ. ಇನ್ನೂರನ್ನು ಸಂಪಾದಿಸಬಲ್ಲನೆಂದು ಅಂದಾಜು ಮಾಡಲಾಗಿದೆ. ಈ ಗುಟ್ಟನ್ನರಿತವರು ತಾಮ್ರದ ನಾಣ್ಯಗಳನ್ನು ಕರಗಿಸಿರಬಹುದು; ಅಥವಾ ಇಂತಹ ನಾಣ್ಯಗಳು ಮಾರ್ಕೆಟ್ ಧಾರಣೆಗಿಂತ ಹೆಚ್ಚಿನ ಬೆಲೆ ಸಂಪಾದಿಸುತ್ತಿವೆಂದು ತಿಳಿದ ಹಲವರು ಅದನ್ನು ಸಂಗ್ರಹಿಸಿಟ್ಟಿರಬಹುದು. ಇವುಗಳನ್ನು ಸೆರೆ ಬಿಡಿಸುವ ಸಾಹಸ ನಡೆಸಿರಿ ಸಂತೋಷ. ಆದರದು ಸುಲಭ ಸಾಧ್ಯವೆ? ಈ ಕಾರ್ಯವು ರಾಜಕೀಯ ಬಂಧನಕ್ಕೊಳಗಾದ ಯೋಧರ ಬಿಡುಗಡೆಯಷ್ಟೇ ಕಷ್ಟ! ಒಂದೊಮ್ಮೆ ಹಿಡಿತಕ್ಕೊಳಗಾದವರನ್ನು ಬಿಡಿಸಬಹುದು– ಸತ್ತವರನ್ನು ಬದುಕಿಸಲಾಗದು. ಕರಗಿಸಲ್ಪಟ್ಟ ನಾಣ್ಯಗಳ ಮರು ಸಂಪಾದನೆಯೆಂದರೆ ಹೇಗೆ? ಜನರಿಗೀಗ ಮುಖ್ಯವಾಗಿ ಆಪರಾಧದ ಶೋಧ, ಆಪರಾಧಿಗಳಿಗೆ ಶಿಕ್ಷೆ ಬೇಕಾಗಿಲ್ಲ: ತವಗೀಗ ಒದಗಿರುವ ಅಡಚಣೆಗೊಂದು ಪರಿಹಾರ ಬೇಕಾಗಿದೆ. ಕಷ್ಟ ಶಮನಕ್ಕುಗತ್ಯವಿರುವ ವೈಜ್ಞಾನಿಕ ಶೋಧ ನಡೆದರೆ ಸಾಕಾಗಿದೆ. ಚಲಾವಣೆಯಲ್ಲಿರುವ ದ್ವಿವಿಧ ಹಣರೂಪಗಳಿಗೆ ಎರಡು ವಿಧಗಳಿಂದ ಮಾತ್ರ ಹಾಪಿಸಿದಗಲು ಸಾಧ್ಯ. ಕರೆನ್ಸೀ ನೋಟುಗಳ ಅನಧಿಕೃತ ನಿರ್ಮಾಣ ಮಾಡುವ ಮೂಲಕ ಅವು ಮಿತಿಮೀರುವದೊಂದು; ಚಿಲ್ಲರೇ ನಾಣ್ಯಗಳನ್ನು ಅನ್ಯಥಾ ವ್ಯಯಿಸುವ ಮೂಲಕ, ಅವುಗಳ ಸಂಖ್ಯೆ ತಗ್ಗುವದೊಂದು. ಪ್ರತಿಕ್ಷ ಎರಡನೇ ಅಪಾಯವೇ ಸಂಭವಿಸಿರಬಹುದೆಂಬ ಸಂದೇಹವಿದೆ. ಇದರ ನಿವಾರಣೆಯ ಹಾದಿಗಳು ಹಲವು ಸೂಚಿಸಲ್ಪಟ್ಟಿವೆ. ಕಾಗದದ ಚಿಲ್ಲರೇ ನಾಣ್ಯಗಳನ್ನೂ ತಯಾರಿಸಬಹುದೆಂಬುದು ಅತ್ಯಂತ ಅವ್ಯವಹಾರ್ಯ ವಾದ. ಬದಲಿಗೆ ಹಿತ್ತಾಳೆ ಮತ್ತು ಕಬ್ಬಿಣದ ಪುಡಿ ನಾಣ್ಯಗಳನ್ನು ಹೊರಡಿಸಿದರಾಗಬಹುದೆಂಬ ಬೀಡಿಕೆಯು ಸಮರ್ಪಕವಾಗಿ ಕಾಣುತ್ತಿದೆ.

ಅಂತೂ ಜನರ ಶಾಂತಿ ಭಂಗವಾಗಿದೆ; ಈ ಸಂಕಷ್ಟಕ್ಕೆ ಪರಿಹಾರವಿಲ್ಲೆಂಬ ನಿರಾಶೆಯೆದ್ದಿದೆ. ಸರಕಾರವು ಈ ಕಡೆಗೆ ಸಾಕಷ್ಟು ಲಕ್ಷ್ಯವಿತ್ತುದು ನಮ್ಮ ಗಮನಕ್ಕೆ ಬಂದಿಲ್ಲ ಕಾಣೆಯಾದ ಜನರಿಗಿಂತ ಕಾಣೆಯಾದ ನಾಣ್ಯಗಳು ಮಾಡುವ ಗೊಂದಲವಧಿಕವೆಂದು ನಾವಿಲ್ಲಿ ಒತ್ತಿ ಹೇಳಲಿಚ್ಛಿಸುತ್ತೇವೆ. 'ಅನಧಿಕೃತ ಬರಿಹಗಳಿರುವ ಕರೆನ್ಸಿ ನೋಟುಗಳಿಗೆ ಬೆಲೆಯಿಲ್ಲ'ವೆಂದು ಸಕಾಲದಲ್ಲಿ ಸಾರುವಷ್ಟ ಸರಕಾರವು ಎಚ್ಚರವಲ್ಲಿದೆ ಅಂತಹ ಕೊರತೆ ಯಾವುದೂ ಇಲ್ಲದ ನೋಟೊಂದನ್ನು ಹಿಡಿದುಕೊಂಡು ಮಾರ್ಕೆಟಿಗೆ ಹೋದರೆ ಚಿಲ್ಲರೆಗಳ ಮೂಲಕ ಅದರ ಬೆಲೆ ದೊರಕಿಸಿಕೊಳ್ಳುವಾಗ ಪ್ರಾಣಕ್ಕೆ ಬರುತ್ತದೆ! ಇದರ ಹೊಣೆ ಮಾತ್ರ ಸರಕಾರಕ್ಕಿಲ್ಲವೆ? ಇದೆ. ಅದು ತನ್ನ ಜವಾಬ್ದಾರಿಯನ್ನು ನಿರ್ವಹಿಸಿಕೊಡಲೇ ನಾವಾವರಣವನ್ನು ಮೊದಲಿನ ಸ್ಥಿತಿಗೆ ತಂದು ನಿಲ್ಲಿಸುವದೆಂದು ಆಶಿಸುತ್ತೇವೆ.

ಫ್ರಾನ್ಸಿನ ನಿಸ್ಸಹಾಯಕತೆ.

ಫ್ರೆಂಚ್ ಆಫ್ರಿಕವನ್ನು ಅಮೇರಿಕ–ಇಂಗ್ಲಾಂಡಿನ ಸೇನೆಯು ಆಕ್ರಮಿಸಲಾರಂಭಿಸಿದ್ದೇ ತಡ; ಹಿಟ್ಲರರು ಇಡೀ ಫ್ರಾನ್ಸನ್ನು ಸ್ವಾಹಾಮಾಡಿ ಕಾವಲು ನಿಂತಿದ್ದಾರೆ. ಫ್ರಾನ್ಸು, ಹೋರಾತಿ ಪರಾಭವಕ್ಕೊಳಗಾದೊಡನೆ, ಹಿಟ್ಲರರೊಡನೆ ಮಾಡಿಕೊಂಡ ಒಪ್ಪಂದಕ್ಕನುಸಾರವಾಗಿ 'ವಿಚಿ ಫ್ರಾನ್ಸ್' ಎಂಬ ಭಾಗವೊಂದು ಫ್ರೆಂಚರ ಆಡಳಿತವನ್ನನುಭವಿಸಿಕೊಂಡಿತ್ತು. ಅತ್ತ ಆಫ್ರಿಕೆಯ ವಸಾಹತು ಮಿತ್ರ ವಶವಾಗುವಾಗ, ಇತ್ತ ಇಡೀ ಫ್ರಾನ್ಸು ಹಿಟ್ಲರರ ಬಗಲೊಳಗಾಗಿದೆ. ತಾವೇ ಕೃತ್ಯದಿಂದ ಮಿತ್ರ ರಾಷ್ಟ್ರೀಯರು ಯುದ್ಧ ಯೋಜನೆಯ ತಳಮಗಚಿದೆನೆಂದು ಹಿಟ್ಲರರಿಗೆ ಸಮಾಧಾನ; ತಾವು ಧೀರ್ಘಯೋಚಿಸಿ ಹಿಟ್ಲರನ ಕೈ ಬಾಯಿ ಕಟ್ಟಿದೆವೆಂದು ಮಿತ್ರ ರಾಷ್ಟ್ರೀಯರಿಗೆ ಆತ್ಮತೃಪ್ತಿ. ಈ ಸಮಯದಲ್ಲಿ ಫ್ರಾನ್ಸಿಗಾದ ನೋವು ನಷ್ಟಗಳನ್ನು ಯಾರೂ ಗಣ್ಯಮಾಡಿಲ್ಲ; ಮಾಡುವ ಆವಶ್ಯಕತೆಯೂ ಇಲ್ಲ—ನಿರ್ಜೀವ ಫ್ರಾನ್ಸು ಯಾರನ್ನೂ ಪ್ರತಿಭಟಿಸಲಾರದು. ಮಾರ್ಷಲ್ ಪೆಟೈನರು ಇತ್ತಂಡದವರಿಗೂ ಒಂದೊಂದು ನಿಷೇಧ ಸೂಚನೆಗಳುಹಿಸಿದ್ದಾರೆ; 'ಅನ್ಯಾಯ ಮಾತಿದಿರಿ' ಅಂದಿದ್ದಾರೆ. ಪೆಟೈನರ ಮಾತಿನ ಅರ್ಥವೂ ಆಗುತ್ತದೆ; ರುಸವೆಲ್ಟ್, ಹಿಟ್ಲರರ ಕಾರ್ಯದ ಅರ್ಥವೂ ಆಗುತ್ತದೆ. ಸಾಂತಾಕವಿಷ್ಟೆ: ಇಂದಿನ ಅರೆಜೀವಿ ಫ್ರಾನ್ಸೊಂದು ಮಳುಟಧಾರಿ ತಲೆಯಾಗಿ ಉಳಿದಿಲ್ಲ; ಇತ್ತಂಡದ ಯುದ್ಧ ಪ್ರಯತ್ನ ರಾಷ್ಟ್ರಗಳ ಯುದ್ಧ ನೆಲೆಯಾಗಿ ಮಾತ್ರ ಇದೆ.ಆಗತ್ಯಬಿತ್ತಿನ್ನುವಾಗ ತವುಗೆ ಬೇಳುಬೇಕಾದ ನೆಲೆಯನ್ನು ಅಮೇರಿಕಾ– ಜರ್ಮನಿಗಳು ಯಾರನ್ನೂ ವಿಚಾರಿಸದೆ ಆಕ್ರಮಿಸಿಕೊಂಡಿವು. ಮುಂದೆ, ಅವುಗಳ ಉಪಯೋಗದಿಂದ ಲಾಭ ಹೊಂದುವವರಾರು, ಎಂಬುದು ಭವಿಷ್ಯದ ಪ್ರಶ್ನೆ. ಈಗಲೇ ನಷ್ಟಕ್ಕೊಳಗಾದುದೆಂದರೆ ಫ್ರಾನ್ಸ್ ಮಾತ್ರ. ಪರಾಧೀನ ಹಿಂದೂ ದೇಶಕ್ಕೊಂದು ಪಾಠದಂತಿರುವ ಘಟನೆಯಿದು!

ಸ್ಥಿತಿಯಂತೆ ಮತಿ ಬದಲಾವಣೆ

ಇಜಿಪ್ಟಿನಲ್ಲಿ ರೊಮೆಲರು ಪಲಾಯನ ಸೂತ್ರ ಪವಿಸಿದರು; ಉತ್ತರಾಫ್ರಿಕವನ್ನು ಮಿತ್ರ ರಾಷ್ಟ್ರೀಯರು ಆಕ್ರಮಿಸಲು ಶಕ್ತರಾದರು. ಈ ಸುಮುಹೂರ್ತದಲ್ಲೇ ಚರ್ಚಿಲ್ಲರು ಬಾಯಿಬಿಟ್ಟರು: "ನಾನು ಅರಸನ ಮುಖ್ಯಮಂತ್ರಿ ಸ್ಥಾನಕ್ಕೆ ಬಂದುದು ಬ್ರಿಟಿಷ್ ಸಾಮ್ರಾಜ್ಯವನ್ನು ಬರಖಾಸ್ತು ಗೊಳಿಸಲಿಕ್ಕಲ್ಲ; ನಮ್ಮದೆಂದಿರುವದನ್ನು ಭದ್ರವಾಗಿ ಹಿಡಿದುಕೊಳ್ಳುವದಕ್ಕಾಗಿಯೇ ನಾವಿವ್ವೇವೆ!"ಎಂದು ಬ್ರಿಟಿಷ್ ಸ್ವಧಾನೆರ ಮಾತು. ಮಿ. ಎಡೆನರ ಇದೇ ರೀತಿಯ ಅಭಿಪ್ರಾಯವನ್ನು ಹಿಂದೊಮ್ಮೆ ಉಲ್ಲೇಖಿಸಿದ್ದೆವು. ಯುದ್ಧಗತಿಯು ಮಿತ್ರ ರಾಷ್ಟ್ರೀಯರಿಗನುಕೂಲವಾಗಹತ್ತಿದೆ, ಎನ್ನುವಾಗಲೇ ಬ್ರಿಟಿಷ್ ಪ್ರಮುಖರ ಬುದ್ಧಿಯು ಬ್ರಿಟಿಷರಿಗೇನೇ ಅನುಕೂಲವಾಗಹತ್ತಿದೆ. "ನಮ್ಮ ಯುದ್ಧ ಗುರಿಯು ಸರ್ವರ ಸ್ವತಂತ್ರ್ಯ, ಸರ್ವ ಸಮಾನತೆ" ಎಂಬ ಪಲ್ಲವಿಸಲೆನಿಗಾಗಿ ಈ ತನಕ ಸಮಯ ವ್ಯಯ ಮಾಡುತ್ತಿದ್ದವರು ಈಗೀಗ "ನಾವು ಉಳಿವ ಜನಾಂಗ; ಸಮೃದ್ಧವನ್ನು ನಾವು ಗಟ್ಟಿ ಹಿಡಿದುಕೊಳ್ಳುವವರಿದ್ದೇವೆ" ಎನ್ನಹತ್ತಿದ್ದಾರೆ. ನಾವಿದರಿಂದ ದಿಗಿಲುಗೊಂಡಿಲ್ಲ. ಯಾರ ಕೈನೇಲಾದರೂ, ಯುದ್ಧಾಂತ್ಯವಾಗುವಾಗ ಭಾರತದ ಶೃಂಖಲೆ ಕಳಚಿಬೆವಿಧಿಯಿಲ್ಲ. ಯಾವ ಪಕ್ಷವೇ ಇರಲಿ, ಈ ಯುದ್ಧ ಗೆಲ್ಲುವಾಗ ಕಾಲಚಕ್ರದ ಹಿಡಿಗೆ ಕೈಗೊಡುವ ಭಾಗ್ಯವನ್ನು ಪಡೆಯುವಂತೇನೂ ಇಲ್ಲ. ಭಾರತ ಸಮಸ್ಯೆಯು ತೀರ್ಮಾನವನ್ನು ಹಿಂದೆ ಹಾಕಿ ಕಾಲನ ಕೈಗೆದನ್ನು ಒಪ್ಪಿಸುವ ಅಧಿಕಾರ ಬ್ರಿಟಿಷರಿಗಿರಬಹುದು. ಆದರೆ ತತ್ವತಃ ಗಾಯಾದರೂ ಆಮುಹೂರ್ತ ಬರುವಾಗ ಕಾಲನಿಂದಲೂ ಅದನ್ನು ಕಸಿಗೊಳ್ಳುವ ಅಧಿಕಾರ ಯಾರಿಗೂ ಇಲ್ಲ ಅದ್ದರಿಂದ ನಮಗಾ ಹಾವೇವಾದವನ್ನು ಖಂಡಿಸುತ್ತಿಲ್ಲ. ಆದರೆ ಬ್ರಿಟಿಷ ಪ್ರಮುಖರ ಭಾವನೆಯು ಸೋಲು ಗೆಲುವುಗಳ ತಿಳಿತ ಭರತಗಳಿಗೆ ಸಿಗದಿರುತ್ತ

ಟ್ಯೂನಿಸಿನಲ್ಲಿ ನಾಜಿಗಳ ಪ್ರತಿಭಟನೆ!

ಲಿಬ್ಯದ ಯುದ್ಧ.

ಇಜಿಪ್ಟಿನಿಂದ ಮುಂದೊತ್ತಿ, ತೋಬ್ರುಕನ್ನು ವಶಪಡಿಸಿಕೊಂಡು ಮುಂದೊತ್ತಿದ ೫ನೇ ಸೇನೆಯು ಪುನಃ ಎರಡು ಪ್ರಾಮುಖ್ಯ ನೆಲೆಗಳನ್ನು ವಶಪಡಿಸಿಕೊಂಡಿದೆ. ಜೆಂಘಾಜಿಯಲ್ಲಿ ಬ್ರಿಟಿಷರನ್ನು ಪ್ರತಿಭಟಿಸಲು ಜರ್ಮನರು ಅಣಿಯಾಗಿದುವರೆಂದೂ ಅಲ್ಲಿ ತೀಕ್ಷ್ಣಟನಾರಂಭವಾಗಿದೆಯೆಂದೂ ಈಗ ತಿಳಿದುಬರುತ್ತದೆ.

ಉತ್ತರಾಫ್ರಿಕದಲ್ಲಿ.

ಅಮೇರಿಕದ ಸೇನೆ ಮುಂದೊತ್ತುವದರಲ್ಲೇ ಇದೆ. ಈಗ ಟ್ಯೂನಿಸಿಯ ಮೇಲೆ ಬಲವಾದ ಬೋಂಬುಧಾಳಿ ನಡೆಯುತ್ತಿದೆ. ಜರ್ಮನರನ್ನು ಗಣಿಸದೆ ಅಲ್ಲಿ ಪ್ರತಿರೋಧದ ಸರ್ವ ಸಿದ್ಧತೆಯಾಗಿದೆ. ಕಕ್ಷರೀ ಧಾಳಿಯ ಅಗ್ರಗಣ್ಯ ಸೇನಾನಿಯೊಬ್ಬನೆನ್ನು ಹಿಟ್ಲರು ಟ್ಯೂನಿಸಿಯ ಮುಖ್ಯ ಸೇನಾಧಿಪತಿಯಾಗಿ ನೇಮಿಸಿರುವರು. ಮಿತ್ರ ರಾಷ್ಟ್ರೀಯರ ಸೇನೆಗಳು ಈ ತನಕ ಟ್ಯೂನಿಸಿಯನ್ನು ಪ್ರವೇಶಿಸಿಲ್ಲವೆಂದೂ ಕೇವಲ 20 ಮೈಲು ದೂರದಲ್ಲಿರುವವೆಂದೂ ತಿಳಿದುಬರುತ್ತದೆ.

ಬಿಟ್ಟು ಹೋಗುವಂತಿಲ್ಲ.

ಲಿಬ್ಯವನ್ನೆಲ್ಲಾ ಖಾಲಿಪಡಿಸಿ ಹಿಂಜರಿಯುವ ಯೋಚನೆಯಾಗಲೀ, ಆಫ್ರಿಕದ ಫ್ರೆಂಚ್ ವಸಾಹತಿನ ಗೊಡವೆಯನ್ನೇ ಬಿಡುವದರಲ್ಲಾಗಲೀ ಹಿಟ್ಲರಿಲ್ಲವೆಂಬುದು ಈಗ ಖಚಿತವಾಗಿದೆ ಅತ್ಯ ಬೆಂಘಾಜಿಯಿಂದ ಇತ್ತ ಟ್ಯೂನಿಸಿನಿಂದ ಆಂಗ್ಲೋ-ಅಮೆರಿಕಾನರನ್ನು ಅವರು ಪ್ರತಿಭಟಿಸಲು ತೊಡಗಿರುವರು. ಮುಖ್ಯವಾಗಿ ಟ್ಯೂನಿಸಿಯದಲ್ಲಿ ಪರಾಭವ ಪಡೆದರೆ ಹಿಟ್ಲರು ಮಧ್ಯ ಪೂರ್ವದ ಆ ಶಿಯನ್ನು ಬಿಟ್ಟಂತೆಯೇ ಸರಿ.

ಜಾರ್ಜಿಕರ ಅಂತರ್ಯುದ್ಧ.

ಆಫ್ರಿಕೆಯಲ್ಲಿ ಫ್ರೆಂಚ್ ನಾವಿಕಾಧಿಪತಿಗಳಾದ ಡಾರ್ಲನರು ಮಿತ್ರ ರಾಷ್ಟ್ರೀಯರೊಡನೆ ಒಡಂಬಡಿಕೆಗೆ ಬಂದಿರುವರೆಂದು ತಿಳಿದುಬರುತ್ತದೆ. ಅಲ್ಲಿ ಯುದ್ಧ ನಿಲ್ಲಿಸುವಂತೆ ಫ್ರೆಂಚರಿಗೆ ಅವರ ಕರೆಯಿದೆ. ಟೊಲಾನಾದಲ್ಲಿದ್ದ ಫ್ರೆಂಚ್ ಹಡಗುಗಳನ್ನು ತಂತಮ್ಮ ಕಡೆಗೆಳೆದುಕೊಳ್ಳಲು ಇತ್ತಂಡದವರೂ ಸಾಹಸಪಡುತ್ತಿದ್ದಾರೆ. ಅವು ಮಿತ್ರ ರಾಷ್ಟ್ರೀಯರನ್ನು ಸೇರಲು ಹೊರಟಿವೆ ಎಂದು ಜರ್ಮನ್ ಪ್ರಕಟನೆಯಿದ್ದರೂ ಈ ತನಕ ವಿಚಿಫ್ರಾನ್ಸನನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ.

ಅಖಿಲ ಫ್ರಾನ್ಸಿನ ಆಕ್ರಮಣ.

ಉತ್ತರಾಫ್ರಿಕದಲ್ಲಿ ಅಮೇರಿಕಾನ ಸೇನೆಗಳಿಳಿದೊಡನೆ ಹಿಟ್ಲರು ವಿಚಿಫ್ರಾನ್ಸನ್ನೆಲ್ಲಾ ಆಕ್ರಮಿಸಿಕೊಂಡಿರುವರು. ದ್ವಿತೀಯ ರಂಗದ ಮೊದಲನೇ ಅಂಕವಾಗಿ ಆಫ್ರಿಕೆಯ ಧಾಳಿಯಾರಂಭವಾಗಿರುವಾಗ ದ್ವಿತೀಯ ಹೆಜ್ಜೆಯಾಗಿ ಫ್ರಾನ್ಸನ್ನಾ ಕ್ರಮಿಸುವ ರೆಂಬ ಮುಂಜಾಗ್ರತೆಯಿಂದ ಹಿಟ್ಲರು ಇಡೀ ಫ್ರಾನ್ಸನ್ನಾ ಕ್ರಮಿಸಿ ಅದರ ಗವಿಗಳನ್ನು ಭದ್ರಪಡಿಸಿಕೊಂಡಿರುವರು ಇದು ತಮ್ಮೊಳಗಾದ ಒಪ್ಪಂದ ಕರಾರಿಗೆ ವಿರುದ್ಧವೆಂದು ಮಾರ್ಷಲ್ ಪೆಟ್ಯೆನರು ಖಂಡಿಸಿರುವರು. ದೇಶದ ಒಳಾಡಳಿತವು ಇನ್ನೂ ವಿಚಿ ಸರಕಾರದ ಕೈಯಲ್ಲೇ ಇದೆ. ಪೆಟ್ಯೆನ್ ಸರಕಾರದಲ್ಲೂ ಬದಲಾವಣೆಯಾಗಿಲ್ಲ. ಆದರೆ ಸೈನ್ಯ ಸಂಬಂಧ ಸರಹದ್ದುಗಳನ್ನು ಒಂದೆಡೆಯಿಂದ ಇಟಲಿಯಾನರೂ ಇನ್ನೊಂದು ಕಡೆಯಿಂದ ಜರ್ಮನರೂ ಆಕ್ರಮಿಸಿ ಸರ್ವ ಸ್ವಾತಂತ್ರ್ಯ ಪಡೆದು ನಿಂತಿರುವರು. ಜರ್ಮನಿ ಪಕ್ಷದಾತಿ ಎಮ್. ಲಾವಲರು ಈ ಆಕ್ರಮಣದ ಮೊದಲೇ ಆಕ್ಸಿಸ್ ಪ್ರಮುಖರನ್ನು ಭೇಟಿಯಾಗಿ ವಿಚಾರ ವಿನಿಮಯ ನಡಿಸಿದ್ದರು.

ಫ್ರೆಂಚರ ವಿರೋಧ.

ಟ್ಯೂನಿಸಿಗೆ ಬಂದಿಳಿದ ಆಕ್ಸಿಸ್ ಯೋಧರನ್ನು ಅಲ್ಲಿರುವ ಫ್ರೆಂಚರು ಪ್ರತಿಭಟಿಸುತ್ತಿದ್ದಾರೆಂದೂ ಅವರಿಗೆ ಮಿತ್ರ ರಾಷ್ಟ್ರೀಯರು ಹೆಚ್ಚಿನ ಸೈನ್ಯ ಬೆಂಬಲವಿತ್ತಿರುವರೆಂದೂ ಪ್ರಕಟವಾಗಿದೆ. ಆದರೆ ಫ್ರೆಂಚ್ ಹಡಗುಗಳು ಇನ್ನೂ ಟುಲಾನಿನಲ್ಲೇ ಇದ್ದು ಯಾವ ಪಕ್ಷಕ್ಕೂ ಸೇರದಿರುವದರಿಂದ ಸಂದೇಹಕ್ಕೆಡೆಯಿದೆ ಟ್ಯೂನಿಸ್-ಸಿಸಿಲಿಗಳು ಸವೀಪದಲ್ಲಿದ್ದು ಪರಸ್ಪರ ಸಹಾಯ ಸರಬರಾಯಿ ನಡೆಯುತ್ತಿರುವುದಲ್ಲದೆ ಅಲ್ಲಿಯ ಸಂದುಕಟ್ಟಿನ ಸ್ಥಳದಲ್ಲಿ ಜರ್ಮನರ ವಿಮಾನ ಬಲವೂ ಈ ತನಕ ಅಜೇಯವಿದೆ.

ಸೊಲೊಮನ್ಸ್ ನೌಕಾಯುದ್ಧ

ಸೊಲೊಮನ್ಸ್ ದ್ವೀಪಗಳ ಬಳಿ ಅಮೇರಿಕಾ--ಜಾಪಾನುಗಳೊಳಗೆ ನಾಲ್ಕು ದಿನಗಳ ತನಕ ಅವ್ಯಾಹತವಾಗಿ ನೌಕಾ ಯುದ್ಧ ನಡೆದು ಎರಡು ಕಡೆಗಳಿಗೂ ವಿಪರೀತ ನೌಕಾ ನಷ್ಟವಾಗಿದೆಯೆಂದು ತಿಳಿದು ಬರುತ್ತದೆ. ಸರಿಯಾದ ವಿವರವು ಪ್ರಕಟವಾಗಿಲ್ಲ. ನ್ಯೂಗಿನಿಯಾದಲ್ಲಿ ಮಿತ್ರ ರಾಷ್ಟ್ರೀಯರ ಸೇನೆಗಳು ಮುಂದೊತ್ತುತ್ತಲೇ ಇವೆ. ಬುನಾವನ್ನು ಅವರು ಸೇರಿ ಪ್ರವೇಶಿಸಿದೆ. ಜಾಪಾನರ ಸಂಚಾರಕ ಹಡಗುಗಳು ಕೆಲವನ್ನು ಮುಳುಗಿಸಲಾಯಿತು.

ಉತ್ತರಾಫ್ರಿಕದ ಹಡಗ ಯುದ್ಧ.

ಟ್ಯೂನಿಸಿಯಕ್ಕೆ ನೇಸಾ ಸರಬರಾಯಿ ಸಾಗಿಸುತ್ತಿದ್ದ ಆಕ್ಸಿಸ್ ವಿಮಾನಪಡೆಗೆ ಬೆಂಬಲವಾಗಿ ಇಟೆಲಿ ನೌಕಾ ಪಡೆಯ ಮುಖ್ಯಾಂಗವು ಉತ್ತರಾಫ್ರಿಕದಲ್ಲಿ ಬ್ರಿಟಿಷ್ ಮತ್ತು ಜರ್ಮೇರಿಕ ಹಡಗಪಡೆಗಳೊಡನೆ ಪ್ರಬಲ ಹೋರಾಟ ಕೊಟ್ಟಿದೆ. ಆಕರ ಮೂಲಕಿ ಜರ್ಮನರೂ, ಸವಿುದ್ರ ಮೂಲಕ ಇಟೆಲಿಯಾನರೂ ಅಧಿಕ ಸಂಖ್ಯೆಯಲ್ಲಿ ಟ್ಯೂನಿಸಿಯದಲ್ಲಿಳಿಯುತ್ತಿದ್ದಾರೆ. ಬ್ರಿಟಿಷ್ ಸಬ್ ಮೆರಿನ್ 'ಟೇಲಿಸ್‌ಮೇನ್' ನಾಶವಾಯಿತಲ್ಲದೆ, ಉತ್ತರಾಫ್ರಿಕದ ಧಾಳಿಯಿಂದ 13 ಯು. ಬೋಟುಗಳು ಮುಳುಗಿಸಲ್ಪಟ್ಟಿವೆಂದು ತಿಳಿದು ಬಂದಿದೆ. ಅಲ್ಜೀರಿಯಾ ಗಡಿಯನ್ನು ದಾಟಿದ ಮಿತ್ರ ರಾಷ್ಟ್ರೀಯರ ಸೇನೆಗಳು ಬೆಯರ್ಟ್ ಮತ್ತು ಟ್ಯೂನಿಸಿಯಾ ಕ್ಷೇತ್ರದೊಳಗೆ ತೀವ್ರ ಗತಿಯಿಂದ ಟ್ಯೂನಿಸಿನ ಕಡೆಗೆ ಧಾವಿಸುತ್ತಿರುವವೆಂದೂ ಆಕ್ಸಿಸ್ ಪ್ರತಿಭಟನೆಯು ಮರ್ಬಲವಾಗಿತ್ತೆಂದೂ ಮಿತ್ರ ರಾಷ್ಟ್ರೀಯರ ಪ್ರಕಟನೆಯಿದೆ. ಉತ್ತರಾಫ್ರಿಕ್ಕೆ ಸೈನ್ಯ ಸಾಗಿಸುತ್ತಿದ್ದ ಮಿತ್ರ ವಿಮಾನಗಳು ಮತ್ತು ಸೈನ್ಯವಾಹಕ ಜರ್ಮೇರಿಕನ್ ಹಡಗವೊಂದು ಫ್ರೆಂಚರ ಹಾಗೂ ನಾಜಿಗಳ ಹೊತೆತಕ್ಕೆ ಯಾದುವು

ಸ್ಟಾಲಿನ್‌ಗ್ರಾಡ್ ಸಮರ.

ಉತ್ತರಾಫ್ರಿಕದ ಧಾಳಿಯಾರಂಭವಾದೊಡನೆ ರಷ್ಯದ ಎಲ್ಲಾ ರಣರಂಗಗಳಲ್ಲಿಯೂ ಒಮ್ಮೆಗೇ ಹಿಟ್ಲರರು ತನ್ನ ಧಾಳಿಯನ್ನು ಬಲಗೊಳಿಸಿದುವರು. ಆದರೆ ರಶ್ಯನರೂ ಅಷ್ಟೇ ದೈಧ ನಿರ್ಧಾರದಿಂದ ಅದನ್ನು ಪ್ರತಿಭಟಿಸುತ್ತಿರುವದರಿಂದ ಸ್ಪಬಲ ವ್ಯತ್ಯಾಸವೇನೂ ಉಂಟಾಗಿಲ್ಲ. ಸ್ಟಾಲಿನ್‌ಗ್ರಾಡಿನ ಕಾರ್ಖಾನೆ ಕ್ಷೇತ್ರದಲ್ಲಿ ಅತಿ ಭಯಂಕರ ಹೋರಾಟ ನಡೆಯುತ್ತಿದೆಯೆಂದೂ ಈ ವರೆಗಿನ ಎಲ್ಲಾ ಜರ್ಮನ್ ಧಾಳಿಯನ್ನು ರಶ್ಯನರು ಹಿಮ್ಮೆಟ್ಟಿಸಿರುವರೆಂದೂ ತಿಳಿದುಬರುತ್ತದೆ. ಟುವಾಪ್ಸೆ, ನಾರ್ತಿಕ್ ಕ್ಷೇತ್ರಗಳ ಯುದ್ಧವೂ ಯಥಾ ಪ್ರಕಾರ ಬಿರುಸಾಗಿ ಸಾಗುತ್ತಿದೆ ಪ್ರಬಲ ವ್ಯತ್ಯಾಸವೇನೂ ಇಲ್ಲ.

ದ್ದರೆ ಉತ್ತಮವಿತ್ತು. ಅವರ ಬುದ್ಧಿಯು ನಮ್ಮ ಮಟ್ಟದಲ್ಲಿರುತ್ತಿದ್ದರೆ ಲೋಕವು ವಿಶ್ವಾಸವಿಡಬಹುದಿತ್ತು. ಕಷ್ಟ ಕಾಲದಲ್ಲಿ ಎಲ್ಲರ ಸಹಾಯಬೇಕು; ಆಗ 'ಎಲ್ಲರಿಗಾಗಿ ನಾವು' ಎನ್ನುವ ಅನುಕೂಲ ಶಾಸ್ತ್ರ! ತಮ್ಮ ಸುದೈವ ನೂಡಿದ ಚಿಹ್ನೆ ಕಂಡು ಬಂತು; ಆಗ 'ನಮಗಾಗಿ ನಾವು' ಎನ್ನುವ ಸ್ವಾರ್ಥ ಬುದ್ಧಿ-ಈ ವಿರುತನ್ನು ಖಂಡನೀಯವಿದೆ. ಹಿಟ್ಲರರ ದುಃಸ್ವಪ್ನವನ್ನೆರಿತುವದರಿಂದಲೇ ನ್ಯಾಯಪಕ್ಷ ಪಾತಿಗಳು ಜರ್ಮನಿಯ ಅಪಜಯವನ್ನು ಹಾರೈಸುತ್ತಿದ್ದಾರೆ. ಬ್ರಿಟಿಷ್ ತಜ್ಞರಾದರೂ ತಮ್ಮ ಉದ್ದೇಶವನ್ನು ಏಕರೀತಿ-ಸ್ಪಷ್ಟವಾಗಿ-ಇಟ್ಟುಕೊಳ್ಳುವದು ವಾಸ್ತವದು ಅಸಾಧ್ಯವಾಗಿದ್ದರೆ, ಅದರ ಪ್ರದರ್ಶನಕ್ಕನುಕೂಲ ಕಾಲ ಈ ತನಕ ಬಂದಿಲ್ಲವೆಂಬುದನ್ನಾದರೂ ಅರಿತುಕೊಳ್ಳುವದು ಉತ್ತಮ. ಇಲ್ಲವಾದರೆ ಅವರು ಯುದ್ಧ ಪ್ರವಾದ ಮಾಡುವ ಸ್ಥಿತಿಯನ್ನು ಇನ್ನೂ ದಾಟಿಲ್ಲವೆಂದು ತಿಳಿಯಬೇಕಾಗುತ್ತದೆ.

NOTIFICATION.

Applications are invited for appointment as part—time instructor in tailoring in the Municipal South Girls Higher Elementary School, Udipi on a pay of Rs. 10/-per mensem Candidates who possess the requisite qualification or who are skilled or have attained proficiency in tailoring need apply. The applications should reach the undersigned on or before 3 P. M. on 25—11—1942.

Municipal Office, UDIPI. } D. Viswanath Reddi Commissioner, Udupi Municipality.

ಮಂಗಳೂರಲ್ಲಿ ಮಹಿಳಾ ಪರಿಷತ್ತು.

ದ ಕನ್ನಡ ಜಿಲ್ಲೆಯ ಮಹಿಳೆಯರ ಚತುರ್ಥ ಪರಿಷತ್ತು ತಾ. 14 ಮತ್ತು 15ರಲ್ಲಿ ಬೆಸೆಂಟ್ ಶಾಲೆಯಲ್ಲಿ ಶ್ರೀಮತಿ ಕುಮಾರಿ ವಿಲಾಸಿನಿ ಬ್ಯಾ. ಬಿ. ಎ. (ಆನರ್ಸ್) ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ಜರಗಿತು ಮೊದಲನೆಯ ದಿನ ಬೆಳಿಗ್ಗೆ ನೂಲು ಸ್ಪರ್ಧೆ ನಡೆಯಿತು. ಶ್ರೀಮತಿ ಲೀಲಾ ಬ್ಯಾ ಬಾಳಿಗರು ಪ್ರಾರ್ಥನೆ ಮಾಡಿದ ತರುವಾಯ ಶ್ರೀಮತಿ ಮುಕ್ತಾ ಬ್ಯಾ ಜ. ಪಂಡಿತರು ಸ್ವಾಗತ ಭಾಷಣ ಮಾಡಿದರು. ಆನಂತರ ಶ್ರೀಮತಿ ಸರಸ್ವತೀ ಬಾ ಕೇರವ ಪೈಗಳು ಪರಿಷತ್ತಿನ ಉದ್ಘಾಟನೆ ಮಾಡುತ್ತಾ ಮಹಿಳೆಯರು ತಮ್ಮ ನೆರೆ ಹೊರೆಯವರನ್ನೂ ಬಡಬಗ್ಗರನ್ನೂ ಪ್ರೀತಿಯಿಂದ ಕಾಣುವುದೆಲ್ಲಿದೆ ಜನತೆಯಲ್ಲಿ ಒಕ್ಕಟ್ಟನ್ನು ಸ್ಥಾಪಿಸಬೇಕೆಂದರು. ಮಾನವ ಅಧ್ಯಕ್ಷೆಯರು ಹಿಂದುಸ್ಥಾನದ ಪುರಾತನ ಇತಿಹಾಸ, ಭಾರತದ ನಾಗರಿಕತೆ ಇವನ್ನು ಸಹಿತ್ಯಾದರವಾಗಿ ವಿವರಿಸಿ ಸ್ತ್ರೀಯರು ನವಯುಗದ ಸ್ಥಾಪನೆಗೆ ತಮ್ಮ ಸಾಲಿನ ಕೆಲಸವನ್ನು ಮಾಡಬೇಕೆಂದೂ, ಸ್ತ್ರೀಯರು ಪುರುಷರೊಡನೆ ಸಮಾನತೆಯನ್ನು ಪಡೆಯಬೇಕೆಂದೂ, ಸ್ತ್ರೀಯರು ಪುರುಷರಿಗಿಂತ ಯಾವುದರಲ್ಲಿಯೂ ಹಿಂದಾಗಿಲ್ಲವೆಂದೂ ಹೇಳಿದರು.

ಸ್ತ್ರೀಯರಿಗೆ ಉತ್ತಮ ಪ್ರಾಥಮಿಕ ಶಿಕ್ಷಣ ಬೊರೆಯಬೇಕು ಪುರುಷನು ಒಬ್ಬರಿಗಿಂತ ಹೆಚ್ಚು ಮಂದಿ ಸ್ತ್ರೀಯರನ್ನು ಮದುವೆ ಮಾಡಿಕೊಳ್ಳುವಂತೆ ಕಾನೂನು ಮಾಡಬೇಕು; ಸರಕಾರದ ಹುದ್ದೆಗಳಲ್ಲಿ ಪ್ರತಿಯೊಂದಕ್ಕೂ ಸ್ತ್ರೀಯರಿಗೆ ಪ್ರವೇಶ ಬೊರೆಯಬೇಕು; ಸ್ವದೇಶದಲ್ಲಿ ತಯಾರಾದ ವಸ್ತುಗಳಿಗೂ ಯಾಗೂ ಖಾದಿಗೂ ಪ್ರೋತ್ಸಾಹ ನೊರೆಯಬೇಕು ಎಂಬ ಬಗ್ಗೆ ರಾಷ್ಟ್ರಗಳಾದುವು. ಅಧ್ಯಕ್ಷೆಯರ ಸಮ್ಮುಖೋಚಿತ ಕಡೆಮು ಭಾಷಣವಾದ ನೇರೆ ಧನ್ಯವಾದಗಳೋದಿಗೆ ಸಭಾಂತ್ಯವಾಯಿತು. ಸಾ. 15ರಲ್ಲಿ ವಿವಿಧ ವಿನೋದಾವಳಿಗಳಿದ್ದುವು.

Academy of General Education, Manipal, S. I.

Value of education is its utility in later life. If you find yourselves unsuccessful in the presentday education first see whether you lose your utility.

Be sure, you are still useful, still an asset to the Nation, and we can mould in you one such!

Take up any of the courses in The Academy of general education. MANIPAL.

The following courses of instruction have been sanctioned by the Supreme Governing Body—Practice & law of Banking; Insurance; Motor Engineering; Nursing, Midwifery; Chain Survey; Cinema Projection; Printing; Photography; Minimum qualification for admission—S. S. L. C standerd.

Classes will be from 2-1-1943. Apply for Prospectus with Re- 1—2—0 to—

WANTED

35 energetic youngmen knowing local languages to work as Collection Inspectors in the town of Mangalore. Pay Rs. 20/-to 35/- Students who could work as parttime helpers are entertained on pay. Only those who are imbibed with the spirit of public service and who could properly distribute through their messengers, Foodstuffs Collection Bags in their wards need apply to—

The President,

The All India Poor Students' Scholarship Society

ದಕ್ಷಿಣಕನ್ನಡ

ಮಂಗಳೂರು

(ಸ್ವಂತ ಬಾತ್ಮೀದಾರರಿಂದ)

ಮಂಗಳೂರು ಮುನ್ಸಿಪಲ್ ಕೌನ್ಸಿಲ್ ರದ್ದಾಯಿತು—"ಮಂಗಳೂರು ಮುನ್ಸಿಪಲ್ ಕೌನ್ಸಿಲಿನಲ್ಲಿ ಒಟ್ಟು ೩೨ ಮಂದಿ ಕೌನ್ಸಿಲರರು ಪೈಕಿ ೨೯ ಮಂದಿ ರಾಜೀನಾಮೆ ಕೊಟ್ಟಿದ್ದರಿಂದ ಅದು ಕಾರ್ಯಾಚರಣೆ ಮಾಡಲು ಅಶಕ್ತವಾಗಿದೆ. ಆದ್ದರಿಂದ ಈಗ ಇರುವ ಕಾನೂನು ಕಾನೂನು ಪ್ರಕಾರ ಕಾರ್ಯ ನಡಸಲು ಶಕ್ತವಲ್ಲವೆಂದು ಸರಕಾರದ ಅಭಿಪ್ರಾಯ. ಆದ್ದರಿಂದ ಗವರ್ನರರು ಮದ್ರಾಸ್ ಡಿಸ್ಟ್ರಿಕ್ಟ್ ಮುನಿಸಿಪಲಿಟಿಗಳ ಕಾನೂನಿನ ನೆಕ್ಷನ್ ೪೧ ಸಬ್ ಸೆಕ್ಷನ್ ೧ ಪ್ರಕಾರ ಮಂಗಳೂರು ಮುನ್ಸಿಪಲ್ ಕೌನ್ಸಿಲನ್ನು ಈ ನೋಟೀಸು ಪ್ರಕಟಿಸಿದ ದಿನದಿಂದ ರದ್ದುಮಾಡಿರ್ಗಳಾಜನವರಿ ೩೧ ಮಧ್ಯಾಹ್ನದ ನಂತರ ಪುನಃ ರಚಿಸುವುದಾಗಿ ತಿಳಿಸಿದ್ದಾರೆ" ಎಂಬುದಾಗಿ ಕಾಗದಲ್ಲಿ ಮದ್ರಾಸ್ ಸರಕಾರವು ಒಂದು ಪ್ರಕಟಣೆ ಯಿತ್ತಿದೆ

ಸತ್ಕಾರಕೂಟ— ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿಯ ಜೈಂಟ್ ಮೆನೇಜರರಾಗಿದ್ದ ಶ್ರೀ ಕೆ ಶ್ರೀನಿವಾಸ ಭಂಡಾರಿಯವರಿಗೆ ಉತ್ತರಕನ್ನಡಕ್ಕೆ ವರ್ಗವಾಗಿದ್ದು ಜವರನ್ನು ಬೀಳ್ಕೊಳ್ಳುವರೆತಾ ೧೧—೧೧—೪೨ರಲ್ಲಿ ಸಂಸ್ಥೆಯ ಹೆಡ್ ಆಫೀಸಿನವರು ಸತ್ಕಾರಕೂಟವೊಂದನ್ನೇರ್ಪಡಿಸಿದ್ದರ, ಮಾನಪತ್ರವನ್ನು ಅರ್ಪಿಸಲಾಯಿತು

ಹೆಡ್ ಕಾನ್‌ಸ್ಟೇಬ್ಲನೊಬ್ಬನ ಮೇಲೆ ಕೈಮಾಡಿದರೆಂಬ ಆರೋಪಕ್ಕೆ ಗುರಿಯಾಗಿ ಬಂದಿಸಲ್ಪಟ್ಟಿದ್ದ ಶ್ರೀ ಶ್ರೀನಿವಾಸ ಬಾಳಿಗ ಜನಂತ ಬಟ್ಟೆ, ಸಂತೋಷ ಶೆಟ್ಟಿ, ನಾರಾಯಣ ಶೆಟ್ಟಿ, ಪರ್ವ ಶೆಟ್ಟಿ ಇವರಿಗೆ ಒಂದೊಂದು ವರುಷದ ಕಠಿಣಸಜೆ ವಿಧಿಸಲಾಗಿದೆ ಶ್ರೀ ಮಂಜುನಾಥ ಪ್ರಭುಗಳಂಬ ಮುಮುಕ್ಷರನ್ನು ಬಿಡಲಾಗಿದೆ ಒಬ್ಬನು ಇನ್ನೂ ಸಿಕ್ಕಿಲ್ಲ

ಅನ್ನದಾನ—ಇಚ್ಛೆಯು ಪ್ರಮುಖ ಜನಪ್ರಿಯ ವ್ಯಾಪಾರಿಗಳಾದ ಶ್ರೀ ನಿರಂಜಿ ಮಾಧವಜೀಯವರು ಕತ್ತಿಜೆಗೆ ಪ್ರಯಾಣಪಟ್ಟ ತಮ್ಮ ತೀರ್ಥರೂಪರ ಸ್ಮಾರಕವಾಗಿ ಕಳೆದ ಆದಿತ್ಯವಾರ ಎಂದೀ ಅನ್ನದಾನ ಸಂತರ್ಪಣೆ ನಡಿಸಿದರು ಉರ್ವ ಮೈದಾನಿನಲ್ಲಿ ಸುಮಾರು 3000 ಬಡಬಗ್ಗರಿಗೆ ಮೃಷ್ಟಾನ್ನ ಭೋಜನವಿತ್ತರು. ಅಂತೂ ಈ ಧರ್ಮಕಾರ್ಯಕ್ಕಾಗಿ ಸುಮಾರು 1000 ರೂ ವ್ಯಯಿಸಿರುವರೆಂದು ಕೇಳುತ್ತೇವೆ

ಉಡುಪಿ.

ಶ್ರೀ. ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯರ ರಾಜೀನಾಮೆ— ಸದ್ಯದ ವಿಷಮಪರಿಸ್ಥಿತಿಯ ಕುರಿತು ಸರಕಾರದ ವರ್ತನೆಯ ನಿಷೇಧಾರ್ಥವಾಗಿ, ಉಡುಪಿ ತಾಲೂಕಿನ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯರು ತನ್ನ ಜಿಲ್ಲಾ ಬೋರ್ಡಿನ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿರುವರಾಗಿ ತಿಳಿಯುತ್ತೇವೆ ಇವರು ಹಿರಿಯ ಕಾಂಗ್ರೆಸ್ ಸರ್ಕಾರಿನಿಂದ ಎರಡು ಬಾರಿ ಚುನಾಯಿತರಾಗಿ ಹೊಂದಿದವರಿದ್ದು, ಜಿಲ್ಲಾ ಬೋರ್ಡಿನಲ್ಲಿ ಏಳು ವರುಷಗಳ ಸೇವೆ ಸಲ್ಲಿಸಿದವರು

ನೇಕಾರರ ಸಭೆ—ತಾ ೧೭ರಲ್ಲಿ ಶ್ರೀಯುತ ರಾಮಂತಾಯರ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕು ನೇಕಾರರ ಯೂನಿಯನ್ ಸಭೆ ಜರಗಿ ನೇಯಿಗೆ ಮಜೂರಿಯನ್ನು ಹೆಚ್ಚಿಸಬೇಕೆನ್ನುವ ಠರಾವಾಯಿತು ಬಡಬಗ್ಗರಿಗೆ ದವಸಧಾನ್ಯಗಳನ್ನು ಸರ್ಕಾರವೇ ಡಿಪೋ ತೆರೆದು ಒದಗಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು

ವಿಜಯಾ ಸ್ಪೋರ್ಟಿನ ಉದ್ಘಾಟನೆಯ ಸಮಯದಲ್ಲಿ ಶ್ರೀ. ಬಿ ರಾಮರಾಯ ಶೆಟ್ಟಿ, ಬಿ. ಎ ಎಲ್ ಟಿ ಮತ್ತು ಶ್ರೀ. ಯು ವೆಂಕಟರಾವ್, ಬಿ. ಎ. ಎಲ್. ಟಿ. ಇವರೂ ಶುಭವನ್ನು ಹಾರೈಸಿ ಭಾಷಣವಿತ್ತಿದ್ದರು (ಪ್ರಮಾದ ವಶಾತ್ ಕಳೆದ ಬಾರಿ ಈ ಹೆಸರುಗಳು ಬಿಟ್ಟು ಹೋಗಿದೆ)

ಸುಮಾರು ಒಂದು ತಿಂಗಳಿಂದ ಚಿಲ್ಲರೆಯ ಅಭಾವವುಂಟಾಗಿ ವ್ಯವಹಾರಕ್ಕೆ ತುಂಬ ತೊಂದರೆಯಾಗಿದೆ. ಚಿಲ್ಲರೆ ವ್ಯಾಪಾರಿಗಳು ಮತ್ತು ಸಾಮಾನ್ಯ ಜನರ ಫಜೀತಿ ಹೇಳ ತೀರದು

ದೀಪನಿರ್ಬಂಧ ದೀವಾವಳಿ ದಿನಗಳಲ್ಲಿ (ತಾ ೬ರಿಂದ ೮) ಮಾತ್ರ ದೀಪ ನಿರ್ಬಂಧವನ್ನು ತೆಗೆದು ಹಾಕಿರುವುದಲ್ಲದೆ ಮುಂದೆ ಎಂದೂ ಜಾರಿಯಲ್ಲಿರುವ 'ಬ್ಲೋ ಕ್ಲೌಟ್' ನಿಯಮವನ್ನು ವಿಸಾರಿ, ಸಾರ್ವಜನಿಕರಾಗಲೀ ದೇವಸ್ಥಾನಗಳ ಆಡಳಿತಾಧಿಕಾರಿಗಳಾಗಲೀ, ಹೆಬ್ಬು, ಉತ್ಸವಾದಿ ವಿಶೇಷ ದಿನಗಳಲ್ಲೂ ದೀಪ ಉರಿಸಬಾರದಾಗಿ ಕಲೆಕ್ಟರರ ನಿರ್ಬಂಧವಿರುವುದು.

ಉಡ್ಪಿ ಲಕ್ಷ್ಮೀನಾರಾಯಣ ವಿಲ್ಲ—ದೀಪ, ಮತ್ತು ಸಭೆ ಪೆರವಣಿಗೆ ಮಾಡಬಾರದೆಂಬ ನಿರ್ಬಂಧದಿಂದಾಗಿ ವಾಡಿಕೆಯಂತೆ ನಡೆಯುವ ಲಕ್ಷದೀಪವು ನಿಲ್ಲಿಸಲ್ಪಟ್ಟಿರುವುದು.

ಕನ್ನಡ ಸುಭದ್ರ—ಚಿತ್ರವು ಉಡ್ಪಿರ ಮುಕೃಷ್ಣ ಧಿಯೆಟರಿಗೆ ಬೇಗನೆ ಬರಲಿರುವುದಾಗಿ ತಿಳಿದುಬರುತ್ತದೆ

ಕೋಚನೀಯ ನಿಧನ— ಪ್ರಸಿದ್ಧ ಕುಶ್ಕಾಡಿ ಮನೆಯ ಶ್ರೀ ಪದ್ಮನಿವಾಸ ಶೆಟ್ಟರು ಕಳೆದ ತಾ ೩ನೇ ರಾತ್ರಿ ಹಾವು ಕಡಿತದಿಂದ ದಿವಂಗತರಾದುದು ಕೋಚನೀಯವಿದೆ ಕಡಿತವು ಬಲವಾಗಿದ್ದ ದೆಸೆಯಿಂದ ಕೂಡಲೇ ವಿಷವೇರಿ ಮರಣ ಸಂಭವಿಸಿತೆಂದು ತಿಳಿದುಬರುತ್ತದೆ ದಿವಂಗತರು ನಡು ವಯಸ್ಸಿನವರಿದ್ದು ಉತ್ಸಾಹಿ, ಉದಾರಿ, ಹಾಗೂ ಪ್ರಾಮಾಣಿಕರೀತಿಯಲ್ಲಿ ಹಳ್ಳಿ ಪ್ರಮುಖರಿದ್ದರು. ದಿವಂಗತರು ಕುಟುಂಬ ಮತ್ತು ಪತ್ನೀವುತ್ರರಿಗೆ ಸಹಾನುತಾಪ ಸೂಚಿಸುತ್ತೇವೆ

ಎಡ್ಮೇರು—ತಾ ೧೧-೧೧-೪೨ರಲ್ಲು ಎಡ್ಮೇರು S. M. E. ಶಾಲೆಯ ಹೆತ್ತವರ ಸಂಘದ ಸಭೆಯೊಂದು ಶ್ರೀ. ಎಸ್ ಪಿ ಸೀತಾರಾಮ್ ರಾವ್, ಇವರ ಅಧ್ಯಕ್ಷತೆಯಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು.

ಕಾರ್ಕಳ—ತಾ ೮ರಲ್ಲಿ ಧನ್ವಂತರಿ ಜಯಂತಿಯು ಶ್ರೀ ಕೆ. ಆರ್ ಕೃಷ್ಣಯ್ಯ ಚಿಟ್ಟಿಯವರ ತಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು.

ಪುತ್ತೂರು—ವಿಕ್ಟೋರಿಯಾ ರಾಣಿ ಮತ್ತು ೭ನೇ ಎಡ್ವರ್ಡರ ನಾಲ್ಕಣೆ ಪಾವಲಿಗಳು ತಿರುಗಿಸಲ್ಪಡುತ್ತವೆಯಾದ್ದರಿಂದ ಸರಕಾರವು ಒಂದು ಪ್ರಕಟಣೆ ಹೊರಡಿಸಿ ಜನರ ಕಷ್ಟವನ್ನು ಬಗೆಹರಿಸಬೇಕೆಂದು ಬಾತ್ಮೀ.

Degrees Books Medicines

Free H L M S M B H M, D etc Free Homeo Ayur Unani Naturo degree by post also—Practitioner also get soon Homeo Materiamedica Rs 5 Homeo Practice book Rs 4 Insanity Cure Pills Rs 10 Enclose 2 annas stamp —

Principal Indian Homeopath Institute & Society (Govt Regd)
P O Datha (Kathiawar Dt. India)

Sidha-Kalpa Kavach (Regd)
No 3 Rs 2 No 2 Rs 5 No 1 Rs 7 Special Rs 10, Extra Special Rs 17 for over marriage health wealth Ask any six questions with M O Re 1/- and get correct answers by return post Life reas. Rs phic No V P P Send M O I red P. O is Prof Dr N H Chhatsar 2 apam Datha (Kathiawar India)

The Pangal Nayak Bank Limited.
ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.
(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು)
ಮುಖ್ಯ ಕಾರ್ಯಾಲಯ — ಕೋರ್ಟ್ ರಸ್ತೆ, ಉಡುಪಿ ದಕ್ಷಿಣ ಕನ್ನಡ
ತೆತ್ತ ಮೂಲಧನ .. ರೂ 1,82,100-0- 0
ಕ್ಷೇಮ ನಿಧಿಗಳು .. ... ರೂ 1,71,898-2-11
ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಜಂಗಾಡ್ ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ
ವಾಡಿಕೆಯ ಯುಕ್ತವಾದ ದಿನಗಳಲ್ಲಿ, ಚಿನ್ನಾಬೆಳ್ಳಿಗಳಸಮತಾಕಾಕರಿಸಲಾದ ಇತರ ಠೇವಣಿಗಳಿಗೆ ವಿಲೇವಿನಿಯೋಗ ನೋಟುಗಳ ಮೇಲು ಹಾಗೂ ಚಿಲ್ಲರೆ ವಿಲೇವಿಗಳಲ್ಲಿ ಚಿಕ್ಕ ವೆದ್ದ ಸಾಲಗಳು ವಿವರ ತ್ವರಿತಗತಿಯ ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ತಕ್ಕ ಬೇಂಕಿನ ಸ್ಥಿತಿ ಪತ್ರಿಕೆಯನ್ನು ಬೇಕಾದಾಗ ತೋರಿಸಲಾಗುವುದು
ತೇವಣಾತಿಗಳು ಆಂಗೀಕರಿಸಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಕೊಮಿತಾ ಅಧವಾ ಏಜೆಂಟರಾ ಸಮೀಪದ ಶಾಖೆಯಲ್ಲಿ ವಿಚಾರಿಸಿ.
UDIPI, 16th April

18—11—1942ರಿಂದ
ಶ್ರೀ ರಾಮಕೃಷ್ಣ ಥಿಯೇಟಿಂಗ್ ಲಿಮಿಟೆಡ್ ಉಡ್ಪಿ
ಕೆ. ಕೆ. ಭಾಗವತರ — **ರಾಜಮ್ಮ.**
ಜ್ಞಾನಾಂಬಿಕಾ (ಮಲಯಾಳಂ)
ಅನಂತರ: **ಭೀಷ್ಮಪ್ರತಿಜ್ಞಾ**
ತಾ 21—11—1942ರಿಂದ ಗುಬ್ಬಿ ವೀರಣ್ಣ. ಜಯಮ್ಮ, ಹೊನಪ್ಪ ಭಾಗವತರ್ ನಟಿಸಿದ **ಕನ್ನಡ ಸುಭದ್ರ**

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.
ಹೆಡ್ ಆಫೀಸು: **ಮಂಗಳೂರು.**
ಶಾಖೆಗಳು
ಮಂಗಳೂರು, ಪಿಟಿ-ಮಂಗಳೂರು
ಉಡುಪಿ, ಕಾರ್ಕಳ, ಕುಂದಾಪುರ,
ಕಾಪು, ಬ್ರಹ್ಮಾವರ
ಪ್ರತಿ ಶಾಖೆಗಳಲ್ಲೂ ಎಲ್ಲ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ
THE VIJAYA BANK LIMITED, MANGALORE.

ಅಮೃತಾಂಜನ

REGD.

ತಲೆನೋವಿಗೆ, ಶಿರೋವೇದನೆ, ಉಳುಕು, ಕತ್ತಿಗೆ, ಭುಜ, ಕಲ್ಲು ವೇದನೆಗಳಿಗೆ ಎದೆನೋವಿ, ಶ್ವಾಯುಗಳು ಬಾರದಿರಲು ಕೊಳ್ಳುವುದು, ಚೇಳು ವಿಷಮುಂತಾದ ಬಿನ್ನೆ ಪಕ್ಷಿಜಾತ್ಯ ಪೊಡಿಸು ಪೊಡಿ ಅಂಡ ಎಲ್ಲಾ ರೋಗಗಳಿಗೂ ಸಿದ್ಧೌಷಧ,

ಜಳುಕಿದ್ರಿ ಮದ್ದು ಸಹ ಸಮ್ಮಿಳಿಸಿಕೊಳ್ಳುತ್ತದೆ.

ಅಮೃತಾಂಜನ ಲಿಮಿಟೆಡ್.
ಬೊಂಬಾಯಿ, ಮದ್ರಾಸು, ಕಲ್ಕತ್ತ.

HOW BUDGETS ARE BALANCED.

With the present high cost of living Balancing the family budgets is a problem. And yet how important it is that YOUR BUDGET SHOULD BE BALANCED. If earning Rs. 100/- you spend Rs. 101/- per month in a short time your affairs will be involved. On the other hand if you bank a sum of even Rupee one every month your prosperity is assured.

Probably you have succeeded better than anyone else in ingeniously fitting you budget to present conditions.

Please tell us how you did it.

CANARA BANK LIMITED.

(Estd: 1906)

ಸ್ವದೇಶಿ ಔಷಧ ಭಂಡಾರ(ರಿಜಿಸ್ಟರ್ಡ್) ಕುಂಜಾಲು

–ಪ್ರಭೂಸ್–ಬಾಲಾವೃತ–

ನಾನಾ ರೋಗ ರುಜೆಗಳಿಂದ ದೇಹದಲ್ಲಿ ಕೃಶವಾಗಿ ಸದಾ ಅಳುತ್ತಾ, ಕಳೆಗುಂದಿರುವ ಬಾಲಕರು ದಷ್ಟಪುಷ್ಟರಾಗಿ ಸದಾ ನಗುತ್ತಿರುವಂತೆ ಮಾಡುವ ಅಮೋಘ ಗುಣಗಳುಳ್ಳ ಈ ಮಹೌಷಧದ 1 ಬಾಟ್ಲೆಯನ್ನು ಉಪಯೋಗಿಸಿಯೇ ನೋಡಿರಿ. ಮಹತ್ವ ವಕ್ಕು ಪ್ರತಿ ಮಕ್ಕಳ ತಾಯ್ತಂದೆಗಳು ತಿಳಿದುಕೊಳ್ಳಬೇಕಾಗಿದೆ. ಬಾಟ್ಲೆ 1ಕ್ಕೆ 0-12-0

ಕೆಲವು ವಿಶಿಷ್ಟ ವಿಕ್ರಯದ ಕೃಷಿಗಳು:—ಬಾಮ್‌ಂಬೆ ಟ್ರೇಡಿಂಗ್ ಕಾರ್ಪರೇಷನ್, ಸಮುದಾಯ ಬ್ಯಾಂಕ್ಸ್, ಮೆಸರ್ಸ್ ಸ್ಟೇರ್ಸ್, ಮಿಡಲ್‌ಟನ್ ಸ್ಟೋರ್ಸ್, ವಿಜಯಾ ಸ್ಟೋರ್ಸ್ ಎಜೆನ್ಸಿ, ಉಡುಪಿ, T. ಗೋವಿಂದಪ್ಪಯ್ಯ ಪೈ ಬ್ರದರ್ಸ್, H. ಗಣಪಯ್ಯ ಅಮಿನ್, C.B. Agency ಹಾಲಾಡಿ, ಗಣಪಯ್ಯ ಅಡ್ಯಂತಾಯ ಅಂಡ್ ಬ್ರದರ್ಸ್ ಕೋಟ, ಸರಸಿಂಹ ನಾಯಕ್ ಕುಳೆರಾಜಾ ಯರ, ಶಂಕರಪೈ ಶ್ರೀನಿವಾಸ ಭಟ್ಟ, ಕೋಟೇಶ್ವರ. L. N. ಕರಾವಳಿ ಮರ್ಚಂಟ್ಸ್,ಮಂಗಳೂರು.

ಎಚ್ಚರಿಕೆ.

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತೆ. ಸ್ವಪ್ನೋತ್ಪಾದ್ಯ, ನಪುಂಸಕತೆ, ಅಜ್ಞ ಮಾಂದ್ಯ, ಮಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. ಬೆಲೆ ರೂ. ೨—೪—೦

ಸ್ತ್ರೀ ಬಲ—ನವಯೌವನ ಸೌಂದರ್ಯಕ್ಕೆ ಬೆಲೆ. ೨—೮—೦.

ಬಾಲಬಲ—ಮಕ್ಕಳ ಪುಷ್ಟಿ, ಆರೋಗ್ಯಕ್ಕೆ ಬೆಲೆ. ೧—೪—೦.

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24–ಶಾನಭಾಗನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಉಡುಪಿ ಸ್ಟೋಕಿಸ್ಟರು: **ಶಿವಳ್ಳಿ ಪುಸ್ತಕ ಭಂಡಾರ, ಉಡುಪಿ.**

ಸ್ವೀಕಾರ ವಿಮರ್ಶೆ,

ಚಿತ್ರ ಸಮಾಚಾರ ದೀಪಾವಳಿ ಸಂಚಿಕೆ:– ಬೆಂಗಳೂರಿನಲ್ಲಿ ಶ್ರೀ. ಹೆಚ್. ಆರ್. ಕೃಷ್ಣಮೂರ್ತಿ ರಾಯರ ಸಂಪಾದಕತ್ವದಲ್ಲಿ ನಿಯಮಿತವಾಗಿ ಪ್ರಕಟವಾಗುತ್ತಿರುವ ಚಿತ್ರ ಸಮಾಚಾರವು ಸುಂದರವಾದ ತ್ರಿವರ್ಣ ಮುಖಚಿತ್ರವುಳ್ಳ ದೀಪಾವಳಿ ಸಂಚಿಕೆಯನ್ನು ಹೊರಡಿಸಿದೆ. ಇದರಲ್ಲಿ ಚಲಚ್ಚಿತ್ರಕ್ಕೆ ಸಂಬಂಧಪಟ್ಟ ಕೆಲವು ಲೇಖನಗಳೂ 'ಜೀವನ ನಾಟಕದ' ವಿಮರ್ಶೆಯೂ ಬಂದಿವೆ.

ಪ್ರಭಾತ ದೀಪಾವಳಿ ಸಂಚಿಕೆ:– 'ಪ್ರಭಾತ' ವಾರ ಪತ್ರಿಕೆಯು ಯುದ್ಧದ ಕಾಲದಲ್ಲಾದರೂ ಸಾಕಷ್ಟು ಉತ್ತಮವಾಗಿ ಹೊರಡಿಸಿದ ದೀಪಾವಳಿ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಚಾಡಿಸಿಯವಾದ ಹಲವು ಲೇಖನಗಳಿವೆ. ಸಂಪಾದಕರುಗಳಾದ ಶ್ರೀ. ಕುಪ್ಪಿ ವಾಸುದೇವ ಶಿಷ್ಯಿಯನವರ ಸಾಹಸೋದ್ಯಮ ಶ್ಲಾಘನೀಯ

Kannada for Soldiers:– ಕರ್ನಾಟಕದ ಸೈನಿಕರ ಪರವಾಗಿ ಈ ಪುಸ್ತಕವು ಪ್ರಕಟವಾಗಿದೆ ಸೈನಿಕರಿಗೆ ಕನ್ನಡದ ಸಾಮಾನ್ಯ ಜ್ಞಾನವನ್ನು ಕೊಡುವುದೇ ಇದರ ಉದ್ದೇಶವಾಗಿದೆ. ಮೊದಲು ಕನ್ನಡ ಅಕ್ಷರಗಳ ಪರಿಚಯವನ್ನು ಇಂಗ್ಲಿಷ್ ಅಕ್ಷರಗಳ ಸಹಾಯದಿಂದ ಕೊಡುವ ಪ್ರಯತ್ನ ನಡೆದಿದೆ. ಕಡೆಗೆ ಇಂಗ್ಲಿಷ್ ರಬ್ಬ, ವಾಕ್ಯಗಳನ್ನು ಕೊಟ್ಟು ಅವುಗಳ ಅರ್ಥವನ್ನು ಇಂಗ್ಲಿಷ್ ರೀತಿಯಲ್ಲಿ ಕನ್ನಡ ಭಾಷೆಯಲ್ಲಿ ಕೊಡಲಾಗಿದೆ. ಅಂತೂ ಇದೊಂದು ಹೊಸ ತರದ ಯತ್ನ. ಬೆಲೆ ೩೨ಪುಟಗಳ ಈ ಪುಸ್ತಕಕ್ಕೆ ರೂ. 1,

ಬಾಲಚಂದ್ರ:—ಉಪಾಧ್ಯಾಯ, ಉಪಾಧ್ಯಾಯಿನಿಯರಿಗಾಗಿಯೇ–ಅವರ ಪ್ರೌಢ್ಯತ್ವಾಸಹದ ನಿರೀಕ್ಷೆಯಿದಲೇ ಹೊರಟ ವಿದ್ಯಾ ನಿಪುಣವಾದ ಮಾಸ ಪತ್ರಿಕೆ ಇದರ ಆಕ್ಟೋಬರ ನವಂಬರ ತಿಂಗಳ ಸಂಚಿಕೆಗಳು ನನ್ನ ಹಸ್ತಗತವಾಗಿವೆ. 'ಜಯಕರ್ನಾಟಕ' ಅಧವಾ 'ಅಂತರಂಗ' ದ ಸೈಜಿನ 20ಪುಟಗಳು. ವಾರ್ಷಿಕ ಚಂದಾ ಬರೇ 1-8-0 ಮಾತ್ರ. ಕಾಗದ ಶುದ್ಧಿಯು ಈ ಇಲವಲ್ಲಿ ಇದರ ಪುನರುಜ್ಜೀವನವಾದುದೂ, ರೂ. 1-8-0ಗೆ 20 ಪುಟಗಳನ್ನು ಕೊಡುವುದೂ ಸಾಹಸ ಕಾರ್ಯವೇ ಸರಿ.

ಸಂದೇಶ:—ಬೆಳಗಾಂವಿನಿಂದ ಹೊರಡುವ ಸಂದೇಶ ಪತ್ರಿಕೆಯು ಕನ್ನಡದಲ್ಲಿ ಹೊಸತೇ ಆದ ವೀಕ್ಲಿ ಕಾಂಗ್ರೆಸ್ ಸಂಚಿಕೆಯೊಂದನ್ನು ಹೊರಡಿಸಿದೆ ಇದರಲ್ಲಿ ವೀಕ್ಲಿಯು ವ್ಯವಸಾಯದ ಪ್ರಗತಿ, ವೀಕ್ಲಿಯು ಕಾಂಗ್ರೆಸಿನ ಅಧ್ಯಕ್ಷರ ಭಾಷಣಾದಿಗಳು ಇವೆ. ಸಂಚಿಕೆಯು ಸಂಗ್ರಹ ನೀಯವಿದೆ. ಸಂಪಾದಕರ ಸಾಹಸ ಕೊಂಡಾಡತಕ್ಕುದಾಗಿದೆ.

ವಿದ್ಯೋದಯ:– ಮಂಗಳೂರಿಂದ 'ಸೌತ್ ಕೆನರಾ ಟೀಚರ್ಸ್ ಗಿಲ್ಡ್' ಇದರ ಕಡೆಯಿಂದ ನೂತನವಾಗಿ ಹೊರಟ ಶೈಕ್ಷಣಿಕ ಮಾಸ ಪತ್ರಿಕೆ ಡೆಮಿ 1/8ಸೈಜಿನ 16ಪುಟಗಳು ವಿದ್ಯಾ ಸಂಬಂಧವಾದ ಲೇಖನಗಳಿಂದ ಕೂಡಿ ಶಿಕ್ಷಕರಿಗೆ ಉಪಯುಕ್ತವಾಗಿದೆ. ಗಿಲ್ಡಿನ ಕಾರ್ಯಕಲಾಪಗಳ ವರದಿಯೂ ಪ್ರಕಟವಾಗುತ್ತಿದೆ. ವಾರ್ಷಿಕ ಚಂದಾ ರೂ. 1-8-0.

WANTED.

Applications are invited for employment to the following posts in Secondary schools under the South Kanara District Board.

L. T. assistants posts:-

Qualifications B. A., L. T. (Science). Scale of pay Rs. 65–5/2–100. Candidates belonging to the Mahammadan (Muslim), Anglo Indian or Christian or non-Asiatic who can teach the subjects and correct exercises in Kannada only need apply Applications should reach this office on or before 20-11-1942

Parttime sewing Mistresses-

Qualification. Group certificates in needle work and dress making issued under the control of Government Technical Examinations Pay Rs. 10 - (Ten) only per mensem Applications should reach this office on or before 20-11-1942.

A. Lakshminarayana Rao, B. A., B. L., Vice President, District Board, South Kanara, in charge.

Mangalore, 11-11-1942.

BHUVANENDRA PRODUCTS Ltd.,

Head Office and Factory:

Katapadi, S. Kanara

Depots:

1. Mahratha Galli, Hubli
2. 57 Big street, Triplicane Madras.

"BHUVANENDRA"

Danthadavan Choorna

